ವಿಶ್ವವಾಣಿ
ವಿಶ್ವಾಸವೇ ವಿಶ್ವ

ತವರಿನಲ್ಲಿ ರಾಹುಲ್ ಬರ್ತ್‌ಡೇ ಸಂಭ್ರಮ

ಬೆಂಗಳೂರಿನಲ್ಲಿ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಆರ್‌ಸಿಬಿ ತಂಡ 6 ವಿಕೆಟ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ಎದುರು ಶರಣಾಗಿದೆ. ತವರು ನೆಲದಲ್ಲಿ ಡೆಲ್ಲಿ ಪರ ಆಡಿದ ಕೆ.ಎಲ್.ರಾಹುಲ್ 34 ಎಸೆತಗಳಲ್ಲಿ 57 ರನ್ ಚಚ್ಚಿ, ಭರ್ಜರಿಯಾಗಿ ತಮ್ಮ 34ನೇ ಹುಟ್ಟಿದ ಹಬ್ಬವನ್ನು ಆಚರಿಸಿದರು.

ಸೊಂಪಾದ ಪುಟಗಳು

ಇನ್ನಷ್ಟು ಚೆಂದಗೊಳಿಸಲು ಸುಂದರ ಹೂವಿಗೆ ಬಣ್ಣ ಹಚ್ಚಬಾರದು!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6

ಹೆಸರು ಮಾತ್ರ ದೊಡ್ಡದು, ಆದರೆ ಮೊಸರು ತೆಳ್ಳಗೇ!

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7

ದಾರಿದೀಪೋಕ್ತಿ

ಕಳೆದ ಹೋದ ದಿನಗಳ ಬಗ್ಗೆ ಚಿಂತಿಸುತ್ತಾ, ಯೋಚಿಸುತ್ತಾ ಕುಳಿತರೆ ಬರುವ ಸುಂದರ ಕ್ಷಣಗಳು ದೂರವಾಗುತ್ತವೆ. ಇಂದಿನ ಬದುಕನ್ನು ಪ್ರೀತಿಯಿಂದ ಸ್ವೀಕರಿಸುವುದೇ ನೆಮ್ಮದಿಗೆ ದಾರಿ. ಈ ಕ್ಷಣವನ್ನು ಸಂತಸ ದಿಂದ ಬದುಕುವುದು ಬಹಳ ಮುಖ್ಯ.

ವಕ್ರತುಂಡೋಕ್ತಿ

ಗಂಡ-ಹೆಂಡತಿ ಒಂದೇ ಸೋಫಾದ ಮೇಲೆ ಕುಳಿತು ಒಬ್ಬರಿಗೊಬ್ಬರು ಲೈಕ್ ಕೊಟ್ಟುಕೊಳ್ಳುವ ಆಧುನಿಕ ಪ್ರೇಮಲೋಕಕ್ಕೆ ಫೇಸ್ ಬುಕ್ ಎನ್ನಬಹುದು.

ಬನ್ನೇರುಘಟ್ಟಕ್ಕೆ ನಾಲ್ಕು ದ.ಆಫ್ರಿಕಾ ಚೀತಾ ಆಗಮನ

ಬೆಂಗಳೂರು: ದಕ್ಷಿಣ ಆಫ್ರಿಕಾದಿಂದ ತರಲಾಗಿದ್ದ ನಾಲ್ಕು ಚೀತಾಗಳನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ ಶುಕ್ರವಾರ ಮಧ್ಯರಾತ್ರಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದ್ದಾರೆ. ಈ ಚೀತಾಗಳು ಬನ್ನೇರುಘಟ್ಟ ಮೃಗಾಲಯವನ್ನು ಸೇರಿಕೊಂಡಿವೆ.

ಕುಕ್ಕರ್ ಬಾಂಬ್ ಉಗ್ರ ಶಾರೀಕ್‌ಗೆ ಏ.25ಕ್ಕೆ ಶಿಕ್ಷೆ

ಬೆಂಗಳೂರು: ಕಳೆದ ನಾಲ್ಕು ವರ್ಷಗಳ ಹಿಂದೆ ಮಂಗಳೂರು ಬಳಿ ಸಂಭವಿಸಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಶಂಕಿತ ಉಗ್ರ ಮೊಹಮ್ಮದ್ ಶಾರೀಕ್ ತಪ್ಪೊಪ್ಪಿಕೊಂಡಿದ್ದಾರೆ. ಈ ಸಂಬಂಧ ಎನ್‌ಐಎ ನ್ಯಾಯಾಲಯ ಅಂತಿಮ ತೀರ್ಪನ್ನು ಏ.25ಕ್ಕೆ ಕಾಯ್ದಿರಿಸಿದೆ.

ಉ.ಪ್ರ., ಆಂಧ್ರ ರೈಲ್ವೇ ಹಳಿಗಳಿಗೆ 24,815 ಕೋ.ರು.

ದೆಹಲಿ: ಉತ್ತರಪ್ರದೇಶ ಮತ್ತು ಆಂಧ್ರ ಪ್ರದೇಶ ರಾಜ್ಯಗಳಾದ್ಯಂತ 15 ಜಿಲ್ಲೆಗಳಲ್ಲಿ ರೈಲ್ವೇ ಹಳಿ ನಿರ್ಮಿಸುವ ಎರಡು ಯೋಜನೆಗಳಿಗೆ ಕೇಂದ್ರ ಅನುಮೋದನೆ ನೀಡಿದೆ. ಯೋಜನೆಗಳ ಒಟ್ಟು ಅಂದಾಜು ವೆಚ್ಚ 24,815 ಕೋಟಿ ರುಪಾಯಿ.

ಫನ್‌ತರಂಗ

- ರಘುಪತಿ ಶೃಂಗೇರಿ -

ಪ್ರಧಾನಿಗೆ ಹಾಗೂ ನನಗೆ ಇಬ್ಬರಿಗೂ ಹೆಂಡತಿ ಸಮಸ್ಯೆ ಇಲ್ಲ - ವಿ.ಪಕ್ಷದ ನಾಯಕ



ಮಹಿಳಾ ಮೀಸಲು ಮಸೂದೆಗೆ ಸೋಲು: ದೇಶವನ್ನುದ್ದೇಶಿಸಿ ಪ್ರಧಾನಿ ಭಾಷಣ
ಕಾಂಗ್ರೆಸ್, ಡಿಎಂಕೆ, ಟಿಎಂಸಿಗಳು ಮಹಿಳೆಯರ ಹಕ್ಕುಗಳನ್ನು ಲೂಟಿ ಮಾಡಿವೆ
ಪ್ರತಿಪಕ್ಷಗಳ ವಿರುದ್ಧ ಮೋದಿ ಕಹಳೆ | ಮತ್ತೆ ಮಸೂದೆ ಮಂಡಿಸುವ ಸುಳಿವು

ಇಂಡಿ ಕೂಟದಿಂದ ಮೀಸಲು ಭ್ರೂಣಹತ್ಯೆ: ಮೋದಿ ಕೆಂಡ

ದೆಹಲಿ: ಸಂಖ್ಯಾಬಲದ ಕೊರತೆಯಿಂದ ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆಗೆ ಸೋಲಾದ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಕಾಂಗ್ರೆಸ್ ನೇತೃತ್ವದ ಇಂಡಿ ಮೈತ್ರಿಕೂಟದ ವಿರುದ್ಧ ಕಿಡಿಕಾರಿದ್ದಾರೆ. ಶನಿವಾರ ರಾತ್ರಿ 8.30ಕ್ಕೆ ದೇಶವನ್ನುದ್ದೇಶಿಸಿ ಮಾತನಾಡಿದ ಮೋದಿ, ಕಾಂಗ್ರೆಸ್, ಡಿಎಂಕೆ, ಸಮಾಜವಾದಿ ಪಕ್ಷದ ಸ್ವಾರ್ಥ ರಾಜಕಾರಣದಿಂದ ಸೋಲಾಗಿದೆ. ದೇಶದ ಮಾತೆಯರಿಗೆ ವಿಪಕ್ಷಗಳು ಅಪಮಾನ ಮಾಡಿವೆ. ನಮಗೆ ಸಂಖ್ಯಾಬಲ ಇಲ್ಲದ್ದರಿಂದ ಮಸೂದೆಗೆ ಸೋಲಾಯಿತು. ಇದರರ್ಥ ನಾವು ಸೋತೆವು ಎಂದಲ್ಲ, ಮತ್ತೆ ಬರುತ್ತೇವೆ ಎಂದು ಹೇಳಿದರು. ಆ ಮೂಲಕ ಸಂಖ್ಯಾಬಲ ಗಳಿಸಿಕೊಂಡು ಮತ್ತೆ ಮಸೂದೆಯನ್ನು ಮಂಡಿಸುವ ಸುಳಿವು ನೀಡಿದರು.

ಮಸೂದೆ ವಿಫಲವಾದ ಬೆನ್ನಲ್ಲೇ ಎಲ್ಲಾ ವಿಪಕ್ಷ ಸದಸ್ಯರು ಖುಷಿಯಿಂದ ಚಪ್ಪಾಳೆ ತಟ್ಟಿದರು. ಈ ಮೂಲಕ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಭ್ರೂಣ ಹತ್ಯೆ ಮಾಡಿವೆ. ನಾರಿಯರ ಆತ್ಮಸಮ್ಮಾನಕ್ಕೆ ಆದ ಗಾಯ ಇದು ಎಂದು ಸಿಟ್ಟು ಹೊರಹಾಕಿದರು. ಕಾಂಗ್ರೆಸ್, ಎಸ್ಪಿ, ಡಿಎಂಕೆ, ಟಿಎಂಸಿ ಮತ್ತು ಇತರ ಪಕ್ಷಗಳು ಇಷ್ಟು ವರ್ಷಗಳಿಂದ ಒಂದೇ ನೆಪ ಹೇಳುತ್ತಿವೆ. ಕೆಲವು ತಾಂತ್ರಿಕ ವಿಷಯಗಳನ್ನು ಎತ್ತುವ ಮೂಲಕ ಅವರು ಮಹಿಳೆಯರ ಹಕ್ಕುಗಳನ್ನು ಲೂಟಿ ಮಾಡಿವೆ. ರಾಷ್ಟ್ರವು ಈ ಕೊಳಕು ರಾಜಕೀಯ ಮಾದರಿಯನ್ನು ಅರ್ಥಮಾಡಿಕೊಳ್ಳಬೇಕು. ಈ ಜನರು ಮಹಿಳಾ ಶಕ್ತಿಯನ್ನು ಹಗುರವಾಗಿ ಪರಿಗಣಿಸುತ್ತಿದ್ದಾರೆ ಎಂದು ದೂರಿದರು.

ಇಪ್ಪತ್ತೊಂದನೇ ಶತಮಾನದ ಮಹಿಳೆಯರು ದೇಶದ ಪ್ರತಿಯೊಂದು ಘಟನೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ ಎಂಬುದನ್ನು ಅವರು ಮರೆಯುತ್ತಿದ್ದಾರೆ. ಅವರು ತಮ್ಮ ಉದ್ದೇಶ

ಗಳನ್ನು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಸತ್ಯದ ಬಗ್ಗೆ ಸಂಪೂರ್ಣವಾಗಿ ತಿಳಿದಿದ್ದಾರೆ. ಆದ್ದರಿಂದ, ಮಹಿಳಾ ಮೀಸಲಾತಿಯನ್ನು ವಿರೋಧಿಸುವ ಮೂಲಕ ಅವರು ಮಾಡಿದ ಪಾಪಕ್ಕೆ ವಿರೋಧ ಪಕ್ಷಗಳು ಖಂಡಿತವಾಗಿಯೂ ಶಿಕ್ಷೆ ಅನುಭವಿಸಬೇಕು ಎಂದು ಸಿಟ್ಟು ಹೊರಹಾಕಿದರು.

ಕಾಂಗ್ರೆಸ್ ಪ್ರಾದೇಶಿಕ ಪಕ್ಷಗಳು ಬಲವಾಗಿ ಬೆಳೆಯುವುದನ್ನು ಬಯಸುವುದಿಲ್ಲ. ಆದ್ದರಿಂದ, ಈ ತಿದ್ದುಪಡಿಯನ್ನು ವಿರೋಧಿಸುವಂತೆ ಮಾಡುವ ಮೂಲಕ ಹಲವಾರು ಪ್ರಾದೇಶಿಕ ಪಕ್ಷಗಳ ಭವಿಷ್ಯವನ್ನು ಕತ್ತಲೆಗೆ ತಳ್ಳುವ ರಾಜಕೀಯ ಪಿತೂರಿಯನ್ನು ಅದು ರೂಪಿಸಿದೆ ಎಂದು ವಾಗ್ದಾಳಿ ನಡೆಸಿದರು.

ಮಹಿಳೆಯರ ಧ್ವನಿ ಗಟ್ಟಿಗೊಳಿಸಲು ನಮ್ಮ ಸರ್ಕಾರ ಪ್ರಾಮಾಣಿಕ ಪ್ರಯತ್ನ ನಡೆಸಿತು. ಇದಕ್ಕಾಗಿ ಸಂಸತ್ತಿನ ವಿಶೇಷ ಅಧಿವೇಶನವನ್ನೂ ಕರೆಯಲಾಯಿತು. ಈ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಏಕೆ ಅವಶ್ಯ ಎಂಬುದನ್ನು ಸರ್ಕಾರ ಸದನದಲ್ಲಿ ಎಳೆಎಳೆಯಾಗಿ ಬಿಚ್ಚಿಟ್ಟಿತು. ಅಲ್ಲದೇ ಮಸೂದೆ ಪರವಾಗಿ ಮತ ಚಲಾಯಿಸುವಂತೆ ವಿಪಕ್ಷ ಸದಸ್ಯರಲ್ಲಿ ಮನವಿ ಮಾಡಿಕೊಂಡಿತು. ಆದರೆ ಪ್ರತಿಪಕ್ಷಗಳು ತಮ್ಮ ಸ್ವಾರ್ಥ ರಾಜಕಾರಣಕ್ಕೋಸ್ಕರ ಈ ಮಸೂದೆ ಅಂಗೀಕಾರವಾಗದಂತೆ ನೋಡಿಕೊಂಡವು ಎಂದು ಪ್ರಧಾನಿ ಮೋದಿ ಗಂಭೀರ ಆರೋಪ ಮಾಡಿದರು. ನಾರಿಶಕ್ತಿ ವಂದನ್ ಮಸೂದೆ ಯಾರಿಂದಲೂ ಏನನ್ನೂ ಕಸಿದುಕೊಳ್ಳುತ್ತಿರಲಿಲ್ಲ. ಬದಲಿಗೆ ಎಲ್ಲರಿಗೂ ಏನನ್ನಾದರೂ ಹೆಚ್ಚಿನದನ್ನು ನೀಡುತ್ತಿತ್ತು. ಎಲ್ಲಾ ರಾಜ್ಯಗಳ ಶಕ್ತಿಯನ್ನು ಹೆಚ್ಚಿಸುವ ಪ್ರಾಮಾಣಿಕ ಉದ್ದೇಶದಿಂದ ಮೂರು ಪ್ರಮುಖ ಮಸೂದೆಗಳನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ಬಯಸಿತ್ತು.

→ 4

ಪ್ರಧಾನಿ ಹೇಳಿದ್ದೇನು?

1 ಕಾಂಗ್ರೆಸ್, ಡಿಎಂಕೆ, ಸಮಾಜವಾದಿ ಪಕ್ಷದ ಸ್ವಾರ್ಥ ರಾಜಕಾರಣದಿಂದ ಸೋಲಾಗಿದೆ. ದೇಶದ ಮಾತೆಯರಿಗೆ ವಿಪಕ್ಷಗಳು ಅಪಮಾನ ಮಾಡಿವೆ

2 ಮಸೂದೆ ವಿಫಲವಾದ ಬೆನ್ನಲ್ಲೇ ಎಲ್ಲಾ ವಿಪಕ್ಷ ಸದಸ್ಯರು ಖುಷಿಯಿಂದ ಚಪ್ಪಾಳೆ ತಟ್ಟಿದರು. ಈ ಮೂಲಕ ಕಾಂಗ್ರೆಸ್, ಮಿತ್ರಪಕ್ಷಗಳು ಭ್ರೂಣ ಹತ್ಯೆ ಮಾಡಿವೆ

3 ಇಪ್ಪತ್ತೊಂದನೇ ಶತಮಾನದ ಮಹಿಳೆಯರು ದೇಶದ ಪ್ರತಿಯೊಂದು ಘಟನೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಅವರಿಗೆ ಸತ್ಯದ ಬಗ್ಗೆ ಸಂಪೂರ್ಣವಾಗಿ ತಿಳಿದಿದೆ

4 ಮಹಿಳಾ ಮೀಸಲಾತಿಯನ್ನು ವಿರೋಧಿಸುವ ಮೂಲಕ ಪ್ರತಿಪಕ್ಷಗಳು ಪಾಪ ಮಾಡಿವೆ. ವಿರೋಧ ಪಕ್ಷಗಳು ಖಂಡಿತವಾಗಿಯೂ ಇದಕ್ಕೆ ಶಿಕ್ಷೆ ಅನುಭವಿಸಬೇಕು

ಇರಾನ್‌ನ ಹೊರ್ಮುಜ್ ಜಲಸಂಧಿ ಬಳಿ ದಿಢೀರ್ ಗುಂಡಿನ ದಾಳಿ
ವಾಪಸಾದ ಭಾರತದ ಹಡಗುಗಳು, ಸಿಬ್ಬಂದಿ ಅಪಾಯದಿಂದ ಪಾರು
ಕೆರಳಿದ ಭಾರತೀಯ ಸರಕಾರದಿಂದ ಇರಾನ್ ರಾಯಭಾರಿಗೆ ಸಮನ್ಸ್

ಭಾರತದ 2 ಹಡಗಿಗೆ ಗುಂಡು

ದೆಹಲಿ: ಹೊರ್ಮುಜ್ ಜಲಸಂಧಿಯಲ್ಲಿ ಭಾರತದ ಎರಡು ತೈಲ ಟ್ಯಾಂಕರ್‌ಗಳ ಮೇಲೆ ಇರಾನ್‌ನಿಂದ ಶನಿವಾರ ಗುಂಡಿನ ದಾಳಿ ನಡೆದಿದೆ ಎಂದು ವರದಿಯಾಗಿದೆ. ಖೆಶ್ಮ್ ಮತ್ತು ಲಾರಕ್ ದ್ವೀಪಗಳ ನಡುವಿನ ಸಮುದ್ರದಲ್ಲಿ ಈ ದಾಳಿ ನಡೆದಿದೆ. ದಾಳಿ ಬಳಿಕ ತೈಲ ಟ್ಯಾಂಕರ್‌ಗಳು ಅಲ್ಲಿಂದ ವಾಪಸ್ ಆಗಿವೆ. ಇದರಿಂದ ಸಿಟ್ಟಾಗಿರುವ ಕೇಂದ್ರ ಸರಕಾರ ಭಾರತದಲ್ಲಿರುವ ಇರಾನ್ ರಾಯಭಾರಿಗೆ ಸಮನ್ಸ್ ನೀಡಿ, ಪ್ರತಿಭಟನೆ ಸಲ್ಲಿಸಿದೆ.

ಭಾರತೀಯ ವಿದೇಶಾಂಗ ಇಲಾಖೆ ನೀಡಿದ ತೀಕ್ಷ್ಣ ಪ್ರತಿಕ್ರಿಯೆಗೆ ಬೆಚ್ಚಿಬಿದ್ದಿರುವ ಇರಾನ್ ರಾಯಭಾರಿ ಮೊಹಮ್ಮದ್ ಫತಾಲಿ, ಪ್ರಕರಣದ ಸಂಪೂರ್ಣ ವರದಿ ಪಡೆಯಲು ಯತ್ನಿಸಿದ್ದಾರೆ. ಜಲಸಂಧಿಯಲ್ಲಿ ಹಡಗುಗಳು ಬರುತ್ತಿದ್ದಂತೆ ಇರಾನ್‌ನ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ನ ಎರಡು ಯುದ್ಧ ಹಡಗುಗಳು ಅವನ್ನು ಸಮೀಪಿಸಿವೆ. ಈ ವೇಳೆ ಯಾವುದೇ ರೇಡಿಯೋ ಸಂದೇಶ ನೀಡದೆ ಗುಂಡಿನ ದಾಳಿ ನಡೆಸಲಾಗಿದೆ ಎಂದು ಟ್ಯಾಂಕರ್‌ನ ಕ್ಯಾಪ್ಟನ್ ವರದಿ

ಮಾಡಿದ್ದಾರೆ. ಒಮಾನ್‌ನ ಈಶಾನ್ಯಕ್ಕೆ 37 ಕಿಲೋಮೀಟರ್ ದೂರದಲ್ಲಿ ಈ ದಾಳಿ ನಡೆದಿದೆ. ಟ್ಯಾಂಕರ್ ಮತ್ತು ಸಿಬ್ಬಂದಿ ಸುರಕ್ಷಿತವಾಗಿದ್ದಾರೆ. ಘಟನೆಯ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಇಂಗ್ಲೆಂಡ್‌ನ ಕಡಲ ವ್ಯಾಪಾರ ಕಾರ್ಯಾಚರಣೆ ಕೇಂದ್ರ ಮಾಹಿತಿ ಹಂಚಿಕೊಂಡಿದೆ. ಈ ಬೆಳವಣಿಗೆಯ ನಡುವೆ ಜಲಸಂಧಿಯನ್ನು ದಾಟಲು ಪ್ರಯತ್ನಿಸಿದ ವಾಣಿಜ್ಯ ಹಡಗುಗಳು ಇರಾನಿನ ನೌಕಾಪಡೆ ಸಂದೇಶ ನೀಡಿ, ಅಮೆರಿಕ ಸರ್ಕಾರವು ತನ್ನ ಬದ್ಧತೆಯನ್ನು ತೋರಿಸುವಲ್ಲಿ ವಿಫಲವಾಗಿದೆ. ಆದ್ದರಿಂದ ಹೊರ್ಮುಜ್ ಜಲಸಂಧಿಯನ್ನು ಮುಚ್ಚಿದ್ದೇವೆ ಎಂದಿದೆ.

ಟ್ರಂಪ್ ಉಲ್ಟಾಪಲ್ಟಾ: ಹೊರ್ಮುಜ್ ಬಂದ್

ಸ್ವತಃ ಇರಾನ್ ಎಲ್ಲ ದೇಶಗಳಿಗೆ ಹೊರ್ಮುಜ್ ಜಲಸಂಧಿಯನ್ನು ತೆರೆದಿದ್ದರೂ, ಅಮೆರಿಕ ಅಧ್ಯಕ್ಷ ಟ್ರಂಪ್ ಹೊರ್ಮುಜ್ ಮೇಲಿನ ದಿಗ್ಬಂಧನವನ್ನು ಮುಂದುವರಿಸುವುದಾಗಿ ಶುಕ್ರವಾರ ಹೇಳಿದ್ದರು. ಇದರಿಂದ ಸಿಟ್ಟಾಗಿರುವ ಇರಾನ್ ಮತ್ತೆ ಹೊರ್ಮುಜ್ ಜಲಸಂಧಿಯಲ್ಲಿ ಕಟ್ಟುನಿಟ್ಟಿನ ನಿರ್ಬಂಧವನ್ನು ಪುನಾರಂಭಿಸುವುದಾಗಿ ಶನಿವಾರ ಘೋಷಿಸಿದೆ. ಇದು ಜಗತ್ತಿನ ಎಲ್ಲ ದೇಶಗಳಿಗೆ ಇಕ್ಕಟ್ಟಿನ ಸ್ಥಿತಿಯನ್ನು ತಂದಿಟ್ಟಿದೆ. ಜಗತ್ತಿನ ಶೇ.20ರಷ್ಟು ತೈಲ ಪೂರೈಕೆಯಾಗುವುದೇ ಹೊರ್ಮುಜ್‌ನಿಂದ. ಅದು ತೆರೆಯಿತು ಎಂದು ಸಂಭ್ರಮಿಸಿದ್ದ ದೇಶಗಳು ನಿರಾಶೆಗೊಂಡಿವೆ.

ತೈಲ ಹೊತ್ತಿರುವ ದೇಶ್ ಗರಿಮಾ ನೌಕೆ ಭಾರತದತ್ತ

ಹೊರ್ಮುಜ್‌ನಲ್ಲಿ ಬಿಗುವಿನ ವಾತಾವರಣದ ನಡುವೆಯೇ ಕಚ್ಚಾತೈಲವನ್ನು ಹೊತ್ತಿರುವ

ದೇಶ್ ಗರಿಮಾ ಹೆಸರಿನ ತೈಲ ಟ್ಯಾಂಕರ್ ಒಂದು ಜಲಸಂಧಿಯನ್ನು ದಾಟಿದೆ. ಉಳಿದ ದೇಶಗಳ ನೌಕೆಗಳಿಗೆ ಇರಾನ್ ಬಲವಾದ ಅಡ್ಡಿ ಮಾಡಿದ್ದರೂ ಭಾರತೀಯ ನೌಕೆ ಹೊರ್ಮುಜ್ ಸಂಕಟವನ್ನು ದಾಟಲು ಯಶಸ್ವಿಯಾಗಿದೆ. ಇದು ಭಾರತಕ್ಕೆ ಬರಲಿರುವ 10ನೇ ನೌಕೆಯಾಗಿದೆ.

ಶಾಂತಿ ಒಪ್ಪಂದಕ್ಕೆ ಸಹಿ ಹಾಕದಿದ್ದರೆ ಬಾಂಬ್: ಟ್ರಂಪ್

ಇರಾನ್‌ಗೆ ಅಮೆರಿಕ ಎಚ್ಚರಿಕೆ
ಸಂಧಾನಕ್ಕೆ ಪಾಕ್-ಈಜಿಪ್ಟ್ ಯತ್ನ

ಅಮೆರಿಕ-ಇಸ್ರೇಲ್-ಇರಾನ್ ನಡುವಿನ ಕದನ ವಿರಾಮ ಏ.22ರ ಬುಧವಾರಕ್ಕೆ ಮುಗಿಯಲಿದೆ. ಈ ನಡುವೆ ಮತ್ತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್ ಮೇಲೆ ದಾಳಿ ಮಾಡುವ ಬೆದರಿಕೆ ಹಾಕಿದ್ದಾರೆ. ಇರಾನ್ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲೇಬೇಕಾಗುತ್ತದೆ. ಇಲ್ಲವಾದರೆ ಮತ್ತೆ ಕದನವಿರಾಮ ಮುಂದುವರಿಸುವುದಿಲ್ಲ, ಹೊರ್ಮುಜ್ ಮೇಲಿನ ದಿಗ್ಬಂಧನ ಮುಂದುವರಿಯುತ್ತದೆ, ಪರಿಸ್ಥಿತಿ ಕೈಮೀರಿದರೆ ಇರಾನ್ ಮೇಲೆ ಬಾಂಬ್‌ಗಳನ್ನು ಹಾಕಬೇಕಾಗುತ್ತದೆ ಎಂದಿದ್ದಾರೆ.

ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಅಭಿವೃದ್ಧಿಪಡಿಸಬಾರದು ಎನ್ನುವುದು ಟ್ರಂಪ್ ಮುಖ್ಯ ಷರತ್ತು. ಅದಕ್ಕೆ ಇರಾನ್ ಒಪ್ಪುತ್ತಿಲ್ಲ. ಮುಂದಿನ ಬುಧವಾರ ಇರಾನ್-ಅಮೆರಿಕ-ಇಸ್ರೇಲ್ ನಡುವಿನ ಕದನ ವಿರಾಮ ಮುಗಿಯಲಿದೆ. ಅಷ್ಟರೊಳಗೆ ಒಪ್ಪಂದವಾಗದಿದ್ದರೆ ಪರಿಸ್ಥಿತಿ ಕಷ್ಟವಿದೆ. ಈಗಾಗಲೇ ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ಒಂದು ಸುತ್ತಿನ ಒಪ್ಪಂದ ಮಾತುಕತೆ ನಡೆದಿದೆ. ಸತತ 21 ಗಂಟೆ ಚರ್ಚೆಯಾದರೂ ಒಮ್ಮತ ಸಾಧ್ಯವಾಗಿರಲಿಲ್ಲ. ಈಗ ಮತ್ತೆ ಪಾಕಿಸ್ತಾನ-ಈಜಿಪ್ಟ್‌ಗಳು ಶ್ರಮ ಹಾಕಿವೆ. ಇನ್ನೊಂದು ಸುತ್ತಿನ ಶಾಂತಿ ಮಾತುಕತೆ ಪಾಕಿಸ್ತಾನದಲ್ಲೇ ನಡೆಯುವ ನಿರೀಕ್ಷೆಯಿದೆ. ಅಮೆರಿಕಕ್ಕೂ ಪಾಕಿಸ್ತಾನದಲ್ಲಿ 2ನೇ ಬಾರಿ ಶಾಂತಿ ಮಾತುಕತೆ ನಡೆಯಬೇಕೆಂಬ ಇಚ್ಛೆಯಿದ್ದಂತಿದೆ.

ಮಹಾರಾಷ್ಟ್ರ, ಬಿಹಾರ, ಒಡಿಶಾದ ನಾಲ್ವರಿಗೆ ಕೋಳ
ಆಟಿಕೆ ಕಾರನ್ನು ಸ್ಫೋಟಿಸುವ ಉಗ್ರರ ಸಂಚು ವಿಫಲ

ದಿಲ್ಲಿಯಲ್ಲಿ ಮತ್ತೊಂದು ಸ್ಫೋಟಕ್ಕೆ ಸಂಚು: ನಾಲ್ವರು ಉಗ್ರರ ಬಂಧನ

ದೆಹಲಿ: ರಾಷ್ಟ್ರ ರಾಜಧಾನಿಯಲ್ಲಿ ಮತ್ತೊಂದು ಮಹಾಸ್ಫೋಟಕ್ಕೆ ಸಂಚು ನಡೆದಿದೆ. ಸೂಕ್ಷ್ಮ ಸ್ಥಳಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲು ಸಂಚು ಹಾಕಿದ್ದ ಮಹಾರಾಷ್ಟ್ರ, ಒಡಿಶಾ ಮತ್ತು ಬಿಹಾರದ ನಾಲ್ವರು ಉಗ್ರರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ದೆಹಲಿ ಪೊಲೀಸ್ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ. ಕಾರ್ಯಾಚರಣೆ ವೇಳೆ ಸುಧಾರಿತ ಸ್ಫೋಟಕ ಸಾಧನ (ಐಇಡಿ) ಮೊಬೈಲ್, ಮತ್ತಿತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜನದಟ್ಟಣೆಯ ಸ್ಥಳಗಳನ್ನು ಗುರಿಯಾಗಿಸಿ ಐಇಡಿ ಅಳವಡಿಸಲಾದ ರಿಮೋಟ್-ನಿಯಂತ್ರಿತ ಟಾಯ್ (ಆಟದ) ಕಾರನ್ನು ಜೋಡಿಸುವ ಪ್ರಕ್ರಿಯೆಯಲ್ಲಿ ಇಬ್ಬರು ಆರೋಪಿಗಳು ತೊಡಗಿಸಿಕೊಂಡಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ವಿಶೇಷ ದಳವು ಗುಪ್ತಚರ ನೇತೃತ್ವದ ಕಾರ್ಯಾಚರಣೆಯಲ್ಲಿ ಮಹಾರಾಷ್ಟ್ರದ ಇಬ್ಬರು, ಒಡಿಶಾ ಮತ್ತು ಬಿಹಾರದಿಂದ ತಲಾ ಒಬ್ಬರನ್ನು ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ನಾಲ್ವರು ಖಲೀಫತ್ ಸ್ಥಾಪನೆಯ ಆಲೋಚ

ನೆಯೊಂದಿಗೆ ಉಗ್ರಗಾಮಿ ಸಿದ್ಧಾಂತ ದಿಂದ ಪ್ರಭಾವಿತರಾಗಿದ್ದರು ಮತ್ತು ಘಜ್ವಾ-ಎ- ಹಿಂದ್ ನಂತಹ ನಂಬಿಕೆ ಪ್ರಚಾರ ಮಾಡುತ್ತಿದ್ದರು ಎಂದು ಪೊಲೀಸರು ಆರೋಪಿಸಿದ್ದಾರೆ. ಲಷ್ಕರ್ ಪರಿಕಲ್ಪನೆಯಿಂದ ಪ್ರೇರಿತರಾಗಿದ್ದ ಆರೋಪಿಗಳು ಇತರರನ್ನು ಮತಾಂಧರನ್ನಾಗಿ ಮಾಡಲು ಕಪ್ಪು ಧ್ವಜ ಹಿಡಿದು ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದರು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆರೋಪಿಗಳು ಮುಚ್ಚಿದ ಮತ್ತು ಎನ್‌ಕ್ರಿಪ್ಟ್ ಮಾಡಿದ ಸಾಮಾಜಿಕ ಮಾಧ್ಯಮ ಗುಂಪುಗಳಲ್ಲಿ ಸಕ್ರಿಯರಾಗಿದ್ದರು. ಅಲ್ಲಿ ಉಗ್ರ ಸಿದ್ಧಾಂತ ಮತ್ತು ಶಸ್ತ್ರಾಸ್ತ್ರಗಳಿಗೆ ಸಂಬಂಧಿಸಿದ ವಿಷಯವನ್ನು ಹಂಚಿಕೊಳ್ಳಲಾಗುತ್ತಿತ್ತು. ಹೊಸ ಸದಸ್ಯರನ್ನು ಗುರುತಿಸಲು, ನೇಮಕ ಮಾಡಲು ಈ ವೇದಿಕೆಗಳನ್ನು ಬಳಸಲಾಗುತ್ತಿತ್ತು.

→ 4

ದಕ್ಷಿಣ ಭಾರತದಲ್ಲಿ ಸುಪ್ರೀಂ ಪೀಠಕ್ಕೆ ಸಿಎಂ ಸಿದ್ದು ಮನವಿ

ನ್ಯಾಯಾಂಗ ಸಮ್ಮೇಳನದಲ್ಲಿ ಭಾಷಣ
ಸಿಜೆಐ ಸೂರ್ಯಕಾಂತ್‌ಗೆ ಬೇಡಿಕೆ

ಬೆಂಗಳೂರು: ದಕ್ಷಿಣ ಭಾರತದಲ್ಲಿ ಸರ್ವೋಚ್ಚ ನ್ಯಾಯಾಲಯದ ಪೀಠ ಸ್ಥಾಪನೆಯಾದರೆ ನ್ಯಾಯ ಖಾತ್ರಿಪಡಿಸುವ ನಿಟ್ಟಿನಲ್ಲಿ ಬಹು ದೊಡ್ಡ ಹೆಜ್ಜೆಯನ್ನು ಇರಿಸಿದಂತಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಹೇಳಿದರು. ಈ ಮೂಲಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್‌ಗೆ ದಕ್ಷಿಣದಲ್ಲಿ ಪೀಠ ಸ್ಥಾಪಿಸುವಂತೆ ಮನವಿ ಮಾಡಿದರು. ಬೆಂಗಳೂರಿನ ಜಿಕೆವಿಕೆಯ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಭಾಂಗಣದಲ್ಲಿ ನಡೆದ ನ್ಯಾಯಾಂಗ ಅಧಿಕಾರಿಗಳ 22ನೇ ದ್ವೈವಾರ್ಷಿಕ ರಾಜ್ಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

→ 4

ಕೇಂದ್ರ ಸರಕಾರಿ ನೌಕರರ ತುಟ್ಟಿಭತ್ಯೆ ಶೇ.2 ಹೆಚ್ಚಳ

ದೆಹಲಿ: ಕೇಂದ್ರ ಸರಕಾರಿ ನೌಕರರಿಗೆ ಸಂತೋಷದ ಸಿಕ್ಕಿದೆ. ನೌಕರರು ಮತ್ತು ಪಿಂಚಣಿದಾರರ ತುಟ್ಟಿಭತ್ಯೆ (ಬೆಲೆಯೇರಿಕೆಗೆ ತಕ್ಕಂತೆ ನೌಕರರಿಗೆ ನೀಡುವ ಹೆಚ್ಚುವರಿ ಭತ್ಯೆ) ಶೇ.2ರಷ್ಟು ಹೆಚ್ಚಳ ಮಾಡಲು ಕೇಂದ್ರದ ಸಚಿವ ಸಂಪುಟ ಅನುಮೋದನೆ ನೀಡಿದೆ. ಈ ಹೆಚ್ಚಳವು 2026ರ ಜನವರಿ 1ರಿಂದ ಪೂರ್ವಾನ್ವಯವಾಗಲಿದೆ. ಅಲ್ಲಿಗೆ ತುಟ್ಟಿಭತ್ಯೆ ಶೇ.58ರಿಂದ 60ಕ್ಕೆ ಏರಿಕೆಯಾಗಲಿದೆ. ತುಟ್ಟಿ ಭತ್ಯೆ ಮತ್ತು ತುಟ್ಟಿ ಪರಿಹಾರ ಹೆಚ್ಚಳದಿಂದಾಗಿ ಕೇಂದ್ರಕ್ಕೆ ಒಟ್ಟಾರೆಯಾಗಿ ವಾರ್ಷಿಕವಾಗಿ 6,791.24 ಕೋಟಿ ರು. ಹೊರೆ ಬೀಳಲಿದೆ. ಇದರಿಂದ 50.46 ಲಕ್ಷ ನೌಕರರು ಮತ್ತು 68.27 ಲಕ್ಷ ಪಿಂಚಣಿದಾರರಿಗೆ ಅನುಕೂಲವಾಗಲಿದೆ ಎಂದರು.

ALVA'S Education Foundation
ALVA'S CENTRAL SCHOOL
PUTHIGE, MOODUBIDIRE, D.K. - 574227
MARKS THAT MADE HISTORY, MINDS THAT MADE ALVA'S PROUD
Alva's School records 100% RESULTS for the Sixth consecutive year
95% & above 46 students | 94% & above 51 students | 93% & above 69 students | 92% & above 86 students | 91% & above 95 students | 90% & above 116 students



ADMISSION OPEN 2026-27
ALVA'S English Medium School (State Syllabus NCERT) 1st to 10th Std
ALVA'S Central School (Affiliated to CBSE, New Delhi) GRADE 1 to 12
ALVA'S ICSE School (Affiliated to CISCE, New Delhi) GRADE 1 to 10
STRUCTURED NEET-IIT FOUNDATION COACHING FOR CLASSES 6 - 10 ACROSS CBSE, ICSE & STATE BOARDS
For admissions contact: 77602 72525, 70265 29757
ALVA'S PU COLLEGE ADMISSIONS OPEN 2026-27
SCIENCE: PCMB | PCMC | PCMS | PCME; NEET | JEE | CET | NATA | NDA
COMMERCE: EBAC | EBAS | EBAH | BASBm | BAEBm; CA | CS | NDA | CLAT | CIVIL SERVICE
ARTS: HEPS; CLAT | NDA | CIVIL SERVICE
Contact: 63663 77823 / 63663 77825 / 63663 77827

ಕಾಂಗ್ರೆಸ್ ಮಿತ್ರಕೂಟದ ನಡೆ ಖಂಡಿಸಿ ರಾಷ್ಟ್ರವ್ಯಾಪಿ ಪ್ರತಿಭಟನೆಗೆ ಎನ್‌ಡಿಎ ಸಜ್ಜು
ರಾಹುಲ್ ನಿವಾಸಕ್ಕೆ ಮುತ್ತಿಗೆ ಯತ್ನ, ಕೇಂದ್ರ ಸಚಿವೆ ರಕ್ಷಾ, ಸಂಸದೆ ಬಾನ್ಸುರಿ ವಶಕ್ಕೆ

ಮಹಿಳಾ ಮೀಸಲಿಗೆ ಸೋಲು: ಸಂಸತ್ ವಿಶೇಷ ಕಲಾಪಕ್ಕೆ ತೆರೆ

ದೆಹಲಿ: ಲೋಕಸಭಾ ಕ್ಷೇತ್ರಗಳ ಮರು ವಿಂಗಡಣೆ, ಮಹಿಳಾ ಮೀಸಲು ವಿಧೇಯಕವನ್ನು ಶುಕ್ರವಾರ ಸಂಸತ್ತಿನಲ್ಲಿ ಮಂಡಿಸಿ ಕೇಂದ್ರ ಸರಕಾರ ಸೋಲುಕಂಡಿತ್ತು. ಇದರ ಬೆನ್ನಲ್ಲೇ ಶನಿವಾರ ನಡೆಯಬೇಕಾಗಿದ್ದ 3ನೇ ದಿನದ ಕಲಾಪ ಕೆಲವೇ ನಿಮಿಷಗಳಿಗೆ ಸೀಮಿತವಾಗಿದೆ. ಬೆಳಗ್ಗೆ 11 ಗಂಟೆಗೆ ಲೋಕಸಭೆ ಮತ್ತು ರಾಜ್ಯಸಭೆ ಕಲಾಪಗಳನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ. ಇದೇ ವೇಳೆ ಮಹಿಳಾ ಮೀಸಲನ್ನು ವಿರೋಧಿಸಿದ ಪ್ರತಿಪಕ್ಷಗಳ ವಿರುದ್ಧ ಇಡೀ ದೇಶಾದ್ಯಂತ ಎನ್‌ಡಿಎ ಪ್ರತಿಭಟನೆ ಶುರು ಮಾಡಿದೆ. ಮತ್ತೊಂದು ಇಂಡಿ ಮಿತ್ರಕೂಟ ದೇಶಾದ್ಯಂತ ಸಂಭ್ರಮಾಚರಣೆ ನಡೆಸಿದೆ.

ರಕ್ಷಾ ಖಡ್ಸೆ


ಬಾನ್ಸುರಿ ಸ್ವರಾಜ್

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಶನಿವಾರ ವಿಪಕ್ಷ ನಾಯಕ ರಾಹುಲ್ ಗಾಂಧಿ ನಿವಾಸಕ್ಕೆ ನುಗ್ಗಲು ಬಿಜೆಪಿ ಮಹಿಳಾ ಸಂಸದರು ಯತ್ನಿಸಿದ್ದಾರೆ. ಈ ವೇಳೆ ಕೇಂದ್ರ

ಕ್ರೀಡಾ ಇಲಾಖೆ ಸಹಾಯಕ ಸಚಿವ ರಕ್ಷಾ ಖಡ್ಸೆ, ಸಂಸದೆಯರಾದ ಬಾನ್ಸುರಿ ಸ್ವರಾಜ್, ಕಮಲ್‌ಜೀತ್ ಸೆಹ್ರಾವತ್ ಸೇರಿ ಇತರೆ ನಾಯಕಿಯರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ನಟಿ, ಸಂಸದೆ ಹೇಮಾಮಾಲಿನಿ ಕೂಡ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕಾಂಗ್ರೆಸ್ ಮತ್ತು ಇಂಡಿ ಕೂಟದ ಇತರೆ ಪಕ್ಷಗಳ ಮಹಿಳಾ ವಿರೋಧಿ ನಿಲುವನ್ನು ವಿರೋಧಿಸಿ, ಎನ್‌ಡಿಎ ಪ್ರತಿಭಟನೆ ಭಾನುವಾರವೂ ಮುಂದುವರಿಯಲಿದೆ. ರಾಷ್ಟ್ರಾದ್ಯಂತ ಹೋರಾಟ ನಡೆಸಿ ವಿಪಕ್ಷಗಳನ್ನು ಮಹಿಳಾ ವಿರೋಧಿ ಎಂದು ಬಿಂಬಿಸಲು ಯತ್ನ ಸಾಗಲಿದೆ ಎಂದು ಮೂಲಗಳು ಹೇಳಿವೆ.

ತೆಲಂಗಾಣ ಸಿಎಂ ರೇವಂತ್ ಮನೆಗೆ ಮುತ್ತಿಗೆ ಕರೆ: ಬಿಜೆಪಿ ರಾಜ್ಯಾಧ್ಯಕ್ಷ ರಾಮಚಂದ್ರರಾವ್‌ಗೆ ಗೃಹಬಂಧನ

ಹೈದರಾಬಾದ್: ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆಯ ವಿರುದ್ಧ ಕಾಂಗ್ರೆಸ್ ಮತ ಚಲಾಯಿಸಿದ್ದನ್ನು ವಿರೋಧಿಸಿ, ತೆಲಂಗಾಣ ಸಿಎಂ ಎ.ರೇವಂತ್ ರೆಡ್ಡಿಯವರ ಮನೆ ಮುಂದೆ ಪ್ರತಿಭಟನೆ ನಡೆಸಲು ಬಿಜೆಪಿ ತೆಲಂಗಾಣ ಅಧ್ಯಕ್ಷ ಎನ್.ರಾಮ ಚಂದ್ರರಾವ್ ಶನಿವಾರ ಕರೆ ನೀಡಿದ್ದರು. ಇದರ ಬೆನ್ನಲ್ಲೇ ಅವರನ್ನು ತೆಲಂಗಾಣ ಪೊಲೀಸರು ಗೃಹ ಬಂಧನದಲ್ಲಿರಿಸಿದ್ದಾರೆ. ಪೊಲೀಸರ ಕ್ರಮವನ್ನು ರಾವ್ ಟೀಕಿಸಿದ್ದು, ಇದು ಪ್ರಜಾ ಪ್ರಭುತ್ವ, ಪ್ರತಿಭಟನೆಯನ್ನು ಹತ್ತಿಕ್ಕುವ ಪ್ರಯತ್ನ ಎಂದು ಕರೆದಿದ್ದಾರೆ. ಶುಕ್ರವಾರ ಸಂಜೆ ಭಾರತೀಯ ಜನತಾ ಯುವ ಮೋರ್ಚಾ (ಬಿಜೆವೈಎಂ) ನಾಯಕರು ಹೈದರಾಬಾದ್‌ನಲ್ಲಿ ಪ್ರತಿಭಟನೆ ನಡೆಸಿ, ಕಾಂಗ್ರೆಸ್ ನಿಲುವನ್ನು ವಿರೋಧಿಸಿದ್ದರು. ಈ ವೇಳೆ ರಾಹುಲ್ ಗಾಂಧಿಯವರ ಪ್ರತಿಕೃತಿಯನ್ನು ಸುಟ್ಟು ಅಸಮಾಧಾನ ಹೊರಹಾಕಿದ್ದರು.

ಎಸ್.ಎಲ್.ಭೈರಪ್ಪ ಪ್ರತಿಷ್ಠಾನ ವತಿಯಿಂದ ಧರ್ಮಶ್ರೀ ಕೃತಿಯ 65ರ ಸಂಭ್ರಮ, ಸಾಹಿತ್ಯ ಸಂಭ್ರಮ ಕಾರ್ಯಕ್ರಮ

ಧರ್ಮಶ್ರೀ ಕೃತಿ ಮಾನವೀಯ ಮೌಲ್ಯಗಳ ಪ್ರತಿಫಲನ

ಹಿಂದುಳಿದ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡಲು 11 ಜನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಯಿತು.

ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ಭೈರಪ್ಪ ಅವರ ಭಾವಚಿತ್ರಕ್ಕೆ ನಮನ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಾಹಿತ್ಯಾಸಕ್ತರು.

ಬೆಂಗಳೂರು: ಭೈರಪ್ಪನವರ ಕೃತಿಗಳಲ್ಲಿ ವ್ಯಕ್ತವಾಗುವ ವಿಚಾರಗಳು ಕೇವಲ ಕಥೆಗಳಲ್ಲ, ಅವು ಭಾರತೀಯ ಸಮಾಜದ ಬದಲಾವಣೆಗಳ ದಾಖಲೆಗಳಾಗಿವೆ ಎಂದು ಸಾಹಿತಿ ಜಿ.ಬಿ.ಹರೀಶ್ ತಿಳಿಸಿದರು.

ಎಸ್.ಎಲ್.ಭೈರಪ್ಪ ಪ್ರತಿಷ್ಠಾನ ವತಿಯಿಂದ ಶನಿವಾರ ನಗರದ ನ್ಯಾಷನಲ್ ಕಾಲೇಜಿನಲ್ಲಿ ಆಯೋಜಿಸಿದ್ದ ಧರ್ಮಶ್ರೀ ಕೃತಿಯ 65 ಸಂಭ್ರಮ ಹಾಗೂ ಎಸ್.ಎಲ್.ಭೈರಪ್ಪನವರ ಸಾಹಿತ್ಯಸಂಸ್ಮರಣೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಧರ್ಮಶ್ರೀ ಕಾದಂಬರಿಯಲ್ಲಿನ ಸತ್ಯನಾರಾಯಣನ ಪಾತ್ರವು ಕೇವಲ ಕಲ್ಪಿತವಲ್ಲ, ಅದು ಭೈರಪ್ಪನವರ ಜೀವನಾನುಭವಗಳ ಪ್ರತಿಬಿಂಬವಾಗಿದ್ದು, ವ್ಯಕ್ತಿಯ ಒಳಗಿನ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಘರ್ಷವನ್ನು ಚಿತ್ರಿಸುತ್ತದೆ. ಜತೆಗೆ ಲೀಲಿಯ ಪಾತ್ರದ ಮೂಲಕ ವ್ಯಕ್ತವಾಗುವ ನಿಸ್ವಾರ್ಥ ಪ್ರೀತಿ ಸತ್ಯನಾರಾಯಣನನ್ನು ಸೆಳೆಯುತ್ತದೆ. ಇದೇ ಕಾರಣದಿಂದ ಅವನು ಕ್ರೈಸ್ತ ಧರ್ಮದತ್ತ ಆಕರ್ಷಿತನಾಗುತ್ತಾನೆ. ಆದರೆ ಇಲ್ಲಿ ನಾವು ಧರ್ಮದ ಪ್ರಶ್ನೆಗಿಂತ ಹೆಚ್ಚು ಮಾನವೀಯ ಸಂಬಂಧಗಳ ಪ್ರಶ್ನೆ ಎನ್ನುವ ಹಾಗೆ ಯೋಚನೆ ಮಾಡಬೇಕು ಎಂದರು.

ಇನ್ನೊಂದೆಡೆ, ರಾಜಮ್ಮನ ಪಾತ್ರ, ಒಂದು ಸಮತೋಲನದ ವ್ಯಕ್ತಿತ್ವ. ಆಕೆಯ ನಡೆನುಡಿಗಳು ಧರ್ಮವನ್ನು ಮೀರಿದ ಮಾನವೀಯತೆಗಾಗಿ ನಿಂತಿವೆ. ಈ ಪಾತ್ರ ಕಾದಂಬರಿಯಲ್ಲಿ ಧಾರ್ಮಿಕ ಸಹಿಷ್ಣುತೆ ಮತ್ತು ಆತ್ಮೀಯತೆಯ ಸಂಕೇತವಾಗಿದೆ. ಕಾದಂಬರಿಯಲ್ಲಿ ಮತಾಂತರದ ಪ್ರಶ್ನೆಯನ್ನು ಸ್ಪಷ್ಟವಾಗಿ ಎತ್ತಿಕೊಂಡಿರುವ ಭೈರಪ್ಪನವರು, ಧರ್ಮ, ಸಂಸ್ಕೃತಿ ಮತ್ತು ವ್ಯಕ್ತಿಯ ಗುರುತಿನ ನಡುವಿನ ಸಂಘರ್ಷವನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಮತಾಂತರವು ಕೇವಲ ಧಾರ್ಮಿಕ ವಿಷಯವಲ್ಲ, ಅದು ಸಾಮಾಜಿಕ, ಆರ್ಥಿಕ ಹಾಗೂ ಮನೋವೈಜ್ಞಾನಿಕ ಆಯಾಮಗಳನ್ನು ಹೊಂದಿದೆ. ಇದಲ್ಲದೆ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಮತ್ತು ಭಾರತೀಯ ಮೌಲ್ಯಗಳ ನಡುವಿನ ಸಂಘರ್ಷವನ್ನು ಕೂಡ ಕಾದಂಬರಿ ಸ್ಪರ್ಶಿಸುತ್ತದೆ. ಅನಾಯಾಸವಾಗಿ ನುಗ್ಗಿರುವ ವಿದೇಶಿ ಸಂಸ್ಕೃತಿ ನಮ್ಮ ಗುರುತಿನ ಮೇಲೆ ಪರಿಣಾಮ ಬೀರುತ್ತಿದೆ ಎಂದರು.

ಒಂದು ಉತ್ತಮ ಕಾದಂಬರಿಗಾಗಿ ಸಂಘರ್ಷ ಅಗತ್ಯ. ಧರ್ಮಶ್ರೀಯಲ್ಲಿ ಈ ಸಂಘರ್ಷ ಮಾನಸಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಮಟ್ಟಗಳಲ್ಲಿ ಮೂಡಿಬಂದಿದೆ. ಧರ್ಮಶ್ರೀ, ಸಾರ್ಥ ಮತ್ತು ಆವರಣ ಕೃತಿಗಳನ್ನು ಒಂದೇ ಚಿಂತನಾ ಸರಣಿಯಾಗಿ ನೋಡಬೇಕು. ಕಾದಂಬರಿಯಲ್ಲಿನ ಪಾತ್ರಗಳ ಮೂಲಕ ಭೈರಪ್ಪನವರು ಮಾನವ ಸಂಬಂಧಗಳ ಸೂಕ್ಷ್ಮತೆಯನ್ನು ಬಿಂಬಿಸಿದ್ದಾರೆ. ಲಿಲ್ಲಿ ಮತ್ತು ಸತ್ಯನಾರಾಯಣ ನಡುವಿನ ಪ್ರೇಮವನ್ನು ದೇಹಾತೀತವಾಗಿ, ಸಾಂಸ್ಕೃತಿಕ ಮತ್ತು ಮನೋವೈಜ್ಞಾನಿಕ ಮಟ್ಟದಲ್ಲಿ ಚಿತ್ರಿಸಿರುವುದು ಅತ್ಯಂತ ವಿಶೇಷ ಎಂದರು.

ಭೈರಪ್ಪ ಕೃತಿಗಳಿಗೆ ಜಾಗತಿಕ ಮಾನ್ಯತೆ: ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಮಾತನಾಡಿ, ಭೈರಪ್ಪನವರ ನಿಧನದ ನಂತರವೂ ಅವರ ಕೃತಿಗಳಿಗೆ ಅಪಾರ ಬೇಡಿಕೆ ಇದೆ. ಅನೇಕ ಕೃತಿಗಳು ಮರುಮುದ್ರಣಗೊಂಡು ಉತ್ತಮ ಮಾರಾಟ ಕಂಡಿವೆ. ಅವರ ಕೃತಿಗಳು ದೇಶ-ವಿದೇಶಗಳಲ್ಲಿ ಅಪಾರ ಪ್ರಭಾವ ಬೀರಿದ್ದು, ಜರ್ಮನಿಯ ಫ್ರಾಂಕ್‌ಫರ್ಟ್ ಪುಸ್ತಕ ಮೇಳದಲ್ಲಿ ಸತತ 7 ವರ್ಷಗಳಿಂದ ಅವರ ಕೃತಿಗಳು ನಿರಂತರವಾಗಿ ಪ್ರದರ್ಶನವಾಗುತ್ತಿದ್ದು, ಇದು ಕನ್ನಡ ಸಾಹಿತ್ಯದ ಜಾಗತಿಕ ವ್ಯಾಪ್ತಿಗೆ ಸಾಕ್ಷಿಯಾಗಿದೆ ಎಂದರು.

ಡಾ.ಎಸ್.ಎಲ್.ಭೈರಪ್ಪ ಅವರು ನಿಧನರಾಗಿ ಏಳು ತಿಂಗಳ ಬಳಿಕ ಈ ಸ್ಮರಣಾ ಕಾರ್ಯಕ್ರಮ ಆಯೋಜಿಸಲಾಗಿದೆ. ಟ್ರಸ್ಟ್ ಸ್ಥಾಪನೆ, ಅದರ ರಚನೆ ಹಾಗೂ ಟ್ರಸ್ಟಿಗಳ ಆಯ್ಕೆ ಈ ಮೂರೂ ವಿಷಯಗಳಲ್ಲೂ ಭೈರಪ್ಪನವರೇ ಅಂತಿಮ ನಿರ್ಧಾರ ತೆಗೆದುಕೊಂಡಿದ್ದರು. ನಾವು ಯಾರೂ ಟ್ರಸ್ಟಿಯಾಗಬೇಕು ಎಂದು ಬಯಸಿರಲಿಲ್ಲ, ಭೈರಪ್ಪನವರು ಸ್ವತಃ ಕೇಳಿಕೊಂಡ ಕಾರಣ ನಾವು ಒಪ್ಪಿಕೊಂಡೆವು. ಭೈರಪ್ಪ ಅವರನ್ನು ಯಾರೂ ಪ್ರಭಾವಿಸಲಾಗುವುದಿಲ್ಲ. ತಮ್ಮ ಜೀವನದ ಕೊನೆಯ ವರ್ಷಗಳಲ್ಲಿ ತಮ್ಮ ಸಂಪಾದಿತ ಹಣವನ್ನು ಬಡ ವಿದ್ಯಾರ್ಥಿಗಳ ನೆರವಿಗೆ, ರೋಗಿಗಳಿಗೆ ಚಿಕಿತ್ಸೆಗಾಗಿ ಬಳಸಬೇಕು ಎಂಬ ದೃಢ ಸಂಕಲ್ಪ ಹೊಂದಿದ್ದರು. ನಾನು ಸಾಯುವ ಹೊತ್ತಿಗೆ ನನ್ನ ಬಳಿ ಏನೂ ಇರಬಾರದು ಎಂಬುದು ಅವರ ನಿಲುವಾಗಿತ್ತು. ಈ ಉದ್ದೇಶಕ್ಕಾಗಿ ಅವರು ತಮ್ಮ ಹಳೆಯ ಟ್ರಸ್ಟ್‌ನ ವಿಲ್ ಬದಲಾಯಿಸಲು ಮುಂದಾಗಿದ್ದರು. ಆದರೆ ಕುಟುಂಬದ ಕೆಲವು ಸದಸ್ಯರಿಂದ ವಿರೋಧ ವ್ಯಕ್ತವಾಗಿದ್ದರಿಂದ ಹೊಸ ಟ್ರಸ್ಟ್ ರಚನೆಗೆ ಅವರು ಮುಂದಾದರು ಎಂದರು.

ಭೈರಪ್ಪನವರ ಆಸ್ತಿ ನಿರ್ವಹಣೆಗೆ ಸಂಬಂಧಿಸಿ ಅವರ ಮಕ್ಕಳಿಂದ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿತ್ತು. ಅವರಿಗೆ ಮರೆವಿನ ಕಾಯಿಲೆ ಇದೆ ಎಂಬ ಆಧಾರದ ಮೇಲೆ ಬ್ಯಾಂಕ್ ಖಾತೆಗಳ ನಿಯಂತ್ರಣ ಕೇಳಲಾಗಿತ್ತು. ಆದರೆ ಮೈಸೂರು ನ್ಯಾಯಾಲಯದಲ್ಲಿ ನಡೆದ ವಿಚಾರಣೆಯಲ್ಲಿ ನ್ಯಾಯಾಧೀಶರು ಭೈರಪ್ಪನವರು ಬೌದ್ಧಿಕ ಹಾಗೂ ದೈಹಿಕವಾಗಿ ಸಂಪೂರ್ಣ ಸಮರ್ಥರು ಎಂದು ಅಭಿಪ್ರಾಯಪಟ್ಟಿದ್ದರು. ನ್ಯಾಯಾಲಯದ ಈ ಅನುಭವ ಅವರ ಮನಸ್ಸಿನಲ್ಲಿ ಬೇಸರ ಮೂಡಿಸಿತ್ತು. ಈ ಪ್ರಕರಣ ಭೈರಪ್ಪನವರಿಗೆ ಮಾನಸಿಕವಾಗಿ ತೀವ್ರ ಆಘಾತ ತಂದಿದ್ದು, ನಂತರ ಅವರ ಆರೋಗ್ಯದ ಮೇಲೂ ಪರಿಣಾಮ ಬೀರಿತು ಎಂದರು.

ಈ ಟ್ರಸ್ಟ್‌ನ ಹಿಂದೆ ಯಾವುದೇ ವೈಯಕ್ತಿಕ ಲಾಭದ ಉದ್ದೇಶವಿಲ್ಲ. ಭೈರಪ್ಪನವರ ಹಣ ಅಥವಾ ಆಸ್ತಿ ಬಗ್ಗೆ ಯಾರಿಗೂ ಆಸಕ್ತಿ ಇಲ್ಲ, ಅವರ ಆಶಯಗಳನ್ನು ಈಡೇರಿಸುವುದೇ ಟ್ರಸ್ಟ್‌ನ ಮುಖ್ಯ ಗುರಿ . ಭೈರಪ್ಪನವರ ಜತೆ ಕಳೆದ ಸಮಯದಲ್ಲಿ ಸಹನಾ ಮತ್ತು ಇತರರು ಅವರ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಅವರ ಕಾಳಜಿಯ ಹಿಂದೆ ಯಾವುದೇ ಸ್ವಾರ್ಥ ಇರಲಿಲ್ಲ ಎಂದು ಸ್ಪಷ್ಟಪಡಿಸಿದರು.

ವಿದ್ಯಾರ್ಥಿ ವೇತನ ವಿತರಣೆ

ಎಸ್.ಎಲ್.ಭೈರಪ್ಪ ಅವರ ಆಶಯದಂತೆ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡಲು ಎಸ್. ಎಲ್. ಭೈರಪ್ಪ ಟ್ರಸ್ಟ್ ವತಿಯಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಬೆಂಬಲವಾಗಿ 11 ಜನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಯಿತು. ಕಾರ್ಯಕ್ರಮದಲ್ಲಿ ಲಾವಣ್ಯ ಕೆ., ಹರಿಣಿ, ಋತ್ವಿಕ್ ವಸಿಷ್ಠ, ಕುಶಾಲ್ ಎಸ್., ಪ್ರಣವ್ ಸಾಯಿ, ಪೂಜಾ ಎ., ಪಿ.ಎಸ್ ದಿಶಾ, ಚಿನ್ಮಯ, ಹರಿಪ್ರಿಯಾ ಹಾಗೂ ಅಪೂರ್ವ ಸೇರಿದಂತೆ 11 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು. ವಿದ್ಯಾರ್ಥಿಗಳ ಆಯ್ಕೆಯಲ್ಲಿ ಕೇವಲ ಅಂಕಗಳಿಗೆ ಆದ್ಯತೆ ನೀಡದೇ, ಅವರ ಪ್ರತಿಭೆ, ಕುಟುಂಬದ ಜವಾಬ್ದಾರಿ ಹಾಗೂ ಆರ್ಥಿಕ ಸಂಕಷ್ಟಗಳನ್ನು ಪರಿಗಣಿಸಲಾಗಿದೆ ಎಂದು ಮಾತೃ ಛಾಯೆ ಸೇವಾ ಸಂಸ್ಥೆಯ ರಾಜಶ್ರೀ ತಿಳಿಸಿದರು.

ಭೈರಪ್ಪನವರ ಅಂತಿಮ ಇಚ್ಛೆ, ನಡೆ, ನುಡಿ, ಆಶಯ, ಅಕ್ಷರ, ಆಲೋಚನೆ, ಆಶೋತ್ತರಗಳನ್ನು ಈಡೇರಿಸುವುದು ನಮ್ಮ ಪ್ರಥಮ ಕರ್ತವ್ಯ. ಅವರ ನೆನಪು ಚಿರಸ್ಥಾಯಿಯಾಗಬೇಕು ಎಂಬ ಆಶಯದೊಂದಿಗೆ ಟ್ರಸ್ಟ್‌ನ್ನು ಮುಂದುವರಿಸುವುದು. ಟ್ರಸ್ಟ್‌ನ ಕಾರ್ಯಚಟುವಟಿಕೆಗಳು ನಿಲ್ಲುವುದಿಲ್ಲ. ವರ್ಷಪೂರ್ತಿ ಸ್ಮರಣಾ ಕಾರ್ಯಕ್ರಮಗಳು, ಸಾಹಿತ್ಯ ಚರ್ಚೆಗಳು ಹಾಗೂ ಸಮಾಜಮುಖಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು.

– ವಿಶ್ವೇಶ್ವರ ಭಟ್ ವಿಶ್ವವಾಣಿ ಪ್ರಧಾನ ಸಂಪಾದಕ

ಭೈರಪ್ಪನವರು ವಿದ್ಯೆ ಎಲ್ಲರಿಗೂ ತಲುಪಬೇಕು ಎಂಬ ದೃಷ್ಟಿಕೋನ ಹೊಂದಿದ್ದರು. ಅವರ ಕೃತಿಗಳನ್ನು ಅಧ್ಯಯನ ಮಾಡಲು ನಿರಂತರ ಕಾರ್ಯಾಗಾರಗಳು ಹಾಗೂ ಚರ್ಚೆಗಳು ನಡೆಯಬೇಕು. ಒಂದು ಕಾರ್ಯಕ್ರಮದಿಂದ ಭೈರಪ್ಪನವರ ಚಿಂತನೆಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ, ಅವುಗಳ ಮೇಲೆ ದೀರ್ಘಕಾಲ ಅಧ್ಯಯನ ಅಗತ್ಯ.

– ಸಹನಾ ವಿಜಯಕುಮಾರ್ ಟ್ರಸ್ಟಿ

ಎಸ್.ಎಲ್.ಭೈರಪ್ಪ ಅವರ ಸಾಹಿತ್ಯವು ಭಾಷೆ ಮತ್ತು ಸಂಸ್ಕೃತಿಗಳ ಗಡಿಗಳನ್ನು ದಾಟಿ ಮರಾಠಿ ಓದುಗರ ಹೃದಯಕ್ಕೂ ತಲುಪಿದೆ. ಅವರ ಕಾದಂಬರಿಗಳನ್ನು ಅರ್ಥ ಮಾಡಿಕೊಳ್ಳಲು ಕ್ರಮವಾಗಿ ಧರ್ಮಶ್ರೀ, ಸಾರ್ಥ, ದಾಟು ಮೊದಲಾದ ಕೃತಿಗಳನ್ನು ಓದಿದ ನಂತರ ಆವರಣ ಓದಿದರೆ ಅದರ ಆಳವಾದ ಅರ್ಥ ಗ್ರಹಿಸಬಹುದು. ಜಾತಿ ವ್ಯವಸ್ಥೆ, ಧರ್ಮ, ಸಾಮಾಜಿಕ ವಿಚಾರಗಳ ಬಗ್ಗೆ ಭೈರಪ್ಪನವರು ದೀರ್ಘಕಾಲದಿಂದಲೇ ಆಳವಾದ ಚಿಂತನೆ ನಡೆಸಿರುವುದನ್ನು ಅವರ ಕೃತಿಗಳು ತೋರಿಸುತ್ತವೆ.

–ಉಮಾ ಕುಲಕರ್ಣಿ ಭೈರಪ್ಪನವರ ಕೃತಿಗಳ ಮರಾಠಿ ಅನುವಾದಕರು

ಸಮಾಚಾರ ಸಣ್ಣದಲ್ಲ

ಜಮೀನು ಅಕ್ರಮ ಒತ್ತುವರಿ ತೆರವು

ಬೆಂಗಳೂರು: ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ ರೂ. 11.79 ಕೋಟಿ ರು. ಅಂದಾಜು ಮೌಲ್ಯದ ಒಟ್ಟು 0.23 ಗುಂಟೆ ಸರಕಾರಿ ಜಮೀನನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿಗಳಾದ ಜಿ.ಜಗದೀಶ ಅವರ ನೇತೃತ್ವದಲ್ಲಿ ತೆರವುಗೊಳಿಸಿ ಸರಕಾರದ ವಶಕ್ಕೆ ಪಡೆಯಲಾಯಿತು.ಬೆಂಗಳೂರು ನಗರ ಜಿಲ್ಲೆಯಾದ್ಯಂತ ವಿವಿಧ ತಾಲೂಕುಗಳ ತಹಶೀಲ್ದಾರ್‌ಗಳು ತಮ್ಮ ವ್ಯಾಪ್ತಿಯಲ್ಲಿ ಅಕ್ರಮವಾಗಿ ಒತ್ತುವರಿಯಾಗಿದ್ದ ಸ್ಮಶಾನ, ಕುಂಟೆ, ತೋಪು, ಕೆರೆ ಜಾಗಗಳಿಗೆ ಭೇಟಿ ನೀಡಿ ತೆರವು ಕಾರ್ಯಾಚರಣೆ ಕೈಗೊಂಡರು. ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಕಾಡುಗೋಡಿ ಗ್ರಾಮದ ಸ.ನಂ 16ರ ಸ್ಮಶಾನ ಒಟ್ಟು ಒತ್ತುವರಿ ತೆರವು ಗೊಳಿಸಿರುವ ವಿಸ್ತೀರ್ಣ 4 ಗುಂಟೆಗಳಾಗಿದ್ದು, ಅಂದಾಜು ಮೌಲ್ಯ 75 ಲಕ್ಷ ರು. ಗಳಾಗಿರುತ್ತದೆ. ಬಿದರಹಳ್ಳಿ ಹೋಬಳಿಯ ಜ್ಯೋತಿಪುರ ಗ್ರಾಮದ ಸ.ನಂ 14ರ ಕುಂಟೆ ಒಟ್ಟು ಒತ್ತುವರಿ ತೆರವುಗೊ ಳಿಸಿರುವ ವಿಸ್ತೀರ್ಣ 5 ಗುಂಟೆಗಳಾಗಿದ್ದು, ಅಂದಾಜು ಮೊತ್ತ 24 ಲಕ್ಷಗಳಾಗಿರುತ್ತದೆ. ವೈಟ್‌ಫೀಲ್ಡ್ ಹೋಬಳಿಯ ನಲ್ಲೂರಹಳ್ಳಿ ಗ್ರಾಮದ ಸ.ನಂ 14 ರ ತೋಪು ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 10 ಗುಂಟೆಗಳಾಗಿದ್ದು, ಅಂದಾಜು ಮೌಲ್ಯ 80 ಲಕ್ಷಗಳಾಗಿರುತ್ತದೆ. ಬೆಂಗಳೂರು ದಕ್ಷಿಣ ತಾಲೂಕಿನ ಉತ್ತರ ಹಳ್ಳಿ ಹೋಬಳಿಯ ಕಗ್ಗಲಿಪುರ ಗ್ರಾಮದ ಸ.ನಂ 9ರ ಕೆರೆ ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.04 ಗುಂಟೆಗಳಾ ಗಿದ್ದು, ಅಂದಾಜು ಮೌಲ್ಯ 10 ಕೋಟಿ ರು. ಗಳಾಗಿರುತ್ತದೆ.

ಗಣತಿಗೆ ಗೈರು: ಕಾರಣ ಕೇಳಿ ನೋಟಿಸ್ ಜಾರಿ

ಬೆಂಗಳೂರು: ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜನಗಣತಿ–2027 ಸಮೀಕ್ಷಾ ಕಾರ್ಯದಲ್ಲಿ ಗೈರುಹಾಜರಾಗಿರುವ ಮೇಲ್ವಿಚಾರಕರು ಹಾಗೂ ಗಣತಿದಾರರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿದೆ ಎಂದು ಆಯುಕ್ತರು ಹಾಗೂ ಪ್ರಧಾನ ಜನಗಣತಿ ಅಧಿಕಾರಿಯಾದ ಪೊಮ್ಮಲ ಸುನೀಲ್ ಕುಮಾರ್ ತಿಳಿಸಿದ್ದಾರೆ. ಜನಗಣತಿ ಕಾರ್ಯಕ್ಕೆ ನಿಯೋಜಿಸಲ್ಪಟ್ಟಿದ್ದರೂ ಕರ್ತವ್ಯಕ್ಕೆ ಹಾಜರಾಗದೇ ನಿರ್ಲಕ್ಷ್ಯ ತೋರಿರುವ ಹಿನ್ನೆಲೆಯಲ್ಲಿ, ಸಂಬಂಧಪಟ್ಟ 527 ಗಣತಿದಾರರಿಗೆ ನೋಟಿಸ್ ಜಾರಿ ಮಾಡಿ, ಲಿಖಿತ ಸಮಜಾಯಿಷಿ ಸಲ್ಲಿಸಲು ಸೂಚಿಸಲಾಗಿದೆ. ನಿಗದಿತ ಅವಧಿಯಲ್ಲಿ ಸಮಜಾಯಿಷಿ ಸಲ್ಲಿಸದಿದ್ದಲ್ಲಿ, ಯಾವುದೇ ಸ್ಪಷ್ಟನೆ ಇಲ್ಲವೆಂದು ಪರಿಗಣಿಸಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ. ಗೈರುಹಾಜರಾಗಿರುವ 53 ಗಣತಿದಾರರಿಗೆ ಈಗಾಗಲೇ ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಗಿದ್ದರೂ ನಿರ್ಲಕ್ಷ್ಯ ತೋರಿದ 53 ಗಣತಿದಾರರ ವಿರುದ್ಧ ಕೆಲಸ ಮಾಡದ ದಿನ ಆದೇಶ ಹೊರಡಿಸಲಾಗಿರುತ್ತದೆ.

ಕೈಗೊಳ್ಳಲಾಗುವ ಕ್ರಮಗಳು

- ಜನಗಣತಿ ಕಾಯ್ದೆ, 1948ರ ಸೆಕ್ಷನ್ 11 ಅನ್ವಯ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದು
- ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023ರ ಕಲಂ 223 ಅಡಿಯಲ್ಲಿ ಎಫ್ ಐಆರ್ ದಾಖಲಿಸುವುದು
- ಸೇವಾ ನಿಯಮಾವಳಿ ಪ್ರಕಾರ ಅಮಾನತ್ತು ಹಾಗೂ ಶಿಸ್ತು ಕ್ರಮ ಕೈಗೊಳ್ಳುವುದು
- ಅನಧಿಕೃತ ಗೈರುಹಾಜರಿಯನ್ನು ಕೆಲಸ ಮಾಡದ ದಿನ ಎಂದು ಪರಿಗಣಿಸುವುದು
- 53 ಗಣತಿದಾರರ ವಿರುದ್ಧ ಕೆಲಸ ಮಾಡದ ದಿನ ಆದೇಶ ಜಾರಿ

ಮುಲಾಜಿಲ್ಲದೆ ಕಾನೂನು ಕ್ರಮ: ಎಚ್ಚರಿಕೆ

ಜನಗಣತಿ ಕಾರ್ಯವು ರಾಷ್ಟ್ರೀಯ ಮಹತ್ವದ ಕರ್ತವ್ಯವಾಗಿದ್ದು, ಇದರಲ್ಲಿ ನಿರ್ಲಕ್ಷ್ಯ ತೋರಿದ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಯಾವುದೇ ಮುಲಾಜಿಲ್ಲದೆ ಕಾನೂನುಬದ್ಧ ಹಾಗೂ ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಆಯುಕ್ತರು ಎಚ್ಚರಿಸಿದ್ದಾರೆ.

ಮಹಿಳಾ ಅಧಿಕಾರಿಗಳ ಜತೆ ದೈಹಿಕ ಸಂಪರ್ಕ ಬಂಧಿತ ಕೃಪಲಾನಿ ಕಾಮಕಾಂಡ ಬಯಲು

ಬೆಂಗಳೂರು: ಮಹಿಳಾ ಕಸ್ಟಮ್ಸ್ ಅಧಿಕಾರಿಯ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಪುಲಿಕೇಶಿನಗರ ಪೊಲೀಸರಿಂದ ಬಂಧಿತನಾಗಿರುವ ಕೃಪಲಾನಿ ಎಂಬಾತನ ವಿಚಾರಣೆ ವೇಳೆ ಬೆಚ್ಚಿಬೀಳಿಸುವ ಸತ್ಯಗಳು ಹೊರಬಂದಿವೆ.

ಈತ ಕೇವಲ ಒಬ್ಬರನ್ನಲ್ಲ, ಸುಮಾರು 50ಕ್ಕೂ ಹೆಚ್ಚು ಅಧಿಕಾರಿಗಳನ್ನು ಇದೇ ರೀತಿ ಪ್ರೀತಿ ಮತ್ತು ಮದುವೆಯ ಹೆಸರಿನಲ್ಲಿ ಬ್ಲ್ಯಾಕ್‌ಮೇಲ್ ಮಾಡಿರುವುದು ಬೆಳಕಿಗೆ ಬಂದಿದೆ. ಆರೋಪಿಯು ಮಹಿಳಾ ಅಧಿಕಾರಿಗಳ ಜತೆ ಸಲುಗೆ ಬೆಳೆಸಿ ದೈಹಿಕ ಸಂಪರ್ಕ ಮಾಡಿ ನಂತರ ಬ್ಲ್ಯಾಕ್ ಮೇಲ್ ಮಾಡುತ್ತಿದ್ದ. ಆ ಮೂಲಕ ತನ್ನ ಕುಕೃತ್ಯಗಳಿಗೆ ಬಳಸಿಕೊಳ್ಳುತ್ತಿದ್ದ ಎಂಬ ಆರೋಪವಿದೆ.

- ಜಿಎಸ್‌ಟಿ, ಕಸ್ಟಮ್ಸ್ ಮಹಿಳಾ ಅಧಿಕಾರಿಗಳೇ ಟಾರ್ಗೆಟ್
- ಕೆಲಸದ ಲೂಪ್ ಹೋಲ್ ಬಳಸಿ ಬ್ಲ್ಯಾಕ್‌ಮೇಲ್

ಜಿಎಸ್‌ಟಿ, ಕಸ್ಟಮ್ಸ್ ಮಹಿಳಾ ಅಧಿಕಾರಿಗಳೇ ಟಾರ್ಗೆಟ್: ಆರೋಪಿ ಕೃಪಲಾನಿ ಮುಖ್ಯವಾಗಿ ಜಿಎಸ್‌ಟಿ ಮತ್ತು ಕಸ್ಟಮ್ಸ್ ವಿಭಾಗದ ಮಹಿಳಾ ಅಧಿಕಾರಿಗಳನ್ನು ಟಾರ್ಗೆಟ್ ಮಾಡುತ್ತಿದ್ದ. ಆರಂಭದಲ್ಲಿ ಕೆಲಸದ ನಿಮಿತ್ತ ಅಧಿಕಾರಿಗಳೊಂದಿಗೆ ಸಲುಗೆ ಬೆಳೆಸುತ್ತಿದ್ದ ಈತ, ಬಳಿಕ ಡಿನ್ನರ್, ಲಂಚ್ ಎಂದು ಆಪ್ತನಾಗುತ್ತಿದ್ದ. ನಂತರ ಪ್ರೀತಿ ಮತ್ತು ಮದುವೆಯ ನಾಟಕವಾಡಿ ದೈಹಿಕ ಸಂಪರ್ಕ ಬೆಳೆಸುತ್ತಿದ್ದ. ಅಷ್ಟಕ್ಕೇ ಸುಮ್ಮನಾಗದೆ, ಆ ದೈಹಿಕ ಸಂಪರ್ಕವನ್ನೇ ಬಂಡವಾಳವಾಗಿಸಿಕೊಂಡು ಅಧಿಕಾರಿಗಳನ್ನು ಬ್ಲ್ಯಾಕ್‌ಮೇಲ್ ಮಾಡಲು ಆರಂಭಿಸುತ್ತಿದ್ದ.

ಕೆಲಸದ ಲೂಪ್ ಹೋಲ್ ಬಳಸಿ ಬ್ಲ್ಯಾಕ್ ಮೇಲ್: ಪುರುಷ ಅಧಿಕಾರಿಗಳನ್ನೂ ಕೃಪಲಾನಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ. ಮೊದಲು ಅಧಿಕಾರಿಗಳ ಕಾರ್ಯವೈಖರಿ ಮತ್ತು ಇಲಾಖೆಯ ಒಳಗಿನ ಲೋಪದೋಷಗಳನ್ನು ತಿಳಿದುಕೊಳ್ಳುತ್ತಿದ್ದ ಈತ, ಅದನ್ನು ಇಟ್ಟುಕೊಂಡು ಅಧಿಕಾರಿಗಳ ಕೆಲಸಕ್ಕೆ ಅಡ್ಡಿಪಡಿಸುತ್ತಿದ್ದ. ಮಹಿಳಾ ಅಧಿಕಾರಿಗಳ ಜತೆ ಲೈಂಗಿಕ ಸಂಪರ್ಕದ ನಂತರ ವಿಡಿಯೋ ಅಥವಾ ಫೋಟೋಗಳನ್ನು ಬಳಸಿ ಬೆದರಿಕೆ ಹಾಕುತ್ತಿದ್ದ ಈತ, ಅಧಿಕಾರಿಗಳನ್ನು ತನ್ನ ಕೈಗೊಂಬೆಯನ್ನಾಗಿ ಮಾಡಿಕೊಂಡಿದ್ದ ಎಂಬ ಆರೋಪವಿದೆ.

ಪೊಲೀಸರ ಮೇಲೆಯೇ ದರ್ಪ

ವಿಚಾರಣೆ ನಡೆಯುತ್ತಿರುವಾಗಲೂ ಈತನ ಉದ್ಧಟತನ ಮುಂದುವರಿದಿದೆ. ಮೆಡಿಕಲ್ ಟೆಸ್ಟ್ ಮಾಡಿಸುವ ವೇಳೆ ಆಸ್ಪತ್ರೆಯಲ್ಲಿ ರಂಪಾಟ ಮಾಡಿರುವ ಆರೋಪಿ, ಪೊಲೀಸರ ಮೊಬೈಲ್ ಕಸಿದುಕೊಂಡು ಅವಾಚ್ಯವಾಗಿ ನಿಂದಿಸಿ ಪ್ರಾಣ ಬೆದರಿಕೆ ಹಾಕಿದ್ದಾನೆ. ಈ ಸಂಬಂಧ ವಿ.ವಿ. ಪುರಂ ಪೊಲೀಸ್ ಠಾಣೆಯಲ್ಲಿ ಆತನ ವಿರುದ್ಧ ಮತ್ತೊಂದು ಎಫ್ ಐಆರ್ ದಾಖಲಾಗಿದೆ. ಪುಲಿಕೇಶಿನಗರ ಎಸಿಪಿ ಗೀತಾ ನೇತೃತ್ವದಲ್ಲಿ ಈ ಗಂಭೀರ ಪ್ರಕರಣದ ತನಿಖೆ ಚುರುಕಿನಿಂದ ಸಾಗಿದೆ.

ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ: 25ಕ್ಕೆ ಶಿಕ್ಷೆ ಪ್ರಕಟ

ಬೆಂಗಳೂರು: ಕಳೆದ ನಾಲ್ಕು ವರ್ಷಗಳ ಹಿಂದೆ ಮಂಗಳೂರು ಬಳಿ ಸಂಭವಿಸಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಶಂಕಿತ ಉಗ್ರ ಮೊಹಮ್ಮದ್ ಶಾರೀಕ್ ತಪ್ಪೊಪ್ಪಿಕೊಂಡಿದ್ದು, ಈ ಸಂಬಂಧ ಎನ್‌ಐಎ (ರಾಷ್ಟ್ರೀಯ ತನಿಖಾ ಸಂಸ್ಥೆ) ವಿಶೇಷ ನ್ಯಾಯಾಲಯ ಅಂತಿಮ ತೀರ್ಪನ್ನು ಏ.25ಕ್ಕೆ ಕಾಯ್ದಿರಿಸಿದೆ.

ಬಾಂಬ್ ಸ್ಫೋಟ ಎಸಗಿರುವುದಾಗಿ ಶಿವಮೊಗ್ಗದ ತೀರ್ಥಹಳ್ಳಿ ಮೂಲದ ಶಾರೀಕ್, ಕಳೆದ ಡಿಸೆಂಬರ್ ತಿಂಗಳಿನಲ್ಲಿ ತಪ್ಪೊಪ್ಪಿಗೆ ಅರ್ಜಿ ಸಲ್ಲಿಸಿದ್ದು, ಮೂರು ತಿಂಗಳ ಬಳಿಕ ನ್ಯಾಯಾಲಯ ಆರೋಪಿಯ ಅರ್ಜಿಯನ್ನು ಪುರಸ್ಕರಿಸಿತ್ತು. ಬಳಿಕ ವಾದ–ಪ್ರತಿವಾದ ನಡೆದು, ನಂತರ ತಾಂತ್ರಿಕ ಕಾರಣಗಳಿಂದಾಗಿ ಅಂತಿಮ ತೀರ್ಪನ್ನು ಏ.25ಕ್ಕೆ ಮುಂದೂಡಿದೆ.

ಪ್ರಕರಣ ಸಂಬಂಧ 2024ರಲ್ಲಿ ಶಾರೀಕ್, ಸೈಯದ್ ಯಾಸೀನ್ ವಿರುದ್ಧ ನ್ಯಾಯಾಲಯಕ್ಕೆ ಎನ್‌ಐಎ ಅಧಿಕಾರಿಗಳು ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ವೇಳೆ ಶಾರೀಕ್ ತಾನು ನಿರಪರಾಧಿ ಎಂದು ಹೇಳಿಕೆ ನೀಡಿ, ತನ್ನ ಮೇಲಿನ ಆರೋಪ ತಳ್ಳಿಹಾಕಿದ್ದ. ಈ ಮಧ್ಯೆ 2025ರ ಡಿಸೆಂಬರ್‌ನಲ್ಲಿ ನ್ಯಾಯಾಲಯಕ್ಕೆ ತಪ್ಪೊಪ್ಪಿಗೆ ಅರ್ಜಿ ಸಲ್ಲಿಸಿದ್ದ.

ನನ್ನ ವಿರುದ್ಧ ಎನ್‌ಐಎ ತನಿಕಾಧಿಕಾರಿಗಳು ದೋಷಾರೋಪ ಪಟ್ಟಿಯಲ್ಲಿ ನಮೂದಿಸಿರುವ ಆರೋಪಗಳು ಸತ್ಯವಾಗಿದ್ದು, 2022ರ ನ.19ರಂದು ಸಂಜೆ 4.40 ರ ಸುಮಾರಿಗೆ ಮಂಗಳೂರಿನ ಕಂಕನಾಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಆಟೋ ರಿಕ್ಷಾದೊಳಗೆ ಕುಕ್ಕರ್ ಬಾಂಬ್ (ಐಇಡಿ) ಇಟ್ಟು ಸ್ಫೋಟಿಸಲು ಯತ್ನಿಸಿರುವೆ. ನನಗೆ ಈಗ ಪಶ್ಚಾತ್ತಾಪವಾಗಿದೆ. ಕಾನೂನು ಪ್ರಕಾರ ನನ್ನ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅರ್ಜಿಯಲ್ಲಿ ಉಲ್ಲೇಖಿಸಿದ್ದ. ಮೂರು ತಿಂಗಳ ವಿಚಾರಣೆ ನಂತರ ನ್ಯಾಯಾಲಯವು ಶಂಕಿತನ ಅರ್ಜಿಯನ್ನು ಮಾನ್ಯ ಮಾಡಿತ್ತು. ಇದೀಗ ನ್ಯಾಯಾಲಯ ಅಂತಿಮ ತೀರ್ಪನ್ನು ಕಾಯ್ದಿರಿಸಿದ್ದು, ಈ ತೀರ್ಪಿನಲ್ಲಿ ಆರೋಪಿಗೆ ವಿಧಿಸುವ ಶಿಕ್ಷೆಯ ಬಗ್ಗೆ ನಿರ್ಧಾರ ಮಾಡಲಿದೆ. ಆ ಮೂಲಕ ಉಗ್ರ ಚಟುವಟಿಕೆಗಳ ವಿರುದ್ಧ ಕಠಿಣ ಸಂದೇಶ ನೀಡುವ ಸಾಧ್ಯತೆ ಇದೆ.

ಪ್ರಕರಣ ಹಿನ್ನೆಲೆ

ಕಳೆದ 2022ರ ನ.19 ರಂದು ಮಂಗಳೂರಿನ ಕಂಕನಾಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಆಟೋದಲ್ಲಿ ಶಾರೀಕ್ ತೆರಳುವಾಗ (ಐಇಡಿ) ಕುಕ್ಕರ್ ಸ್ಫೋಟಗೊಂಡಿತ್ತು. ಆಗ ಶಂಕಿತ ಉಗ್ರನ ಜತೆ ಆಟೋ ಚಾಲಕ ಸಹ ಗಂಭೀರ ಗಾಯಗೊಂಡಿದ್ದನು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಶಂಕಿತನನ್ನು ಬಂಧಿಸಿದ್ದರು. ಕೃತ್ಯದ ಹಿಂದೆ ಐಸಿಸ್ ನಂಟು ಹಿನ್ನೆಲೆಯಲ್ಲಿ ಆರೋಪಿಗಳ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಅಡಿ (ಯುಎಪಿಎ) ಪ್ರಕರಣ ದಾಖಲಿಸಿ ಎನ್‌ಐಎ ತನಿಖೆ ಕೈಗೊಂಡಿತ್ತು. ಆರೋಪಿ ಶಾರೀಕ್, ಐಸಿಎಸ್ ಹಾಗೂ ಸಿಮಿ ಉಗ್ರ ಸಂಘಟನೆಗಳಿಂದ ಪ್ರೇರಿತನಾಗಿದ್ದ. ಶಿವಮೊಗ್ಗ ಐಸಿಸ್ ಮಾಡ್ಯುಲ್ ಸದಸ್ಯನಾಗಿದ್ದ. ರಾಜ್ಯದ ಹಿಂದು ದೇವಾಲಯ ಸೇರಿದಂತೆ ದಕ್ಷಿಣ ಭಾರತದ ದೇವಾಲಯಗಳಲ್ಲಿ ಬಾಂಬ್ ಸ್ಫೋಟಗೊಳಿಸುವುದು ಶಂಕಿತ ಉಗ್ರರ ಹುನ್ನಾರವಾಗಿತ್ತು. ಇದೇ ಭಾಗವಾಗಿ ಕುಕ್ಕರ್‌ನಲ್ಲಿ ಐಇಡಿ ಇಟ್ಟು ಟೈಮರ್ ಅಳವಡಿಸಲಾಗಿತ್ತು. 90 ನಿಮಿಷಗಳ ಸಮಯವನ್ನು ಅಳವಡಿಸುವ ಬದಲಿಗೆ ಕೇವಲ 9 ನಿಮಿಷಕ್ಕೆ ತಪ್ಪಾಗಿ ನಿಗದಿಪಡಿಸಿದ್ದರಿಂದ ಆಟೋದಲ್ಲಿ ತೆರಳುವಾಗಲೇ ಮಾರ್ಗ ಮಧ್ಯೆ ಸ್ಫೋಟಗೊಂಡಿತ್ತು. ಪ್ರಕರಣದ ಎರಡನೇ ಆರೋಪಿ ಸೈಯದ್ ಯಾಸೀನ್‌ನನ್ನು ಬಾಂಬ್ ತಯಾರಿಕೆಗೆ ಅಗತ್ಯವಾದ ಉಪಕರಣಗಳನ್ನು ಪೂರೈಸಿದ ಆರೋಪದ ಅಡಿ ಬಂಧಿಸಲಾಗಿತ್ತು.

ಅಂಜನಾ ನಗರದಲ್ಲಿರುವ ವಿದ್ಯಾಶ್ರೀ ಹೈಸ್ಕೂಲ್‌ನ ವಿದ್ಯಾರ್ಥಿಗಳು ಸಿಬಿಎಸ್‌ಇ ಪರೀಕ್ಷೆಯಲ್ಲಿ ಅತ್ಯುತ್ತಮ ಫಲಿತಾಂಶ ದಾಖಲಿಸಿದ ವಿದ್ಯಾರ್ಥಿಗಳಿಗೆ ಆಡಳಿತ ಮಂಡಳಿ ಸ್ಥಾಪಕ ಅಧ್ಯಕ್ಷ ಬಿ .ಆರ್.ಕೃಷ್ಣಮೂರ್ತಿ, ಪ್ರಾಂಶುಪಾಲರು, ಶಿಕ್ಷಕರು ಅಭಿನಂದನೆ ಸಲ್ಲಿಸಿದರು.

ಮಹಾರಾಷ್ಟ್ರ ಆರ್‌ಟಿಒ ಅಧಿಕಾರಿಗೆ ಬಿಷ್ಣೋಯ್ ಗ್ಯಾಂಗ್ ಬೆದರಿಕೆ

ನೆಲಮಂಗಲ: ಮಹಾರಾಷ್ಟ್ರ ನೋಂದಣಿ ಇಲ್ಲದೆ ಸಂಚರಿಸುತ್ತಿದ್ದ ಆಟೋ ಚಾಲಕರ ವಿರುದ್ಧ ಕ್ರಮ ಕೈಗೊಳ್ಳುತ್ತಿದ್ದ ಅಧಿಕಾರಿಗಳಿಗೆ ಅಪರಿಚಿತ ಗ್ಯಾಂಗ್‌ನಿಂದ ಬೆದರಿಕೆ ಕರೆ ಬಂದಿರುವ ಘಟನೆ ಬೆಳಕಿಗೆ ಬಂದಿದೆ. ಆಲ್ ಇಂಡಿಯಾ ಮೋಟಾರ್ ವೆಹಿಕಲ್ ಫೆಡರೇಷನ್ ವತಿಯಿಂದ ಆಯೋಜಿಸಿದ್ದ ಕ್ರಿಕೆಟ್ ಟೂರ್ನಮೆಂಟ್‌ಗೆ ಆಗಮಿಸಿದ್ದ ಮಹಾರಾಷ್ಟ್ರದ ಆರ್‌ಟಿಒ ಅಧಿಕಾರಿಗೆ ಬೆದರಿಕೆ ಕರೆ ಬಂದಿದ್ದು, ಈ ಸಂಬಂಧ ಸೋಲದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಾರಾಷ್ಟ್ರದ ಪ್ರಾದೇಶಿಕ ಸಾರಿಗೆ ಕಚೇರಿ (ಆರ್‌ಟಿಒ) ಅಧಿಕಾರಿ ಪ್ರಸಾದ್ ಶಿವದಾಸ್ ನಾಲ್ವಡೆ ಕಳೆದ ವಾರ ಬೆಂಗಳೂರುಗೆ ಆಗಮಿಸಿ, ಆಲ್ ಇಂಡಿಯಾ ಮೋಟಾರ್ ವೆಹಿಕಲ್ ಫೆಡರೇಷನ್ ವತಿಯಿಂದ ಆಯೋಜಿಸಿದ್ದ ರಸ್ತೆ ಸುರಕ್ಷತಾ ಅಭಿಯಾನದ ಭಾಗವಾಗಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮವು ಸೋಲದೇವನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಅಶೋಕ ರೈಸಿಂಗ್ ಸ್ಟಾರ್ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದಿತ್ತು. ಏಪ್ರಿಲ್ 12ರಂದು ಗುಣಿ ಅಗ್ರಹಾರ ಪ್ರದೇಶದಲ್ಲಿದ್ದ ವೇಳೆ ಅವರಿಗೆ ಈ ಬೆದರಿಕೆ ಕರೆ ಬಂದಿದ್ದರಿಂದ ಸೋಲದೇವನಹಳ್ಳಿ ಪೊಲೀಸ್ ಠಾಣೆಯಲ್ಲಿಯೇ ಈ ಪ್ರಕರಣ ದಾಖಲಾಗಿದೆ.

ಆಟೋ ಚಾಲಕರ ಮೇಲೆ ಕಠಿಣ ಕ್ರಮ ಕೈಗೊಂಡಿದ್ದಕ್ಕೆ ಬೆದರಿಕೆ:

ಅಧಿಕಾರಿಗೆ ರವಿ ಬಿಷ್ಣೋಯಿ ಗ್ಯಾಂಗ್ ಹೆಸರಿನಲ್ಲಿ ಕರೆ ಮಾಡಿ ಬೆದರಿಕೆ ಹಾಕಲಾಗಿದ್ದು, ಆಟೋ ಚಾಲಕರಿಗೆ ಕಠಿಣ ಕ್ರಮ ಕೈಗೊಳ್ಳುತ್ತಿದ್ದೀರಿ, ಇದರ ಪರಿಣಾಮ ನಿಮ್ಮ ಕುಟುಂಬದ ಮೇಲೆ ಬೀಳುತ್ತದೆ ಎಂದು ಧಮ್ಕಿ ಹಾಕಲಾಗಿದೆ ಎನ್ನಲಾಗಿದೆ. ಮಹಾರಾಷ್ಟ್ರದಲ್ಲಿ ದಾಖಲೆ ಇಲ್ಲದ ವಾಹನಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಈ ರೀತಿಯ ಬೆದರಿಕೆ ಹಾಕಿದ್ದಾರೆ ಎಂದು ಅಧಿಕಾರಿಗಳು ಶಂಕಿಸಿದ್ದಾರೆ. ಪ್ರಕರಣದ ಹಿನ್ನೆಲೆ ಹಾಗೂ ಗ್ಯಾಂಗ್ ಸಂಪರ್ಕಗಳ ಬಗ್ಗೆ ಪೊಲೀಸರು ಹೆಚ್ಚಿನ ಮಾಹಿತಿ ಕಲೆಹಾಕುತ್ತಿದ್ದಾರೆ.

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್ ನಂ: 901/2025

ಅರ್ಜಿದಾರರು: ಶ್ರೀ. ತಿಮ್ಮಯ್ಯ ಕೋಂ ಲೇಟ್, ವೆಂಕಟಬೋವಿ ವಯಸ್ಸು 77 ವರ್ಷ ವಾಸ– ವಾರ್ಡ್ ನಂ.26, ಜಾಲಮಂಗಲ ರೋಡ್, ಆಂಜನೇಯ ದೇವಸ್ಥಾನದ ಹತ್ತಿರ, 2ನೇ ಕ್ರಾಸ್, ಇಂದ್ರ ನಗರ, ಐಜೂರು ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು

ವಿರುದ್ಧ

ಎದುರುದಾರರು: 1. ತಹಶೀಲ್ದಾರ್ ಜನನ ಮತ್ತು ಮರಣ ನೋಂದಣಾಧಿಕಾರಿಗಳು ಹಾರೋಹಳ್ಳಿ (ರಾಮನಗರ ಜಿಲ್ಲೆ) ಬೆಂಗಳೂರು ದಕ್ಷಿಣ ಜಿಲ್ಲೆ) 2. ತೋಕಸಂದ್ರ ಗ್ರಾಮ, ತೋಕಸಂದ್ರ ಪಂಚಾಯ್ತಿ ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ ಅಧಿಕಾರಿಗಳು, ನಗರಸಭೆ ಕನಕಪುರ ಟೌನ್

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರ–ರಿಗೆ ಮತ್ತು 2ನೇ ಅರ್ಜಿದಾರರಿಗೆ ತಂದೆಯಾದ ಮೃತ ವೆಂಕಟಬೋವಿ ಬಿನ್ ಲೇಟ್ ಜವರಾಯಿಬೋವಿ ಇವರು ದಿನಾಂಕ 03–02–1995 ರಂದು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ತೋಕಸಂದ್ರ ಗ್ರಾಮದಲ್ಲಿ 2ನೇ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ. ಎದುರುದಾರರಿಗೆ ನಿರ್ದೇಶನ ನಿಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ. ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 12.06.2026ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ 15ನೇ ಏಪ್ರಿಲ್ 2026 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ರಾಮಚಂದ್ರ, ವಕೀಲರು
ಕನಕಪುರ,
ದಿನಾಂಕ: 01/04/2026

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್ ನಂ: 900/2025

ಅರ್ಜಿದಾರರು: ಶ್ರೀ. ತಿಮ್ಮಯ್ಯ ಕೋಂ ಲೇಟ್, ವೆಂಕಟಬೋವಿ ವಯಸ್ಸು 77 ವರ್ಷ ವಾಸ– ವಾರ್ಡ್ ನಂ.26, ಜಾಲಮಂಗಲ ರೋಡ್, ಆಂಜನೇಯ ದೇವಸ್ಥಾನದ ಹತ್ತಿರ, 2ನೇ ಕ್ರಾಸ್, ಇಂದ್ರ ನಗರ, ಐಜೂರು ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು

ವಿರುದ್ಧ

ಎದುರುದಾರರು: 1. ತಹಶೀಲ್ದಾರ್ ಜನನ ಮತ್ತು ಮರಣ ನೋಂದಣಾಧಿಕಾರಿಗಳು ಹಾರೋಹಳ್ಳಿ (ರಾಮನಗರ ಜಿಲ್ಲೆ) ಬೆಂಗಳೂರು ದಕ್ಷಿಣ ಜಿಲ್ಲೆ) 2. ತೋಕಸಂದ್ರ ಗ್ರಾಮ, ತೋಕಸಂದ್ರ ಪಂಚಾಯ್ತಿ ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ ಅಧಿಕಾರಿಗಳು, ನಗರಸಭೆ ಕನಕಪುರ ಟೌನ್

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರ–ರಿಗೆ ತಾಯಿಯಾದ ಮತ್ತು 2ನೇ ಅರ್ಜಿದಾರ–ರಿಗೆ ದೊಡ್ಡಮ್ಮನಾದ ಮೃತ ಪಾಪಮ್ಮ ಕೋಂ ಲೇಟ್ ವೆಂಕಟಬೋವಿ ಇವರು ದಿನಾಂಕ 12–06–1965 ರಂದು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ತೋಕಸಂದ್ರ ಗ್ರಾಮದಲ್ಲಿ 2ನೇ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ. ಎದುರುದಾರರಿಗೆ ನಿರ್ದೇಶನ ನಿಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ. ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 12.06.2026ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ 15ನೇ ಏಪ್ರಿಲ್ 2026 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ರಾಮಚಂದ್ರ, ವಕೀಲರು
ಕನಕಪುರ, ದಿನಾಂಕ: 01/04/2026

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್ ನಂ: 899/2025

ಅರ್ಜಿದಾರರು: ಶ್ರೀ. ತಿಮ್ಮಯ್ಯ ಕೋಂ ಲೇಟ್, ವೆಂಕಟಬೋವಿ ವಯಸ್ಸು 77 ವರ್ಷ ವಾಸ– ವಾರ್ಡ್ ನಂ.26, ಜಾಲಮಂಗಲ ರೋಡ್, ಆಂಜನೇಯ ದೇವಸ್ಥಾನದ ಹತ್ತಿರ, 2ನೇ ಕ್ರಾಸ್, ಇಂದ್ರ ನಗರ, ಐಜೂರು ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು

ವಿರುದ್ಧ

ಎದುರುದಾರರು: 1. ತಹಶೀಲ್ದಾರ್ ಜನನ ಮತ್ತು ಮರಣ ನೋಂದಣಾಧಿಕಾರಿಗಳು ಹಾರೋಹಳ್ಳಿ (ರಾಮನಗರ ಜಿಲ್ಲೆ) ಬೆಂಗಳೂರು ದಕ್ಷಿಣ ಜಿಲ್ಲೆ) 2. ತೋಕಸಂದ್ರ ಗ್ರಾಮ, ತೋಕಸಂದ್ರ ಪಂಚಾಯ್ತಿ ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ ಅಧಿಕಾರಿಗಳು, ನಗರಸಭೆ ಕನಕಪುರ ಟೌನ್

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರ–ರಿಗೆ ಚಿಕ್ಕಮ್ಮನಾದ ಮತ್ತು 2ನೇ ಅರ್ಜಿದಾರರಿಗೆ ತಾಯಿಯಾದ ಮೃತ ವೆಂಕಟಮ್ಮ ಕೋಂ ವೆಂಕಟಬೋವಿ ಇವರು ದಿನಾಂಕ 29–12–2008 ರಂದು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ತೋಕಸಂದ್ರ ಗ್ರಾಮದಲ್ಲಿ 2ನೇ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ. ಎದುರುದಾರರಿಗೆ ನಿರ್ದೇಶನ ನಿಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ಧಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ. ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 12.06.2026ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ 15ನೇ ಏಪ್ರಿಲ್ 2026 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ರಾಮಚಂದ್ರ, ವಕೀಲರು
ಕನಕಪುರ
ದಿನಾಂಕ: 01/04/2026

ಸಮಾಚಾರ ಸಣ್ಣದಲ್ಲ

ಯಶಸ್ಸಿನ ಸಮಾರಂಭ ಆಯೋಜನೆ

ಬೆಂಗಳೂರು: ಇತ್ತೀಚೆಗೆ ಪ್ರಕಟವಾದ 2026ನೇ ಸಾಲಿನ ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಅಭೂತಪೂರ್ವ ಸಾಧನೆಗೈದ ವಿದ್ಯಾರ್ಥಿಗಳನ್ನು ಗೌರವಿಸುವ ನಿಟ್ಟಿನಲ್ಲಿ ನಾರಾಯಣ ಶಾಲೆಗಳ ವತಿಯಿಂದ ಶನಿವಾರ ಬೆಳ್ಳಂದೂರಿನ ನಾರಾಯಣ ಇ-ಟೆಕ್ನೊ ಶಾಲೆಯಲ್ಲಿ ವಿಶೇಷ ಯಶಸ್ಸಿನ ಸಮಾರಂಭ ಆಯೋಜಿಸಲಾಗಿತ್ತು.ಈ ಕಾರ್ಯಕ್ರಮದಲ್ಲಿ ನಾರಾಯಣ ಶಿಕ್ಷಣ ಸಂಸ್ಥೆಗಳ ನಿರ್ದೇಶಕಿ ಡಾ. ಸಿಂಧುರಾ ನಾರಾಯಣ ಅವರು ಭಾಗವಹಿಸಿ, ಅತ್ಯುತ್ತಮ ಅಂಕ ಗಳಿಸಿದ ಕರ್ನಾಟಕದ ಟಾಪರ್‌ಗಳು, ಮೇರು ಸಾಧನೆ ಮಾಡಿದ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರನ್ನು ಸನ್ಮಾನಿಸಿ ಅಭಿನಂದಿಸಿದರು. ಸಮಾರಂಭದಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರನ್ನು ಉದ್ದೇಶಿಸಿ ಮಾತನಾಡಿದ ಡಾ. ಸಿಂಧುರಾ ನಾರಾಯಣ ಅವರು, ಇಂದಿನ ಸಿಬಿಎಸ್‌ಇ 10ನೇ ತರಗತಿಯ ಪರೀಕ್ಷೆಗಳು ಮೊದಲಿನಂತಿಲ್ಲ. ಪ್ರಶ್ನೆ ಪತ್ರಿಕೆಗಳಲ್ಲಿ ಕೇವಲ ಪಠ್ಯಪುಸ್ತಕದ ಸೈದ್ಧಾಂತಿಕ ಪ್ರಶ್ನೆಗಳಿರುವುದಿಲ್ಲ. ಬದಲಾಗಿ ಶೇ. 50ರಷ್ಟು ಸಾಮರ್ಥ್ಯ ಆಧಾರಿತ ಪ್ರಶ್ನೆಗಳೇ ಇರುತ್ತವೆ. ಅಂದರೆ, ಪಠ್ಯಪುಸ್ತಕದಿಂದ ನೇರವಾಗಿ ಪ್ರಶ್ನೆಗಳನ್ನು ಕೇಳುವ ಬದಲು, ವಿದ್ಯಾರ್ಥಿಗಳ ವಿಶ್ಲೇಷಣಾ ಸಾಮರ್ಥ್ಯ, ಸಮಸ್ಯೆ ಪರಿಹರಿಸುವ ಕೌಶಲ್ಯ ಹಾಗೂ ವಿಷಯಗಳನ್ನು ಪರಸ್ಪರ ಲಿಂಕ್ ಮಾಡುವ ಸಾಮರ್ಥ್ಯವನ್ನು ಪರೀಕ್ಷಿಸಲಾಗುತ್ತದೆ. ಹೀಗಾಗಿ ಇದು ಬಹುತೇಕ ಜೆಇಇ ಮೇನ್ ಪರೀಕ್ಷೆ ಬರೆದಷ್ಟೇ ಸಮಾನವಾಗಿದೆ. ಇಂತಹ ಕಠಿಣ ಸವಾಲಿನ ನಡುವೆಯೂ ನಮ್ಮ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಯಕೃತ್‌ನ ಆರೋಗ್ಯದ ಬಗ್ಗೆ ಎಚ್ಚರವಿರಲಿ

ಬೆಂಗಳೂರು: ಪ್ರತಿ ವರ್ಷವೂ ಏಪ್ರಿಲ್ 19 ರಂದು, ವಿಶ್ವ ಯಕೃತ್ ದಿನ ಆಚರಿಸಲಾಗುತ್ತದೆ. ಯಕೃತ್‌ನ ಆರೋಗ್ಯದ ಬಗ್ಗೆ ಕಾಳಜಿವಹಿಸುವುದು ಅಗತ್ಯ ಎಂದು ನವದೆಹಲಿಯ ಅಪೊಲೊ ಸ್ಪೆಕ್ಟ್ರಾ ಆಸ್ಪತ್ರೆಯ ವೈದ್ಯೆ ಡಾ. ಸೌರಭ್ ಬನ್ಸಾಲ್ ಅವರು ತಿಳಿಸಿದ್ದಾರೆ.ಹೆಚ್ಚಾಗಿ ಕಡೆಗಣಿಸಲ್ಪಡುವ ಅಂಗಗಳಲ್ಲಿ ಯಕೃತ್ ಒಂದಾಗಿದೆ. ಯಕೃತ್ತು ಪೋಷಕಾಂಶಗಳನ್ನು ಸಂಸ್ಕರಿಸುವುದು, ರಕ್ತದಲ್ಲಿನ ಸಕ್ಕರೆಯನ್ನು ನಿಯಂತ್ರಿಸುವುದು, ಶಕ್ತಿಯನ್ನು ಸಂಗ್ರಹಿಸುವುದು, ಅಗತ್ಯ ಪ್ರೋಟೀನ್‌ಗಳನ್ನು ತಯಾರಿಸುವುದು ಮತ್ತು ರಕ್ತದಿಂದ ವಿಷವನ್ನು ತೆಗೆದುಹಾಕುವುದು ಹೀಗೆ ನಿರಂತರವಾಗಿ ಕೆಲಸ ಮಾಡುತ್ತದೆ. ಇದು ಅಂತಹ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದರೂ, ಯಕೃತ್ತಿನ ಕಾಯಿಲೆಯು ಗಂಭೀರವಾಗುವವರೆಗೆ ಹೆಚ್ಚಾಗಿ ಗಮನಕ್ಕೆ ಬರುವುದಿಲ್ಲ ಎಂದಿದ್ದಾರೆ. ದಿ ಲ್ಯಾನ್ಸೆಟ್ ಗ್ಯಾಸ್ಟ್ರೋಎಂಟರಾಲಜಿ ಹೆಪಟಾಲಜಿಯಲ್ಲಿ ಪ್ರಕಟವಾದ ಇತ್ತೀಚಿನ ಜಾಗತಿಕ ಅಧ್ಯಯನದ ಪ್ರಕಾರ ವಿಶ್ವಾದ್ಯಂತ ಸುಮಾರು 1.3 ಶತಕೋಟಿ ಜನರು ಚಯಾಪಚಯ ಅಪಸಾಮಾನ್ಯ ಕ್ರಿಯೆಗೆ ಸಂಬಂಧಿಸಿದ ಸ್ಟೀಟೋಟಿಕ್ ಲಿವರ್ ಕಾಯಿಲೆಯಿಂದ ಬಳಲುತ್ತಿದ್ದಾರೆ ಎಂದು ಅಂದಾಜಿಸಿದೆ. ಈ ಸಂಖ್ಯೆ 2050 ರ ವೇಳೆಗೆ 1.8 ಶತಕೋಟಿಗೆ ಏರಬಹುದು ಎಂದು ಅಂದಾಜಿಸಲಾಗಿದೆ. ಈ ಹೆಚ್ಚಳವು ಮುಖ್ಯವಾಗಿ ಬೊಜ್ಜು, ಮಧುಮೇಹ, ಇನ್ಸುಲಿನ್ ಪ್ರತಿರೋಧ ಮತ್ತು ಜಡ ಜೀವನಶೈಲಿಯ ಹೆಚ್ಚುತ್ತಿರುವ ದರಗಳಿಂದಾಗಿ ಎಂದು ನಿರ್ಧರಿಸಬಹುದು ಮತ್ತು ಈ ಪ್ರವೃತ್ತಿಗಳು ಭಾರತದಲ್ಲಿಯೂ ಹೆಚ್ಚಾಗಿ ಕಂಡುಬರುತ್ತಿವೆ. ನಾವು ನಿರ್ಲಕ್ಷಿಸಬಾರದು ಎಂಬ ಗಂಭೀರ ಎಚ್ಚರಿಕೆ ಇದು ಎಂದು ಮಾಹಿತಿ ನೀಡಿದ್ದಾರೆ.

{ ಡಾ.ಜಿ.ಪರಮೇಶ್ವರ } ಗೃಹ ಸಚಿವ

ಮುಸ್ಲಿಮರು ಕಾಂಗ್ರೆಸ್ ಪಕ್ಷದ ಬೆನ್ನಿಗೆ ನಿಂತಿದ್ದಾರೆ. ಹೀಗಾಗಿ ಕಾಂಗ್ರೆಸ್ ಅಲ್ಪಸಂಖ್ಯಾತರನ್ನು ನಿರ್ಲಕ್ಷ್ಯ ಮಾಡಿಲ್ಲ ಮತ್ತು ಅವರನ್ನು ಗುರಿಯಾಗಿಸುವ ಪ್ರಶ್ನೆಯೇ ಇಲ್ಲ. ನಾವು, ಮುಸ್ಲಿಮರು ಯಾವತ್ತೂ ಸಹೋದ ರರಿದ್ದಂತೆ. ಒಂದು ಕ್ಷೇತ್ರದಿಂದ ಎಲ್ಲಾ ಬದಲಾವಣೆ ಆಗಲಿದೆ ಎಂದು ತಿಳಿದುಕೊಳ್ಳುವುದು ಬೇಡ. ಒಂದು ಕ್ಷೇತ್ರದಲ್ಲಿ ಟಿಕೆಟ್ ಸಿಕ್ಕಿಲ್ಲ ಅಂತಾ ಬೇಸರ ಮಾಡಿಕೊಳ್ಳೋದು ಬೇಡ.

ರಾಜ್ಯಮಟ್ಟದ ನ್ಯಾಯಾಂಗ ಅಧಿಕಾರಿಗಳ ಸಮ್ಮೇಳನದಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್

ಕೃತಕ ಬುದ್ಧಿಮತ್ತೆ ಬಗ್ಗೆ ಭಯಪಡಬೇಡಿ

ಬೆಂಗಳೂರು: ನ್ಯಾಯಾಂಗದಲ್ಲಿ ತಂತ್ರಜ್ಞಾನದ ಅಳವಡಿಕೆಯು ಅದರ ಮಿತಿಗಳ ಸ್ಪಷ್ಟ ಮತ್ತು ಪ್ರಜ್ಞಾಪೂರ್ವಕ ತಿಳುವಳಿಕೆಯೊಂದಿಗೆ ಇರಬೇಕು ಎಂದು ಎಚ್ಚರಿಕೆ ನೀಡಿರುವ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ಕೃತಕ ಬುದ್ಧಿಮತ್ತೆ(ಎಐ) ಬಗ್ಗೆ ಭಯಪಡಬಾರದು ಎಂದು ನ್ಯಾಯಾಂಗ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘ ಆಯೋಜಿಸಿದ್ದ 'ಕೃತಕ ಬುದ್ಧಿಮತ್ತೆಯ ಯುಗದಲ್ಲಿ ನ್ಯಾಯಾಂಗವನ್ನು ಮರುರೂಪಿಸುವುದು' ಎಂಬ ವಿಷಯದ ಕುರಿತು 22ನೇ ದ್ವೈವಾರ್ಷಿಕ ರಾಜ್ಯಮಟ್ಟದ ನ್ಯಾಯಾಂಗ ಅಧಿಕಾರಿಗಳ ಸಮ್ಮೇಳನದಲ್ಲಿ ಮಾತನಾಡಿದ ಅವರು, ಎಐ ಬಗ್ಗೆ ಭಯಪಡಬಾರದು. ತಂತ್ರಜ್ಞಾನವು ಪರ್ಯಾಯವಾಗಿರದೆ, ನೆರವಾಗಿ ಉಳಿಯಬೇಕು.೨, ನ್ಯಾಯಾಂಗ ಪ್ರಕ್ರಿಯೆಯಲ್ಲಿ ಕೃತಕ ಬುದ್ಧಿಮತ್ತೆ ಬಳಕೆ ಸಮತೋಲನ ತತ್ವದಿಂದ ಮಾರ್ಗದರ್ಶಿಸಲ್ಪಡಬೇಕು. ನ್ಯಾಯಾಂಗದಲ್ಲಿ ಮಾನವ ಬುದ್ಧಿಶಕ್ತಿ, ಅನುಭವ ಮತ್ತು ಸಾಂವಿಧಾನಿಕ ಆತ್ಮಸಾಕ್ಷಿಯನ್ನು ಸ್ಥಿರವಾಗಿ ಸಂರಕ್ಷಿಸುವಾಗ ದಕ್ಷತೆಯನ್ನು ಹೆಚ್ಚಿಸಲು ಅದರ ಪ್ರಯೋಜನಗಳನ್ನು ಬಳಸಿಕೊಳ್ಳಬೇಕು ಎಂದು ಹೇಳಿದರು.

ಬಹಳ ಸಂಕೀರ್ಣವಾದ ಸಂಗತಿಗಳು ಮತ್ತು ಕಾನೂನಿನ ಪ್ರಶ್ನೆಗಳನ್ನು ಒಳಗೊಂಡಿರುವ ಪ್ರಕರಣವನ್ನು ನಿಮ್ಮ ಮುಂದೆ ಇರಿಸಿದಾಗ ನೀವು ಏನು ಮಾಡುತ್ತೀರಿ? ಹೆಚ್ಚು ಯೋಚಿಸುತ್ತೀರಿ, ಹೆಚ್ಚು ಸಮಯ ಕಳೆಯುತ್ತೀರಿ, ಹೆಚ್ಚಿನ ತಾಳ್ಮೆ ತೆಗೆದುಕೊಳ್ಳುತ್ತೀರಿ ಮತ್ತು ಅಂತಹ ಪ್ರಕರಣವನ್ನು ನಿರ್ಧರಿಸಿದಾಗ ನೀವು ತೃಪ್ತಿಯ ಭಾವನೆಯನ್ನು ಅನುಭವಿಸುತ್ತೀರಿ. ಎಐ ಪರಿಕರಗಳನ್ನು ಎಚ್ಚರಿಕೆಯಿಂದ ಮತ್ತು ಪ್ರಜ್ಞಾಪೂರ್ವಕವಾಗಿ ಬಳಸಲು ಪ್ರಾರಂಭಿಸಿದಾಗ ನಿಮ್ಮೊಳಗಿನ ನ್ಯಾಯಾಧೀಶರು ಸ್ವತಂತ್ರರಾಗಿ ಉಳಿಯುತ್ತಾರೆ ಎಂದರು.



ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘ ಆಯೋಜಿಸಿದ್ದ ರಾಜ್ಯಮಟ್ಟದ ನ್ಯಾಯಾಂಗ ಅಧಿಕಾರಿಗಳ ಸಮ್ಮೇಳನವನ್ನು ಸೂರ್ಯ ಕಾಂತ್ ಉದ್ಘಾಟಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಸುಪ್ರೀಂಕೋರ್ಟ್ ನ್ಯಾಯಾಧೀಶರಾದ ಬಿ.ವಿ.ನಾಗರತ್ನ, ಅರವಿಂದ್ ಕುಮಾರ್ ಮತ್ತು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಇದ್ದರು.

> **ನಮ್ಮ ಸಾಧನ ಸಲಕರಣೆಗಳು ಮತ್ತು ವಿಧಾನಗಳು ಬೆಳವಣಿಗೆ ಹೊಂದಿದರೂ ನ್ಯಾಯಯುತ, ಸುಲಭವಾಗಿ ಸಿಗುವ ಮತ್ತು ಮಾನವೀಯ ನ್ಯಾಯವನ್ನು ತಲುಪಿಸುವುದು ನಮ್ಮ ಮೂಲ ಜವಾಬ್ದಾರಿಯಾಗಿದೆ. ಒಂದು ಸಂಸ್ಥೆಯ ಜೀವನದಲ್ಲಿ ಆತ್ಮಾವಲೋಕನ ಅನಿವಾರ್ಯವಾಗುವ ಕ್ಷಣಗಳಿವೆ. ಭಾರತೀಯ ನ್ಯಾಯಾಂಗಕ್ಕೆ ವಿರಾಮ ಮತ್ತು ಆತ್ಮಾವಲೋಕನ ಮಾಡುವ ಸಮಯ ಬಂದಿದೆ. ವಿರಾಮದ ಸಮಯ ಎಂಬುದು ಹಿಂಜರಿಕೆಯಿಂದ ಬರುವುದಲ್ಲ, ಜವಾಬ್ದಾರಿಯಿಂದ ಬರುವಂತಹದ್ದು.**
> **- ನ್ಯಾ.ಸೂರ್ಯ ಕಾಂತ್,ಸಿಜೆಐ**

ಎಐ ಬಳಸುವಾಗ ಎಚ್ಚರವಿರಲಿ

ಬೆಂಗಳೂರು: ತಮ್ಮ ಸಂಪಾದನೆಯಲ್ಲಿ ಬದುಕಲು ಸಾಧ್ಯವಾಗದ ಮತ್ತು ದುರಾಸೆ ಮತ್ತು ಪ್ರಲೋಭನೆಗೆ ಒಳಗಾಗುವ ನ್ಯಾಯಾಧೀಶರನ್ನು ನ್ಯಾಯಾಂಗ ವ್ಯವಸ್ಥೆಯಿಂದ ಕಿತ್ತೊಗೆಯಬೇಕು ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಹೇಳಿದರು.

ಬೆಂಗಳೂರಿನ ಜಿಕೆವಿಕೆಯ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಭಾಂಗಣದಲ್ಲಿ ನಡೆದ ನ್ಯಾಯಾಂಗ ಅಧಿಕಾರಿಗಳ 22ನೇ ದ್ವೈವಾರ್ಷಿಕ ರಾಜಮಟ್ಟದ ಸಮ್ಮೇಳನದಲ್ಲಿ ಅವರು ಮಾತನಾಡಿದರು. ನ್ಯಾಯಾಧೀಶರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಧೈರ್ಯ ಮತ್ತು ಸ್ವತಂತ್ರರಾಗಿರಬೇಕು. ಪ್ರಕರಣಗಳನ್ನು ನಿರ್ಧರಿಸುವಾಗ ಬಾಹ್ಯ ವಿಚಾರಗಳಿಂದ ಪ್ರಭಾವಿತರಾಗಕೂಡದು ಎಂದು ಎಚ್ಚರಿಸಿದರು.

ನಿರ್ಧಾರ ತೆಗೆದುಕೊಳ್ಳುವಾಗ ಯಾವುದೇ ಸಮನ್ವಯ ಇರಲು ಸಾಧ್ಯವಿಲ್ಲ. ನ್ಯಾಯಾಧೀಶರ ಕಳಂಕಿತ ನಿರ್ಧಾರವು ನ್ಯಾಯಾಧೀಶರು ಮತ್ತು ನ್ಯಾಯಾಂಗದ ಮೇಲಿನ ಕಪ್ಪು ಚುಕ್ಕೆ. ಕಾನೂನು ಸಂಶೋಧನೆಗೆ ಕೃತಕ ಬುದ್ಧಿಮತ್ತೆ ಬಳಕೆ ಮಾಡುವಾಗ ಎಚ್ಚರದಿಂದ ಇರಬೇಕು. ಕೃತಕ ಬುದ್ಧಿಮತ್ತೆಯು ಸುಳ್ಳಿನಿಂದ ಕೂಡಿದ ಕೇಸ್ ಲಾಗಳನ್ನು ಹಾಜರುಪಡಿಸಿದ ಸಂದರ್ಭಗಳಿವೆ. ಅದು ನನ್ನ ಪೀಠದ ಮುಂದೆಯೇ ಇಂಥದ್ದೊಂದು ಉದಾಹರಣೆ ನಡೆದಿದೆ ಎಂದರು.

ನ್ಯಾಯಾಂಗ ಪೂರ್ವ ನಿದರ್ಶನಗಳನ್ನು ಆಧರಿಸಿರುವ ವಕೀಲರು, ತಾವು ಆಧರಿಸಿರುವ ತೀರ್ಪುಗಳು ನ್ಯಾಯಯುತ ಮತ್ತು ಸಂಬಂಧಿತ ಜನಲ್‌ಗಳಲ್ಲಿ ವರದಿಯಾಗಿರುವುದಕ್ಕೆ ಪೂರಕವಾಗಿ ಪ್ರಮಾಣಪತ್ರ ಸಲ್ಲಿಸುವ ಸಂದರ್ಭ ನಿರ್ಮಾಣವಾಗಿದೆ. ಯಾವುದೇ ನ್ಯಾಯಾಂಗ ಅಧಿಕಾರಿಯು ತಮ್ಮ ನಿಜವಾದ ಕುಂದುಕೊರತೆಗಳನ್ನು ಪರಿಹರಿಸಲು ಹೈಕೋರ್ಟ್ ರಿಜಿಸ್ಟ್ರಿಯು ಸೂಕ್ತ ಸಮಯದಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ ಎಂಬ ಕಾರಣಕ್ಕಾಗಿ ತಾನು ಸಂಕಷ್ಟದಲ್ಲಿ ಸಿಲುಕಿದ್ದೇನೆ ಎಂದು ಭಾವಿಸಬಾರದು ಎಂದು ಅವರು ಹೇಳಿದರು.

ಕರ್ನಾಟಕ ನ್ಯಾಯಾಂಗ ದೇಶದಲ್ಲಿ ಅತ್ಯುತ್ತಮ

ಮಹಿಳಾ ನ್ಯಾಯಾಧೀಶರಿಗೆ ಸುರಕ್ಷತೆ, ಘನತೆ ಮತ್ತು ಅನುಕೂಲಕರ ಕೆಲಸದ ಪರಿಸ್ಥಿತಿಗಳು ಇರಬೇಕು ಎಂದೂ ಹೇಳಿದ ನ್ಯಾ. ನಾಗರತ್ನ ಅವರು ಕರ್ನಾಟಕ ನ್ಯಾಯಾಂಗವು ದೇಶದಲ್ಲಿ ಅತ್ಯುತ್ತಮವಾದ ವ್ಯವಸ್ಥೆಯಾಗಿದೆ. ಭವಿಷ್ಯದ ನ್ಯಾಯದಾನವನ್ನು ಕೃತಕ ಬುದ್ಧಿಮತ್ತೆ ವಿನ್ಯಾಸಗೊಳಿಸಲಾಗದು. ಅದನ್ನು ನ್ಯಾಯಮೂರ್ತಿಗಳೇ ಮಾಡಬೇಕು. ಪರಿಕರಗಳ ಬೆಂಬಲ, ಸಾಂವಿಧಾನಿಕ ಮೌಲ್ಯ, ಕಾನೂನು, ಸಮಾನತೆ ಮತ್ತು ನ್ಯಾಯಯುತೆಗಿನ ಬದ್ಧತೆಯಿಂದ ಮಾತ್ರ ಅದು ಸಾಧ್ಯ ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಬಿ.ವಿ.ನಾಗರತ್ನ ತಿಳಿಸಿದರು.

ನ್ಯಾಯಾಂಗದ ಅನುದಾನ ಹೆಚ್ಚಿಸಿ

ಬೆಂಗಳೂರು: ರಾಜ್ಯದ ನ್ಯಾಯಾಂಗದ ಅಭಿವೃದ್ಧಿಗೆ ರಾಜ್ಯ ಸರಕಾರ ನೀಡುತ್ತಿರುವ ಅನುದಾನ ಅತ್ಯಂತ ಕಡಿಮೆಯಾಗಿದೆ. ಹೈಕೋರ್ಟ್ ಮತ್ತು ಜಿಲ್ಲಾ ನ್ಯಾಯಾಲಯ ಸಂಗ್ರಹಿಸಿರುವ ಶೇ.75-80ರಷ್ಟರ ಹಣವನ್ನಾದರೂ ಮರಳಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಅರವಿಂದ್ ಕುಮಾರ್ ಮನವಿ ಮಾಡಿದರು.

ಬೆಂಗಳೂರಿನ ಜಿಕೆವಿಕೆಯ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಭಾಂಗಣದಲ್ಲಿ ನಡೆದ ನ್ಯಾಯಾಂಗ ಅಧಿಕಾರಿಗಳ 22ನೇ ದ್ವೈವಾರ್ಷಿಕ ರಾಜಮಟ್ಟದ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಕಳೆದ ಎರಡು ವರ್ಷಗಳಲ್ಲಿ ಕಲಬುರಗಿ, ಬೆಂಗಳೂರು, ಧಾರವಾಡ ಪೀಠಗಳಲ್ಲಿ 666 ಹುದ್ದೆಗಳ ಅನುಮೋದನೆಗಾಗಿ ರಾಜ್ಯ ಸರಕಾರಕ್ಕೆ ಪ್ರಸ್ತಾವ ಕಳುಹಿಸಿದ್ದು, ನಿಮ್ಮ ಅಧಿಕಾರಿಗಳು 238 ಹುದ್ದೆಗಳನ್ನು ಅನುಮೋದಿಸಿದ್ದಾರೆ. ಜಿಲ್ಲಾ ನ್ಯಾಯಾಲಯಗಳಿಗೆ 680 ಹುದ್ದೆಗಳ ಪ್ರಸ್ತಾವ ಕಳುಹಿಸಿದಾಗ ಕೇವಲ 400 ಹುದ್ದೆಗಳನ್ನು ಅನುಮೋದಿಸಲಾಗಿದೆ ಎಂದು ಬೇಸರಿಸಿದರು.

ಕಳೆದ ಮೂರು ವರ್ಷಗಳಲ್ಲಿ ನ್ಯಾಯಾಲಯದ ಶುಲ್ಕ, ದಂಡ ಮತ್ತು ಸ್ಟಾಂಪ್ ಶುಲ್ಕ ಹೊರತುಪಡಿಸಿ ಜಿಲ್ಲಾ ಮತ್ತು ಹೈಕೋರ್ಟ್ 2023-24ರಲ್ಲಿ 376 ಕೋಟಿ, 2024-25ರಲ್ಲಿ 439 ಕೋಟಿ, 2025-26ರಲ್ಲಿ 470 ಕೋಟಿಯನ್ನು ರಾಜ್ಯ ಸರಕಾರಕ್ಕೆ ವಸೂಲಿ ಮಾಡಿಕೊಟ್ಟಿವೆ. ಆದರೆ, ಸಿಬ್ಬಂದಿಗೆ ಸಂಬಳ ಹೊರತುಪಡಿಸಿ ಸರಕಾರವು ನ್ಯಾಯಾಂಗಕ್ಕೆ ಕ್ರಮವಾಗಿ ನೀಡಿರುವುದು 1.03 ಕೋಟಿ, 40 ಲಕ್ಷ ಮತ್ತು 1.37 ಕೋಟಿ, 1.41 ಕೋಟಿ ಮಾತ್ರ. ಇದು ಬಿಡಿಗಾಸುವಲ್ಲ. ನಾವು ಸಂಗ್ರಹಿಸಿರುವ ಶೇ.75 - 80ರಷ್ಟನ್ನಾದರೂ ಮರಳಿಸಬೇಕು ಎಂದು ಆಗ್ರಹಿಸಿದರು.

ಪ್ರತಿವರ್ಷ ವ್ಯಾಜ್ಯಗಳು ಹೆಚ್ಚಾಗುತ್ತಿದ್ದು, 2023ರಲ್ಲಿ 17 ಲಕ್ಷ ಇದ್ದ ವ್ಯಾಜ್ಯಗಳ ಸಂಖ್ಯೆ 2025ರಲ್ಲಿ 22 ಲಕ್ಷಕ್ಕೆ ಏರಿಕೆಯಾಗಿದೆ. ಹೊಸ ಕಾನೂನುಗಳು ಜಾರಿಯಾಗುತ್ತಿದ್ದು, ಅವುಗಳ ಅಡಿ ನ್ಯಾಯದಾನ ಮಾಡಲು ಮೂಲ ಸೌಕರ್ಯ ಕಲ್ಪಿಸಲು, ನ್ಯಾಯಾಧೀಶರ ನೇಮಕಾತಿ, ಸರಕಾರಿ ಅಭಿಯೋಜಕರ ನೇಮಕಾತಿ, ನ್ಯಾಯಾಲಯಗಳು ಪ್ರಸ್ತಾವ ಕಳುಹಿಸಿದಾಗ ಅಧಿಕಾರಿಗಳು ಮಂದಿಗತಿಯಲ್ಲಿ ಅಥವಾ ಅದರ ಕಡೆ ಗಮನಹರಿಸದೇ ಬೇಡಿಕೆ ಕಡಿತಗೊಳಿಸಿ, ಅನುಮೋದಿಸಿರುವ ಉದಾಹರಣೆಗಳು ಬೇಕಾದಷ್ಟಿವೆ ಎಂದು ಬೇಸರಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನ್ಯಾಯಾಲಯ ಕಟ್ಟಡ ಮತ್ತು ನ್ಯಾಯಾಧೀಶರಿಗೆ ನಿವಾಸ ನಿರ್ಮಿಸುವುದು ಅತ್ಯವಶ್ಯಕ. ಸರಕಾರವು ನ್ಯಾಯಾಂಗದ ಅಭಿವೃದ್ಧಿಗೆ ನೀಡಿರುವ ಅನುದಾನ ಅತ್ಯಂತ ಕಡಿಮೆ. ಹೀಗಾಗಿ, ಹೈಕೋರ್ಟ್‌ನಿಂದ ಬರುವ ಪ್ರಸ್ತಾವಗಳನ್ನು ಕಡಿತಗೊಳಿಸದೇ, ತ್ವರಿತವಾಗಿ ಅನುಮೋದಿಸಲು ತಕ್ಷಣ ನಿರ್ದೇಶನ ನೀಡಬೇಕು ಎಂದು ಕೋರಿದರು.

ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ನಲ್ಲಿ ಅಕ್ಷಯ ತೃತೀಯ ಮೆಗಾ ಆಫರ್

ಬೆಂಗಳೂರು: ನಗರದ ವಿಶ್ವಾಸಾರ್ಹ ಆಭರಣ ಮಳಿಗೆಗಳಲ್ಲಿ ಒಂದಾದ ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ನ ಶಾಖೆಗಳಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಅಕ್ಷಯ ತೃತೀಯ ಮೆಗಾ ಆಫರ್ ಅನ್ನು ಗ್ರಾಹಕರಿಗೆ ನೀಡುತ್ತಿದೆ.

ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ತನ್ನ ಅತ್ಯುತ್ತಮ ಗ್ರಾಹಕ ಸೇವೆ ಮತ್ತು ಭಾರತದ ಅತ್ಯುತ್ತಮ ಆಭರಣಕಾರರ ಕೌಶಲ್ಯ ಮತ್ತು ಕಲಾತ್ಮಕತೆ ಸಾರುವ ಆಭರಣಗಳಿಗೆ ಹೆಸರುವಾಸಿಯಾಗಿದೆ. ಜೈಪುರದ ರಾಜಮನೆತನದ ಇತಿಹಾಸ ಸಾರುವ ಪಾರಂಪರಿಕ ಒಡವೆಗಳು, ಭಾರತೀಯ ಸಂಸ್ಕೃತಿ ಮತ್ತು ಶತಮಾನಗಳ ಹಳೆಯ ವಿನ್ಯಾಸಗಳನ್ನು ಪ್ರತಿಧ್ವನಿಸುವ ದೈವಿಕ ಆಭರಣಗಳು, ಭಕ್ತ ಬಿಂಬಿಸುವ ಲೈಟ್ ವೇಟ್ ಟೆಂಪಲ್ ಜ್ಯುವೆಲ್ಲರಿ, ಹೊಳೆಯುವ ವಜ್ರದ ಸೆಟ್‌ಗಳು, ಬೆಳ್ಳಿ ಆಭರಣಗಳು ಮತ್ತು ಚಿನ್ನದ ಆಂಟಿಕ್ ಆಭರಣಗಳ ಅದ್ಭುತ ಮತ್ತು ಅಮೋಘ ಸಂಗ್ರಹಗಳನ್ನು ಹೊತ್ತು ಗ್ರಾಹಕರನ್ನು ತನ್ನತ್ತ ಸೆಳೆಯಲು ಮತ್ತು ಗ್ರಾಹಕ ಸೇವೆ ನೀಡಲು ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ಸಿದ್ಧವಾಗಿದೆ. ಪ್ರತಿ ಗ್ರಾಂ ಚಿನ್ನಾಭರಣ ಖರೀದಿಗೆ 1 ಗ್ರಾಂ ಬೆಳ್ಳಿ ನಾಣ್ಯ ಉಚಿತವಾಗಿ ನೀಡಲಾಗುತ್ತದೆ. 50 ಸಾವಿರ ರು. ಮೇಲ್ಪಟ್ಟ ಖರೀದಿಸಿ ಮತ್ತು ತಿರುಪತಿಯ ಪದ್ಮಾವತಿ ಸನ್ನಿಧಿಯಲ್ಲಿ ಪೂಜಿತವಾದ ಬೆಳ್ಳಿಯ ಲಕ್ಷ್ಮಿ ವಿಗ್ರಹವನ್ನು ಉಚಿತವಾಗಿ ಪಡೆಯಬಹುದಾಗಿದೆ.

ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ನ ಮಾಲೀಕ ಟಿ.ಎ.ಶರವಣ ಮಾತನಾಡಿ, ನಮ್ಮೆಲ್ಲಾ ಗ್ರಾಹಕರು ಕುಟುಂಬದವರಿದ್ದಂತೆ. ಅವರ ವಿಶ್ವಾಸ ಉಳಿಸಿಕೊಂಡು ಉತ್ತಮ ಗ್ರಾಹಕ ಸೇವೆ ನೀಡುತ್ತಾ ಬಂದಿದ್ದೇವೆ. ಈ ಎಲ್ಲಾ ಕೊಡುಗೆಗಳು ನಮ್ಮ ನೂತನ ಮಳಿಗೆ ಕನಕಪುರ ರಸ್ತೆಯ ರಘುವನಹಳ್ಳಿ ಸೇರಿ ಬಸವನಗುಡಿ, ಎಚ್.ಎಸ್.ಆರ್.ಲೇಔಟ್, ಯಲಹಂಕ, ಕೆ.ಆರ್.ಪುರ ಮತ್ತು ನಾಗರಬಾವಿ ಶಾಖೆಗಳಲ್ಲಿ ಲಭ್ಯವಿದೆ. ಎಲ್ಲರೂ ಹತ್ತಿರದ ಶಾಖೆಗೆ ಭೇಟಿ ನೀಡಿ ಈ ವಿಶೇಷ ರಿಯಾಯಿತಿ ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಅಭಿವೃದ್ಧಿ, ಪರಿಸರ ಸಂರಕ್ಷಣೆ ಜತೆಯಾಗಿ ಸಾಗಬೇಕು: ಸಿಜೆಐ

ಬೆಂಗಳೂರು: ಭಾರತದಂತಹ ಬೆಳೆಯುತ್ತಿರುವ ದೇಶಕ್ಕೆ ಆರ್ಥಿಕ ಪ್ರಗತಿ ಮತ್ತು ಪರಿಸರ ರಕ್ಷಣೆ ಎರಡೂ ಅಷ್ಟೇ ಮುಖ್ಯ. ಇವೆರಡರಲ್ಲಿ ಒಂದನ್ನು ಮಾತ್ರ ಆರಿಸಿಕೊಳ್ಳಲು ಸಾಧ್ಯವಿಲ್ಲ. ಬದಲಾಗಿ ಎರಡನ್ನೂ ಜತೆಯಾಗಿ ತೆಗೆದುಕೊಂಡು ಹೋಗುವಂತಹ ವ್ಯವಸ್ಥೆಯ ಅಳವಡಿಸಿಕೊಳ್ಳಬೇಕಾಗಿದೆ ಎಂದು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ತಿಳಿಸಿದರು.

ಖಾಸಗಿ ಹೋಟೇಲ್‌ನಲ್ಲಿ ಕಾಮನ್ವೆಲ್ತ್ ಲೀಗಲ್ ಎಜುಕೇಶನ್ ಅಸೋಸಿಯೇಷನ್ ಮತ್ತು ರಾಜ್ಯ ಸರಕಾರ ಜಂಟಿಯಾಗಿ ಆಯೋಜಿಸಿರುವ ಸುಸ್ಥಿರ ಇಂಧನ: ಭಾರತದ ಕಾರ್ಯಸೂಚಿ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಅಭಿವೃದ್ಧಿಶೀಲ ರಾಷ್ಟ್ರವೊಂದಕ್ಕೆ ಪರಿಸರ ರಕ್ಷಣೆ ಮತ್ತು ಆರ್ಥಿಕ ಪ್ರಗತಿಯು ಒಂದನ್ನೊಂದು ಬಿಟ್ಟು ಆಯ್ಕೆ ಮಾಡುವಂತಹ ವಿಷಯಗಳಲ್ಲ ಎಂದು ಪ್ರತಿಪಾದಿಸಿದರು. ವಿಕಸಿತ ಭಾರತಕ್ಕಾಗಿ 'ಇಂಧನ ನ್ಯಾಯ'ದ ದೃಷ್ಟಿಕೋನವನ್ನು ಮಂಡಿಸಿದ ಅವರು, ಶುದ್ಧ ಗಾಳಿ, ಶುದ್ಧ ನೀರು ಮತ್ತು ನವೀಕರಿಸ ಬಹುದಾದ ಭವಿಷ್ಯದೊಂದಿಗೆ ರಾಜಿ ಮಾಡಿಕೊಳ್ಳದೆ ದೇಶವು ಬೆಳೆಯಲು ಅನುವು ಮಾಡಿಕೊಡುವ ನೈತಿಕ ವಾಸ್ತುಶಿಲ್ಪವೇ ಈ ಇಂಧನ ನ್ಯಾಯ ಎಂದರು.

ಮುಖ್ಯಮಂತ್ರಿ ಸಿದ್ದರಾ ಯಯ್ಯ ಮಾತನಾಡಿ, ಭಾರತದ ಇಂಧನ ವಲಯದಲ್ಲಿ ನವೀಕೃತ ಇಂಧನದ ಪ್ರಾಮುಖ್ಯತೆಯ ಬಗ್ಗೆ ಬೆಳಕು ಚೆಲ್ಲಿದ ಅವರು, ನಾಗರೀಕರ ಜೀವನಮಟ್ಟವನ್ನು ಸುಧಾರಿಸಲು ಮತ್ತು ಆಧುನಿಕ ಮೂಲಸೌಕರ್ಯಗಳನ್ನು ನಿರ್ಮಿಸಲು ಮುಂದಿನ ಎರಡು ದಶಕಗಳಲ್ಲಿ ರಾಷ್ಟ್ರೀಯ ಇಂಧನ ಬಳಕೆಯು ಸುಮಾರು ನಾಲ್ಕು ಪಟ್ಟು ಬೆಳೆಯಬೇಕಾಗಿದೆ ಎಂದು ಅವರು ವಿವರಿಸಿದರು. ನವೀಕರಿಸಬಹುದಾದ ಇಂಧನ ಮೂಲಗಳಿಂದಲೇ ರಾಜ್ಯದ ಶೇ. 5ರಷ್ಟುಸ್ಥಾಪಿತ ಸಾಮರ್ಥ್ಯ ಉತ್ಪಾದನೆ ಯಾಗುತ್ತಿದ್ದು, ಈ ಪರಿವರ್ತನೆಯಲ್ಲಿ ಕರ್ನಾಟಕವು ದೇಶದಲ್ಲೇ ಮುಂಚೂಣಿಯಲ್ಲಿದೆ ಎಂದು ಹೇಳಿದರು.

ಇಂಧನ ಯೋಜನೆಗಳು ಜನರು, ಭೂಮಿ ಮತ್ತು ಪರಿಸರ ವ್ಯವಸ್ಥೆಗಳೊಂದಿಗೆ ಆಳವಾಗಿ ಬೆಸೆದುಕೊಂಡಿವೆ. ನವೀಕರಿಸಬಹುದಾದ ಇಂಧನ ಯೋಜನೆಗಳಿಗಾಗಿ ಕೃಷಿ ಭೂಮಿಯನ್ನು ಸುಲಭವಾಗಿ ಗುತ್ತಿಗೆಗೆ ನೀಡಲು ಮತ್ತು ಪರಿವರ್ತಿಸಲು ಅನುವು ಮಾಡಿಕೊಡುವ ಕರ್ನಾಟಕದ ಹೂಡಿಕೆದಾರರ ಸ್ನೇಹಿ ವಿಧಾನವನ್ನು ಅವರು ವಿವರಿಸಿದರು. ಈ ಮೂಲಕ ರೈತರನ್ನು ಭೂಮಿಯಿಂದ ಹೊರಹಾಕುವ ಬದಲು ಅವರನ್ನು ಪಾಲುದಾರರನ್ನಾಗಿ ಮಾಡುವ, ನ್ಯಾಯಯುತ ಮತ್ತು ಸ್ಥಿರ ಆದಾಯವನ್ನು ಖಚಿತಪಡಿಸುವಂತಹ ನಿಯಮಗಳ ಬಗ್ಗೆ ಮಾಹಿತಿ ನೀಡಿದರು.ಭೂಮಿ, ಒಪ್ಪಂದಗಳು ಮತ್ತು ಪರಿಸರದ ಕಾಳಜಿಗಳ ಕಾನೂನು ಸಂಕೀರ್ಣತೆಗಳನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿಗಳು, ಕಾನೂನಿನ ಆಡಳಿತವನ್ನು ಎತ್ತಿಹಿಡಿಯುವಲ್ಲಿ ನ್ಯಾಯಾಂಗದ ಪ್ರಮುಖ ಪಾತ್ರವನ್ನು ಶ್ಲಾಘಿ ಸಿದರು. ಪರಿಸರ ಸಂರಕ್ಷಣೆ ಮತ್ತು ಸಮುದಾಯದ ಹಕ್ಕುಗಳು ಅತಿಮುಖ್ಯವಾದರೂ, ನಿರ್ಣಾಯಕ ಮೂಲಸೌಕರ್ಯ ಯೋಜನೆಗಳು ಅನಗತ್ಯವಾಗಿ ವಿಳಂಬವಾಗದಂತೆ ನೋಡಿಕೊಳ್ಳಲು ವಿಶಾಲವಾದ ಅಭಿವೃದ್ಧಿ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಬೇಕಾದ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಸುಪ್ರೀಂಕೋರ್ಟ್ ಸಿಜೆಐ ಸೂರ್ಯಕಾಂತ್ ಚಾಲನೆ ನೀಡಿದರು. ಸಿಎಂ ಸಿದ್ದರಾಮಯ್ಯ, ಇಂಧನ ಸಚಿವ ಕೆ.ಜೆ.ಜಾರ್ಜ್ ಭಾಗವಹಿಸಿದ್ದರು.

ಸುಸ್ಥಿರ ಇಂಧನ ನೀತಿ ಕೇವಲ ಕಾಗದದ ಮೇಲೆ ಇರಬಾರದು

ಇಂಧನ ಕ್ಷೇತ್ರ ಮತ್ತು ಪರಿಸರ ಸಂರಕ್ಷಣೆಯ ನಡುವಿನ ಸಮತೋಲನದ ಬಗ್ಗೆ ಮಾತನಾಡುತ್ತಾ, ಜಾಗತಿಕ ತಾಪಮಾನ ಏರಿಕೆಯ ಸವಾಲುಗಳನ್ನು ಎದುರಿಸಲು ಕಾನೂನು ವ್ಯವಸ್ಥೆಯು ಚುರುಕಾಗಬೇಕಿದೆ. ಸುಸ್ಥಿರ ಇಂಧನ ನೀತಿಗಳು ಕೇವಲ ಕಾಗದದ ಮೇಲೆ ಇರಬಾರದು; ಅವುಗಳ ಪರಿಣಾಮಕಾರಿ ಜಾರಿಗೆ ನ್ಯಾಯಾಂಗವು ಬೆನ್ನೆಲುಬಾಗಿ ನಿಲ್ಲಲಿದೆ. ತಾಂತ್ರಿಕ ಆವಿಷ್ಕಾರಗಳಿಗೆ ಪೂರಕವಾಗಿ ನಮ್ಮ ಕಾನೂನು ಸಂಹಿತೆಗಳನ್ನು ನಾವು ಕಾಲಕಾಲಕ್ಕೆ ನವೀಕರಿಸಿಕೊಳ್ಳಬೇಕು ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಭಕ್ರು ಅವರು ತಿಳಿಸಿದರು.

> **ಭವಿಷ್ಯದ ಪೀಳಿಗೆಗೆ ಸುಸ್ಥಿರ ಪರಿಸರವನ್ನು ಬಿಟ್ಟು ಹೋಗುವುದು ನಮ್ಮ ಸಾಂವಿಧಾನಿಕ ಜವಾಬ್ದಾರಿ. ಹಸಿರು ಇಂಧನವನ್ನು ಸಾರ್ವತ್ರಿಕಗೊಳಿಸಲು ಮತ್ತು ಸಾಮಾನ್ಯ ಜನರಿಗೆ ಕೈಗೆಟುಕುವಂತೆ ಮಾಡಲು ಇರುವ ಕಾನೂನು ಅಡೆತಡೆಗಳನ್ನು ನಿವಾರಿಸುವುದು ಇಂದಿನ ಸಮ್ಮೇಳನದ ಪ್ರಮುಖ ಗುರಿಯಾಗಬೇಕು. ಅಭಿವೃದ್ಧಿ ಮತ್ತು ಪರಿಸರದ ನಡುವೆ ಒಂದು ಸುಸ್ಥಿರ ಸೇತುವೆಯನ್ನು ನಿರ್ಮಿಸುವುದು ಅನಿವಾರ್ಯ.**
> **-ಡಿ.ಕೆ.ಸಿಂಗ್,ಸಮ್ಮೇಳನದ ಆಯೋಜನಾ ಸಮಿತಿಯ ಅಧ್ಯಕ್ಷ**

ಘನತ್ಯಾಜ್ಯ ನಿರ್ವಹಣೆಗೆ ಎಲ್ಲರೂ ಕೈ ಜೋಡಿಸಿ

ಬೆಂಗಳೂರು: ನಗರದಲ್ಲಿ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು-2026 ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಎಲ್ಲ ಪಾಲುದಾರರ ಸಮನ್ವಯ ಹಾಗೂ ನಾಗರಿಕರ ಸಕ್ರಿಯ ಭಾಗವಹಿಸುವಿಕೆ ಅತ್ಯಗತ್ಯ ಎಂದು ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಕರೀಗೌಡ ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತದ ವತಿಯಿಂದ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು-2026 ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು ಶನಿವಾರ ನಗರದ ಟೌನ್ ಹಾಲ್‌ನಲ್ಲಿ ನಾಗರಿಕರು, ನಿವಾಸಿಗಳ ಕಲ್ಯಾಣ ಸಂಘಗಳು, ಸರಕಾರೇತರ ಸಂಸ್ಥೆಗಳು, ಹೋಟೆಲ್ ಸಂಘಟನೆಗಳು ಹಾಗೂ ಬಿ.ಎಸ್.ಡಬ್ಲ್ಯು.ಎಂ.ಎಲ್‌ನ ಅಧಿಕಾರಿಗಳು ಮತ್ತು ಸಿಬ್ಬಂದಿಗಾಗಿ ಏರ್ಪಡಿಸಿದ್ದ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು.ನಗರದಲ್ಲಿ ರಸ್ತೆ ಬದಿಗಳಲ್ಲಿ ಹಾಗೂ ಖಾಲಿ ಜಾಗಗಳಲ್ಲಿ ಕಸವನ್ನು ಬಿಸಾಡದೆ, ಮನೆ-ಮನೆಗೆ ಭೇಟಿ ನೀಡುವ ಆಟೋ ಟಿಪ್ಪರ್‌ಗಳಿಗೆ ತ್ಯಾಜ್ಯವನ್ನು ನೀಡಬೇಕು.

ಮಿಶ್ರ ತ್ಯಾಜ್ಯವನ್ನು ನೀಡದೆ, ಹಸಿ ಹಾಗೂ ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ವಿಂಗಡಿಸಿ ನೀಡುವಂತೆ ಮನವಿ ಮಾಡಿದರು. ಅಲ್ಲದೆ, ನಗರದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಮೂಲದಲ್ಲಿಯೇ ಸಂಸ್ಕರಿಸಿ ಮರುಬಳಕೆ ಮಾಡಿಕೊಳ್ಳಲು ಎಲ್ಲರೂ ಮುಂದಾಗಬೇಕು. ಮನೆಗಳು, ಬೃಹತ್ ಸಮುಚ್ಚಯಗಳು ಹಾಗೂ ಹೋಟೆಲ್‌ಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಮೂಲದಲ್ಲಿಯೇ ಸಂಸ್ಕರಿಸಿ ಮರುಬಳಕೆ ಮಾಡಲು ಕ್ರಮ ಕೈಗೊಳ್ಳಬೇಕು.

ನಗರದ ದೊಡ್ಡ ಅಪಾರ್ಟ್‌ಮೆಂಟ್‌ಗಳಲ್ಲಿ ಉತ್ಪತ್ತಿಯಾಗುವ ಬೃಹತ್ ಪ್ರಮಾಣದ ತ್ಯಾಜ್ಯವನ್ನು ಹೇಗೆ ವಿಲೇವಾರಿ ಮಾಡಬೇಕು ಎಂಬುದರ ಕುರಿತು ಐದು ನಗರ ಪಾಲಿಕೆಗಳಲ್ಲಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳೊಂದಿಗೆ ಸಭೆಗಳನ್ನು ನಡೆಸಿ ಅಗತ್ಯ ಮಾಹಿತಿಯನ್ನು ನೀಡಲಾಗುವುದು ಎಂದು ತಿಳಿಸಿದರು.

ನಗರದ ಟೌನ್ ಹಾಲ್‌ನಲ್ಲಿ ಏರ್ಪಡಿಸಿದ್ದ ಕಾರ್ಯಾಗಾರಕ್ಕೆ ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಕರೀಗೌಡ ಚಾಲನೆ ನೀಡಿದರು.

ನಾಲ್ಕು ವಿಧಗಳಲ್ಲಿ ತ್ಯಾಜ್ಯದ ವಿಂಗಡಣೆ ಕಡ್ಡಾಯ

- ಹಸಿ ತ್ಯಾಜ್ಯ: ಜೈವಿಕವಾಗಿ ಕರಗುವ ತ್ಯಾಜ್ಯ
- ಒಣ ತ್ಯಾಜ್ಯ: ಮರುಬಳಕೆ ಮಾಡಬಹುದಾದ ತ್ಯಾಜ್ಯ
- ನೈರ್ಮಲ್ಯ ತ್ಯಾಜ್ಯ: ವೈಯಕ್ತಿಕ ನೈರ್ಮಲ್ಯಕ್ಕೆ ಬಳಸಿದ ತ್ಯಾಜ್ಯ
- ವಿಶೇಷ ಕಾಳಜಿಯ ತ್ಯಾಜ್ಯ ವಿಲೇವಾರಿ ವೇಳೆ ವಿಶೇಷ ಎಚ್ಚರಿಕೆ ಅಗತ್ಯವಿರುವ ತ್ಯಾಜ್ಯ

ಮುಖ್ಯ ಕಾರ್ಯಾಚರಣಾಧಿಕಾರಿ ರಮಾಮಣಿ ಮಾತನಾಡಿ, ನಾಗರಿಕರು, ದೊಡ್ಡ ಪ್ರಮಾಣದ ತ್ಯಾಜ್ಯ ಉತ್ಪಾದಕರು, ಸಂಸ್ಕರಣಾ ಘಟಕಗಳು ಹಾಗೂ ಸರಕಾರದ ವಿವಿಧ ಇಲಾಖೆಗಳ ಜವಾಬ್ದಾರಿಗಳ ಕುರಿತು ಪ್ರಾತ್ಯಕ್ಷಿಕೆಗಳ ಮೂಲಕ ಮಾಹಿತಿ ನೀಡಿದರು. ಘನ ತ್ಯಾಜ್ಯ ನಿರ್ವಹಣೆಯನ್ನು ಹೆಚ್ಚು ಸುಗಮ, ವೈಜ್ಞಾನಿಕ ಹಾಗೂ ಪರಿಣಾಮಕಾರಿಯಾಗಿಸಲು 2016ರ ನಿಯಮಗಳನ್ನು ಪರಿಷ್ಕರಿಸಿ ನೂತನ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು-2026 ಅನ್ನು ಜಾರಿಗೆ ತರಲಾಗಿದೆ.

ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಈ ಹೊಸ ನಿಯಮಗಳಡಿ ಹಲವು ಪ್ರಮುಖ ಬದಲಾವಣೆ ತರಲಾಗಿದೆ ಎಂದು ಹೇಳಿದರು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೃಭಾಜನಿನಿ,
ಆಣೆಕಟ್ಟು ಸುರಕ್ಷತಾ ಘಟಕ-2, ಆಲಮಟ್ಟಿ. ದೂರವಾಣಿ: 08426-281027.
ಇ-ಮೇಲ್: dam_division@rediffmail.com
ಸಂ:ಕೃಭಾಜನಿನಿ/ಆವಿಅ/ಪಿಬಿ-1/2025-26/84 ದಿನಾಂಕ:16.04.2026

ಅಲ್ಪಾವಧಿ ಸಂಕ್ಷಿಪ್ತ ಟೆಂಡರ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ ಇಂಡೆಂಟ್ ಸಂಖ್ಯೆಗಳು Item Rate & Percentage basis from the eligible contractors for the work indents of **Two Cover** – (1) I .No. 2782– 25.01 Lakhs (2) I. No. SE0277—135.50 Lakhs ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ-cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ಭರ್ತಿಗೊಳಿಸಿದ ಟೆಂಡರನ್ನು ಸಲ್ಲಿಸುವದು.

1. ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ ದಿನಾಂಕ: **17.04.2026** ರಿಂದ **27.04.2026** ಸಾಯಂಕಾಲ 5.00 ಘಂಟೆಯವರೆಗೆ.
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ **Two Cover: 29.04.2026 ಮುಂಜಾನೆ 11.00 ಘಂಟೆಗೆ.**
3. ಪೂರ್ವಭಾವಿ ಸಭೆ I.No. SE0277—135.50 Lakh **24.04.2026 ಮುಂಜಾನೆ 11.00 ಘಂಟೆಗೆ.**
4. ಆರ್ಥಿಕ ಬಿಡ್ ತೆರೆಯುವ ದಿನಾಂಕ **Two Cover : 04.05.2026 ಮುಂಜಾನೆ 11.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426-281027.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ-2, ಆಲಮಟ್ಟಿ.
ವಾಸಾಸಂಇ/ವಿಜಯಪುರ/41/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ
ಕ್ರಸಂ: /5054 ಕಾಲುಸಂಕ/ಟೆಂಡರ್‌ಅಧಿಸೂಚನೆ:2025-26/196 ದಿನಾಂಕ: 16.04.2026

ಇ-ಟೆಂಡರ್ ಅಧಿಸೂಚನೆ IFT-KW-2
ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಅಲ್ಪಾವಧಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ-ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ಈ ಕೆಳಕಾಣಿಸಿದಂತೆ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ kppp. karnataka. gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ. ಒಟ್ಟು 3 ಕಾಮಗಾರಿಗಳು

(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 27-04-2026 (16.00 ಗಂಟೆಗೆ) (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 28-04-2026 (16.00 ಗಂಟೆವರೆಗೆ) (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 29-04-2026 (16.30 ಗಂಟೆವರೆಗೆ)

ಸಹಿ/- (ಎಸ್.ಎನ್. ಸಿದ್ದಾಪೂರ)
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ
ಶಿರಸಿ (ಉತ್ತರ ಕನ್ನಡ ಜಿಲ್ಲೆ)
DIPR/KWR/KSMCA/59/26-27 dt. 18.04.2026

ಜಿಲ್ಲಾ ಪಂಚಾಯತ್, ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ-ಮಧುಗಿರಿ

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 01/2025-26
ದಿನಾಂಕ: 13.04.2026

ಕರ್ನಾಟಕ ರಾಜ್ಯಪಾಲರ ಪರವಾಗಿ **ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ ವ್ಯಾಪ್ತಿಯ** ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ಅನ್ನು ಕರೆಯಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಾಗಿ ಅರ್ಹ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇಂಡೆಂಟ್ ಸಂಖ್ಯೆ: 25854, 25853, 25850, 25851, 25855, 25856, 25858, 25860, 25847, 25842, 25849, 25846, 25859, 25857, 25864, 25832, 25771, 25036, 25035, 25034, 24604, 25471, 25459, 25669, 25670, 25757, 22074, 22825, 24114, 26074, 25758, 26105 ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಅರ್ಜಿಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು ದಿನಾಂಕ 13-04-2026 ರಿಂದ 27-04-2026ರಂದು ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: 080-25501216, 080-25501227 ರಲ್ಲಿ ಸಂಪರ್ಕಿಸಲು ಹಾಗೂ ವೆಬ್‌ಸೈಟ್ http://www.eproc. karnataka. gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ.ವಿಭಾಗ, ಮಧುಗಿರಿ
DIPR/TUM/25/KSMCA/2026-27

ಪುರಸಭಾ ಕಾರ್ಯಾಲಯ, ಬೇಲೂರು
E-mail: itstaff_ulb_belur@yahoo.co.in,
townmunicipal.belur@gmail.com ದೂರವಾಣಿ: 08177-222221
ಸಂಖ್ಯೆ: ಪು.ಬೇ/ಜೆ.ಇ/ಟೆಂಡರ್-04/CALL-3/2025-26
ದಿನಾಂಕ:13.04.2026

ಮರು ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಮಾನ್ಯ ಮುಖ್ಯ ಮಂತ್ರಿಗಳ ವಿವೇಚನಾ ನಿಧಿಯಡಿ ಎಸ್.ಎಫ್.ಸಿ. ವಿಶೇಷ ಅನುದಾನ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಸಿವಿಲ್ ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮರು ಟೆಂಡರ್‌ನ ವೇಳಾಪಟ್ಟಿ ವಿವರ ಕೆಳಗಿನಂತಿದೆ 1)ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: ದಿನಾಂಕ: 30.04.2026 ಸಂಜೆ 5.30 ಗಂಟೆಗೆ 2)ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ: ದಿನಾಂಕ: 02.05.2026 ಬೆಳಿಗ್ಗೆ 11.30 ಗಂಟೆಗೆ 3)ಆರ್ಥಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ: ದಿನಾಂಕ: 05.05.2026 ಬೆಳಿಗ್ಗೆ 11.30 ಗಂಟೆಗೆ 4)ಕೆಲಸ ಮುಗಿಸಲು ಕಾಲಾವಧಿ: 06 ತಿಂಗಳು (ಮಳೆಗಾಲ ಹೊರತುಪಡಿಸಿ) (ಟೆಂಡರ್‌ನ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಪ್ರಚುರ ಪಡಿಸಲಾಗುವುದು) ಕ್ರ.ಸಂ ಕಾಮಗಾರಿ ವಿವರ 1)DMA/2025-26/RD/WORK_INDENT54255/CALL-3 ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)83,41,350/- ಇ.ಎಂ.ಡಿ. ಮೊತ್ತ 2,10,000/- ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕಾಮಗಾರಿ ಶಾಖೆಯಲ್ಲಿ ಕೆಲಸದ ವೇಳೆಯಲ್ಲಿ ಮತ್ತು http://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-ಅಧ್ಯಕ್ಷರು, ಪುರಸಭೆ, ಬೇಲೂರು
ಸಹಿ/-(ಬಸವರಾಜು ಟಾಕಪ್ಪ ಶಿಗ್ಗಾಂವಿ) ಕೆ.ಎಂ.ಎ.ಎಸ್ ಮು-ಶ್ರೇಣಿ-1 ಮುಖ್ಯಾಧಿಕಾರಿ, ಪುರಸಭೆ, ಬೇಲೂರು
ವಾಸಾಸಂಇ/ಹಿಸನಿ/ಹಾಸನ/43/ಕೆಎಸ್‌ಎಂಸಿಎ/2026-27

ದಿಲ್ಲಿಯಲ್ಲಿ ಮತ್ತೊಂದು ಸ್ಫೋಟಕ್ಕೆ ಸಂಚು: ನಾಲ್ವರು ಉಗ್ರರ ಬಂಧನ

← ಮೊದಲಪುಟದಿಂದ

ಆರೋಪಿಗಳಲ್ಲಿ ಒಬ್ಬ ತನ್ನ ಅನುಯಾಯಿಗಳನ್ನುಮತಾಂಧರನ್ನಾಗಿ ಮಾಡಲು ಮತ್ತು ಗುರಿಯ ಸಂಕೇತವಾಗಿ ಕಪ್ಪು ಧ್ವಜದೊಂದಿಗೆ ಕೆಂಪು ಕೋಟೆಯ ಚಿತ್ರವನ್ನು ಹಂಚಿಕೊಂಡಿದ್ದಾನೆ ಆರೋಪಿಸಲಾಗಿದೆ.

ಮತ್ತೊಬ್ಬ ಆರೋಪಿ ಡಿಸೆಂಬರ್ 2025ರಲ್ಲಿ ದೆಹಲಿಗೆ ಭೇಟಿ ನೀಡಿದ್ದು, ಕೆಂಪು ಕೋಟೆ ಮತ್ತು ಇಂಡಿಯಾ ಗೇಟ್ ಸೇರಿದಂತೆ ಪ್ರಮುಖ ಸ್ಥಳಗಳನ್ನು ಪರಿಶೀಲಿಸಿದ್ದ ಎಂಬುದು ತನಿಖೆಯಿಂದ ತಿಳಿದುಬಂದಿದೆ. ಅಯೋಧ್ಯೆಯ ರಾಮ ಮಂದಿರ, ಸಂಸತ್ತು ಮತ್ತು ಕೆಲವು ಸೇನಾ ನೆಲೆಗಳ ಮೇಲೆ ಸಂಭಾವ್ಯ ದಾಳಿಗಳ ಬಗ್ಗೆ ಚರ್ಚಿಸಿದ್ದಾನೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ. ಜನರಲ್ಲಿ ಭೀತಿ ಹುಟ್ಟಿಸಿಮತ್ತು ಮಾನಸಿಕವಾಗಿ ಕುಗ್ಗಿಸಲು ಜನದಟ್ಟಣೆಯ ಸಾರ್ವಜನಿಕ ಸ್ಥಳಗಳು ಮತ್ತು ಪಾರಂಪರಿಕ ಕಟ್ಟಡಗಳ ಮೇಲೆ ದಾಳಿ ನಡೆಸಲು ಈ ಗುಂಪು ಸಂಚು ರೂಪಿಸಿತು ಎಂದು ಭದ್ರತಾ ಪಡೆಗಳು ಹೇಳಿವೆ.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ
No.EE/MID/VJP/AE-1,4/4702 & 4711/TND/2026-27/167 **Date:17.04.2026**

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ-ಪ್ರೋಕ್ಯುರಮೆಂಟ್" ಮುಖಾಂತರ ಟೆಂಡರ ಕರೆಯಲಾಗಿದೆ.

4702 ಪ್ರಧಾನ ಕಾಮಗಾರಿಗಳು :- ಒಟ್ಟು 1 ಕಾಮಗಾರಿ(3ನೇ ಕರೆ), ಟೆಂಡರಿಗಿಟ್ಟ ಮೊತ್ತ **ರೂ.451.77ಲಕ್ಷಗಳು, ಕಾಮಗಾರಿಯನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಹನ್ನೊಂದು(11) ತಿಂಗಳುಗಳು.**

4711 ಪ್ರವಾಹ ಸಂರಕ್ಷಣಾ ಕಾಮಗಾರಿಗಳು :- ಒಟ್ಟು 1 ಕಾಮಗಾರಿ, ಟೆಂಡರಿಗಿಟ್ಟ ಮೊತ್ತ **ರೂ.24.21ಲಕ್ಷಗಳು, ಕಾಮಗಾರಿಯನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳು.**

4702 ಎಸ್.ಸಿ.ಪಿ. ಕಾಮಗಾರಿಗಳು :- ಒಟ್ಟು 8 ಕಾಮಗಾರಿಗಳು, ಟೆಂಡರಿಗಿಟ್ಟ ಮೊತ್ತ **ರೂ.492.51ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳುಗಳಿಂದ ಹನ್ನೊಂದು(11) ತಿಂಗಳುಗಳು.**

ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ-ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ: **18.04.2026** ರಿಂದ Download ಮಾಡಿಕೊಳ್ಳಬಹುದು. ಟೆಂಡರಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ (ವೆಬ್‌ಸೈಟನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ ಮಾತ್ರ) "ಇ-ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ: **27.04.2026** ರ 17-30 ಘಂಟೆವರೆಗೆ ಸ್ವೀಕರಿಸಲಾಗುವದು. ದಿನಾಂಕ: **22.04.2026** ರಂದು ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ ಇವರ ಕಛೇರಿಯಲ್ಲಿ ರೂ.1.00 ಕೋಟಿ ಮೀರಿದ ಕಾಮಗಾರಿಗಳಿಗೆ ಪ್ರಿ-ಬಿಡ್ ಸಭೆಯನ್ನು ಆಯೋಜಿಸಲಾಗಿದ್ದು ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆಯಲು ಆಸಕ್ತಿಯುಳ್ಳ ಗುತ್ತಿಗೆದಾರರು ಹಾಜರಾಗಿ ಪಡೆಯಬಹುದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು ದಿನಾಂಕ: **24.04.2026** ರ 17-30 ಘಂಟೆವರೆಗೆ ವಿಭಾಗ ಕಛೇರಿಯಲ್ಲಿ ಅಥವಾ "ಇ-ಪ್ರೋಕ್ಯುರಮೆಂಟ್" ಹೆಲ್ಪ ಡೆಸ್ಕನಿಂದ(ಫೋನಃ-080-25501216 ಮತ್ತು 080-25501227) ಪಡೆಯಬಹುದು ಹಾಗೂ ಟೆಂಡರಗಳನ್ನು ಜಿ.ಎಸ್.ಟಿ. ಹೊರತುಪಡಿಸಿ ಸಲ್ಲಿಸುವುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ. ಮತ್ತು ಅಂ.ಅ.ಇಲಾಖೆ, ವಿಭಾಗ ವಿಜಯಪುರ
ವಾಸಾಸಂಇ/ವಿಜಯಪುರ/48/ಕೆಎಸ್‌ಎಂಸಿಎ/2026-27

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ:ಬೆಂಅಪ್ರಾ/ನಯೋಸ/CLU-491/25-26/285/2026-27 ದಿನಾಂಕ: 18.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಎಂ.ಅಶೋಕ್ ಮತ್ತು ಇತರರು	ಆನೇಕಲ್	ಸರ್ಜಾಪುರ	ನೆಕ್ಕುಂದಿ ದೊಮ್ಮಸಂದ್ರ	64/1	0-04	ವ್ಯವಸಾಯ	ವಸತಿ
2					64/2	0-15		
3					64/3ರ ಪೈಕಿ	0-05		
4					64/5ರ ಪೈಕಿ	0-08.50		
5					79/3	0-09		
6					79/4	0-03		
7					79/5	0-05		
8					79/6	0-03		
9					79/8	0-19		
10					79/9ರ ಪೈಕಿ	0-12		
11					79/10	0-06		
12					79/11	0-05.75		
13					79/12	0-04		
					ಒಟ್ಟು	**2-19.25**		

ಷರಾ: ಪ್ರಶ್ನಿತ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ಈ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಮತ್ತು ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ, 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.
ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಕಾರ್ಯದರ್ಶಿಗಳ ಕಾರ್ಯಾಲಯ, ಚಾಮುಂಡಿಬೆಟ್ಟ, ಮೈಸೂರು-570010
ದೂ. ಸಂಖ್ಯೆ : 0821-2590027, ಫ್ಯಾಕ್ಸ್: 0821/2590082, ಇ-ಮೇಲ್: eochamunditemple@gmail.com
ಪತ್ರ ಸಂಖ್ಯೆ:ಶ್ರೀಚಾಕ್ಷೇಅಪ್ರಾ(5)ಸಿಆರ್: /2026-27 ದಿನಾಂಕ: 16.04.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ call-2
ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ (ದ್ವಿಲಕೋಟೆ)

ಮೈಸೂರು ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಕಛೇರಿಯಿಂದ ಸೂಚಿತ ಅವಧಿಗೆ ಈ ಕೆಳಕಂಡ ವಿವಿಧ ಬಾಬ್ತುಗಳಿಗೆ ಮರು ಟೆಂಡರ್ ಕರೆಯಲಾಗಿದೆ. ಆಸಕ್ತರು ಟೆಂಡರ್ ನಮೂನೆಯನ್ನು ಇ-ಪ್ರೊಕ್ಯೂರ್‌ಮೆಂಟ್ **(https://kppp.karnataka.gov.in)** ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ದಾಖಲೆಯಲ್ಲಿ ತಿಳಿಸಿರುವಂತೆ (Technical qualification criteria)ದ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಈ ಕೆಳಕಂಡಂತೆ ನಿಗದಿಪಡಿಸಿದ ಇ.ಎಂ.ಡಿ.ಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರು ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು, ಇ.ಎಂ.ಡಿ.ಯು ಟೆಂಡರಿನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 45 ದಿನಗಳ ನಂತರದ ವರೆಗೆ ಮಾನ್ಯತೆ ಇರತಕ್ಕದ್ದು, ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಕ್ರ. ಸಂ	ವಿವರ	ಅಂದಾಜು ಮೊತ್ತ (ರೂ.)	ಇಎಂಡಿ ಮೊತ್ತ (ರೂ.ಗಳಲ್ಲಿ)
1	ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳಿಗೆ ನಿತ್ಯ ಅನ್ನದಾಸೋಹ, ಹಾಗೂ ದೇವಸ್ಥಾನದ ದಿನ ನಿತ್ಯದ ಬಳಕೆಗೆ ಅಗತ್ಯವಾಗಿ ಬೇಕಾದ ದಿನಸಿ ಸಾಮಾಗ್ರಿಗಳ ಸರಬರಾಜು. (12 ತಿಂಗಳ ಅವಧಿಗೆ).	1,49,63,064	3,00,000
2	ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳಿಗೆ ಲಾಡು ಪ್ರಸಾದ ತಯಾರಿಕೆಗೆ ಆಗತ್ಯವಾಗಿ ಬೇಕಾದ ದಿನಸಿ ಸಾಮಾಗ್ರಿಗಳ ಸರಬರಾಜು. (12 ತಿಂಗಳ ಅವಧಿಗೆ)	3,99,27,300	8,00,000

ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ.

ಕ್ರ.ಸಂ	ವಿವರ	ದಿನಾಂಕಗಳು	ಸಮಯ
1	ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವುದು	ದಿ: 17.04.2026	ರ ಬೆಳಿಗ್ಗೆ 11.00 ಗಂಟೆ ನಂತರ
2	ಪ್ರೀಬಿಡ್ಡಿಂಗ್ ಕಾರ್ಯದರ್ಶಿಗಳ ಕಛೇರಿ	ದಿ: 23.04.2026	ಮಧ್ಯಾಹ್ನ 12 ಗಂಟೆಗೆ
3	ಟೆಂಡರ್‌ಗೆ ಸಂಬಂಧಿಸಿದ ವಿಚಾರಣೆಗೆ	ದಿ: 23.04.2026	ಸಂಜೆ 5 ಗಂಟೆಯವರೆಗೆ
4	ಟೆಂಡರ್ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ.	ದಿ: 25.04.2026	ರ ಸಂಜೆ 5.00 ಗಂಟೆ ವರೆಗೆ
5	ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ:	ದಿ: 26.04.2026	ರ ಬೆಳಿಗ್ಗೆ 11.00 ಗಂಟೆ ನಂತರ
6	ಹಣಕಾಸಿನ ಟೆಂಡರ್‌ನ್ನು ತೆರೆಯುವ ದಿನಾಂಕ:	ದಿ: 28.04.2026	ರ ಬೆಳಿಗ್ಗೆ 11.00 ಗಂಟೆ ನಂತರ

ಸಹಿ/- ಕಾರ್ಯದರ್ಶಿ
ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಚಾಮುಂಡಿಬೆಟ್ಟ
ವಾಸಾಸಂಇ/ಮೈಸೂರು/71/ಎಸ್‌ಎಸ್‌ಸಿ/2026-27

ದಕ್ಷಿಣ ಭಾರತದಲ್ಲಿ ಸುಪ್ರೀಂ ಪೀಠಕ್ಕೆ ಸಿಎಂ ಸಿದ್ದು ಮನವಿ

← ಮೊದಲಪುಟದಿಂದ

ದಕ್ಷಿಣ ಭಾರತದಲ್ಲಿ ಸುಪ್ರೀಂಕೋರ್ಟ್ ಪೀಠ ಸ್ಥಾಪನೆಯಾದರೆ ನ್ಯಾಯವನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಬಹು ದೊಡ್ಡ ಹೆಜ್ಜೆಯನ್ನು ಇರಿಸಿದಂತಾಗುತ್ತದೆ. ಈ ಪಯಣದಲ್ಲಿ ನ್ಯಾಯಾಂಗಕ್ಕೆ ಅದರ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಗೌರವಿಸುತ್ತಲೇ ಅದಕ್ಕೆ ಬೆಂಬಲ ನೀಡುವುದು, ಸಕ್ರಿಯಗೊಳಿಸುವುದು ಮತ್ತು ಬಲಪಡಿಸುವುದು ಆಡಳಿತದ ಪಾತ್ರವಾಗಿರುತ್ತದೆ ಎಂದು ಪ್ರತಿಪಾದಿಸಿದರು.

ಪ್ರಸಕ್ತ ಕಾಲಘಟ್ಟದಲ್ಲಿ ಕಾನೂನು ಮತ್ತು ತಂತ್ರಜ್ಞಾನವು ಪ್ರತ್ಯೇಕ ಕ್ಷೇತ್ರಗಳಾಗಿ ಉಳಿದಿಲ್ಲ. ಈಗ ಮುಂದುವರಿದು ನ್ಯಾಯಾಂಗ ಕ್ಷೇತ್ರಕ್ಕೆ ಕೃತಕ ಬುದ್ಧಿಮತ್ತೆಯ ಪ್ರವೇಶವಾಗಿದೆ. ಅದರಿಂದಾಗಿ ಆಡಳಿತ, ಹಕ್ಕುಗಳು ಮತ್ತು ನ್ಯಾಯದ ಸ್ವರೂಪವನ್ನು ರೂಪಿಸುವ ಪರಸ್ಪರ ಸಂಬಂಧ ಹೊಂದಿರುವ ಶಕ್ತಿಗಳ ನಡುವೆ ನಿರ್ಣಾಯಕ ಹಂತದಲ್ಲಿ ನಾವು ಇಂದು ನಿಂತಿದ್ದೇವೆ. ನ್ಯಾಯಾಂಗ ಮೂಲ ಸೌಕರ್ಯ, ಡಿಜಿಟಲ್ ಪರಿವರ್ತನೆ, ನಾವೀನ್ಯತೆ ಹಾಗೂ ನ್ಯಾಯದಾನವು ಒಟ್ಟಾಗಿ ಪ್ರಗತಿ ಹೊಂದಲು ಸೂಕ್ತವಾದ ಪರಿಸರ ವ್ಯವಸ್ಥೆಯನ್ನು ಸೃಷ್ಟಿಸಲು ಕರ್ನಾಟಕ ಸರಕಾರವು ಬದ್ಧವಾಗಿದೆ ಎಂದರು.

ನ್ಯಾಯದಾನ ವ್ಯವಸ್ಥೆಗೆ ವೇಗ ಮತ್ತು ಪ್ರವೇಶವನ್ನು ಒದಗಿಸಲು ಕರ್ನಾಟಕದಲ್ಲಿ ನಾವು ಖಚಿತ ಸುಧಾರಣೆಗಳನ್ನು ಕೈಗೊಂಡಿದ್ದೇವೆ. ಕಾಲಬದ್ಧ ಪ್ರಕರಣ ನಿರ್ವಹಣೆ, ಸರಹದ್ದುಗಳ ಪುನರ್ ರಚನೆಯ ಮೂಲಕ ಉಚ್ಚ ನ್ಯಾಯಾಲಯಗಳ ಹೊರೆಯನ್ನು ತಗ್ಗಿಸುವುದು ಹಾಗೂ ಸರಕಾರಿ ವ್ಯಾಜ್ಯ ಅಭ್ಯಾಸಗಳನ್ನು ಬಲಪಡಿಸಲಾಗುತ್ತಿದೆ. ಆದರೂ, ಇದೇ ಸಮಯದಲ್ಲಿ ನ್ಯಾಯಾಂಗ ವ್ಯವಸ್ಥೆಯಲ್ಲಿ ಕೃತಕ ಬುದ್ಧಿಮತ್ತೆ ಅಳವಡಿಸಿಕೊಳ್ಳುವುದರ ಕುರಿತು ಆಳವಾದ ಕಳವಳಗಳು ಮೂಡದೇ ಇರಲಾರದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ನಮ್ಮ ಪ್ರಜಾಪ್ರಭುತ್ವದ ಮೂಲಾಧಾರವಾಗಿರುವ ನ್ಯಾಯಾಂಗ ಸ್ವಾತಂತ್ರ್ಯವನ್ನು ಬಾಹ್ಯ ಒತ್ತಡಗಳಿಂದ ಮಾತ್ರವಲ್ಲದೆ ಸೂಕ್ಷ್ಮ ತಾಂತ್ರಿಕ ಅವಲಂಬನೆಯಿಂದಲೂ ಸಂರಕ್ಷಿಸುವ ಹೊಣೆಗಾರಿಕೆ ನಮ್ಮ ಮೇಲಿದೆ. ನ್ಯಾಯಾಧೀಶರ ಅಧಿಕಾರವನ್ನು ಎಂದಿಗೂ ಅಲ್ಗಾರಿದಮ್ ಅಧಿಕಾರವು ಮರೆಮಾಚಬಾರದು. ಸಾಂವಿಧಾನಿಕ ನೈತಿಕತೆಯು ನೈಸರ್ಗಿಕ ಭಾವನೆಯಲ್ಲ, ಅದನ್ನು ಬೆಳೆಸಿಕೊಳ್ಳಬೇಕು ಎಂದು ಡಾ.ಬಿ.ಆರ್. ಅಂಬೇಡ್ಕರ್ ನಮಗೆ ನೆನಪಿಸಿದ್ದರು. ಸಾಂವಿಧಾನಿಕ ಮೌಲ್ಯಗಳು ತಾಂತ್ರಿಕ ಅಳವಡಿಕೆಗೆ ಮಾರ್ಗದರ್ಶನ ನೀಡುತ್ತವೆಯೇ ಹೊರತು ಅದೇ ಪರ್ಯಾಯವಲ್ಲ ಎಂಬುದನ್ನು ಮನಗಾಣಬೇಕು ಎಂದರು.

ಎಐ ನಿಂದ ಸವಾಲುಗಳು

ಕೃತಕ ಬುದ್ಧಿಮತ್ತೆಯ ಸಾಕ್ಷಿ, ಪುರಾವೆಗಳು ನಮ್ಮ ಕಾನೂನು ವ್ಯವಸ್ಥೆಗೆ ಹೊಸ ಸವಾಲುಗಳನ್ನು ಒಡ್ಡುತ್ತಿವೆ. ಡೀಪ್‌ಫೇಕ್ ಡಿಜಿಟಲ್ ಯುಗದಲ್ಲಿ ವಿಶ್ವಾಸಾರ್ಹ ಸಾಕ್ಷಿಗಳು ಯಾವುವು ಎಂಬುದನ್ನು ನಿರ್ಧರಿಸಲು ನ್ಯಾಯಾಲಯಗಳ ಅಗತ್ಯ ಹೆಚ್ಚುತ್ತಿದೆ. ಹಾಗೆ ಮಾಡುವಾಗ, ಸತ್ಯವು ಕೇವಲ ತಾಂತ್ರಿಕ ಅತ್ಯಾಧುನಿಕತೆಯಲ್ಲಿ ಅಲ್ಲ, ಪರಿಶೀಲನೆ ಮತ್ತು ಸಮಗ್ರತೆಯ ಮೇಲೆ ಆಧಾರಿತವಾಗಿದೆ ಎಂದು ನಾವು ಖಚಿತಪಡಿಸಿಕೊಳ್ಳಬೇಕು. ಭಾರತದಲ್ಲಿ ಕೃತಕ ಬುದ್ಧಿಮತ್ತೆಗಾಗಿ ನಿಯಂತ್ರಕ ಚೌಕಟ್ಟನ್ನು ರೂಪಿಸುವಲ್ಲಿ ನ್ಯಾಯಾಂಗವು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಸರಿಯಾದ ಪ್ರಕ್ರಿಯೆ, ಅನುಪಾತ ಮತ್ತು ಗೌಪ್ಯತೆಯ ಹಕ್ಕಿನ ಸಂರಕ್ಷಣೆಯಂತಹ ಸುಸ್ಥಾಪಿತ ಸಾಂವಿಧಾನಿಕ ಸಿದ್ಧಾಂತಗಳ ಮೂಲಕ ಕೃತಕ ಬುದ್ಧಿಮತ್ತೆಯ ಪರಿಧಿಯನ್ನು ನಿರ್ಧರಿಸಬೇಕಿದೆ. ನ್ಯಾಯಾಂಗವು ತಂತ್ರಜ್ಞಾನದ ಬಳಕೆದಾರ ಮಾತ್ರವಲ್ಲದೆ ಸಮಾಜದಲ್ಲಿ ಅದರ ನಿಯೋಜನೆಗೆ ಮಾರ್ಗದರ್ಶನ ನೀಡುವ ನೈತಿಕ ದಿಕ್ಸೂಚಿಯೂ ಆಗಿದೆ ಎಂದು ಹೇಳಿದ್ದಾರೆ.

ನ್ಯಾಯದಾನ ವ್ಯವಸ್ಥೆ ಬಲಪಡಿಸಲು ಆಡಳಿತವು ಪಾಲುದಾರನಾಗಿ ಕೆಲಸ ಮಾಡಬೇಕೇ ಹೊರತು ಅದನ್ನು ಒತ್ತುವರಿ ಮಾಡುವಂತಾಗಬಾರದು. ನ್ಯಾಯ ಎನ್ನುವುದು ಕೇವಲ ಹೊಂದುವುದಲ್ಲ, ಬದಲಿಗೆ ಎತ್ತಿ ಹಿಡಿಯಬೇಕಾದ ನೈತಿಕ ಜವಾಬ್ದಾರಿ ಎಂಬ ಮೂಲ ಸತ್ಯವನ್ನು ನಾವು ಎಂದಿಗೂ ಮರೆಯಬಾರದು.
-ಸಿದ್ದರಾಮಯ್ಯ, ಮುಖ್ಯಮಂತ್ರಿ

ಇಂಡಿ ಕೂಟದಿಂದ ಮೀಸಲು ಭ್ರೂಣಹತ್ಯೆ: ಮೋದಿ ಕೆಂಡ

ಆದರೆ ವಿಪಕ್ಷಗಳು ಮಹಿಳಾ ಧ್ವನಿಯನ್ನು ಹತ್ತಿಕ್ಕುವ ಉದ್ದೇಶದಿಂದ ಈ ಮಸೂದೆಯನ್ನು ವಿಫಲಗೊಳಿಸಿದವು ಎಂದು ಪ್ರಧಾನಿ ಮೋದಿ ಆರೋಪಿಸಿದರು.

ನಿನ್ನೆ ಲೋಕ ಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆಗೆ ಸೋಲು ಆಗಿದ್ದನ್ನು ಇಲ್ಲಿ ಸ್ಮರಿಸಬಹುದು.

ತಮ್ಮ ಭಾಷಣದುದ್ದಕ್ಕೂ ವಿಪಕ್ಷಗಳ ವಿರುದ್ಧ ಅದರಲ್ಲೂ ಕಾಂಗ್ರೆಸ್ ವಿರುದ್ಧ ಕಿಡಿಕಾರಿದ ಪ್ರಧಾನಿ ಮೋದಿ, ಕಾಂಗ್ರೆಸ್ ತನ್ನ ಪರಿವಾರದ ಮಹಿಳಾ ಸದಸ್ಯರನ್ನು ಹೊರತುಪಡಿಸಿ ಬೇರೆ ಯಾವುದೇ ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ತಮ್ಮ ಅಸ್ತಿತ್ವ ಕಂಡುಕೊಳ್ಳುವುದನ್ನು ಬಯಸುವುದಿಲ್ಲ. ಕಾಂಗ್ರೆಸ್ ಸುಧಾರಣಾ ವಿರೋಧಿ ಪಕ್ಷವಾಗಿದೆ ಎಂದು ಪ್ರಧಾನಿ ಮೋದಿ ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ತೃತೀಯ ಭಾಷೆಗೆ ಗ್ರೇಡ್ ಬದಲು ಅಂಕ ಆದೇಶ ಮರುಪರಿಶೀಲನೆ ಕೋರಿ ಅರ್ಜಿ

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ (ಕೆಎಸ್‌ಇಎಬಿ) ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಗ್ರೇಡ್ ಬದಲಿಗೆ ಅಂಕ ನೀಡಲು ನಿರ್ದೇಶಿಸಿ ಹೊರಡಿಸಿರುವ ಆದೇಶ ಮರು ಪರಿಶೀಲಿಸುವಂತೆ ಕೋರಿ ರಾಜ್ಯ ಸರಕಾರವು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ರಾಜ್ಯ ಸರಕಾರ ಮರುಪರಿಶೀಲನಾ ಅರ್ಜಿ ಸಲ್ಲಿಸಿದ್ದು, ತುರ್ತಾಗಿ ವಿಚಾರಣೆ ನಡೆಸುವಂತೆ ನ್ಯಾಯಮೂರ್ತಿ ಇ.ಎಸ್. ಇಂದಿರೇಶ್ ಅವರ ಏಕಸದಸ್ಯ ಪೀಠಕ್ಕೆ ಕೋರಲು ಸಿದ್ಧತೆ ನಡೆಸಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆ ಮತ್ತು ಎನ್‌ಎಸ್‌ಕ್ಯೂಎಫ್ (ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು)ವಿಷಯಗಳಿಗೆ ಅಂಕದ ಬದಲು ಗ್ರೇಡ್ ನೀಡುವುದಾಗಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಪರೀಕ್ಷೆ ನಡೆಯುತ್ತಿದ್ದ ಸಂದರ್ಭದಲ್ಲಿ (ಮಾರ್ಚ್ 28) ಪ್ರಕಟಿಸಿದ್ದರು. ಆ ಕ್ರಮ ಪ್ರಶ್ನಿಸಿ ಚಿಕ್ಕಮಗಳೂರಿನ ಸಹನಾ ಆರ್ ನಾಯ್ಕ್, ಉಡುಪಿಯ ಅನುಷಾ ಮತ್ತು ಸುಧೀಕ್ಷಾ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಆ ಅರ್ಜಿಯನ್ನು ಏಪ್ರಿಲ್ 15ರಂದು ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಇ ಎಸ್ ಇಂದಿರೇಶ್ ಅವರ ಪೀಠವು 2025-26ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಅಧಿಸೂಚನೆ ಹೊರಡಿಸಿದ ಸಂದರ್ಭದಲ್ಲಿ ಚಾಲ್ತಿಯಲ್ಲಿದ್ದ ನಿಯಮದಂತೆ ಮೌಲ್ಯಮಾಪನ ನಡೆಸಬೇಕು. ಹಿಂದಿ ಸೇರಿ ತೃತೀಯ ಭಾಷೆಗಳ ವಿಷಯಗಳಿಗೆ ಗ್ರೇಡ್ ಬದಲಾಗಿ ಅಂಕ ನೀಡಬೇಕು ಎಂದು ರಾಜ್ಯ ಸರಕಾರಕ್ಕೆ ನಿರ್ದೇಶಿಸಿ, ಅರ್ಜಿ ಇತ್ಯರ್ಥ ಮಾಡಿತ್ತು.

ಈ ಆದೇಶ ಮರು ಪರಿಶೀಲಿಸುವಂತೆ ಕೋರಿ ಹೈಕೋರ್ಟ್‌ಗೆ ಸರಕಾರವು ಶುಕ್ರವಾರ ಮರು ಪರಿಶೀಲನಾ ಅರ್ಜಿ ಸಲ್ಲಿಸಿದೆ. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (ಕೆಎಸ್‌ಇಎಬಿ) ನಿಯಮಗಳಿಗೆ ತಿದ್ದುಪಡಿ ತರಲು ಈಗಾಗಲೇ ಕರಡು ಅಧಿಸೂಚನೆಯನ್ನು ಏಪ್ರಿಲ್ 10ರಂದು ರಾಜ್ಯ ಸರಕಾರ ತನ್ನ ವಿಶೇಷ ಗೆಜೆಟ್‌ನಲ್ಲಿ ಪ್ರಕಟಿಸಿದೆ. ಈ ಅಂಶವನ್ನು ಅರ್ಜಿದಾರರು ನ್ಯಾಯಾಲಯದ ಗಮನಕ್ಕೆ ತರದೇ ಆದೇಶ ಪಡೆದುಕೊಂಡಿದ್ದಾರೆ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್‌ನ ವಿಭಾಗೀಯ ಪೀಠ ಈಗಾಗಲೇ ವಜಾಗೊಳಿಸಿ, ಅರ್ಜಿದಾರರಿಗೆ ಒಂದು ಲಕ್ಷ ರೂಪಾಯಿ ದಂಡ ವಿಧಿಸಿತ್ತು. ಈ ವಿಷಯವನ್ನು ಪ್ರಸ್ತುತ ಅರ್ಜಿದಾರರು ನ್ಯಾಯಾಲಯದ ಗಮನಕ್ಕೆ ತರದೆ ಸತ್ಯಾಂಶ ಮರೆಮಾಚಿದ್ದಾರೆ ಎಂದು ಸರಕಾರ ತನ್ನ ಮರು ಪರಿಶೀಲನಾ ಅರ್ಜಿಯಲ್ಲಿ ಪ್ರತಿಪಾದಿಸಿದೆ.

ಕರ್ನಾಟಕ ಸರ್ಕಾರ
ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್.
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವಾವಿದ್ಯಾಲಯ, ಕರ್ನಾಟಕ ಬೆಂಗಳೂರು ರವರಿಗೆ ಸಂಯೋಜನೆಗೊಂಡಿದ್ದು, ಭಾರತ ಸರ್ಕಾರ ನವದೆಹಲಿ ರವರಿಂದ ಅಂಗೀಕೃತಗೊಂಡಿರುತ್ತದೆ.
ದೂರವಾಣಿ ಸಂಖ್ಯೆ : 08482-228366 & ಫ್ಯಾಕ್ಸ್ : 08482-240322
Website : www.bimsbidar.karnataka.gov.in & E-mail Id : directorbrimsbidar2007@gmail.com
ಸಂಖ್ಯೆ : ಬೀವೈವಿಸಂ/ಟೆಂಡರ್/ವಾರ್ತಾ ಪತ್ರಿಕೆ/ಸಿಆರ್- /2026-27 ದಿನಾಂಕ : 18-04-2026

ಟೆಂಡರ್ ಪ್ರಕಟಣೆ

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ್ ಆಸ್ಪತ್ರೆ ಬೀದರ್ 2026-27 ನೇ ಸಾಲಿಗೆ ಬೇಕಾಗಿರುವ Supply of Tablets, Injections, Disposables and Liquid ointments and powders, IV Fluids & Sutures and Chemicals & Reagents to Brims Bidar ಗಳ ಸರಬರಾಜುವಿಗಾಗಿ ಇ-ಟೆಂಡರ್ ಕರೆಯಲಾಗಿದೆ. ಇಚ್ಚೆಯುಳ್ಳ ಏಜೇನ್ಸಿಯವರು ದಿನಾಂಕ: 15-05-2026 ರ ವರೆಗೆ ಇ-ಟೆಂಡರ್ ನಲ್ಲಿ ನಮೂದಿಸಿದ ಸಮಯದ ಅನುಗುಣವಾಗಿ ಟೆಂಡರ್ ಭರಿಸಲು ಅವಕಾಶವಿರುತ್ತದೆ. ಹಾಗೂ ಇ-ಸಂಗ್ರಹಣೆಯ ಪೊರ್ಟಲ್ ಮೂಲಕ ಸದರಿ ಟೆಂಡರಿನ ವಿವರ ವಿಕ್ಷೀಸಬಹುದು/ಡೌನಲೋಡ್ ಮಾಡಿಕೊಂಡು ಇ-ಪ್ರೋಕ್ಯೂಮೇರ್ಂಟ್ ಮೂಲಕ ಸಲ್ಲಿಸಬಹುದು www. kppp.karnataka.gov.in ಮತ್ತು ಟೆಂಡರಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಈ ಸಂಸ್ಥೆಯ ಅಂತರ್ಜಾಲತಾಣವಾದ www.bimsbidar.karnataka.gov.in ನಲ್ಲಿ ಸಹ ನೋಡಬಹುದಾಗಿದೆ.

1) **ಟೆಂಡರ್ ವಿವರ:** SUPPLY OF TABLETS TO BRIMS BIDAR FOR THE YEAR 2026-27, **ಇಂಡೆಂಟ್ ಸಂಖ್ಯೆ:** DME/2026-27/IND2249, **ಇ.ಎಂ.ಡಿ:** 2,00,000.00, 2) **ಟೆಂಡರ್ ವಿವರ:** SUPPLY OF INJECTIONS TO BRIMS BIDAR FOR THE YEAR 2026-27, **ಇಂಡೆಂಟ್ ಸಂಖ್ಯೆ:** DME/2026-27/IND2252, **ಇ.ಎಂ.ಡಿ:** 2,00,000.00, 3)**ಟೆಂಡರ್ ವಿವರ:** SUPPLY OF DISPOSABLES TO BRIMS BIDAR FOR THE YEAR 2026-27,**ಇಂಡೆಂಟ್ ಸಂಖ್ಯೆ:** DME/2026-27/IND2254, **ಇ.ಎಂ.ಡಿ:** 2,00,000.00, 4)**ಟೆಂಡರ್ ವಿವರ:** SUPPLY OF LIQUID OINTMENTS & POWDERS TO BRIMS BIDAR FOR THE YEAR 2026-27,**ಇಂಡೆಂಟ್ ಸಂಖ್ಯೆ:** DME/2026-27/IND2259, **ಇ.ಎಂ.ಡಿ:** 2,00,000.00, 5)**ಟೆಂಡರ್ ವಿವರ:** SUPPLY OF IV FLUIDS & SUTURES TO BRIMS BIDAR FOR THE YEAR 2026-27,**ಇಂಡೆಂಟ್ ಸಂಖ್ಯೆ:** DME/2026-27/IND2264,**ಇ.ಎಂ.ಡಿ:** 2,00,000.00, 6)**ಟೆಂಡರ್ ವಿವರ:**SUPPLY OF CHEMICALS & REAGENTS TO BRIMS BIDAR FOR THE YEAR 2026-27,**ಇಂಡೆಂಟ್ ಸಂಖ್ಯೆ:** DME/2026-27/IND2260,**ಇ.ಎಂ.ಡಿ:**2,00,000.00

ಗಮನಿಸಿ:- 1) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸುವ ವಿಳಾಸ : ನಿರ್ದೇಶಕರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್, 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಗಳಲ್ಲಿ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳು ಕೇವಲ ವಿದ್ಯುನ್ಮಾನ ಸಂಗ್ರಹಣೆ www.kppp.karnataka.gov. ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ನಿರ್ದೇಶಕರು
ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,ಬೀದರ್
ವಾ.ಸಾ.ಸಂ.ಇ/ಬೀದರ/15/ಕೆ.ಎಸ್.ಎಂ.ಸಿ.&ಎ/2026-27

ಸಮಾಚಾರ ಸಣ್ಣದಲ್ಲ

ಪರಾರಿಯಾಗಿದ್ದ ಕೈದಿ ಗೋವಾದಲ್ಲಿ ಬಂಧನ

ಹಾಸನ: ಸುಮಾರು 15 ವರ್ಷಗಳ ಹಿಂದೆ ಜೈಲಿನಿಂದ ತಪ್ಪಿಸಿಕೊಂಡಿದ್ದ ವಿಚಾರಣಾಧೀನ ಕೈದಿಯನ್ನು ಹಾಸನ ಪೊಲೀಸರು ಬಂಧಿಸಿದ್ದಾರೆ. ಸಕಲೇಶಪುರ ತಾಲೂಕಿನ ನಲ್ಲುಲ್ಲಿ ಗ್ರಾಮದ ಚನ್ನಕೇಶವ ಬಂಧಿತ. ಈತ ಕೊಲೆ ಯತ್ನ, ಲೈಂಗಿಕ ದೌರ್ಜನ್ಯ ಹಾಗೂ ದರೋಡೆ ಪ್ರಕರಣದಲ್ಲಿ ಸಕಲೇಶಪುರ ಜೈಲು ಸೇರಿದ್ದ. 2011ರಲ್ಲಿ ಜೈಲಿಂದ ಪರಾರಿಯಾಗಿ ಸುಮಾರು 15 ವರ್ಷ ತಲೆಮರೆಸಿಕೊಂಡಿದ್ದ. ಆರೋಪಿ ಗೋವಾದಲ್ಲಿರುವ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ಮಾಡಿ ಆತನನ್ನು ಬಂಧಿಸಿದ್ದಾರೆ. ಈತ ಮುಂಬೈ ಸೇರಿದಂತೆ ವಿವಿಧ ನಗರಗಳಲ್ಲಿ ಹೋಟೆಲ್‌ನಲ್ಲಿ ಕೆಲಸ ಮಾಡಿಕೊಂಡಿದ್ದ. ಸದ್ಯ ಗೋವಾದ ಹೋಟೆಲ್ ಒಂದರಲ್ಲಿ ಕೆಲಸ ಮಾಡಿಕೊಂಡಿದ್ದ. ಕಾರ್ಯಾಚರಣೆಯಲ್ಲಿ ಎಸ್‌ಪಿ ಶುಭಾನ್ವಿತಾ, ಎಎಸ್‌ಪಿಗಳಾದ ತಮ್ಮಯ್ಯ ಹಾಗೂ ಶ್ರೀನಿಧಿ, ಕಾನ್‌ಸ್ಟೇಬಲ್‌ಗಳಾದ ರವಿ ಕಬ್ಬತ್ತಿ, ಸೋಮಶೇಖರ್ ಹಾಗೂ ಬಸವರಾಜು ಭಾಗಿಯಾಗಿದ್ದರು.

ಕುಸಿದು ಬಿದ್ದ ಕಮಾನು: ಇಬ್ಬರು ಮಕ್ಕಳು ಸಾವು



ರಾಯಚೂರು: ಬಯಲು ನಾಟಕ ನೋಡುತ್ತಿದ್ದವರ ಮೇಲೆ ಕಮಾನು ಗೋಡೆ ಕುಸಿದು ಬಿದ್ದಿದ್ದು, ಇಬ್ಬರು ಮಕ್ಕಳು ಮೃತಪಟ್ಟಿರುವ ಘಟನೆ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಬೈಲ್ ಮರ್ಚೆಡ್ ಗ್ರಾಮದಲ್ಲಿ ನಡೆದಿದೆ. ಮೃತರನ್ನು ವಿಶ್ವನಾಥ್ (8) ಹಾಗೂ ಸಾನ್ವಿತ (2) ಎಂದು ಗುರುತಿಸಲಾಗಿದೆ. ಅವಘಡದಲ್ಲಿ ಲಕ್ಷ್ಮಿ, ವಿಶಾಲಕ್ಷಿ, ಯಲ್ಲಮ್ಮ ಹಾಗೂ ಬಸಮ್ಮ ಎಂಬುವವರಿಗೆ ಗಂಭೀರ ಗಾಯಗಳಾಗಿವೆ. ಗಾಯಾಳುಗಳನ್ನು ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಮೃತದೇಹಗಳನ್ನು ಮಾನ್ವಿ ಸರಕಾರಿ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಲಾಗಿದೆ. ಮಾನ್ವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಂಟಲಲ್ಲಿ ಮೂಳೆ ಸಿಲುಕಿ ವ್ಯಕ್ತಿ ಸಾವು

ಶಿವಮೊಗ್ಗ: ಜನ್ಮದಿನದ ಪಾರ್ಟಿಯಲ್ಲಿ ಭಾಗವಹಿಸಿದ್ದ ಯುವಕನೊಬ್ಬನಿಗೆ ಗಂಟಲಲ್ಲಿ ಚಿಕನ್ ಮೂಳೆ ಸಿಲುಕಿ ಮೃತಪಟ್ಟ ಘಟನೆ ಕುಂಸಿ ಸಮೀಪದ ಚೆನ್ನಹಳ್ಳಿ ಗ್ರಾಮದಲ್ಲಿ ನಡೆದಿದೆ. ಸಚಿನ್ (21)ಮೃತ ಯುವಕ. ಗ್ರಾಮಸ್ಥರೊಬ್ಬರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಗುರುವಾರ ರಾತ್ರಿ ಗ್ರಾಮದ ಹೊರವಲಯದ ನಿರ್ಮಾಣ ಹಂತದ ಮನೆಯೊಂದರ ಬಳಿ ಮಾಂಸಾಹಾರ ಊಟದ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಸಚಿನ್, ಊಟ ಮುಗಿಸಿಕೊಂಡು ಪಕ್ಕದಲ್ಲೇ ಕಾಮಗಾರಿ ನಡೆಯುತ್ತಿದ್ದ ನಿರ್ಮಾಣ ಹಂತದ ಮನೆಯೊಳಗೆ ತೆರಳಿದ್ದನು. ಊಟದ ಬಳಿಕ ಉಳಿದವರೆಲ್ಲರೂ ತಮ್ಮ ತಮ್ಮ ಮನೆಗಳಿಗೆ ವಾಪಸ್ಸಾಗಿದ್ದರು. ಶುಕ್ರವಾರ ಮುಂಜಾನೆ ಕಾಮಗಾರಿ ಮುಂದುವರಿಸಲು ಕೆಲಸಗಾರರು ಕಟ್ಟಡದ ಬಳಿ ಬಂದಾಗ, ಸಚಿನ್ ಅಲ್ಲಿ ಶವವಾಗಿ ಬಿದ್ದಿರುವುದು ಬೆಳಕಿಗೆ ಬಂದಿದೆ. ಕುಂಸಿ ಠಾಣೆಯ ಪೊಲೀಸರು ಸ್ಥಳಕ್ಕಾಗಮಿಸಿ ಶವವನ್ನು ವಶಕ್ಕೆ ಪಡೆದು ಮರಣೋತ್ತರ ಪರೀಕ್ಷೆಗೆ ರವಾನಿಸಿದರು.

ಕಾಡುಕೋಣ ದಾಳಿಗೆ ಯುವಕ ಬಲಿ

ಚಿಕ್ಕಮಗಳೂರು: ಕಾಡುಕೋಣದ ದಾಳಿಗೆ ಯುವಕ ಬಲಿಯಾದ ಘಟನೆ ತಾಲೂಕಿನ ಮೈದಾಡಿಯ ಯಮಗೊಂಡ ಎಸ್ಟೇಟ್‌ನಲ್ಲಿ ನಡೆದಿದೆ. ಮೃತ ಯುವಕನನ್ನು ಚೇತನ್ (30) ಎಂದು ಗುರುತಿಸಲಾಗಿದೆ. ಕಾಡುಕೋಣದ ಕೊಂಬು ಚೇತನ್ ಎದೆಗೆ ಚುಚ್ಚಿತ್ತು. ಕೂಡಲೇ ಆತನನ್ನು ಕಳಸದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಆಸ್ಪತ್ರೆಯ ಆವರಣದಲ್ಲಿ ಮಗನನ್ನು ಕಳೆದುಕೊಂಡ ತಾಯಿ ಹಾಗೂ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತ್ತು. ಕಳಸದಲ್ಲಿ ನಿರಂತರವಾಗಿ ಕಾಡುಕೋಣ ದಾಳಿ ಪ್ರಕರಣಗಳು ನಡೆಯುತ್ತಿವೆ. ಕೆಲವರು ಗಂಭೀರ ಗಾಯಗೊಂಡಿದ್ದಾರೆ. ಇನ್ನೂ ಕೆಲವರು ದಾಳಿಯಿಂದ ಮೃತಪಟ್ಟಿದ್ದಾರೆ. ಕಾಡುಕೋಣಗಳ ಹಾವಳಿಗೆ ಶಾಶ್ವತವಾಗಿ ಬ್ರೇಕ್ ಹಾಕುವಂತೆ ಮಲೆನಾಡಿಗರು ಆಗ್ರಹಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ದಿನ ವಿಶೇಷ

19 ಎಪ್ರಿಲ್ 2026 ಭಾನುವಾರ

» ಸೂರ್ಯೋದಯ : 6-08
» ಸೂರ್ಯಾಸ್ತ : 6-46
» ತಿಥಿ: ದ್ವಿತಿಯ/ಅಕ್ಷಯ ತೃತೀಯ
» ನಕ್ಷತ್ರ : ಭರಣಿ
» ಸಂವತ್ಸರ : ಪರಾಭವ
» ಅಯನ : ಉತ್ತರಾಯನ
» ಋತು : ವಸಂತ
» ಮಾಸ : ವೈಶಾಖ
» ಪಕ್ಷ : ಶುಕ್ಲಪಕ್ಷ

ಲೋಕಸಭೆಯಲ್ಲಿ ಶುಕ್ರವಾರ ಮಹಿಳಾ ಮೀಸಲಾತಿ ಮಸೂದೆ ಮತ್ತು ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಮಸೂದೆಗೆ ಸೋಲಾದ ಬೆನ್ನಲ್ಲೇ ದೇಶಾದ್ಯಂತ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ. ಮಹತ್ವದ ಮಸೂದೆಗೆ ಸೋಲಾಗಿರುವ ಹಿನ್ನೆಲೆಯಲ್ಲಿ ರಾಜ್ಯ ಬಿಜೆಪಿ ನಾಯಕರಾದ ಆರ್.ಅಶೋಕ, ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಕಾಂಗ್ರೆಸ್, ಅದರ ಮಿತ್ರಪಕ್ಷಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಮೀಸಲಿಗೆ ಸೋಲು: ಬಿಜೆಪಿ-ಜೆಡಿಎಸ್ ಕೆಂಡ

ಕಾಂಗ್ರೆಸ್‌ನ ಮಹಿಳಾ ವಿರೋಧಿ ನಿಲುವು ಸ್ಪಷ್ಟ

ಬೆಂಗಳೂರು: ನಾರಿ ಶಕ್ತಿ ವಂದನಾ ಅಧಿನಿಯಮವನ್ನು ವಿರೋಧಿಸುವ ಮೂಲಕ ಕಾಂಗ್ರೆಸ್ ತನ್ನ ಮಹಿಳಾ ವಿರೋಧಿ ನಿಲುವನ್ನು ಸ್ಪಷ್ಟಪಡಿಸಿದೆ. ಇದನ್ನು ದೇಶದ ಮಹಿಳೆಯರು ಎಂದಿಗೂ ಕ್ಷಮಿಸುವುದಿಲ್ಲ. ಹೀಗಾಗಿ ಕಾಂಗ್ರೆಸ್ ತನ್ನ ಮಹಿಳಾ ಘಟಕ ರದ್ದು ಮಾಡುವುದು ಸೂಕ್ತ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೇಶದ ಮಹಿಳೆಯರಿಗೆ ಸಂವಿಧಾನದತ್ತವಾದ ಹಕ್ಕನ್ನು ನೀಡುವ ನಾರಿ ಶಕ್ತಿ ವಂದನಾ ಅಧಿನಿಯಮ ಮಸೂದೆಯನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರ ತಂದರೂ ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಸೋಲಿಸಿವೆ. ಮಹಿಳಾ ಸಬಲೀಕರಣದ ಮಸೂದೆ ವಿಫಲವಾಗಿರುವುದು ವಿರೋಧ ಪಕ್ಷಗಳ ಪಿತೂರಿ, ನಿರ್ಲಕ್ಷ್ಯ ಹಾಗೂ ಮಹಿಳಾ ವಿರೋಧಿ ನಿಲುವಿನ ಸ್ಪಷ್ಟ ಸಂಕೇತ. ಮಹಿಳೆಯರ ಹಕ್ಕುಗಳ ಬಗ್ಗೆ ವೇದಿಕೆಯಲ್ಲಿ ಕಾಂಗ್ರೆಸ್ ನಾಯಕರು ದೊಡ್ಡ ಭಾಷಣಗಳನ್ನು ಮಾಡುತ್ತಾರೆ. ಆದರೆ ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಸೋತಿದ್ದಾರೆ. ಈ ಮಸೂದೆಗೆ ಮತ ನೀಡಿಲ್ಲವೆಂದರೆ ಕಾಂಗ್ರೆಸ್ನ ಮಹಿಳಾ ಘಟಕವನ್ನು ರದ್ದು ಮಾಡುವುದು ಸೂಕ್ತ. ಮಹಿಳಾ ಮುಖಂಡರು ಶಾಸನಸಭೆಗೆ ಹೋಗಬಹುದೆಂದು ಕನಸು ಕಂಡಿದ್ದರು. ಮಹಿಳೆಯರ ಹಕ್ಕನ್ನು ನಿರ್ಲಕ್ಷಿಸುವ ಕಾಂಗ್ರೆಸ್ ಸರಕಾರವನ್ನು ಜನರು ಕ್ಷಮಿಸುವುದಿಲ್ಲ. ಕಾಂಗ್ರೆಸ್‌ಗೆ ಮಹಿಳೆಯರು ಎಂದರೆ ಕೇವಲ ಮತ ನೀಡುವವರಾಗಿದ್ದಾರೆ ಎಂದು ಟೀಕಿಸಿದರು.

60 ವರ್ಷ ಆಡಳಿತ ನಡೆಸಿದ ನೆಹರು, ಇಂದಿರಾಗಾಂಧಿ ಮಹಿಳಾ ಮೀಸಲು ತರಲಿಲ್ಲ. ಪ್ರಧಾನಿ ನರೇಂದ್ರ ಮೋದಿಯವರು ಮಸೂದೆ ತಂದಾಗ ಅದನ್ನು ವಿರೋಧಿಸಿ ಕಾಂಗ್ರೆಸ್‌ನವರು ಮಹಿಳೆಯರಿಗೆ ದ್ರೋಹ ಮಾಡಿದ್ದಾರೆ. ಮಹಿಳಾ ವಿರೋಧಿ ಭಾವನೆ ಕಾಂಗ್ರೆಸ್ ರಕ್ತದಲ್ಲೇ ಇದೆ. ಮಹಿಳೆಯರಿಗೆ 2,000 ರು. ಹಾಗೂ ಉಚಿತ ಬಸ್ ನೀಡಿದರೆ ಸಾಕು, ಅವರಿಗೆ ರಾಜಕೀಯ ಪ್ರಾತಿನಿಧ್ಯ ಬೇಡ ಎಂದು ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳು ತೀರ್ಮಾನಿಸಿದೆ. ಮುಂದಿನ ಚುನಾವಣೆಯಲ್ಲಿ ಇನ್ನಷ್ಟು ಹಣ ಕೊಟ್ಟು ಮತ ಪಡೆದರೆ ಸಾಕು ಎಂದು ಅವರು ಅಂದುಕೊಂಡಿದ್ದಾರೆ. ಮುಂದಿನ ಚುನಾವಣೆಗಳಲ್ಲಿ ಮಹಿಳೆಯರು ಇವರೆಲ್ಲರಿಗೂ ಪಾಠ ಕಲಿಸುತ್ತಾರೆ ಎಂದರು.

ಚುನಾವಣೆಯ ಲಾಭವಾಗಿ ಬಿಜೆಪಿ ಇದನ್ನು ಬಳಸಿಕೊಳ್ಳುತ್ತಿಲ್ಲ. ಮಸೂದೆಯನ್ನು ಬೆಂಬಲಿಸಿ ಅದರ ಕ್ರೆಡಿಟ್ ಅನ್ನು ಕಾಂಗ್ರೆಸ್ ಪಡೆಯಬಹುದಿತ್ತು. ಇನ್ನು ಮೂರು ವರ್ಷದಲ್ಲೇ ಇದು ಜಾರಿಯಾಗಲಿದೆ. ಆದರೆ ಕಳೆದ 60 ವರ್ಷದಿಂದ ಇದು ಜಾರಿಯಾಗಲೇ ಇಲ್ಲ ಎಂಬುದನ್ನು ಗಮನಿಸಬೇಕು. ಕ್ಷೇತ್ರ ಮರುವಿಂಗಡಣೆಯಿಂದ ದಕ್ಷಿಣದ ರಾಜ್ಯಗಳಿಗೂ ಸಂಸತ್ ಸ್ಥಾನಗಳು ಹೆಚ್ಚಲಿವೆ. ಜಿಬಿಎ ರಚನೆಗೆ ಕಾಂಗ್ರೆಸ್ ಸರಕಾರ ಯಾವ ಮಾನದಂಡ ಮಾಡಿದೆ? ಅಲ್ಲಿ ಕೂಡ 2011 ರ ಜನಗಣತಿಯನ್ನೇ ಪರಿಗಣಿಸಲಾಗಿದೆ. ಆದರೆ ಬಿಜೆಪಿ ಅದನ್ನು ಮಾನದಂಡವಾಗಿ ಪರಿಗಣಿಸಿದರೆ ಅದನ್ನು ವಿರೋಧಿಸುತ್ತಾರೆ ಎಂದರು.



ತೆರಿಗೆಗಳ ಹೊರೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್ ಬಳಿಕ ಕುತಂತ್ರ ಬುದ್ಧಿ ತೋರಿಸಿದ್ದಾರೆ. ಗೃಹ ಬಳಕೆ ವಿದ್ಯುತ್ ದರವನ್ನು 65 ಪೈಸೆ ಹೆಚ್ಚಿಸಲಾಗಿದೆ. ಕಳೆದ ಸಲ 25 ಬೆಲೆ ಏರಿಕೆಗಳನ್ನು ಮಾಡಿ ಸುಮಾರು 65,000 ಕೋಟಿ ರು. ಹೆಚ್ಚುವರಿ ತೆರಿಗೆ ವಸೂಲಿ ಮಾಡಿದ್ದರು. ಜಿಬಿಎ ಚುನಾವಣೆಗೆ ಮುನ್ನ ಇನ್ನಷ್ಟು ತೆರಿಗೆಗಳ ಹೇರಿಕೆಯಾಗಲಿದೆ. ನೌಕರರಿಗೆ ಸಂಬಳ ಕೊಡಲು ಕೂಡ ಸರಕಾರದ ಬಳಿ ಹಣವಿಲ್ಲ. ಅನಾಥ ಮಕ್ಕಳಿಗೆ ಪ್ರೋತ್ಸಾಹಧನ, ಗುತ್ತಿಗೆದಾರರ ಬಿಲ್, ಅಂಗನವಾಡಿ ಸಹಾಯಕರ ಗೌರವಧನ ಹೆಚ್ಚಳ ಮೊದಲಾದವುಗಳಿಗೆ ಹಣವಿಲ್ಲ. 2,000 ರು. ನೀಡಿ 22,000 ರು. ವಸೂಲಿ ಮಾಡುತ್ತಾರೆ. ಇದರ ಬಗ್ಗೆ ಮುಂದಿನ ವಿಧಾನಸಭೆ ಅಧಿವೇಶನದಲ್ಲಿ ಲೆಕ್ಕ ಕೊಡುತ್ತೇನೆ ಎಂದರು.

ಜಿಬಿಎ ಚುನಾವಣೆ ಗೆಲ್ಲುವುದಿಲ್ಲವೆಂದು ಕಾಂಗ್ರೆಸ್‌ಗೆ ಗೊತ್ತಾಗಿರುವುದರಿಂದಲೇ ಚುನಾವಣೆ ನಡೆಸುತ್ತಿಲ್ಲ. ಮಾರ್ಗಸೂಚಿ ದರ, ಕಸ ಶುಲ್ಕ, ಪ್ರಮಾಣಪತ್ರಗಳ ಶುಲ್ಕಗಳನ್ನು ಏರಿಸಲಾಗಿದೆ. ಆದ್ದರಿಂದಲೇ ಸೋಲುವ ಭಯ ಅವರಲ್ಲಿದೆ. ಸದ್ಯಕ್ಕಂತೂ ಚುನಾವಣೆ ಮಾಡುವುದಿಲ್ಲ.

-ಆರ್.ಅಶೋಕ ಪ್ರತಿಪಕ್ಷದ ನಾಯಕ

3 ದಶಕಗಳ ಮಹಿಳಾ ವಿರೋಧಿ ಮನಸ್ಥಿತಿ ಇಂದಿಗೂ ಬದಲಾಗಿಲ್ಲ

ದೆಹಲಿ: ತಿದ್ದುಪಡಿ ಮಸೂದೆ ಸೋಲುವ ಮೂಲಕ ಲೋಕಸಭೆಯಲ್ಲಿ ಮೂವತ್ತು ವರ್ಷದ ಹಿಂದಿನ ಕರಾಳ ಇತಿಹಾಸ ಮತ್ತೆ ಮರುಕಳಿಸಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, 1996 ರಿಂದ 2026 ಕರಾಳ ಇತಿಹಾಸ ಮರುಕಳಿಸಿದೆ. ಮೂರು ದಶಕದ ನಂತರವೂ ಕಾಂಗ್ರೆಸ್ ಪಕ್ಷದ ಮಹಿಳಾ ವಿರೋಧಿ ಮನಸ್ಥಿತಿ ಕೊಂಚವೂ ಬದಲಾಗಿಲ್ಲ ಎನ್ನುವುದಕ್ಕೆ ಲೋಕಸಭೆ ಮತ್ತೊಮ್ಮೆ ಸಾಕ್ಷಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಅಂದು ಎಚ್.ಡಿ. ದೇವೇಗೌಡರ ನೇತೃತ್ವದ ಸಂಯುಕ್ತ ರಂಗ ಸರಕಾರವು ಲೋಕಸಭೆ, ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲು ನೀಡುವ ಕ್ರಾಂತಿಕಾರಿ ನಿರ್ಧಾರ ಕೈಗೊಂಡು ಸಂಸತ್ತಿನಲ್ಲಿ ಮಸೂದೆ ಮಂಡಿಸಿತ್ತು. ಅಂದು ಇದೇ ಕಾಂಗ್ರೆಸ್ ಮತ್ತು ಅದರ ಸಹಚರ ಶಕ್ತಿಗಳು ಆ ಪ್ರಯತ್ನ ವನ್ನು ಸಂಘಟಿತವಾಗಿ ವಿಫಲಗೊಳಿಸಿದ್ದವು. ಇಂದು ಆವತ್ತು ಮಹಿಳೆಯರಿಗೆ ಆಗಿದ್ದ ಐತಿಹಾಸಿಕ ಅನ್ಯಾಯ ಸರಿಪಡಿಸಲು ಪ್ರಧಾನಿ ನರೇಂದ್ರ ಮೋದಿ ಅವರು ದಿಟ್ಟಹೆಜ್ಜೆ ಇರಿಸಿದ್ದರು. ಪುನಾ ಅದೇ ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳು ಸೇರಿ ಸನ್ಮಾನ್ಯ ಮೋದಿ ಅವರ ಪ್ರಯತ್ನಕ್ಕೆ ತಡೆಯೊಡ್ಡಿವೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಹಿಳಾ ಮೀಸಲು ಮಸೂದೆಯನ್ನು ಸೋಲಿಸಿದ ಕೂಟದ ಶಕ್ತಿಗಳನ್ನು ರಾಷ್ಟ್ರದ ನಾರಿಶಕ್ತಿ ಎಂದಿಗೂ ಕ್ಷಮಿಸುವುದಿಲ್ಲ. ಇದು ಮಾತೃಶಕ್ತಿಗೆ ಆಗಿರುವ ಅಪಮಾನ. ಇದಕ್ಕೆ ಕಾರಣರಾದ ಎಲ್ಲರೂ ತಕ್ಕ ಶಾಸ್ತಿ ಅನುಭವಿಸಬೇಕಾಗುತ್ತದೆ. ರಾಷ್ಟ್ರದ ನಾರಿಶಕ್ತಿಗೆ ನನ್ನ ಮನವಿ ಇಷ್ಟೇ, ನಿಮಗೆ ನಿರಾಶೆ ಬೇಕಿಲ್ಲ, ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಮುಂದೊಂದು ದಿನ ನಿಮಗೆ ಅಗ್ರಮನ್ನಣೆ ಸಿಕ್ಕೇ ಸಿಗುತ್ತದೆ. ಶೇ.33 ಮಹಿಳಾ ಮೀಸಲು ಗುರಿ ಸಾಧಿಸುವುದು ಶತಸಿದ್ಧ ಎಂದು ಭರವಸೆ ನೀಡಿದ್ದಾರೆ.

ಕಾಂಗ್ರೆಸ್‌ನಿಂದ ಮಹಿಳಾಶಕ್ತಿಗೆ ಅಪಮಾನ



ಬೆಂಗಳೂರು: ಮಹಿಳಾ ವಂದನಾ ಬಿಲ್ಲನ್ನು ಕಾಂಗ್ರೆಸ್ ವಿರೋಧ ಮಾಡಿ ಭಾರತದ ಮಹಿಳಾ ಶಕ್ತಿಗೆ ಅಪಮಾನ ಮಾಡಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಕಾಂಗ್ರೆಸ್‌ಗೆ ಮಹಿಳೆಯರಿಗೆ ಮೀಸಲು ಕೊಡಬೇಕೆಂಬುದು ಯಾವತ್ತೂ ಇರಲಿಲ್ಲ. 30 ವರ್ಷದಿಂದ ಮಾಡಿಕೊಂಡು ಬಂದಿರುವುದನ್ನು ಈಗ ಮತ್ತೆ ಮುಂದುವರಿಸಿದ್ದಾರೆ. ಅವರಿಗೆ ಮಹಿಳೆಯರ ಶಾಪ ತಟ್ಟುತ್ತದೆ ಎಂದರು.

ದೇಶದ ಅಭಿವೃದ್ಧಿ ಯಲ್ಲಿ ಮಹಿಳೆಯರು ಪಾಲ್ಗೊಳ್ಳಬೇಕೆನ್ನುವ ಅಭಿವೃದ್ಧಿ ಪರ ಚಿಂತನೆಗೆ ವಿರೋಧವಾಗಿ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ನಡೆದುಕೊಂಡಿವೆ. ಮಹಿಳಾ ಮೀಸಲಾತಿ ಬಿಲ್ ಪಾಸ್ ಆಗದಿರುವುದನ್ನು ಇಡೀ ಭಾರತ ದೇಶ ಗಮನಿಸುತ್ತಿದೆ. ಈಗ ಕಾಂಗ್ರೆಸ್ ಸುಳ್ಳು ಸಮರ್ಥನೆ ಮಾಡಲು ಹೊರಟಿದೆ. ಯಾಕೆಂದರೆ 2023ರಲ್ಲಿ ಶೇ.50ರಷ್ಟು ಕ್ಷೇತ್ರಗಳ ಹೆಚ್ಚಳ ಮಾಡ ಬೇಕು. ಮುಂದಿನ ಜನಸಂಖ್ಯೆ ಆಧಾರದ ಮೇಲೆ ಮಾಡಬೇಕು ಅಂತ ಆಗಿತ್ತು. 2034 ಕ್ಕೆ ಜಾರಿ ಮಾಡ ಬೇಕೆಂದು ತೀರ್ಮಾನ ಆಗಿತ್ತು. ಅದನ್ನು 2029 ಕ್ಕೆ ಮಾಡಬೇಕು ಎನ್ನುವ ಕಾರಣದಿಂದ ಶೇ 50% ರಷ್ಟು ಸ್ಥಾನಗಳನ್ನು ಹೆಚ್ಚಿಗೆ ಮಾಡಬೇಕು. ಮಹಿಳೆಯರಿಗೆ ಶೇ.33ರಷ್ಟು ಸ್ಥಾನ ಮೀಸಲಿಡಬೇಕು ಎಂದು ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಶೇ 50 ರಷ್ಟು ಸ್ಥಾನಗಳನ್ನು ಹೆಚ್ಚಳ ಮಾಡಬೇಕೆನ್ನುವ ಉದ್ದೇಶದಿಂದ ತಂದರೆ ಇವರು ಅದರಲ್ಲಿ ರಾಜಕಾರಣ ಮಾಡಲು ಹೊರಟಿದ್ದಾರೆ. ಈ ರಾಜಕೀಯ ಡೊಂಬರಾಟಕ್ಕೆ ಕಾಂಗ್ರೆಸ್ ಪಕ್ಷ ಮುಂದಿನ ದಿನಗಳಲ್ಲಿ ದೊಡ್ಡ ಬೆಲೆ ತೆರಬೇಕಾಗುತ್ತದೆ. ಈ ಕಟು ಸತ್ಯ ನಮಗೆಲ್ಲರಿಗೂ ಗೊತ್ತಾಗುತ್ತಿದೆ ಎಂದು ತಿಳಿಸಿದ್ದಾರೆ.

ದಕ್ಷಿಣ ಭಾರತಕ್ಕೆ ಅನ್ಯಾಯವಾಗುತ್ತಿದೆ ಎನ್ನುವ ವಾದವನ್ನು ಲೋಕಸಭೆಯಲ್ಲಿ ಮುಂದಿಟ್ಟಿರುವ ಕಾಂಗ್ರೆಸ್ ಮಿತ್ರಪಕ್ಷ ಲೋಕಸಭೆಯಲ್ಲಿ ಗೃಹ ಸಚಿವ ಅಮಿತ್ ಶಾ ಅವರು ಶೇ.50 ರಷ್ಟು ಈಗಿರುವ ಲೋಕಸಭೆ, ವಿಧಾನಸಭೆ ಸ್ಥಾನಗಳಿಗೆ ಹೆಚ್ಚಳ ಮಾಡುತ್ತೇವೆ. ಅದಕ್ಕೆ ಕಾನೂನಿನಲ್ಲಿ ತಿದ್ದುಪಡಿ ತಂದು ಕಾನೂನಿನ ಭಾಗವಾಗಿ ಮಾಡುತ್ತೇವೆ ಅಂತ ಹೇಳಿದರೂ ವಿಪಕ್ಷಗಳು ಒಪ್ಪಲಿಲ್ಲ. ಇದನ್ನು ನೋಡಿದಾಗ ಕಾಂಗ್ರೆಸ್‌ನವರಿಗೆ ಮಹಿಳಾ ಮೀಸಲಾತಿ ಬೇಕಾಗಿಲ್ಲ ಎನ್ನುವುದು ಬಹಳ ಸ್ಪಷ್ಟವಾಗುತ್ತದೆ ಎಂದಿದ್ದಾರೆ.

ಮಹಿಳಾ ಮೀಸಲಾತಿಗೆ ವಿರೋಧವಿಲ್ಲ: ಸಿಎಂ

ಬೆಂಗಳೂರು: ಮಹಿಳಾ ಮೀಸಲಾತಿಗೆ ನಮ್ಮ ವಿರೋಧವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, 2023ರಲ್ಲಿಯೇ ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಅಂಗೀಕಾರವಾಗಿದೆ. ಸಾಂವಿಧಾನಿಕ ತಿದ್ದುಪಡಿ ತಂದಿದ್ದರಿಂದ ಅದು ವಿಫಲವಾಯಿತು. ಕ್ಷೇತ್ರ ಮರುವಿಂಗಡನೆ ಮಾಡದೆಯೇ ಮಹಿಳಾ ಮೀಸಲಾತಿ ಒಂದೇ ಮಂಡನೆಯಾಗಿದ್ದರೆ ಅಂಗೀಕಾರವಾಗುತ್ತಿತು. ರಾಜಕೀಯಕ್ಕಾಗಿ ಕ್ಷೇತ್ರ ಮರುವಿಂಗಡನೆ ಮತ್ತು ಮಹಿಳಾ ಮೀಸಲಾತಿ ಒಟ್ಟಿಗೆ ತಂದಿದ್ದರಿಂದ ಮಹಿಳಾ ಮೀಸಲಾತಿ ಮಸೂದೆ ವಿಫಲವಾಗಿದೆ. ಕೇಂದ್ರ ಸರಕಾರ ಇದರಲ್ಲಿ ರಾಜಕೀಯ ಮಾಡಿದ್ದಾರೆ ಎಂದರು.

ಕೆರಳಿ ಕೆಂಡವಾದ ಬಿಜೆಪಿ: ರಾಜ್ಯಾದ್ಯಂತ ಹೋರಾಟಕ್ಕೆ ಸೂಚನೆ

ಬೆಂಗಳೂರು: ಮಹಿಳಾ ಮೀಸಲಾತಿ ಮಸೂದೆಗೆ ಲೋಕಸಭೆಯಲ್ಲಿ ಅಂಗೀಕಾರವಾಗದೇ ಸೋಲುಂಟಾಗಿರುವುದರಿಂದ ಕೆರಳಿ ಕೆಂಡವಾಗಿ ರುವ ಬಿಜೆಪಿ ಪಕ್ಷವು ಕಾಂಗ್ರೆಸ್ ವಿರುದ್ಧ ಹೋರಾಟ ನಡೆಸಲು ಮುಂದಾಗಿದೆ. ನಾಳೆಯಿಂದ ಬಿಜೆಪಿ ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಿದ್ದು, ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲೂ ಪ್ರತಿಭಟನೆ ನಡೆಸಬೇಕೆಂದು ಎಲ್ಲ ಘಟಕಗಳಿಗೂ ಕರೆ ಕೊಟ್ಟಿದೆ. ಪ್ರತಿಭಟನೆ ಹಾಗೂ ಹೋರಾಟಗಳ ಬಗ್ಗೆ ಈಗಾಗಲೇ ರೂಪು ರೇಷೆಗಳನ್ನು ಸಿದ್ಧಪಡಿಸಿರುವ ಬಿಜೆಪಿ ಪ್ರತಿ ಯೊಬ್ಬರೂ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಕಾಂಗ್ರೆಸ್ ವಿರುದ್ಧ ಜೆಡಿಎಸ್ ಪ್ರತಿಭಟನೆ: ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಶೇ.33ರಷ್ಟು ಮೀಸಲಾತಿ ನೀಡುವ ವಿಧೇಯಕಕ್ಕೆ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ ಷಡ್ಯಂತ್ರ್ಯದಿಂದ ಲೋಕಸಭೆಯಲ್ಲಿ ಲೋಕಸಭೆಯಲ್ಲಿ ಸೋಲಾಗಿದ್ದನ್ನು ಖಂಡಿಸಿ ಜೆಡಿಎಸ್ ಮಹಿಳಾ ಘಟಕ ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿತು. ಪಕ್ಷದ ಶಾಸಕರು, ವಿಧಾನ ಪರಿಷತ್ ಸದಸ್ಯರು ಸೇರಿದಂತೆ ಅನೇಕ ಮುಖಂಡರು ಭಾಗಿಯಾಗಿದ್ದ ಈ ಪ್ರತಿಭಟನೆಯಲ್ಲಿ ಜೆಡಿಎಸ್ ಕಾರ್ಯಕರ್ತೆಯರು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಕಾಂಗ್ರೆಸ್ ಮಿತ್ರಪಕ್ಷಗಳ ವಿರುದ್ಧ ಘೋಷಣೆಗಳನ್ನು ಕೂಗಿದರು. ಜೆಡಿಎಸ್‌ನ ಎಚ್.ಎಂ.ರಮೇಶ್ ಗೌಡ, ಮಾಜಿ ಶಾಸಕ ಕೆ.ಎ.ತಿಪ್ಪೇಸ್ವಾಮಿ, ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ, ನಗರ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಶೈಲಜಾ ರಾವ್ ಸೇರಿದಂತೆ ಅನೇಕ ನಾಯಕರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

1996ರಲ್ಲಿ ಶಾಸನಸಭೆಗಳಲ್ಲಿ ಮಹಿಳೆಯರಿಗೆ ನ್ಯಾಯೋಚಿತ ಮೀಸಲಾತಿ ನೀಡುವ ಉದ್ದೇಶದಿಂದ ಸಂಸತ್ತಿನಲ್ಲಿ ಮಹಿಳಾ ಮೀಸಲು ವಿಧೇಯಕ ಮಂಡಿಸಿದ್ದರು. ಅಂದು ಕೂಡ ಕಾಂಗ್ರೆಸ್ ಮತ್ತು ಸಂಯುಕ್ತ ರಂಗದ ಕೆಲ ಮಿತ್ರಪಕ್ಷಗಳ ಕುಯುಕ್ತಿಯಿಂದ ಆ ಮಸೂದೆಗೆ ಸೋಲಾಯಿತು. ಮತ್ತೆ ಅದೇ ಇತಿಹಾಸ ಮರುಕಳಿದ್ದು, ರಾಷ್ಟ್ರದ ಮಹಿಳೆಯರಿಗೆ ಕಾಂಗ್ರೆಸ್ ಮೋಸ ಮಾಡಿದೆ.

-ಲೀಲಾದೇವಿ ಪ್ರಸಾದ್ ಮಾಜಿ ಸಚಿವೆ

ಕಾಂಗ್ರೆಸ್‌ನ ಮುಖವಾಡ ದೇಶದ ಮುಂದೆ ಕಳಚಿದೆ. ಬಹುನಿರೀಕ್ಷಿತ ಮಸೂದೆಗೆ ಬೆಂಬಲ ನೀಡದೇ ಮಹಿಳೆಯರನ್ನು ಕೇವಲ ವೋಟ್ ಬ್ಯಾಂಕಿಗಾಗಿ ಬಳಸಿಕೊಂಡಿದೆ.

-ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

ಕಾಂಗ್ರೆಸ್ ಸಮಾನತೆಯ ವಿರೋಧಿ

ಚಿಕ್ಕಮಗಳೂರು: ರಾಜಕೀಯ ಪ್ರವೇಶವು ಮಹಿಳೆ ಯರ ಹಕ್ಕು. ಇದನ್ನು ವಿರೋಧಿ ಸುವವರು ಸಮಾನತೆಯ ತತ್ವಕ್ಕೆ ವಿರುದ್ಧವಾಗಿದ್ದಾರೆ ಎಂದು ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಕಿಡಿಕಾರಿದರು. ಮಹಿಳಾ ಮೀಸಲಾತಿ ಕುರಿತಂತೆ ನಾವು ಬಹಳ ದಶಕಗಳಿಂದ ಮಾತಾಡುತ್ತಿದ್ದೇವೆ. ಆದರೆ ಈಗಲೂ ಅದರ ಬಗ್ಗೆ ಚರ್ಚೆಯಾಗಬೇಕು ಎನ್ನುವುದು ವಿಳಂಬ ನೀತಿಯನ್ನು ಸ್ಪಷ್ಟಪಡಿಸುತ್ತದೆ. ಮಹಿಳಾ ಮಸೂದೆಯನ್ನು ಕೇವಲ ರಾಜಕೀಯ ಲಾಭಕ್ಕಾಗಿ ತರಲಾಗುತ್ತಿದೆ ಎನ್ನುವುದು ತಪ್ಪು, ಬದಲಿಗೆ ಒಳ್ಳೆಯ ನೀತಿಗಳು ಯಾವಾಗ ಬಂದರೂ ಅವು ಸಮಾಜಕ್ಕೆ ಹಿತಕರವಾಗಿರುತ್ತವೆ. ಸಮಾಜದಲ್ಲಿ ಸಮಾನತೆ ಇರಬೇಕು ಎಂಬುದು ಬಸವಣ್ಣನವರ ತತ್ವವಾಗಿತ್ತು, ಅವರು ಹೆಣ್ಣು-ಗಂಡು ಎಂಬ ಭೇದ ಭಾವವಿಲ್ಲದೆ ಎಲ್ಲರಿಗೂ ಸಮಾನ ಹಕ್ಕು ಸಿಗಬೇಕು ಎಂದು ಹೋರಾಟ ನಡೆಸಿದ್ದರು. ಅಂತಹ ತತ್ವಗಳು ಮುಂದುವರಿಯಬೇಕಾದರೆ ರಾಜಕೀಯ ದಲ್ಲಿ ಮಹಿಳೆಯರಿಗೆ ಸೂಕ್ತ ಜಾಗ ಮತ್ತು ಅವಕಾಶ ನೀಡುವುದು ಅನಿವಾರ್ಯ ಎಂದರು.

ಬಿಜೆಪಿಯ ಹುನ್ನಾರಕ್ಕೆ ಮುಖಭಂಗ

ಮಂಗಳೂರು: ಮಹಿಳಾ ಮೀಸಲಾತಿ ಹೆಸರಿನಲ್ಲಿ ವಿಶೇಷ ಅಧಿವೇಶನ ಕರೆದು ವಂಚಿಸಲು ಕೇಂದ್ರ ಸರಕಾರ ಹುನ್ನಾರ ನಡೆಸಿತ್ತು. ಈ ವಿಚಾರ ದಲ್ಲಿ ಮುಖಭಂಗ ಎದುರಿಸಿ ದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು. ಮಹಿಳಾ ಮೀಸಲಾತಿಗೆ ಯಾರ ವಿರೋಧವೂ ಇಲ್ಲ. ಆದರೆ ಮಹಿಳಾ ಮೀಸಲಾತಿಯನ್ನು ನಿಜಕ್ಕೂ ವಿರೋಧಿಸಿದ್ದು ಬಿಜೆಪಿ. 2023ರಲ್ಲಿ ಕೇಂದ್ರ ಸರಕಾರ ಈ ಕುರಿತ ಕಾನೂನು ತಂದಾಗ ಕಾಂಗ್ರೆಸ್ ಬೆಂಬಲ ನೀಡಿತ್ತು. ಆದರೆ ಮಹಿಳಾ ಮೀಸಲಾತಿಗೂ ಕ್ಷೇತ್ರ ಮರುವಿಂಗಡಣೆಗೂ ಸಂಬಂಧವೇ ಇಲ್ಲ. ಅಧಿಕಾರ ಉಳಿಸಿಕೊಳ್ಳಲು ಬಿಜೆಪಿಯು ಮಹಿಳೆಯರ ಹೆಸರಿನಲ್ಲಿ ಕ್ಷೇತ್ರ ಮರುವಿಂಗಡಣೆ ಹುನ್ನಾರ ನಡೆಸುತ್ತಿದೆ ಎಂದರು.

ಅಪರಾಧಿ ಸ್ಥಾನದಲ್ಲಿ ನಿಂತಿರುವ ಕಾಂಗ್ರೆಸ್: ಕೇಂದ್ರ ಸಚಿವ ಪ್ರಲ್ಹಾದ ಜೋಶಿ

ದೆಹಲಿ: ಕಾಂಗ್ರೆಸ್ ಪಕ್ಷ ಶೇ.33 ಮಹಿಳಾ ಮೀಸಲಾತಿಗೆ ವಿರೋಧಿಸುತ್ತ ಅಪರಾಧಿ ಸ್ಥಾನದಲ್ಲಿ ನಿಂತಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತ ನಾಡಿ, ಕಾಂಗ್ರೆಸ್ ಪಕ್ಷ ಮೊದಲಿನಿಂದಲೂ ಒಬಿಸಿ, ಎಸ್‌ಸಿಎಸ್‌ಟಿ ಮತ್ತು ಮಹಿಳಾ ವಿರೋಧಿಯಾಗೇ ನಡೆದುಕೊಂಡಿದೆ. ನೆಹರೂ ಅವರು ಎಸ್‌ಸಿಎಸ್‌ಟಿ, ರಾಜೀವ್ ಗಾಂಧಿ ಒಬಿಸಿಯನ್ನು, ಮಂಡಲ ಕಮಿಷನ್ ಅನ್ನು ವಿರೋಧಿಸಿದರು. ಇದೀಗ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಮಹಿಳಾ ಮೀಸಲಾತಿ ಧಿಕ್ಕರಿಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷ ಮತ್ತು ಇಂಡಿ ಒಕ್ಕೂಟ ದೇಶದಲ್ಲಿ ಜನರ ವಿಶ್ವಾಸ ಕಳೆದು ಕೊಂಡಿದೆ. ಹಾಗಾಗಿ ಭಯದಿಂದ ಕ್ಷೇತ್ರ ಪುನರ್ವಿಂಗ ಡಣೆ ಮತ್ತು ಶೇ.33ರ ಮಹಿಳಾ ಮೀಸಲಾತಿಗೆ ತಗಾದೆ ತೆಗೆಯುತ್ತಿದೆ ಎಂದು ಟೀಕಿಸಿದರು.

ಜನಗಣತಿ ಆಧಾರಿತವಾಗಿ ಕ್ಷೇತ್ರ ಪುನರ್ವಿಂಗಡಣೆ ಮಾಡಿದರೆ ದಕ್ಷಿಣ ರಾಜ್ಯಗಳಿಗೆ, ಸಣ್ಣ ರಾಜ್ಯಗಳಿಗೆ ಅನ್ಯಾಯ ಆಗುತ್ತದೆ ಎಂಬುದು ಕಾಂಗ್ರೆಸ್ ನ ಸುಳ್ಳು ವಾದವಾಗಿದೆ. ಕರ್ನಾಟಕ, ತಮಿಳುನಾಡು, ಕೇರಳ ಹೀಗೆ ದಕ್ಷಿಣದ ಎಲ್ಲಾ ರಾಜ್ಯಗಳಿಗೂ ಕ್ಷೇತ್ರಗಳ ಸಂಖ್ಯೆ ಸಹಜವಾಗಿಯೇ ಹೆಚ್ಚುತ್ತದೆ. ಅದರಲ್ಲಿ ಅನುಮಾನವೇ ಇಲ್ಲ. ಕಾಂಗ್ರೆಸ್ ಪಕ್ಷ ವಿನಾಕಾರಣ ಕುಂಟು ನೆಪ ಹೇಳುತ್ತಿದೆ. ಕಾಂಗ್ರೆಸ್ ಪಕ್ಷ ಶೇ.33ರಷ್ಟು ಮಹಿಳಾ ಮೀಸಲಾತಿ ಬೆಂಬಲಿಸದೇ ಇರುವುದು ಮಹಿಳಾ ವಿರೋಧಿ ಎಂಬುದನ್ನು ರುಜುವಾತುಪಡಿಸಿದೆ. ದೇಶದ ಒಳಿತಿಗೆ ಯಾವತ್ತೂ ಹೀಗೆ ವಿರೋಧವಾಗೇ ನಡೆದುಕೊಂಡಿದೆ ಎಂದು ಗಂಭೀರ ಆರೋಪ ಮಾಡಿದರು.

ಉತ್ತರ ಭಾರತಕ್ಕೆ ಕಾಂಗ್ರೆಸ್ ಎಳ್ಳು ನೀರು ಬಿಡುತ್ತದೆಯೇ?: ಕಾಂಗ್ರೆಸ್ ಪಕ್ಷ ಪದೇ ಪದೇ ದಕ್ಷಿಣ-ಭಾರತ, ಉತ್ತರ ಭಾರತ ಎಂದೆಣಿಸುತ್ತಿದೆ. ಈಗ ಡಿಲಿಮಿಟೇಷನ್ ವಿಚಾರದಲ್ಲೂ ಅದೇ ವರ್ತನೆ ತೋರುತ್ತಿದೆ. ಹಾಗಾದರೆ ಉತ್ತರ ಭಾರತಕ್ಕೆ ಕಾಂಗ್ರೆಸ್ ಏನು ಎಳ್ಳು ನೀರು ಬಿಡುತ್ತದೆಯೇ? ಎಂದು ಪ್ರಶ್ನಿಸಿದರು. 2011ರ ಜನಗಣತಿ ಆಧಾರಿತವಾಗಿ ಕ್ಷೇತ್ರ ಪುನರ್‌ವಿಂಗಡಣೆ ಮತ್ತು ಶೇ.33ರ ಮಹಿಳಾ ಮೀಸಲಾತಿ ಎರಡನ್ನೂ ಕೇಂದ್ರ ಸರಕಾರ ಒಟ್ಟೊಟ್ಟಿಗೆ ತೆಗೆದುಕೊಂಡಿದೆ. ಆದರೆ, ಕಾಂಗ್ರೆಸ್ ಜನರ ವಿಶ್ವಾಸ ಕಳೆದುಕೊಂಡ ಭಯದಲ್ಲಿ ವಿರೋಧಿಸುತ್ತಿದೆ ಎಂದು ಆರೋಪಿಸಿದರು.

ಲೋಕಸಭೆ ಸ್ಥಾನಗಳು 543 ಇರಲಿ, 850 ಆಗಲಿ ಮತದಾರರು ಮಾತ್ರ ಅವರೇ ಇರುತ್ತಾರೆ ಅಲ್ಲವೇ? ಎಂದು ಕಾಂಗ್ರೆಸ್ ಪಕ್ಷಕ್ಕೆ ತಿರುಗೇಟು ನೀಡಿದ ಜೋಶಿ, ಒಂದೊಂದು ಕ್ಷೇತ್ರದಲ್ಲಿ 40-50 ಲಕ್ಷ ಮತದಾರರಿದ್ದಾರೆ. ಇಷ್ಟು ಜನಸಂಖ್ಯೆಗೆ ಒಬ್ಬ ಸಂಸದರು ಎಲ್ಲರನ್ನೂ ತಲುಪಲು ಸಾಧ್ಯವೇ? ಕಾಂಗ್ರೆಸ್ ಇದರ ಅರಿವಿಲ್ಲವೇ? ಎಂದು ಪ್ರಶ್ನಿಸಿದರು.

ಕಳ್ಳನಿಗೊಂದು ಪಿಳ್ಳೆ ನೆಪ ಎಂಬಂತೆ ತಗಾದೆ

ಕಾಂಗ್ರೆಸ್ ಪಕ್ಷ ಮಹಿಳಾ ವಿರೋಧಿ ಆಗಿರುವುದು ಸ್ಪಷ್ಟ. ಹಾಗಾಗಿ 'ಕಳ್ಳನಿಗೊಂದು ಪಿಳ್ಳೆ ನೆಪ' ಎಂಬಂತೆ ತಗಾದೆ ತೆಗೆಯುತ್ತಿದೆ. ಮಹಿಳಾ ಮೀಸಲಾತಿ ವಿರೋಧಿಸಿ ಇದೀಗ ಸದನದಲ್ಲಿ ಸಮರ್ಥಿಸಿಕೊಳ್ಳಲು ಪರದಾಡುತ್ತಿದೆ. ಮಹಿಳಾ ಮೀಸಲಾತಿ ವಿರೋಧ ಮಾಡಬಾರದು ಎಂಬುದು ಕಾಂಗ್ರೆಸ್ ಸಂಸದರಿಗೂ ಗೊತ್ತಿತ್ತು. ಆದರೆ, ಅಪ್ರಬುದ್ಧ ನಾಯಕ ರಾಹುಲ್ ಗಾಂಧಿ ಮಾತು ಕೇಳಿ ಕೆಟ್ಟಿದ್ದಾರೆ. ಪ್ರಿಯಾಂಕಾ ಗಾಂಧಿ ಬುದ್ಧಿವಂತೆ ಎಂದುಕೊಂಡಿದ್ದೆ. ಆದರೆ, ರಾಹುಲ್ ಗಾಂಧಿಯಂತೆ ಇವರೂ ಅಪ್ರಬುದ್ಧರ ರೀತಿ ವರ್ತಿಸುತ್ತಿದ್ದಾರೆ ಎಂದು ಟೀಕಿಸಿದರು.

ಬನ್ನೇರುಘಟ್ಟಕ್ಕೆ ನಾಲ್ಕು ಆಫ್ರಿಕನ್ ಚೀತಾಗಳ ಎಂಟ್ರಿ!

ಬೆಂಗಳೂರು: ದಕ್ಷಿಣ ಆಫ್ರಿಕಾದಿಂದ ತರಲಾಗಿದ್ದ ನಾಲ್ಕು ಚೀತಾಗಳನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ ಶುಕ್ರವಾರ ಮಧ್ಯರಾತ್ರಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದ್ದಾರೆ.

ಕಲಬುರಗಿ ಕಾರ್ಯಕ್ರಮ ಮುಗಿಸಿ ಹೈದರಾಬಾದ್ ಮಾರ್ಗವಾಗಿ ಬೆಂಗಳೂರಿಗೆ ಆಗಮಿಸಿದ ಸಚಿವರು, ನೇರವಾಗಿ ಸರಕು ಸಾಗಣೆ ವಿಭಾಗಕ್ಕೆ ತೆರಳಿ ಬನ್ನೇರುಘಟ್ಟ ಮೃಗಾಲಯಕ್ಕೆ ತರಲಾಗಿರುವ ಈ ವಿದೇಶಿ ಅತಿಥಿಗಳನ್ನು ಬರಮಾಡಿಕೊಂಡಿದ್ದಾರೆ.

ಚೀತಾಗಳಿಗೆ ಹಾನಿಯಾಗದಂತೆ ವಿಶೇಷ ಕಾಳಜಿ:

ಚೀತಾಗಳಿಗೆ ಹವಾಮಾನ ಮತ್ತು ಪರಿಸರ ಬದಲಾವಣೆಯಿಂದ ಯಾವುದೇ ತೊಂದರೆ ಆಗದಂತೆ ವಿಶೇಷ ಕಾಳಜಿ ವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿರುವ ಖಂಡ್ರೆ, ಕ್ವಾರಂಟೈನ್ ವ್ಯವಸ್ಥೆ, 30 ದಿನಗಳ ನಿಯೋಜಿತ ಆಹಾರ, ಆರೋಗ್ಯ ತಪಾಸಣೆ ಸೇರಿದಂತೆ ಎಲ್ಲ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಪಶುವೈದ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಪ್ರಾಣಿಗಳನ್ನು ಸುರಕ್ಷಿತವಾಗಿ ಬನ್ನೇರು ಘಟ್ಟ ಜೀವವೈವಿಧ್ಯ ಉದ್ಯಾನಕ್ಕೆ ಸಾಗಿಸುವ ವ್ಯವಸ್ಥೆಯನ್ನೂ ಸಚಿವರು ಪರಿಶೀಲಿಸಿದ್ದಾರೆ.

ಒಂದು ಕಾಲದಲ್ಲಿ ಕರ್ನಾಟಕದ ಕಾಡುಗಳಲ್ಲಿ ಕಾಣಿಸಿಕೊಂಡಿದ್ದ ಚೀತಾಗಳು ಈಗ ಸಂಪೂರ್ಣವಾಗಿ ಅಳಿದು ಹೋಗಿವೆ. ಕನಿಷ್ಠ ಮೃಗಾಲಯಗಳಲ್ಲಾದರೂ ಜನತೆಗೆ ಈ ಅಪರೂಪದ ವನ್ಯಜೀವಿಗಳನ್ನು ನೋಡುವ ಅವಕಾಶ ದೊರಕಬೇಕು ಎಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಸಚಿವರು ಪೋಸ್ಟ್ ಮಾಡಿಕೊಂಡಿದ್ದಾರೆ. ಚೀತಾಗಳ ಸಂರಕ್ಷಣೆ ಮತ್ತು ಸುರಕ್ಷತೆಗೆ ಅತ್ಯಂತ ಆದ್ಯತೆ ನೀಡುವಂತೆ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧಿಕಾರಿಗಳಿಗೆ ಸಚಿವರು ಸೂಚಿಸಿದ್ದಾರೆ.

ಪ್ರಾಜೆಕ್ಟ್ ಚೀತಾ

ಭಾರತಕ್ಕೆ ಆಫ್ರಿಕನ್ ಚೀತಾಗಳನ್ನು ತರುವುದು ಇದೇ ಮೊದಲಲ್ಲ. 2022ರಲ್ಲಿ ಕೇಂದ್ರ ಸರಕಾರದ ಪ್ರಾಜೆಕ್ಟ್ ಚೀತಾ ಅಡಿಯಲ್ಲಿ ನಮೀಬಿಯಾ ಮತ್ತು ದಕ್ಷಿಣ ಆಫ್ರಿಕಾದಿಂದ 20 ಚೀತಾಗಳನ್ನು ಮಧ್ಯಪ್ರದೇಶದ ಕುನೋ ರಾಷ್ಟ್ರೀಯ ಉದ್ಯಾನವನಕ್ಕೆ ತರಲಾಗಿತ್ತು. ಆದರೆ, ರೇಡಿಯೋ ಕಾಲರ್‌ಗಳಿಂದಾದ ಚರ್ಮದ ಸೋಂಕು , ತೀವ್ರ ಉಷ್ಣಾಂಶ ಮತ್ತು ಹವಾಮಾನ ವೈಪರೀತ್ಯ ಹಾಗೂ ಪರಸ್ಪರ ಕಾಳಗಗಳಿಂದಾಗಿ ಮರಿಗಳೂ ಸೇರಿದಂತೆ ಸುಮಾರು 10ಕ್ಕೂ ಹೆಚ್ಚು ಚೀತಾಗಳು ಮೃತಪಟ್ಟಿದ್ದವು. ಈ ಹಿನ್ನೆಲೆಯಲ್ಲಿಯೇ ವೈಫಲ್ಯಗಳಿಂದ ಪಾಠ ಕಲಿತಿರುವ ಅರಣ್ಯ ಇಲಾಖೆ, ಬನ್ನೇರುಘಟ್ಟದಲ್ಲಿ ಚೀತಾಗಳ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಿದೆ.

ಇನ್ನಷ್ಟು ಚೆಂದಗೊಳಿಸಲು ಸುಂದರ ಹೂವಿಗೆ ಬಣ್ಣ ಹಚ್ಚಬಾರದು!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಒಳ್ಳೆಯದಾಗಿರುವುದನ್ನು ಬದಲಾಯಿಸುವ ಅಗತ್ಯವಿಲ್ಲ' (If something is good no need to change it) ಎಂಬ ಮಾತಿದೆ. ಒಂದು ವ್ಯವಸ್ಥೆ ಅಥವಾ ವಸ್ತು ಈಗಾಗಲೇ ನಮಗೆ ನಿರೀಕ್ಷಿತ ಫಲಿತಾಂಶ ನೀಡುತ್ತಿರುವಾಗ, ಅದರ ಮೇಲೆ ಅನಗತ್ಯ ಪ್ರಯೋಗಗಳನ್ನು ಮಾಡುವುದು ಅಪಾಯಕಾರಿ. ಇದನ್ನು ಇಂಗ್ಲಿಷ್‌ನಲ್ಲಿ 'If it ain't broke, don't fix it' ಎನ್ನುತ್ತಾರೆ.

ಯಾವುದೇ ಒಂದು ವಿಷಯ 'ಚೆನ್ನಾಗಿದೆ' ಎಂದರೆ ಅದರ ಅರ್ಥ ಅಲ್ಲಿ ಒಂದು ಅದ್ಭುತವಾದ ಸಮತೋಲನ (ಬ್ಯಾಲೆನ್ಸ್) ಇದೆ ಎಂದರ್ಥ. ಉದಾಹರಣೆಗೆ, ನಿಮ್ಮ ಮನೆಯಲ್ಲಿ ಅಜ್ಜಿ ಮಾಡುವ ಸಾಂಬಾರ್ ರುಚಿ ಅದ್ಭುತವಾಗಿರುತ್ತದೆ. ಅದಕ್ಕೆ 'ಇನ್ನೂ ಚೆನ್ನಾಗಿರಲಿ' ಎಂದು ನೀವು ವಿದೇಶಿ ಮಸಾಲೆಗಳನ್ನು ಹಾಕಿದರೆ, ಅದು ತನ್ನ ಅಸಲಿ ಸೊಬಗನ್ನು ಕಳೆದುಕೊಳ್ಳುತ್ತದೆ. ಖಾರ, ಉಪ್ಪು, ಹುಳಿ ಮತ್ತು ಮನೆಯಲ್ಲೇ ಕುಟ್ಟಿದ ಮಸಾಲೆಯ ಪ್ರಮಾಣವು ದಶಕಗಳ ಅನುಭವದ ಫಲವಾಗಿರುತ್ತದೆ. ಅಲ್ಲಿ ಪ್ರತಿಯೊಂದು ಪದಾರ್ಥವೂ ಇನ್ನೊಂದಕ್ಕೆ ಪೂರಕವಾಗಿ ಕೆಲಸ ಮಾಡುತ್ತದೆ. ಇಲ್ಲಿ 'ಬದಲಾವಣೆ' ಎನ್ನುವುದು ಸುಧಾರಣೆಗಿಂತ ಹೆಚ್ಚಾಗಿ ಆ ಮೂಲ ಸ್ವಾದ ಅಥವಾ ಸತ್ವವನ್ನು ನಾಶಪಡಿಸುತ್ತದೆ.

ಬದಲಾವಣೆ ಎನ್ನುವುದು ಯಾವಾಗಲೂ ಪ್ರಗತಿಯ ಸಂಕೇತ ಇಂದು ಭಾವಿಸಬೇಕಿಲ್ಲ. ಕೆಲವೊಮ್ಮೆ 'ಸ್ಥಿರತೆ'ಯೂ ಒಂದು ದೊಡ್ಡ ಸಾಧನೆಯೇ ಆಗಿರುತ್ತದೆ. ಯಾವುದೇ ಒಂದು ಸಿದ್ಧ ಮಾದರಿಯು (Proven Model) ನಮಗೆ ನಿರಂತರವಾಗಿ ಸುಖ ಅಥವಾ ಯಶಸ್ಸನ್ನು ನೀಡುತ್ತಿದ್ದರೆ, ಅದನ್ನು ಕದಡುವುದು, ಕೆಣಕುವುದು ಎಂದರೆ ಅಪಾಯವನ್ನು ಮೈಮೇಲೆ ಎಳೆದುಕೊಂಡಂತೆ. ಏಕೆಂದರೆ, ಆ ವ್ಯವಸ್ಥೆಯ ಮೂಲ ಸ್ವಾದ ಅಥವಾ ಸತ್ವವು ಒಮ್ಮೆ ನಾಶವಾದರೆ, ಮತ್ತೆ ಮೊದಲಿನ ಸ್ಥಿತಿಗೆ ತರುವುದು ಅಸಾಧ್ಯ.

ಪರಿಪೂರ್ಣತೆಗೆ ಅಂತ್ಯವಿಲ್ಲ ಎಂಬುದು ನಿಜವಾದರೂ, ತೃಪ್ತಿಕರವಾದ ಪರಿಪೂರ್ಣತೆಯನ್ನು ಗೌರವಿಸುವುದು ಜಾಣತನ. ಅಜ್ಜಿಯ ಕೈರುಚಿಯ ಸೊಬಗು ಇರುವುದೇ ಅದರ ಆ ಹಳೆಯ ಮತ್ತು ಸ್ಥಿರವಾದ ಮಸಾಲೆಯಲ್ಲಿ, ಅದನ್ನು ಬದಲಾಯಿಸಲು ಹೋದರೆ ನಮಗೆ ಸಿಗುವುದು ಹೊಸ ರುಚಿಯಲ್ಲ, ಬದಲಾಗಿ ಮೂಲ ರುಚಿಯ ಅಂತ್ಯ. ಹಾಗಾಗಿ, ಯಾವುದು ಚೆನ್ನಾಗಿದೆಯೋ ಅದನ್ನು ಹಾಗೆಯೇ ಆಸ್ವಾದಿಸುವುದರಲ್ಲಿ ವಿಶಿಷ್ಟವಾದ ಕಲೆ ಇದೆ.

ಒಂದು ಯಂತ್ರ ಅಥವಾ ಸಾಫ್ಟ್‌ವೇರ್ ಸರಳವಾಗಿ ಕೆಲಸ ಮಾಡುತ್ತಿರುವಾಗ ಅದನ್ನು 'ಇನ್ನೂ ಸ್ಮಾರ್ಟ್' ಮಾಡಲು ಹೋದರೆ ಏನಾಗುತ್ತದೆ? ಎಂಜಿನಿಯರಿಂಗ್ ಲೋಕದಲ್ಲಿ ಇದಕ್ಕೆ 'ಓವರ್ ಎಂಜಿನಿಯರಿಂಗ್' ಎನ್ನುತ್ತಾರೆ. ಸರಳವಾದ ಯಂತ್ರದಲ್ಲಿ ಭಾಗಗಳು ಕಡಿಮೆ ಇರುತ್ತವೆ, ಹೀಗಾಗಿ ಕೆಟ್ಟುಹೋಗುವ ಸಾಧ್ಯತೆಯೂ ಕಡಿಮೆ. ಆದರೆ, ಹೆಚ್ಚಿನ ನಿರೀಕ್ಷೆಯೊಂದಿಗೆ ನಾವು ಹೊಸ ತಂತ್ರಜ್ಞಾನ ಅಥವಾ ಭಾಗಗಳನ್ನು ಜೋಡಿಸಿದಾಗ, ಆ ಯಂತ್ರದ ಸಂಕೀರ್ಣತೆ (Complexity) ಹೆಚ್ಚಾಗುತ್ತದೆ. ಹೊಸದಾಗಿ ಸೇರಿಸಿದ ಒಂದು ಸಣ್ಣ ಭಾಗ ಕೆಟ್ಟರೂ ಇಡೀ ಯಂತ್ರವೇ ಸ್ಥಗಿತಗೊಳ್ಳಬಹುದು. ಇಲ್ಲಿ ಉತ್ತಮವಾಗಿದ್ದ ಹಳೆಯ ಫಲಿತಾಂಶವೂ ಇಲ್ಲವಾಗಿ, ಹೊಸ ಸಮಸ್ಯೆಗಳ ಸರಣಿಯೇ ಆರಂಭವಾಗುತ್ತದೆ.

ಬದಲಾವಣೆ ಎನ್ನುವುದು ಯಾವಾಗಲೂ ಅನಿಶ್ಚಿತತೆಯನ್ನು ಹೊತ್ತು ತರುತ್ತದೆ. ಒಂದು ಪದ್ಧತಿಯು ದೀರ್ಘಕಾಲದಿಂದ ಯಶಸ್ವಿಯಾಗಿ ನಡೆಯುತ್ತಿದೆ ಎಂದರೆ, ಅದು ಕಾಲದ ಪರೀಕ್ಷೆಯಲ್ಲಿ ಗೆದ್ದಿದೆ ಎಂದರ್ಥ. ಅದನ್ನು ಬದಲಿಸಲು ಹೋದಾಗ ನಾವು 'ಪರಿಚಿತ ಲಾಭ'ವನ್ನು ಬಿಟ್ಟು 'ಅಪರಿಚಿತ ನಷ್ಟ'ದ ಕಡೆಗೆ ಹೆಜ್ಜೆ ಇಡುತ್ತೇವೆ. ನಿರೀಕ್ಷೆಗಳು ಗಗನಚುಂಬಿಯಾಗಿದ್ದಾಗ, ಸಣ್ಣ ಸೋಲು ಕೂಡ ದೊಡ್ಡ ದುರಂತದಂತೆ ಕಾಣುತ್ತದೆ.

'ಒಳ್ಳೆಯದನ್ನು ಉತ್ತಮಪಡಿಸುವುದು' ಪ್ರಗತಿಯ ಲಕ್ಷಣವಾದರೂ, 'ಅದ್ಭುತವಾದುದನ್ನು ಕೆಣಕುವುದು' ಮೂರ್ಖತನವಾಗಬಹುದು. ಈಗಾಗಲೇ ಫಲಿತಾಂಶ ಉತ್ತಮವಾಗಿರುವಾಗ, ನಮ್ಮ ನಿರೀಕ್ಷೆಗಳನ್ನು ವಾಸ್ತವಕ್ಕೆ ಹತ್ತಿರವಿಟ್ಟುಕೊಳ್ಳುವುದು ಜಾಣತನ. ಬದಲಾವಣೆಯ ಹೆಸರಿನಲ್ಲಿ ಅತಿಯಾದ ನಿರೀಕ್ಷೆ ಇಟ್ಟುಕೊಂಡು, ಇರುವ ನೆಮ್ಮದಿಯನ್ನು ಕಳೆದುಕೊಳ್ಳುವ ಬದಲು, ಸುಗಮವಾಗಿ ಸಾಗುತ್ತಿರುವ ಪದ್ಧತಿಯನ್ನು ಗೌರವಿಸುವುದೇ ನಿಜವಾದ 'ಸಂತೋಷ'ದ ಸೂತ್ರ. ಯಾವುದೋ ಒಂದು ಹೊಸ ಮಾದರಿಯ ಬೆನ್ನತ್ತಿ ಹೋದಾಗ, ಕೈಯಲ್ಲಿದ್ದ ಹಳೆಯ ಫಲಿತಾಂಶವೂ ಕೈಜಾರಿ ಹೋಗುವ ಸಾಧ್ಯತೆ ಇರುತ್ತದೆ ಎಂಬ ಎಚ್ಚರಿಕೆ ನಮಗಿರಬೇಕು.

'ಒಳ್ಳೆಯದನ್ನು ಕೆಣಕಬಾರದು' ಎಂಬ ತತ್ವಕ್ಕೆ 'ನ್ಯೂ ಕೋಕ್' (New Coke) ಅತ್ಯುತ್ತಮ ಉದಾಹರಣೆ. 1980ರ ದಶಕದಲ್ಲಿ ಕೋಕಾ-ಕೋಲಾ ಮಾರುಕಟ್ಟೆಯಲ್ಲಿ ಅಗ್ರಸ್ಥಾನದಲ್ಲಿದ್ದರೂ, ತನ್ನ ಪ್ರತಿಸ್ಪರ್ಧಿ 'ಪೆಪ್ಸಿ'ಯಿಂದ ತೀವ್ರ ಪೈಪೋಟಿ ಎದುರಿಸುತ್ತಿತ್ತು. ಪೆಪ್ಸಿಯ ರುಚಿ ಸ್ವಲ್ಪ ಸಿಹಿಯಾಗಿತ್ತು ಮತ್ತು ಯುವಜನರಿಗೆ ಹೆಚ್ಚು ಇಷ್ಟವಾಗುತ್ತಿತ್ತು. ಇದರಿಂದ ಆತಂಕಗೊಂಡ ಕೋಕಾ-ಕೋಲಾ ಕಂಪನಿಯು, ತನ್ನ ಸುಮಾರು 99 ವರ್ಷಗಳ ಹಳೆಯ ಮತ್ತು ಯಶಸ್ವಿ ಫಾರ್ಮುಲಾವನ್ನು ಬದಲಾಯಿಸಲು ನಿರ್ಧರಿಸಿತು. ಅವರಿಗೆ ತಮ್ಮ ಮೂಲ ರುಚಿ 'ಒಳ್ಳೆಯದಾಗಿದ್ದರೂ', ಅದನ್ನು 'ಇನ್ನೂ ಉತ್ತಮ' ಮಾಡಬೇಕೆಂಬ ಹಂಬಲವಿತ್ತು.

1985 ಏಪ್ರಿಲ್‌ನಲ್ಲಿ ಕಂಪನಿಯು ಹೊಸ ರುಚಿಯ 'ನ್ಯೂ ಕೋಕ್' ಅನ್ನು ಮಾರುಕಟ್ಟೆಗೆ ಪರಿಚಯಿಸಿತು. ಕಂಪನಿಯು ನಡೆಸಿದ ರುಚಿ ಪರೀಕ್ಷೆಗಳಲ್ಲಿ ಹೊಸ ಪಾನೀಯ ಗೆದ್ದಿತ್ತು ನಿಜ. ಆದರೆ, ಅವರು ಜನರ ಭಾವನಾತ್ಮಕ ಸಂಬಂಧವನ್ನು ಲೆಕ್ಕಕ್ಕೇ ತೆಗೆದುಕೊಂಡಿರಲಿಲ್ಲ. ಕೋಕಾ-ಕೋಲಾ ಕೇವಲ ಒಂದು ಪಾನೀಯವಾಗಿರದೇ, ಜನರ ಸಂಸ್ಕೃತಿಯ ಭಾಗವಾಗಿತ್ತು. ಹೊಸ ರುಚಿ ಬಂದ ಕೂಡಲೇ ಅಮೆರಿಕದಾದ್ಯಂತ ಜನ ಆಕ್ರೋಶ ವ್ಯಕ್ತಪಡಿಸಿದರು. ಹಳೆಯ ಕೋಕ್ ಬಾಟಲಿಗಳನ್ನು ಸಂಗ್ರಹಿಸಿಟ್ಟುಕೊಳ್ಳಲು ಜನ ಮುಗಿಬಿದ್ದರು. ಕಂಪನಿಗೆ ದಿನಕ್ಕೆ ಸಾವಿರಾರು ಪ್ರತಿಭಟನಾ ಕರೆಗಳು ಮತ್ತು ಪತ್ರಗಳು ಬರಲಾರಂಭಿಸಿದವು.

ಜನರ ಒತ್ತಡ ಎಷ್ಟು ಹೆಚ್ಚಿತ್ತೆಂದರೆ, ಕೇವಲ 79 ದಿನಗಳಲ್ಲಿ ಕೋಕಾ-ಕೋಲಾ ಕಂಪನಿಯು ತನ್ನ ತಪ್ಪನ್ನು ಒಪ್ಪಿಕೊಂಡಿತು. ಅದೇ ವರ್ಷದ ಜುಲೈನಲ್ಲಿ ಮತ್ತೆ ಹಳೆಯ ಫಾರ್ಮುಲಾವನ್ನೇ 'ಕೋಕಾ-ಕೋಲಾ ಕ್ಲಾಸಿಕ್' ಹೆಸರಿನಲ್ಲಿ ಮಾರುಕಟ್ಟೆಗೆ ತರಲಾಯಿತು. ಈ ಸುದ್ದಿಯನ್ನು ಕೇಳಿ ಅಮೆರಿಕದ ಜನರು ಸಮಾಧಾನದ ನಿಟ್ಟುಸಿರು ಬಿಟ್ಟರು. ಒಂದು ವ್ಯವಸ್ಥೆ ಅಥವಾ ಉತ್ಪನ್ನವು ಈಗಾಗಲೇ ಜನರ ಮನ ಗೆದ್ದಿರುವಾಗ, ಅದನ್ನು ಕೇವಲ ಅಂಕಿ-ಅಂಶಗಳ ಆಧಾರದ ಮೇಲೆ ಬದಲಾಯಿಸಲು ಹೋದರೆ ಸೋಲು ಖಚಿತ. ಇದು ನಮಗೆ ನೀಡುವ ನೀತಿ - 'ಯಾವುದು ಅದ್ಭುತವಾಗಿ ಕೆಲಸ ಮಾಡುತ್ತಿದೆಯೋ, ಅದರಲ್ಲಿ ಅನಗತ್ಯವಾಗಿ ಕೈಹಾಕಬಾರದು.'

ನಮ್ಮ ಮಿದುಳು ಕೂಡ ಈ ತತ್ವದ ಮೇಲೆ ಕೆಲಸ ಮಾಡುತ್ತದೆ. ಒಂದು ಹಾದಿ ಸುಗಮವಾಗಿದೆ ಎಂದು ತಿಳಿದಾಗ ಮಿದುಳು ಅಲ್ಲಿ ಕಡಿಮೆ ಶಕ್ತಿಯನ್ನು ಬಳಸುತ್ತದೆ. ನಾವು ಅನಗತ್ಯವಾಗಿ ಬದಲಾವಣೆ ಮಾಡಲು ಹೋದರೆ, ಅದು ಮಿದುಳಿಗೆ ಹೆಚ್ಚಿನ ಒತ್ತಡ ಮತ್ತು ಸಮಯದ ವ್ಯಯವನ್ನು ಉಂಟುಮಾಡುತ್ತದೆ.

ಬದಲಾವಣೆ ಎನ್ನುವುದು ಪ್ರಗತಿಗೆ ಅಗತ್ಯ ನಿಜ, ಆದರೆ ಅದು 'ಅಗತ್ಯ' ಇದ್ದಾಗ ಮಾತ್ರ ಇರಬೇಕು. 'ಪೂರ್ಣವಾಗಿ ಅರಳಿದ ಹೂವಿನ ಮೇಲೆ ಮತ್ತೆ ಬಣ್ಣ ಹಚ್ಚಲು ಹೋದರೆ, ಅದರ ನೈಸರ್ಗಿಕ ಸೌಂದರ್ಯ ಅಳಿಸಿಹೋಗುತ್ತದೆ. 'ಪ್ರಕೃತಿಯಲ್ಲಿ ಪ್ರತಿಯೊಂದು ಜೀವಿಯೂ ತನ್ನದೇ ಆದ ಕಾಲಘಟ್ಟದಲ್ಲಿ ವಿಕಾಸಗೊಂಡು ಒಂದು ಹಂತದಲ್ಲಿ 'ಪರಿಪೂರ್ಣತೆ'ಯನ್ನು ತಲುಪುತ್ತದೆ. ಒಂದು ಹೂವು ಅರಳಿದೆ ಎಂದರೆ, ಅದು ಸೂರ್ಯನ ಬೆಳಕು, ಮಣ್ಣಿನ ಸಾರ ಮತ್ತು ನೀರಿನ ಅಂಶಗಳ ಸಮತೋಲನದಿಂದ ತನ್ನ ನೈಜ ಬಣ್ಣ ಮತ್ತು ಸುಗಂಧವನ್ನು ಪಡೆದುಕೊಂಡಿದೆ ಎಂದರ್ಥ.

ಈ ನೈಸರ್ಗಿಕ ಸೌಂದರ್ಯಕ್ಕೆ ಮನುಷ್ಯನು ತನ್ನ ಕೃತಕ ಬಣ್ಣವನ್ನು ಹಚ್ಚಲು ಹೋದರೆ, ಅದು ಆ ಹೂವಿನ ಜೀವಂತಿಕೆಯನ್ನು ಕುಂದಿಸುತ್ತದೆ. ಹೊರನೋಟಕ್ಕೆ ಅದು ಹೆಚ್ಚು ಪ್ರಕಟವಾಗಿ ಕಾಣಬಹುದು, ಆದರೆ ಅದರ ನೈಜ ಸತ್ವ ಮತ್ತು ಮೃದುತ್ವ ಅಲ್ಲಿ ನಾಶವಾಗುತ್ತದೆ. ಹೀಗಾಗಿ, ನಿಮ್ಮ ಜೀವನದಲ್ಲಿ ಅಥವಾ ಕೆಲಸದಲ್ಲಿ ಯಾವುದಾದರೂ ವಿಷಯ ನಿಮಗೆ ತೃಪ್ತಿ ನೀಡುತ್ತಿದ್ದರೆ, ಅದನ್ನು ಪ್ರೀತಿಯಿಂದ ಹಾಗೆಯೇ ಉಳಿಸಿಕೊಳ್ಳುವುದು ಜಾಣತನ!

ಪ್ರತಿಯೊಂದರಲ್ಲೂ ಸೌಂದರ್ಯವಿದೆ!

'ಪ್ರತಿಯೊಂದರಲ್ಲೂ ಸೌಂದರ್ಯವಿದೆ, ಆದರೆ ಅದನ್ನು ಪ್ರತಿಯೊಬ್ಬರೂ ನೋಡುವುದಿಲ್ಲ' ಇದು ಚೀನಾ ದೇಶದ ಬೋಧಕ, ರಾಜತಾಂತ್ರಿಕ ಹಾಗೂ ತತ್ವಜ್ಞಾನಿ ಕನ್ಫ್ಯೂಷಿಯಸ್‌ನ ಪ್ರಸಿದ್ಧ ಉಕ್ತಿ. ಜಗತ್ತು ಅದ್ಭುತಗಳ ಗಣಿ. ಇಲ್ಲಿ ಸಣ್ಣ ಕಣದಿಂದ ಹಿಡಿದು ಬೃಹತ್ ಬ್ರಹ್ಮಾಂಡದವರೆಗೆ ಎಲ್ಲವೂ ಸೌಂದರ್ಯದಿಂದಲೇ ಆವೃತವಾಗಿದೆ. ಆದರೆ, ನಾವೇಕೆ ಎಲ್ಲದರಲ್ಲೂ ಸೌಂದರ್ಯವನ್ನು ಕಾಣಲು ವಿಫಲರಾಗುತ್ತೇವೆ? ಇದರ ಉತ್ತರ ಅಡಗಿರುವುದು ನಾವು ನೋಡುವ 'ಕಣ್ಣಿನಲ್ಲಿ' ಅಲ್ಲ, ಬದಲಾಗಿ ನಮ್ಮ 'ದೃಷ್ಟಿಕೋನದಲ್ಲಿ.'

ನಮ್ಮ ಸಮಾಜವು ಸೌಂದರ್ಯವನ್ನು ಕೇವಲ ಚರ್ಮದ ಬಣ್ಣ, ಮುಖದ ಆಕಾರ ಅಥವಾ ವಸ್ತುವಿನ ಹೊಳಪಿಗೆ ಸೀಮಿತಗೊಳಿಸಿದೆ. ಆದರೆ, ನಿಜವಾದ ಸೌಂದರ್ಯವು ವಸ್ತುವಿನ ಗುಣ ಮತ್ತು ಅದರ ಅಸ್ತಿತ್ವದಲ್ಲಿದೆ. ಉದಾಹರಣೆಗೆ, ಒಂದು ಹಳೆಯ, ಸುಕ್ಕುಗಟ್ಟಿದ ಕೈಗಳನ್ನು ನೋಡಿ. ಒಬ್ಬ ಸಾಮಾನ್ಯ ವ್ಯಕ್ತಿಗೆ ಅದು ಕೇವಲ ವಯಸ್ಸಾದ ಕುರುಹಾಗಿ ಕಾಣಬಹುದು. ಆದರೆ ಒಬ್ಬ ಕವಿಗೆ ಅಥವಾ ಆತನ ಮೊಮ್ಮಗನಿಗೆ, ಆ ಕೈಗಳಲ್ಲಿ ದಶಕಗಳ ಕಾಲದ ಪರಿಶ್ರಮ, ತ್ಯಾಗ ಮತ್ತು ಮಮತೆಯ ಸೌಂದರ್ಯ ಕಾಣಿಸುತ್ತದೆ. ಆ ಕೈಗಳು ಸವೆದಿರುವುದು ಇನ್ನೊಬ್ಬರ ಜೀವನವನ್ನು ಕಟ್ಟಲು. ಈ 'ತ್ಯಾಗ'ವೇ ಅಲ್ಲಿನ ಅಸಲಿ ಸೌಂದರ್ಯ.

ಜನರು ಸಾಮಾನ್ಯವಾಗಿ ಅರಳಿದ ಹೂವು ಅಥವಾ ಮಳೆಬಿಲ್ಲನ್ನು ಸುಂದರ ಎಂದು ಕರೆಯುತ್ತಾರೆ. ಆದರೆ ಒಣಗಿದ ಎಲೆ ಅಥವಾ ಗುಡುಗಿನ ಆರ್ಭಟದಲ್ಲಿ ಸೌಂದರ್ಯ ಕಾಣುವವರು ವಿರಳ. ಗಿಡದಿಂದ ಉದುರಿ ನೆಲದ ಮೇಲೆ ಬಿದ್ದಿರುವ ಒಣ ಎಲೆಯು ಸಾವು ಅಥವಾ ಅಂತ್ಯದ ಸಂಕೇತವಾಗಿ ಕಾಣಬಹುದು. ಆದರೆ ಅದು ಮಣ್ಣಿಗೆ ಗೊಬ್ಬರವಾಗಿ ಇನ್ನೊಂದು ಜೀವಕ್ಕೆ ದಾರಿಯಾಗುತ್ತದೆ ಎಂಬ ಸತ್ಯವನ್ನು ಅರಿತಾಗ, ಆ ಉದುರುವಿಕೆಯಲ್ಲೂ ಒಂದು 'ಸಾರ್ಥಕತೆಯ ಸೌಂದರ್ಯ' ಕಾಣುತ್ತದೆ. ಮಳೆ ಬಂದಾಗ ಮಣ್ಣಿನಿಂದ ಬರುವ ಆ 'ಸೋನೆಯ ಘಮ' ಅದ್ಭುತ ಸೌಂದರ್ಯ. ನಗರದ ಜನರಿಗೆ ಕೆಸರು ಅಸಹ್ಯವಾಗಿ ಕಾಣಬಹುದು, ಆದರೆ ಒಬ್ಬ ರೈತನಿಗೆ ಅದೇ ಕೆಸರು ಬಂಗಾರದಂತೆ ಸುಂದರವಾಗಿ ಕಾಣಬಹುದು.

ಒಬ್ಬ ಶಿಲ್ಪಿ ರಸ್ತೆಯ ಬದಿಯಲ್ಲಿ ಬಿದ್ದಿರುವ ಒಂದು ಒರಟು ಕಲ್ಲನ್ನು ನೋಡಿದಾಗ, ಉಳಿದವರಿಗೆ ಅದು ಕೇವಲ ಕಲ್ಲು. ಆದರೆ ಶಿಲ್ಪಿಗೆ ಆ ಕಲ್ಲಿನ ಒಳಗೆ ಅಡಗಿರುವ ಸುಂದರ ವಿಗ್ರಹ ಕಾಣಿಸುತ್ತದೆ. ಅವನು ಅನಗತ್ಯ ಭಾಗಗಳನ್ನು ಕೆತ್ತಿ ತೆಗೆದಾಗ ಲೋಕಕ್ಕೆ ಆ ಸೌಂದರ್ಯ ಗೋಚರವಾಗುತ್ತದೆ. ಸೌಂದರ್ಯ ಅಲ್ಲಿ ಮೊದಲೇ ಇತ್ತು, ಅದನ್ನು ನೋಡುವ ಕಣ್ಣು ಶಿಲ್ಪಿಯದಾಗಿತ್ತು ಅಷ್ಟೆ.

ಸೌಂದರ್ಯ ಎನ್ನುವುದು ಕೇವಲ ಕಲೆಗೆ ಸೀಮಿತವಲ್ಲ. ವಿಜ್ಞಾನಿಗಳಿಗೆ ಒಂದು ಸಂಕೀರ್ಣವಾದ ಸಮೀಕರಣದಲ್ಲಿ ಸೌಂದರ್ಯ ಕಾಣುತ್ತದೆ. ಐನ್‌ಸ್ಟೈನ್‌ನ E = mc2 ಸೂತ್ರವನ್ನು ನೋಡಿ. ಅಷ್ಟು ಸರಳವಾದ ಅಕ್ಷರಗಳಲ್ಲಿ ಇಡೀ ಬ್ರಹ್ಮಾಂಡದ ಶಕ್ತಿಯ ರಹಸ್ಯ ಅಡಗಿದೆ ಎನ್ನುವುದೇ ಒಂದು ಬೌದ್ಧಿಕ ಸೌಂದರ್ಯ.

ಜೀವನದಲ್ಲಿ ನಾವು ಸೋತಾಗ ಅಥವಾ ನೋವಿನಲ್ಲಿದ್ದಾಗ ಜಗತ್ತು ಕಪ್ಪಾಗಿ ಕಾಣುತ್ತದೆ. ಆದರೆ ಆ ನೋವು ನಮ್ಮನ್ನು ಮಾಗಿಸುತ್ತದೆ, ನಮಗೆ ಸಹಾನುಭೂತಿಯನ್ನು ಕಲಿಸುತ್ತದೆ. ಒಬ್ಬ ವ್ಯಕ್ತಿ ಎಡವಿ ಬಿದ್ದಾಗ ಅವನು ಎದ್ದು ನಿಲ್ಲುವ 'ಛಲ' ಇದೆಯಲ್ಲ, ಅದು ಜಗತ್ತಿನ ಅತ್ಯಂತ ಸುಂದರ ದೃಶ್ಯಗಳಲ್ಲಿ ಒಂದು. ಗಾಯದ ಕಲೆಗಳು ನಾವು ಹೋರಾಡಿ ಗೆದ್ದಿದ್ದೇವೆ ಎಂಬುದಕ್ಕೆ ಸಾಕ್ಷಿ. ಅವುಗಳನ್ನೂ ಸೌಂದರ್ಯದ ಸಂಕೇತವಾಗಿ ನೋಡಬಹುದು.

ಜಪಾನಿನ ಸಂಸ್ಕೃತಿಯಲ್ಲಿ 'ವಾಬಿ-ಸಾಬಿ' ಎಂಬ ಅದ್ಭುತ ಪರಿಕಲ್ಪನೆಯಿದೆ. ಇದು 'ಅಪೂರ್ಣತೆಯಲ್ಲಿ ಸೌಂದರ್ಯವನ್ನು ಕಾಣುವುದು' (Beauty in imperfection). ಒಡೆದ ಮಡಕೆಯನ್ನು ಬಂಗಾರದ ಲೇಪನ ಹಚ್ಚಿ ಜೋಡಿಸುವ ಕಲೆಯು ಇದನ್ನು ಪ್ರತಿಪಾದಿಸುತ್ತದೆ. ವಸ್ತು ಒಡೆದಿದೆ ಎಂಬುದು ಅದರ ಇತಿಹಾಸದ ಭಾಗ, ಅದನ್ನು ಮುಚ್ಚಿಡುವ ಬದಲು ಎತ್ತಿ ತೋರಿಸುವುದು ಸೌಂದರ್ಯ ಎಂದು ಅವರು ನಂಬುತ್ತಾರೆ.

ನಾವು ಸೌಂದರ್ಯವನ್ನು ಕಾಣಲು ವಿಫಲರಾಗಲು ಪ್ರಮುಖ ಕಾರಣ ನಮ್ಮ 'ಪೂರ್ವಗ್ರಹ ಪೀಡಿತ ಮನಸ್ಸು'. ನಾವು ಮೊದಲೇ ಒಂದು ವಸ್ತುವಿನ ಬಗ್ಗೆ ಒಂದು ಚಿತ್ರಣವನ್ನು ಹೊಂದಿರುತ್ತೇವೆ. ಸಿನಿಮಾ ತಾರೆ ಸುಂದರವಾಗಿರಲೇಬೇಕು, ಸೂರ್ಯೋದಯ ಕೆಂಪಾಗಿಯೇ ಇರಬೇಕು ಎಂಬ ಚೌಕಟ್ಟುಗಳನ್ನು ಹಾಕಿಕೊಂಡಿದ್ದೇವೆ. ಈ ಚೌಕಟ್ಟುಗಳನ್ನು ಮೀರಿದಾಗ ಮಾತ್ರ ನಮಗೆ ಅನಿರೀಕ್ಷಿತ ಸೌಂದರ್ಯ ದರ್ಶನವಾಗುತ್ತದೆ. ನಮ್ಮ ಸುತ್ತಮುತ್ತಲಿನ ಜಗತ್ತು ಒಂದು ಬೃಹತ್ ಕಲಾಕೃತಿ. ದಣಿದು ಮನೆಗೆ ಬಂದ ತಂದೆಯ ಹಣೆಯ ಮೇಲಿನ ಬೆವರಿನ ಹನಿಯಲ್ಲಿ ಸೌಂದರ್ಯವಿದೆ. ಪಕ್ಷಿಗಳು ಗೂಡು ಕಟ್ಟುವ ಶ್ರಮದಲ್ಲಿದೆ. ಮೌನದ ಗಹನತೆಯಲ್ಲಿ ಸೌಂದರ್ಯವಿದೆ.

ಸೌಂದರ್ಯ ಎನ್ನುವುದು ಹೊರಗಿನ ವಸ್ತುವಲ್ಲ, ಅದು ಒಳಗಿನ ಸಂವೇದನೆ. ನಾವು ಪ್ರೀತಿಯಿಂದ, ಮುಕ್ತ ಮನಸ್ಸಿನಿಂದ ಜಗತ್ತನ್ನು ನೋಡಿದಾಗ ಮಾತ್ರ ಈ ಸಾರ್ವತ್ರಿಕ ಸೌಂದರ್ಯ ನಮಗೆ ಗೋಚರವಾಗುತ್ತದೆ. 'ಕಣ್ಣುಗಳು ಕೇವಲ ದೃಶ್ಯಗಳನ್ನು ನೋಡುತ್ತವೆ, ಆದರೆ ಮನಸ್ಸು ಮಾತ್ರ ಸೌಂದರ್ಯವನ್ನು ಗ್ರಹಿಸುತ್ತದೆ.' ಪ್ರತಿಯೊಂದರಲ್ಲೂ ಸೌಂದರ್ಯವಿದೆ ಎಂದು ನಂಬಿದವನಿಗೆ ಈ ಜಗತ್ತು ಎಂದಿಗೂ ಬೇಸರ ತರಿಸುವುದಿಲ್ಲ. ಅವನು ಕತ್ತಲೆಯಲ್ಲೂ ನಕ್ಷತ್ರಗಳ ಹೊಳಪನ್ನು ಸಂಭ್ರಮಿಸುತ್ತಾನೆ.

ನಾಯಕತ್ವ - ಐಸ್ ಕ್ರೀಮ್ ಮಾರಾಟ

'ನೀವು ಎಲ್ಲರನ್ನೂ ಸಂತೋಷವಾಗಿಡಲು ಬಯಸುವಿರಾದರೆ, ನಾಯಕನಾಗಲು ಹೋಗಬಾರದು - ಬದಲಾಗಿ ಐಸ್ ಕ್ರೀಮ್ ಮಾರಾಟ ಮಾಡಬೇಕು.' ಇದು ಆಪಲ್ ಸಂಸ್ಥಾಪಕ ಸ್ಟೀವ್ ಜಾಬ್ಸ್ ಅವರ ಮಾತು. ನಾಯಕತ್ವದ ಕಟು ವಾಸ್ತವ ಮತ್ತು ಜವಾಬ್ದಾರಿಯ ಬಗ್ಗೆ ಅತ್ಯಂತ ಆಳವಾದ ಅರ್ಥವನ್ನು ನೀಡುವ ಒಂದು ಹೇಳಿಕೆ. ಮ್ಯಾನೇಜ್‌ಮೆಂಟ್ ಕ್ಲಾಸುಗಳಲ್ಲಿ ಆಗಾಗ ಕೇಳಿಬರುವ ಮಾತಿದು.

ನಾಯಕತ್ವ ಎನ್ನುವುದು ಕೇವಲ ಅಧಿಕಾರ ಅಥವಾ ಗೌರವದ ಸ್ಥಾನವಲ್ಲ, ಅದು ನಿರ್ಧಾರಗಳನ್ನು ತೆಗೆದುಕೊಳ್ಳುವ ಪೀಠ. ಜೀವನದಲ್ಲಿ ನಾವು ಮಾಡುವ ಅತ್ಯಂತ ದೊಡ್ಡ ತಪ್ಪು ಎಂದರೆ 'ನಾಯಕತ್ವ' ಮತ್ತು 'ಜನಪ್ರಿಯತೆ'ಯನ್ನು ಒಂದೇ ಎಂದು ಭಾವಿಸುವುದು. ಐಸ್ ಕ್ರೀಮ್ ಮಾರಾಟಗಾರ ಎಲ್ಲರಿಗೂ ಇಷ್ಟವಾಗುತ್ತಾನೆ. ಅವನು ಹೋದಲ್ಲೆಲ್ಲ ತಂಪು, ನಗು ಮತ್ತು ಸಂತೋಷವನ್ನು ಹಂಚುತ್ತಾನೆ. ಅವನ ಕೆಲಸವೇ ಜನರ ಇಚ್ಛೆಗೆ ಅನುಗುಣವಾದ ಸಿಹಿಯನ್ನು ನೀಡುವುದು. ಇಲ್ಲಿ ಯಾರಿಗೂ ನೋವಾಗುವ ಪ್ರಶ್ನೆಯೇ ಇಲ್ಲ. ಆದರೆ ಒಬ್ಬ ನಾಯಕನ ಕೆಲಸ ಜನರ ಇಚ್ಛೆಯನ್ನು ಪೂರೈಸುವುದಲ್ಲ, ಬದಲಾಗಿ ವ್ಯವಸ್ಥೆಯ ಹಿತದೃಷ್ಟಿಯಿಂದ ಯಾವುದು 'ಸರಿ' ಇದೆಯೋ ಅದನ್ನು ಮಾಡುವುದು.

ಒಬ್ಬ ನಾಯಕ ತನ್ನ ಸಂಸ್ಥೆ, ದೇಶ ಅಥವಾ ತಂಡವನ್ನು ಮುನ್ನಡೆಸುವಾಗ ಅನೇಕ ಬಾರಿ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ಒಬ್ಬ ಸಂಪಾದಕ ಸುದ್ದಿಯ ಸತ್ಯಾಸತ್ಯತೆಯನ್ನು ಪರಿಶೀಲಿಸುವಾಗ ಕೆಲವು ಪ್ರಭಾವಿ ವ್ಯಕ್ತಿಗಳಿಗೆ ಬೇಸರವಾಗಬಹುದು. ಒಬ್ಬ ಉದ್ಯಮಿಯಾಗಿ ಕಂಪನಿಯ ಉಳಿವಿಗಾಗಿ ಕೆಲವು ಕಟ್ಟುನಿಟ್ಟಿನ ನಿಯಮಗಳನ್ನು ತಂದಾಗ ಉದ್ಯೋಗಿಗಳಿಗೆ ಸಿಟ್ಟು ಬರಬಹುದು. ಇಂಥ ಸಮಯದಲ್ಲಿ ನೀವು 'ಎಲ್ಲರಿಗೂ ಸಂತೋಷ ನೀಡಬೇಕು' ಎಂದು ಯೋಚಿಸಿದರೆ, ನೀವು ನಾಯಕನಾಗಿ ಸೋಲುತ್ತೀರಿ. ನಾಯಕತ್ವ ಎಂದರೆ ಕೆಲವೊಮ್ಮೆ 'ವಿಲನ್' ಆಗಲು ಸಿದ್ಧರಿರುವುದು.

ಸತ್ಯ ಯಾವಾಗಲೂ ಕಹಿಯಾಗಿರುತ್ತದೆ. ಎಲ್ಲರಿಗೂ ಸಕ್ಕರೆಯಂತಹ ಸುಳ್ಳುಗಳನ್ನು ಹೇಳುತ್ತಾ ಹೋದರೆ ನೀವು ಜನಪ್ರಿಯರಾಗಬಹುದು, ಆದರೆ ಒಳ್ಳೆಯ ನಾಯಕನಾಗಲಾರರಿ. ಸಮಾಜ ಸುಧಾರಕರು ಅಥವಾ ದಾರ್ಶನಿಕರನ್ನು ಗಮನಿಸಿ; ಅವರು ಸಮಾಜದ ಏಳಿಗೆಗಾಗಿ ಹೇಳಿದ ಮಾತುಗಳು ಆರಂಭದಲ್ಲಿ ಯಾರಿಗೂ ಇಷ್ಟವಾಗಲಿಲ್ಲ, ಅವರು ಅಂದು ಐಸ್ ಕ್ರೀಮ್ ಮಾರಲು ಹೋಗಿದ್ದರೆ ಇಂದಿನ ಸುಧಾರಣೆಗಳು ಸಾಧ್ಯವಾಗುತ್ತಿರಲಿಲ್ಲ. ನಾಯಕತ್ವ ಎನ್ನುವುದು ಕಹಿಯಾದರೂ ಗುಣಪಡಿಸುವ ಔಷಧಿಯಂತಿರಬೇಕು.

'ಎಲ್ಲರನ್ನೂ ಮೆಚ್ಚಿಸಲು ಹೋಗುವವನು ಕೊನೆಗೆ ಯಾರನ್ನೂ ಮೆಚ್ಚಿಸಲಾರ' ಎಂಬ ಮಾತಿದೆ. ಒಬ್ಬ ನಾಯಕ ತನ್ನ ದೃಷ್ಟಿಕೋನದಲ್ಲಿ (Vision) ಸ್ಪಷ್ಟತೆ ಹೊಂದಿರಬೇಕು. ಯಾರೋ ಟೀಕಿಸುತ್ತಾರೆ ಎಂಬ ಕಾರಣಕ್ಕೆ ತನ್ನ ತತ್ವಗಳನ್ನು ಬದಲಾಯಿಸುವವನು ಕೇವಲ ಒಬ್ಬ 'ಅನುಯಾಯಿ' ಆಗಿ ಉಳಿಯುತ್ತಾನೆಯೇ ಹೊರತು 'ನಾಯಕ'ನಾಗುವುದಿಲ್ಲ. ನಾಯಕತ್ವದ ಮೊದಲ ಪಾಠವೇ 'ಟೀಕೆಗಳನ್ನು ಎದುರಿಸುವ ಧೈರ್ಯ'.

ಜೀವನದಲ್ಲಿ ನಮಗೆ ಎರಡು ದಾರಿಗಳಿವೆ. ಒಂದು, ಎಲ್ಲರಿಗೂ ಇಷ್ಟವಾಗುವ ಸಿಹಿಯನ್ನು ಹಂಚುತ್ತಾ ವಿವಾದಗಳಿಂದ ದೂರವಿರುವುದು. ಇದು ಸುರಕ್ಷಿತ ಮತ್ತು ಸುಖಕರ. ಇನ್ನೊಂದು, ಸರಿಯಾದ ಹಾದಿಯಲ್ಲಿ ನಡೆಯುತ್ತಾ ಎದುರಾಗುವ ವಿರೋಧಗಳನ್ನು ಮೆಟ್ಟಿ ನಿಂತು ಬದಲಾವಣೆ ತರುವುದು. ನೀವು ಎರಡನೇ ಹಾದಿಯನ್ನು ಆರಿಸಿಕೊಂಡರೆ, ಟೀಕೆಗಳಿಗೆ ಅಂಜಬಾರದು. ಒಂದು ವೇಳೆ ನಿಮಗೆ ಕಹಿಯನ್ನು ಜೀರ್ಣಿಸಿಕೊಳ್ಳುವ ಶಕ್ತಿ ಇಲ್ಲದಿದ್ದರೆ, ಖಂಡಿತವಾಗಿಯೂ ಐಸ್ ಕ್ರೀಮ್ ಅಂಗಡಿ ತೆರೆಯುವುದು ಗೌರವಯುತವಾದ ಪರ್ಯಾಯ ದಾರಿ!

ಒಂದು ಶೀರ್ಷಿಕೆ ಮತ್ತು ತಲ್ಲಣ

ಅಮೆರಿಕದ ಪತ್ರಿಕೋದ್ಯಮ ಇತಿಹಾಸದಲ್ಲಿ 'FORD TO CITY: DROP DEAD' ಎಂಬ ಶೀರ್ಷಿಕೆಯು ಕೇವಲ ಒಂದು ಸುದ್ದಿಯಾಗಿ ಉಳಿದಿಲ್ಲ. 1975ರ ಅಕ್ಟೋಬರ್ 30ರಂದು 'ನ್ಯೂಯಾರ್ಕ್ ಡೈಲಿ ನ್ಯೂಸ್' ನೀಡಿದ ಈ ಒಂದು ಹೆಡ್ ಲೈನ್ ರಾಜಕೀಯ ಆಯುಧವಾಗಿ ಹೇಗೆ ರೂಪಾಂತರಗೊಂಡಿತು ಎಂಬುದು ಅತ್ಯಂತ ರೋಚಕವಾದ ಕಥೆ.

1970ರ ದಶಕದಲ್ಲಿ ನ್ಯೂಯಾರ್ಕ್ ನಗರವು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿತ್ತು. ಸಾಲದ ಹೊರೆ ಅತಿಯಾಗಿ, ನಗರವು ದಿವಾಳಿಯಾಗುವ ಅಂಚಿನಲ್ಲಿತ್ತು. ಅಂದಿನ ಮೇಯರ್ ಅಬ್ರಹಾಂ ಬೀಮ್ ಅವರು ಒಕ್ಕೂಟ ಸರಕಾರದಿಂದ ತುರ್ತು ಆರ್ಥಿಕ ನೆರವನ್ನು ಯಾಚಿಸಿದ್ದರು. ನಗರವನ್ನು ಉಳಿಸಲು ವಾಷಿಂಗ್ಟನ್‌ನ ಸಹಾಯ ಅತ್ಯಗತ್ಯವಾಗಿತ್ತು. 1975ರ ಅಕ್ಟೋಬರ್ 29ರಂದು ಅಂದಿನ ಅಮೆರಿಕದ ಅಧ್ಯಕ್ಷ ಜೆರಾಲ್ಡ್ ಫೋರ್ಡ್, 'ನ್ಯಾಷನಲ್ ಪ್ರೆಸ್ ಕ್ಲಬ್'ನಲ್ಲಿ ಭಾಷಣ ಮಾಡಿದರು. ಅವರು ನ್ಯೂಯಾರ್ಕ್ ನಗರಕ್ಕೆ ಯಾವುದೇ ರೀತಿಯ 'ಬೇಲ್-ಔಟ್' ಅಥವಾ ಆರ್ಥಿಕ ಸಹಾಯ ನೀಡಲು ಖಡಾಖಡಿ ನಿರಾಕರಿಸಿದರು. ನಗರವು ತನ್ನ ಆರ್ಥಿಕ ಶಿಸ್ತನ್ನು ತಾನೇ ಕಾಪಾಡಿಕೊಳ್ಳಬೇಕು ಎಂದು ಅವರು ವಾದಿಸಿದರು. ಅವರ ಭಾಷಣವು ಕಾನೂನುಬದ್ಧ ಮತ್ತು ತಾಂತ್ರಿಕ ಪದಗಳಿಂದ ಕೂಡಿದ ಸುದೀರ್ಘ ರಾಜಕೀಯ ಭಾಷಣವಾಗಿತ್ತು.



ಜೆರಾಲ್ಡ್ ಫೋರ್ಡ್ ಅವರ ಆ ಸುದೀರ್ಘ ಭಾಷಣವನ್ನು ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಕಟ್ಟಿಕೊಡುವುದು ಪತ್ರಿಕೆಯ ಮುಂದಿದ್ದ ಸವಾಲಾಗಿತ್ತು. 'ಡೈಲಿ ನ್ಯೂಸ್'ನ ವ್ಯವಸ್ಥಾಪಕ ಸಂಪಾದಕ ವಿಲಿಯಂ ಬ್ರ್ಯಾಸೆಡಿನ್, ಇಡೀ ಭಾಷಣದ ಸಾರಾಂಶವನ್ನು ಕೇವಲ ನಾಲ್ಕು ಪದಗಳಿಗೆ ಇಳಿಸಿದರು FORD TO CITY: DROP DEAD. ವಾಸ್ತವದಲ್ಲಿ ಅಧ್ಯಕ್ಷ ಫೋರ್ಡ್ ಎಲ್ಲಿಯೂ 'ಸತ್ತು ಹೋಗು' (Drop Dead) ಎಂಬ ಪದಗಳನ್ನು ಬಳಸಿರಲಿಲ್ಲ. ಆದರೆ, ನಗರಕ್ಕೆ ನೆರವು ನೀಡಲು ನಿರಾಕರಿಸಿದ ಅವರ ವರ್ತನೆಯು ನ್ಯೂಯಾರ್ಕ್ ಜನತೆಗೆ ಅಷ್ಟೇ ಕ್ರೂರವಾಗಿ ಭಾಸವಾಗಿತ್ತು. ಆ ಭಾವನೆಯನ್ನು ಶೀರ್ಷಿಕೆ ಹಿಡಿದಿಟ್ಟಿತ್ತು.

ಒಂದು ದೊಡ್ಡ ರಾಜಕೀಯ ವಿದ್ಯಮಾನವನ್ನು ಕೇವಲ 4 ಪದಗಳಲ್ಲಿ ವಿವರಿಸಿದ್ದು ಪತ್ರಿಕೋದ್ಯಮದ ಅತಿದೊಡ್ಡ ಚಮತ್ಕಾರ ಇಂದು ಈಗಲೂ ಪರಿಗಣಿಸಲಾಗುತ್ತದೆ. ಈ ಹೆಡ್‌ಲೈನ್ ಪ್ರಕಟವಾದ ತಕ್ಷಣ ನ್ಯೂಯಾರ್ಕ್ ನಗರದ ಜನರಲ್ಲಿ ಅಧ್ಯಕ್ಷರ ವಿರುದ್ಧ ಆಕ್ರೋಶ ಭುಗಿಲೆದ್ದಿತು. ಅಧ್ಯಕ್ಷರು ತಮ್ಮನ್ನು ಕಡೆಗಣಿಸಿದ್ದಾರೆ ಎಂಬ ಭಾವನೆ ಜನರಲ್ಲಿ ಮನೆಮಾಡಿತು.

1976ರ ಅಧ್ಯಕ್ಷೀಯ ಚುನಾವಣೆಯಲ್ಲಿ ಜೆರಾಲ್ಡ್ ಫೋರ್ಡ್ ಅವರು ನ್ಯೂಯಾರ್ಕ್ ರಾಜ್ಯದಲ್ಲಿ ತೀವ್ರ ಹಿನ್ನಡೆ ಅನುಭವಿಸಿದರು. ರಾಜಕೀಯ ವಿಶ್ಲೇಷಕರ ಪ್ರಕಾರ, ಈ ಒಂದೇ ಒಂದು ಶೀರ್ಷಿಕೆ ಫೋರ್ಡ್ ಅವರ ಇಮೇಜ್ ಅನ್ನು 'ಜನವಿರೋಧಿ' ಎಂದು ಚಿತ್ರಿಸುವಲ್ಲಿ ಯಶಸ್ವಿಯಾಗಿತ್ತು.

ಪತ್ರಿಕೋದ್ಯಮವು ಇಂದಿನ ಸುದ್ದಿಯನ್ನು ಹೇಳುವುದಷ್ಟೇ ಅಲ್ಲ, ನಾಳಿಗೆ ಸಲ್ಲುವ ದಾಖಲೆಯೂ ಹೌದು. ಇಂದು ಯಾರಾದರೂ 1970ರ ಅಮೆರಿಕದ ರಾಜಕೀಯ ಸ್ಥಿತಿಯನ್ನು ಅಭ್ಯಾಸ ಮಾಡಿದರೆ, ಅವರಿಗೆ ಈ ಶೀರ್ಷಿಕೆಯು ಅಂದಿನ ಪರಿಸ್ಥಿತಿಯ ಅತ್ಯುತ್ತಮ ಸಾಕ್ಷಿಯಾಗಿ ಸಿಗುತ್ತದೆ. ಇದು ಶೀರ್ಷಿಕೆಯು ಹೇಗೆ ಇತಿಹಾಸವನ್ನು ರೂಪಿಸುತ್ತದೆ ಎಂಬುದಕ್ಕೆ ಅತ್ಯಂತ ದೊಡ್ಡ ಉದಾಹರಣೆ. 'DROP DEAD' ಎಂಬ ಶೀರ್ಷಿಕೆಯು ಪತ್ರಿಕೋದ್ಯಮದ ಸೃಜನಶೀಲತೆಗೆ ಮೈಲಿಗಲ್ಲು, ಅಧಿಕಾರದಲ್ಲಿರುವವರ ನಿರ್ಧಾರಗಳನ್ನು ಜನಸಾಮಾನ್ಯರ ಭಾಷೆಯಲ್ಲಿ ವ್ಯಾಖ್ಯಾನಿಸಿದಾಗ ಅದು ಎಷ್ಟು ಶಕ್ತಿಶಾಲಿಯಾಗಿರುತ್ತದೆ ಎಂಬುದಕ್ಕೆ ಇದು ಇಂದಿಗೂ ಒಂದು ಪಾಠವಾಗಿದೆ.

ಸು+ಅಸ್ತಿ+ಕ ಒಳ್ಳೆಯದಾಗಿ ಇರುವುದರ ಪ್ರತೀಕವೇ ಸ್ವಸ್ತಿಕ

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅದಕ್ಕಿದೆ ಸುಮಾರು ಐದುಸಾವಿರ ವರ್ಷಗಳಿಗಿಂತಲೂ ದೀರ್ಘವಾದ ಇತಿಹಾಸ. ಆದಿಮಾನವನ ಶಿಲಾಯುಗದಿಂದ ಹಿಡಿದು ಈಗಿನ ಸ್ಪೇಸ್‌ಏಜ್‌ವರೆಗೂ ಉಳಿದುಕೊಂಡು ಬಂದಿರುವ ಪಾವಿತ್ರ್ಯ. ಭಾರತೀಯ ಸಂಸ್ಕೃತಿಯಿಂದ ಆವಿರ್ಭವಿಸಿದ್ದು ಎನ್ನುವುದಕ್ಕೆ ಸಾಕ್ಷಿಯಾಗಿ ಸಂಸ್ಕೃತ ಹೆಸರಿನಿಂದಲೇ ವಿಶ್ವದಲ್ಲೆಲ್ಲ ಗುರುತು-ಗೌರವ. ಹಿಂದೂ, ಬೌದ್ಧ, ಜೈನ ಇತ್ಯಾದಿ ಭಾರತೀಯ ಧರ್ಮಗಳಷ್ಟೇ ಅಲ್ಲದೆ ಕ್ರೈಸ್ತ, ಮುಸಲ್ಮಾನ, ಯಹೂದ್ಯ ಮೊದಲಾದ ಧರ್ಮಗಳಿಗೂ ಪಸರಿಸಿ ಅಲ್ಲೂ ಶುಭ ಸಂಕೇತ ಎನಿಸಿಕೊಂಡ ಶ್ರೇಷ್ಠತೆ. 19ನೇಯ ಶತಮಾನದ ಹೊತ್ತಿಗಂತೂ ನಾಣ್ಯ, ಇಸ್ಪೀಟ್‌ಎಲೆ ಮುಂತಾದವುಗಳಿಂದ ಹಿಡಿದು ಭವ್ಯವಾದ ವಾಸ್ತುಶಿಲ್ಪಗಳ ಗೋಡೆ ಕಂಬ ಕಮಾನು ಬಾಗಿಲುಗಳ ಮೇಲೆಲ್ಲ ಅದರದ್ದೇ ವಿನ್ಯಾಸ. ಅಷ್ಟೊಂದು ಅಗಾಧ ಪ್ರಮಾಣದಲ್ಲಿ ವಿಶ್ವಮಾನ್ಯತೆಯನ್ನು ಗಳಿಸಿದ್ದ ಚಿಹ್ನೆಯದು. ಯಾವಾಗ ಅದನ್ನು ಅಡಾಲ್ಫ್ ಹಿಟ್ಲರ್ ತನ್ನ ಸರ್ವಾಧಿಕಾರ ಸಾರ್ವಭೌಮತ್ವದ ಸಂಕೇತವಾಗಿಸಿದನೋ, ಅವನ ನಾತ್ಸಿ ಸೈನಿಕರು ಮಾಡಿದ ನರಮೇಧದ ಕಹಿನೆನಪುಗಳಿಗೆ ಯಾವಾಗ ಅದು ಮೂರ್ತರೂಪವಾಯಿತೋ, ಆವಾಗಿಂದ ತಟ್ಟಿಕೊಂಡಿತು ಅದಕ್ಕೆ ಕಳಂಕ. ಅದುವರೆಗೂ ಪ್ರಪಂಚದಾದ್ಯಂತ ಶುಭಸಂಕೇತವೆಂದು ರಾರಾಜಿಸಿದ್ದ ಆ ಚಿಹ್ನೆ, ಹಿಟ್ಲರ್‌ನೆಂಬ ನರಹಂತಕನು ತನ್ನ ಧ್ವಜದಲ್ಲಿ ಬಳಸಿದ್ದನೆಂಬ ಕಾರಣಕ್ಕೆ ಕರಾಳತೆಯ ಕುರುಹಾಗಿಬಿಟ್ಟಿತು. ಪ್ರಪಂಚದ ಕೆಲಭಾಗಗಳಲ್ಲಿ ಬಹಿಷ್ಕಾರಕ್ಕೂ ಗುರಿಯಾಗಬೇಕಾಯಿತು.

ಆ ಚಿಹ್ನೆ ಬೇರಾವುದೂ ಅಲ್ಲ, ನಮಗೆಲ್ಲರಿಗೂ ಚಿರಪರಿಚಿತವೇ ಆಗಿರುವ, ಭಾರತೀಯರಾಗಿ ನಾವು ಈವತ್ತಿಗೂ ಅತ್ಯಂತ ಪೂಜ್ಯ ಮತ್ತು ಪವಿತ್ರ ಭಾವನೆಯಿಂದ ಗೌರವಿಸುವ ಸ್ವಸ್ತಿಕ! ಅದರ ನಾಲ್ಕು ಬಾಹುಗಳು ಬದುಕಿನ ನಾಲ್ಕು (ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸ) ಆಶ್ರಮಗಳನ್ನು, ಅಥವಾ ನಾಲ್ಕು (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ) ವರ್ಣಭೇದಗಳನ್ನು, ಅಥವಾ ನಾಲ್ಕು (ಧರ್ಮ, ಅರ್ಥ, ಕಾಮ, ಮೋಕ್ಷ) ಪುರುಷಾರ್ಥಗಳನ್ನು, ಅಥವಾ ನಾಲ್ಕು (ಕೃತ, ತ್ರೇತಾ, ದ್ವಾಪರ, ಕಲಿ) ಯುಗಗಳನ್ನು, ಅಥವಾ ನಾಲ್ಕು (ಋಕ್, ಯಜುಃ, ಸಾಮ, ಅಥರ್ವ) ವೇದಗಳನ್ನು ಪ್ರತಿನಿಧಿಸುತ್ತವೆ ಅಂತೆಲ್ಲ ಬೇರೆಬೇರೆ ನಂಬಿಕೆ ವ್ಯಾಖ್ಯಾನ ವಿಶ್ಲೇಷಣೆಗಳಿವೆ.

ಆಗಲೇ ಹೇಳಿದಂತೆ 'ಸ್ವಸ್ತಿಕ' ಹೆಸರು ಸಂಸ್ಕೃತ ಭಾಷೆಯಿಂದ ಬಂದಿರುವುದು. ಅದನ್ನು ಸು+ಅಸ್ತಿ+ಕ ಎಂದು ಯಣ್ ಸಂಧಿ ಬಿಡಿಸಿ ಹೇಳಬಹುದು. ಸು ಎಂದರೆ ಒಳ್ಳೆಯ. ಅಸ್ತಿ ಎಂದರೆ ಆಗಿರುವುದು. ಕ ಎನ್ನುವುದು ಪ್ರತ್ಯಯ. ಒಟ್ಟು ಅರ್ಥ- ಒಳ್ಳೆಯದಾಗುವುದರ, ಒಳ್ಳೆಯದಾಗಿರುವುದರ ಸಂಕೇತ. ಭಾರತದಲ್ಲಿ ಸ್ವಸ್ತಿಕ ಎಂದು ಕರೆಯಲಾದ ಅದೇ ಚಿಹ್ನೆ ವಿಶ್ವದ ಬೇರೆ ನಾಗರಿಕತೆಗಳಲ್ಲಿ ಮೊದಲಿಗೆ ಬೇರೆ ಹೆಸರುಗಳಿಂದ ಗುರುತಿಸಲ್ಪಡುತ್ತಿತ್ತಂತೆ. ಗ್ರೀಕ್‌ನಲ್ಲಿ ಅದಕ್ಕಿದ್ದ ಹೆಸರು ಟೆಟ್ರಾಗ್ಯಾಮಾಡಿಯನ್ ಎಂದು. ಗ್ರೀಕ್ ಅಕ್ಷರ ಗ್ಯಾಮಾವನ್ನು ಪ್ರದಕ್ಷಿಣಾಕಾರದಲ್ಲಿ ನಾಲ್ಕುಸಲ ಬರೆದಾಗ ಆಗುವ ಚಿಹ್ನೆ ಆದ್ದರಿಂದ ಟೆಟ್ರಾಗ್ಯಾಮಾಡಿಯನ್. ಲ್ಯಾಟಿನ್‌ನಲ್ಲಿ ಅದನ್ನು ಗ್ಯಾಮಾಡಿಯಮ್ ಎಂದಷ್ಟೇ ಕರೆದರೆ, ಫ್ರೆಂಚ್‌ನಲ್ಲಿ ಲಾಕ್ರೊಕ್ಸ್ ಗ್ಯಾಮೆ ಎನ್ನುತ್ತಿದ್ದರಂತೆ. ಹಳೆಯ ಇಂಗ್ಲಿಷ್‌ನಲ್ಲಿ ಆ ಚಿಹ್ನೆಯ ಹೆಸರು ಫಿಲ್‌ಫೋಟ್ (flyfot) ಎಂಬುದಾಗಿತ್ತು. ಇಂಗ್ಲಿಷ್‌ನ ಎಲ್ ಅಕ್ಷರವನ್ನು ನಾಲ್ಕು ದಿಕ್ಕುಗಳಿಗೂ ಅಭಿಮುಖ ಆಗುವಂತೆ ನಾಲ್ಕು ಸಲ ಬರೆದಾಗ ಮೂಡುವ ಚಿಹ್ನೆ. ಆ ನಾಲ್ಕು ಎಲ್‌ಗಳು ಅನುಕ್ರಮವಾಗಿ love, light, life, luck (ಪ್ರೀತಿ, ಜ್ಯೋತಿ, ಜೀವ ಮತ್ತು ದೈವ) ಇವುಗಳನ್ನು ಸೂಚಿಸುತ್ತವೆಂಬ ಭಾವನೆ. ಭಾರತದ ಸನಾತನ ಸಂಸ್ಕೃತಿಯಲ್ಲೂ ಆ ಚಿಹ್ನೆಗೆ ಅದೇ ಅರ್ಥ, ಅದೇ ಪಾವಿತ್ರ್ಯ, ಅದೇ ಪೂಜ್ಯ ಭಾವನೆ ಎಂದರಿತ ಬ್ರಿಟಿಷರು ಹದಿನೆಂಟು-ಹತ್ತೊಂಬತ್ತನೇ ಶತಮಾನದ ಹೊತ್ತಿಗೆ ಪ್ರಪಂಚವಿಡೀ ಹೆಚ್ಚೂಕಡಿಮೆ ತಮ್ಮದೇ ಆಳ್ವಿಕೆಯೆಂದಾದ ಸಂದರ್ಭದಲ್ಲಿ ಇಂಗ್ಲಿಷ್ ಭಾಷೆಯಲ್ಲೂ ಅದನ್ನು ಸ್ವಸ್ತಿಕ ಎಂದೇ ಕರೆಯಲು ನಿರ್ಧರಿಸಿರಬೇಕು. ಅಲ್ಲಿಂದೀಚೆಗೆ ಅದು ಸ್ವಸ್ತಿಕವೆಂದೇ ಪ್ರಪಂಚದಾದ್ಯಂತ ಪರಿಚಿತವಾಯ್ತು.

ಜಿ. ವೆಂಕಟಸುಬ್ಬಯ್ಯನವರು 'ಇಗೋ ಕನ್ನಡ' ಸಾಮಾಜಿಕ ನಿಘಂಟುವಿನಲ್ಲಿ ಸ್ವಸ್ತಿಕದ ಬಗ್ಗೆ ಹೀಗೆ ಬರೆದಿದ್ದಾರೆ: ''ಈ ಶಬ್ದಕ್ಕೆ ಮಂಗಳಕರ ವಸ್ತು ಎಂದು ಅರ್ಥ. ಇದು ಸ್ವಸ್ತಿ ಎಂಬುದರಿಂದ ಬಂದದ್ದು. ಮಂಗಳಕರವಾದುದನ್ನು ಹೇಳುವ ವ್ಯಕ್ತಿಗೂ ಈ ಶಬ್ದವನ್ನೇ ಉಪಯೋಗಿಸುತ್ತಾರೆ. ಎದೆಯ ಮೇಲೆ ಒಂದು ತೋಳಿನ ಮೇಲೆ ಮತ್ತೊಂದು ತೋಳು ಬರುವಂತೆ ಇಡುವುದಕ್ಕೂ ಈ ಹೆಸರಿದೆ. ಇದು ಸುದರ್ಶನ ಚಕ್ರದ ನಾಲ್ಕು ಅರಗಳನ್ನು ಪ್ರತಿನಿಧಿಸುತ್ತದೆ ಎನ್ನಲಾಗಿದೆ. ಈ ಆಕಾರದ ಗುರುತು ಅಶೋಕನ ಕಾಲದ ಲಿಪಿಗಳಲ್ಲಿ ಸ್ವಸ್ತಿ ಎಂಬ ಶಬ್ದವನ್ನು ಸೂಚಿಸುತ್ತಿತ್ತು. ಜೈನರಲ್ಲಿ ಈಗಿನ ಅವಸರ್ಪಿಣಿ ಕಾಲದಲ್ಲಿ ಶುಭಚಿಹ್ನೆಗಳಲ್ಲಿ ಒಂದೆಂದು ನಂಬಲಾಗಿದೆ. ಶಿವಲಿಂಗದ ಗುರುತೆಂದು ಕೂಡ ಕೆಲವರು ನಂಬುತ್ತಾರೆ. ಪ್ರಾಚೀನ ಶಬ್ದಕೋಶಗಳಲ್ಲಿ ಇದಕ್ಕೆ ಚೌವಟ್ಟ (ನಾಲ್ಕು ದಾರಿಗಳು ಸೇರುವ ಜಾಗ), ಬೆಳ್ಳುಳ್ಳಿ, ಒಂದು ಬಗೆಯ ರೊಟ್ಟಿ, ವ್ಯಭಿಚಾರಿ, ಯೋಗಾಸನ ಮುಂತಾಗಿ ವಿವಿಧ ಅರ್ಥಗಳನ್ನು ಕೊಟ್ಟಿದ್ದಾರೆ. ಒಂದು ಬಗೆಯ ಅರಮನೆ ರಚನೆಗೂ ಸ್ವಸ್ತಿಕ ಎಂಬ ಹೆಸರಿದೆ. ರಾಜರ ಸೈನ್ಯಗಳಲ್ಲಿ, ಪರಾಕ್ರಮಿಗಳ ಆಯುಧಾಲಂಕಾರಗಳಲ್ಲಿ ಲಾಂಛನವಾಗಿ ಪಾಶ್ಚಾತ್ಯ ದೇಶಗಳಲ್ಲೂ ಉಪಯೋಗಿಸುತ್ತಿದ್ದರು.''

ಜರ್ಮನಿಯಲ್ಲಿ ಅಡಾಲ್ಫ್ ಹಿಟ್ಲರ್‌ನ ನ್ಯಾಷನಲ್ ಸೋಷಿಯಲಿಸ್ಟ್ ರಿಜೈಮ್ 1920ರಲ್ಲಿ ಶುರುವಾದಾಗ ಅದರ ಅಧಿಕೃತ ಲಾಂಛನ ಕೆಂಪು ಬಣ್ಣದೊಳಗಿನ ಬಿಳಿ ವರ್ತುಲದಲ್ಲಿ ಕಪ್ಪು ಬಣ್ಣದ ಸ್ವಸ್ತಿಕ, ನಲವತ್ತೈದು ಡಿಗ್ರಿಗಳಷ್ಟು ತಿರುಗಿಕೊಂಡಿರುವಂಥದು. ಹಿಟ್ಲರ್‌ನ ಆತ್ಮಚರಿತ್ರೆ 'ಮೈನ್ ಕೆಂಫ್'ನಲ್ಲಿ ಆ ಧ್ವಜವಿನ್ಯಾಸದ ಬಗ್ಗೆ ಸಾಕಷ್ಟು ವಿವರಗಳು ಬರುತ್ತವೆ. ''ನಾನೇ ಸ್ವತಃ ಅನೇಕ ಪ್ರಯತ್ನಗಳ ನಂತರ ಅಂತಿಮ ರೂಪವನ್ನು ನಿಶ್ಚಯಿಸಿದ್ದೆ - ಕೆಂಪು ಹಿನ್ನೆಲೆಯಿರುವ ಧ್ವಜ, ಅದರ ಮಧ್ಯದಲ್ಲಿ ಬಿಳಿ ವೃತ್ತ ಮತ್ತು ಅದರೊಳಗೆ ಕಪ್ಪು ಸ್ವಸ್ತಿಕ ಚಿಹ್ನೆ. ದೀರ್ಘಕಾಲದ ಪ್ರಯೋಗಗಳ ಬಳಿಕ, ಧ್ವಜದ ಗಾತ್ರ ಮತ್ತು ಬಿಳಿ ವೃತ್ತದ ಗಾತ್ರದ ನಡುವೆ ಸರಿಯಾದ ಅನುಪಾತವನ್ನು ಕಂಡುಹಿಡಿದೆ. ಹಾಗೆಯೇ ಸ್ವಸ್ತಿಕದ ಆಕಾರ ಮತ್ತು ಅದರ ದಪ್ಪವನ್ನೂ ನಿಶ್ಚಿತಗೊಳಿಸಿದೆ'' ಎಂದು ಹಿಟ್ಲರ್ ಬರೆದಿದ್ದಾನೆ. 1933ರ ಆಗಸ್ಟ್‌ನಲ್ಲಿ ನಡೆದಿದ್ದ ಒಂದು ರ್‍ಯಾಲಿಯಲ್ಲಿ ಹಿಟ್ಲರ್ ಯುಥ್ ಪರೇಡ್‌ನ ಸದಸ್ಯರು ದೊಡ್ಡದೊಂದು ಸ್ವಸ್ತಿಕ ವಿನ್ಯಾಸದ ಪಥಸಂಚಲನ ಮಾಡುತ್ತ ಅಜ್ಞಾತ ಸೈನಿಕನಿಗೆ ಗೌರವ ಸಲ್ಲಿಸಿದ್ದರು.

ಎರಡನೆಯ ಪ್ರಪಂಚಯುದ್ಧ ಸಂಭವಿಸುವವರೆಗೂ, ಸ್ವಸ್ತಿಕ ಚಿಹ್ನೆಗೆ ಪಾಶ್ಚಾತ್ಯ ದೇಶಗಳಲ್ಲಿ ಬಹಳವೇ ಗೌರವವಿತ್ತು. ಹಿಟ್ಲರ್‌ನಿಂದಾಗಿ ಅದೆಲ್ಲ ಹಾಳಾಯಿತು. ಸಂಸ್ಕೃತದಲ್ಲಿ ಒಂದು ಸುಭಾಷಿತವಿದೆ, ''ಅಹೋ ದುರ್ಜನಸಂಸರ್ಗಾನ್ಮಾನಹಾನಿಃ ಪದೇ ಪದೇ। ಪಾವಕೋ ಲೋಹಸಂಗೇನ ಮುದ್ಗರೈರಭಿಹನ್ಯತೇ॥ (ದುರ್ಜನರ ಸಹವಾಸದಿಂದ ಮಾನಹಾನಿ ತಪ್ಪಿದ್ದಲ್ಲ, ಕಬ್ಬಿಣಕ್ಕೆ ಬೀಳುವ ಸುತ್ತಿಗೆಯ ಪೆಟ್ಟು ಅದನ್ನು ಕಾಯಿಸುವ ಬೆಂಕಿಗೂ ಬೀಳುತ್ತದಲ್ಲ?)'' ಎಂದು. ಹಿಟ್ಲರ್‌ನ ಸಹವಾಸದಿಂದ ಸ್ವಸ್ತಿಕದ ಮಾನಹಾನಿ ಆದದ್ದೂ ಅದೇ ರೀತಿಯಲ್ಲಿ.

ಭಾರತೀಯ ಸಂಸ್ಕೃತಿಯಲ್ಲಿ ಸ್ವಸ್ತಿಕವು ವಿಶೇಷ ಮಹತ್ವವುಳ್ಳದ್ದು ಮತ್ತು ಜರ್ಮನಿಯಲ್ಲಿ ಹಿಟ್ಲರ್‌ನ ಸರ್ವಾಧಿಕಾರಿ ಪ್ರವೃತ್ತಿಯಿಂದಾಗಿ ಸ್ವಸ್ತಿಕ ಚಿಹ್ನೆಗೆ ಕೆಟ್ಟ ಅರ್ಥಬಂತು- ಈ ಎರಡು ವಿಷಯಗಳಷ್ಟೇ ಸ್ವಸ್ತಿಕದ ಬಗ್ಗೆ ನಮ್ಮೆಲ್ಲರಿಗಿರುವ ಸಾಮಾನ್ಯಜ್ಞಾನದ ವಿಸ್ತಾರ. ಚುನಾವಣೆಗಳಲ್ಲಿ ಮತಪತ್ರದ ಮೂಲಕ ಮತ ಚಲಾಯಿಸುತ್ತಿದ್ದ ಹಳೆಯ ದಿನಗಳಲ್ಲಿ ನಮ್ಮ ಆಯ್ಕೆಯನ್ನು ಸೂಚಿಸುವ ಮೊಹರು ಇರುತ್ತಿದ್ದದ್ದು ಒಂದು ನಮೂನೆಯ ಸ್ವಸ್ತಿಕ ಚಿಹ್ನೆಯ ವಿನ್ಯಾಸದ್ದೇ ಎಂದು ನಿಮ್ಮಲ್ಲನೇಕರಿಗೆ ನೆನಪಿರಬಹುದು. ಶುಭಸಂಕೇತದ ಚಿಹ್ನೆಯ ಮೂಲಕ 'ಒಳ್ಳೆಯದಾಗಲಿ, ಒಳ್ಳೆಯದನ್ನೇ ಮಾಡಲಿ' ಎಂದು ಕೆಟ್ಟಾಕೊಳಕ ರಾಜಕಾರಣಿಯೊಬ್ಬನ ಆಯ್ಕೆಯನ್ನು ಬಯಸುತ್ತಿದ್ದೆವೆಂಬುದನ್ನು ನೆನಪಿಸಿಕೊಂಡರೆ ಮುಜುಗರವೆನಿಸುತ್ತದೆ. ಆದರೆ ಇನ್ನೂ ಎಷ್ಟೋ ಸ್ವಾರಸ್ಯಕರ ಸಂಗತಿಗಳಿವೆ ಈ ವಿಶಿಷ್ಟ ಚಿಹ್ನೆಯ ಚರಿತ್ರೆಯಲ್ಲಿ. ಅವುಗಳಲ್ಲೊಂದಿಷ್ಟನ್ನು ಈಗ ತಿಳಿದುಕೊಳ್ಳೋಣ.

ಸ್ವಸ್ತಿಕ ಚಿಹ್ನೆಯು ಐದು ಸಾವಿರ ವರ್ಷಗಳ ಹಿಂದಿನ ಸಿಂಧೂನದಿ ನಾಗರಿಕತೆಯ ಕಾಲದಲ್ಲಿ ಮೊತ್ತಮೊದಲಿಗೆ ಮೂಡಿಬಂತೆನ್ನುವುದು ಇತಿಹಾಸಜ್ಞರ ಅಭಿಪ್ರಾಯ. ಬರವಣಿಗೆಯಲ್ಲಿ ಅದರ ಮೊತ್ತಮೊದಲ ಉಲ್ಲೇಖ ಆಗಿರುವುದು ವೇದವ್ಯಾಸ ಮುನಿವಿರಚಿತ 'ಹರಿವಂಶ' ಗ್ರಂಥದಲ್ಲಿ ಎನ್ನುತ್ತಾರೆ. ಅಂತೂ ಸ್ವಸ್ತಿಕವೆಂಬ ಹೆಸರಷ್ಟೇ ಅಲ್ಲ, ಆ ಚಿಹ್ನೆಯನ್ನೂ ಪ್ರಪಂಚಕ್ಕೆ ಪರಿಚಯಿಸಿದ್ದು ಭಾರತವೇ ಎನ್ನುವುದು ಬಹುಜನರ ವಾದ. ಆದರೆ ಸಿಂಧೂನದಿ ನಾಗರಿಕತೆಯಲ್ಲಷ್ಟೇ ಅಲ್ಲ, ಈಜಿಪ್ಟ್, ಚೀನಾ, ಗ್ರೀಕ್, ರೋಮನ್, ದಕ್ಷಿಣ ಅಮೆರಿಕದ ಮಾಯನ್ ಮುಂತಾದ ಪ್ರಾಚೀನ ಸಂಸ್ಕೃತಿಗಳಲ್ಲೂ ಸ್ವಸ್ತಿಕ ಚಿಹ್ನೆ ಕಂಡುಬಂದಿದೆ ಎನ್ನುವುದು ಗಮನಾರ್ಹ. ಪ್ರಾಚೀನ ಗ್ರೀಕ್ ನಗರವೆಂಬ ಖ್ಯಾತಿಯ ಟ್ರಾಯ್ ನಗರದ ಉತ್ಖನನದಲ್ಲಿ ಸ್ವಸ್ತಿಕ ಚಿಹ್ನೆಯ ಗುರುತುಗಳು ಹೇರಳವಾಗಿ ಸಿಕ್ಕಿವೆಯಂತೆ. ಈಗಿನ ಅಫಘಾನಿಸ್ತಾನದ ಕಾಬುಲ್ ಪಕ್ಕದಲ್ಲಿರುವ ಸುಮಾರು 80 ಅಡಿ ಎತ್ತರದ ಬೌದ್ಧಸ್ತೂಪವು ಸ್ವಸ್ತಿಕ ಚಿಹ್ನೆಯ ಮೇಲೆಯೇ ನಿಂತಂತಿದೆಯಂತೆ. ಅಲ್ಲಿ ಸ್ವಸ್ತಿಕಕ್ಕೆ ಜೀವವೃತ್ತ (ಹುಟ್ಟು, ಬಾಳು, ಸಾವು, ಮರುಹುಟ್ಟುಗಳ ಪುನರಾವರ್ತನೆ) ಮತ್ತು ಅದು ಬುದ್ಧನ ಪದತಲ ಎಂಬ ಕಲ್ಪನೆ. ಐರೋಪ್ಯ ದೇಶಗಳಲ್ಲಿ ಪುರಾತನ ಕಟ್ಟಡಗಳಲ್ಲಿ ಸ್ವಸ್ತಿಕ ವಿನ್ಯಾಸದ ಬಳಕೆ ಕಂಡುಬರುತ್ತದೆ. ನ್ಯೂಯಾರ್ಕ್‌ನಲ್ಲಿ 1860ರಲ್ಲಿ ಕಟ್ಟಲಾದ ಸ್ಪಾನಿಷ್ ಪೋರ್ಚುಗೀಸ್ ಸಿನಗಾಗ್‌ನ ಕಿಟಕಿ-ಬಾಗಿಲುಗಳ ಗಾಜಿಗೆ ಸ್ವಸ್ತಿಕ ವಿನ್ಯಾಸವೇ ಇದೆ. ಇಂಗ್ಲೆಂಡ್‌ನಲ್ಲಿ ಮ್ಯಾಂಚೆಸ್ಟರ್ ಆರ್ಟ್ ಗ್ಯಾಲರಿಯಲ್ಲಿ, ಸೆಂಟ್ರಲ್ ಲೈಬ್ರರಿಯ ನೆಲ ಮತ್ತು ಗೋಡೆಗೆ ಸ್ವಸ್ತಿಕ ಚಿಹ್ನೆಯ ವಿನ್ಯಾಸವಿದೆ.

ಅಮೆರಿಕದಲ್ಲಿ 1890ರ ಆಸುಪಾಸಿನಲ್ಲಿ 'ಲಕ್ಕಿ ಸೆಂಟ್' ಎಂದು ಕರೆಯಲಾಗುತ್ತಿದ್ದ ಸ್ವಸ್ತಿಕಾಕಾರದ ನಾಣ್ಯಗಳು ಇದ್ದುವಂತೆ. ಹುಡುಗಿಯರ ಕಬ್ಸ್ ಮತ್ತು ಹುಡುಗರ ಸ್ಕೌಟ್ಸ್ ಎರಡಕ್ಕೂ ಬ್ಯಾಡ್ಜ್‌ಗಳು ಸ್ವಸ್ತಿಕ ರೂಪದವಿದ್ದುವಂತೆ. 1910ರಲ್ಲಿ ಡೆಟ್ರಾಯಿಟ್‌ನಲ್ಲಿ ನಿರ್ಮಾಣವಾಗುತ್ತಿದ್ದ 'ಕ್ರಿಟ್' ಕಾರಿನ ಮುಂಭಾಗದಲ್ಲಿ ಸ್ವಸ್ತಿಕ ಚಿಹ್ನೆಯದೇ ಎಂಬ್ಲೆಮ್. ಬ್ರಿಟನ್‌ನಲ್ಲಿ ಸ್ವಸ್ತಿಕ ಹೆಸರಿನ ನಿಯತಕಾಲಿಕ; ಸ್ವಸ್ತಿಕ ಚಿಹ್ನೆಯಿರುವ ಅಂಚೆಚೀಟಿ; ರಷ್ಯಾದಲ್ಲಿ 250 ರೂಬಲ್ ನೋಟಿನಲ್ಲಿ ಸ್ವಸ್ತಿಕ ಮುದ್ರೆ; ಕೆನಡಾದಲ್ಲಿ ಮಹಿಳೆಯರ ಐಸ್-ಹಾಕಿ ಪಂದ್ಯಾಟದಲ್ಲಿ ಸ್ವಸ್ತಿಕಾಸ್ ಹೆಸರಿನ ತಂಡ; ಲಾಸ್ ಏಂಜಲೀಸ್‌ನಲ್ಲಿ ಸ್ವಸ್ತಿಕ ಹೆಸರಿನ ಹಾಯಿದೋಣಿ ಕಂಪನಿ; ಅಟ್ಲಾಂಟಾದ ಕೋಕಾ-ಕೋಲಾ ಕಂಪೆನಿಯಿಂದ ಪ್ರಚಾರಕ್ಕೆಂದು ಸ್ವಸ್ತಿಕ ಆಕಾರದ ಲಕ್ಕೀ-ರಿಂಗ್ಸ್ ಉಚಿತ ಕೊಡುಗೆ; ಅಮೆರಿಕದ ಭೂಸೇನೆಯ ಒಂದು ತುಕಡಿಯ ಸಮವಸ್ತ್ರದಲ್ಲಿ ಸ್ವಸ್ತಿಕ ಲಾಂಛನ; ಫಿನ್‌ಲ್ಯಾಂಡ್ ದೇಶದ ಫಿನ್ನಿಶ್ ಏರ್‌ಫೋರ್ಸ್ ಲಾಂಛನವೂ ಸ್ವಸ್ತಿಕವೇ ಆಗಿತ್ತು, ಪ್ರಪಂಚಯುದ್ಧದ ಬಳಿಕ ಅದು ಬದಲಾಯಿತು. ಲಾಂಛನಗಳ ಸಂಗತಿ ಹಾಗಿರಲಿ, ಕೆನಡಾದಲ್ಲಿ ಓಂಟಾರಿಯೊ ಪ್ರಾಂತ್ಯದಲ್ಲಿ ಒಂದು ಪುಟ್ಟ ಊರು ಸ್ವಸ್ತಿಕ ಎಂಬ ಹೆಸರಿನದೇ ಇದೆಯೆಂದರೆ ನಂಬುತ್ತೀರಾ? ಅದು ಗಣಿಗಾರಿಕೆಗೆ ಪ್ರಸಿದ್ಧ. ಎರಡನೆಯ ಪ್ರಪಂಚಯುದ್ಧದ ವೇಳೆ ಆ ಊರಿನ ಹೆಸರನ್ನು ಬದಲಾಯಿಸುವ ಹುನ್ನಾರ ನಡೆದಿತ್ತಂತೆ. ಊರವರೆಲ್ಲ ಸೇರಿ ಅದನ್ನು ಯಶಸ್ವಿಯಾಗಿ ತಡೆದರು. ಸ್ವಸ್ತಿಕ ಎಂಬ ಹೆಸರಿನ ಒಂದು ಪುಟ್ಟ ಹಳ್ಳಿ ಅಮೆರಿಕದ ನ್ಯೂಯಾರ್ಕ್ ಸಂಸ್ಥಾನದಲ್ಲೂ ಇದೆ. ಒಟ್ಟಿನಲ್ಲಿ ತಾತ್ಪರ್ಯವಿಷ್ಟೇ- ಸ್ವಸ್ತಿಕ ಅಲ್ಲಿ ಇಲ್ಲಿ ಮಾತ್ರವಲ್ಲ ಎಲ್ಲೆಲ್ಲೂ ಇದೆ, ಆಗಲೂ ಈಗಲೂ!

ಸ್ವಸ್ತಿಕ ಚಿಹ್ನೆ ಪ್ರದಕ್ಷಿಣಾಕಾರವಾಗಿ ತಿರುಗಬಹುದಾದ ಗಿರಗಿಟ್ಲೆ ಅಂತೆನಿಸುತ್ತದಷ್ಟೆ? ಅಪ್ರದಕ್ಷಿಣಾಕಾರವಾಗಿರುವ ಸ್ವಸ್ತಿಕವೂ ಇದೆ, ಬೌದ್ಧಧರ್ಮದಲ್ಲಿ ಅದಕ್ಕೆ ಸೌವಸ್ತಿಕ ಎಂದು ಹೆಸರಿದೆಯಂತೆ. ಜಪಾನ್ ಮತ್ತಿತರ ಪೂರ್ವದೇಶಗಳಲ್ಲಿ ನಕ್ಷೆಯ ಮೇಲೆ ಬೌದ್ಧ ದೇವಾಲಯದ ಗುರುತಿಗೆ ಸೌವಸ್ತಿಕದ ಬಳಕೆಯಾಗುತ್ತದೆ. ಕೆಲವು ಸಂಸ್ಕೃತಿಗಳಲ್ಲಿ ಈ ರೀತಿಯ ಉಲ್ಟಾ ಸ್ವಸ್ತಿಕವು ಅಶುಭ ಸಂಕೇತವೆಂಬ ನಂಬಿಕೆಯೂ ಇದೆ, ಆದರೆ ಆಫ್ರಿಕನ್-ಅಮೆರಿಕನ್ ಜನಾಂಗದಲ್ಲಿ ಅದೊಂದು ಶುಭಸಂಕೇತ. ಸೌವಸ್ತಿಕಕ್ಕೂ ಸ್ವಸ್ತಿಕದಷ್ಟೇ ಗೌರವ ಸಲ್ಲುತ್ತದೆ. ಅಂದಹಾಗೆ 'ದ ಜಂಗಲ್ ಬುಕ್' ಪ್ರಖ್ಯಾತಿಯ ರುಡ್‌ಯಾರ್ಡ್ ಕಿಪ್ಲಿಂಗ್ (ಈತ ಹುಟ್ಟಿದ್ದು ನಮ್ಮ ಭಾರತದೇಶದಲ್ಲಿ ಮುಂಬಯಿಯಲ್ಲಿ) ಸ್ವಸ್ತಿಕ ಚಿಹ್ನೆಯನ್ನು ತನ್ನ ಲಾಂಛನವನ್ನಾಗಿ ಇಟ್ಟುಕೊಂಡಿದ್ದನು. 1920ರ ಸುಮಾರಲ್ಲಿ ಪ್ರಕಟವಾಗುತ್ತಿದ್ದ ಅವನ ಪುಸ್ತಕಗಳ ರಕ್ಷಾಕವಚದ ಮೇಲೆ ಸ್ವಸ್ತಿಕ ಚಿಹ್ನೆ ಇರುತ್ತಿತ್ತು.

ಹೀಗೆ ವಿಶ್ವವ್ಯಾಪಿಯಾದ ಸ್ವಸ್ತಿಕ ಚಿಹ್ನೆಗೆ ಈಗ ಜರ್ಮನಿಯಲ್ಲಿ ಬಹಿಷ್ಕಾರವಿದೆ. ನಾತ್ಸಿ ಸಂಕೇತದ ಅರ್ಥದಲ್ಲಿ ಅದನ್ನು ಪ್ರದರ್ಶಿಸುವಂತಿಲ್ಲ. ಧಾರ್ಮಿಕ ಕಾರಣಗಳಿಗಾದರೆ ವಿನಾಯಿತಿಯಿದೆ. ಎರಡನೆಯ ಪ್ರಪಂಚ ಯುದ್ಧದಲ್ಲಿ ನಾತ್ಸಿಗಳಿಂದ ಸಾಕಷ್ಟು ಪೆಟ್ಟು ತಿಂದಿದ್ದ ಅಮೆರಿಕನ್ನರಿಗೂ ಸ್ವಸ್ತಿಕ ಕಂಡರೆ ಸಂಕಟ ಶುರುವಾಗುತ್ತದೆ. ಕೆಲ ವರ್ಷಗಳ ಹಿಂದೆ ಮೈಕ್ರೋಸಾಫ್ಟ್ ಕಂಪನಿಯ ಸಾಫ್ಟ್‌ವೇರ್‌ನಲ್ಲಿ ಒಂದು ಅಕ್ಷರಲಿಪಿ ವಿನ್ಯಾಸ(ಫಾಂಟ್)ದಲ್ಲಿ ಸ್ವಸ್ತಿಕ ಚಿಹ್ನೆ ಸೇರಿಕೊಂಡದ್ದು ದೊಡ್ಡ ಗಲಾಟೆಯಾಗಿ ಆಮೇಲೆ ಮೈಕ್ರೋಸಾಫ್ಟ್ ಕಂಪನಿಯು ಕ್ಷಮಾಪಣೆಯ ಸ್ಪಷ್ಟೀಕರಣ ನೀಡಿದ ಪ್ರಸಂಗವೂ ನಡೆದಿತ್ತು. ಅದೇ ರೀತಿ 2007ರಲ್ಲಿ ಝೂರಾ ಎಂಬ ಗಾರ್ಮೆಂಟ್ ಕಂಪನಿಯು ಭಾರತದಲ್ಲಿ ಉತ್ಪಾದಿಸಿ ತಂದು ಮಾರುತ್ತಿದ್ದ ಕಂಬಳಿ, ಬೆಡ್‌ಶೀಟ್‌ಗಳಲ್ಲಿ ಸ್ವಸ್ತಿಕ ಚಿಹ್ನೆಯ ವಿನ್ಯಾಸವಿದ್ದುದನ್ನು ಗಮನಿಸಿ ಆ ಉತ್ಪನ್ನಗಳನ್ನು ಮಾರುಕಟ್ಟೆಯಿಂದ ಹಿಂಪಡೆದುಕೊಂಡಿತ್ತು. ಆದರೆ ಗಮನಿಸಬೇಕಾದ ಅಂಶವೆಂದರೆ ಇದು ಭಾರತೀಯ ಸಂಸ್ಕೃತಿಯಲ್ಲಿ ಸ್ವಸ್ತಿಕ ಚಿಹ್ನೆಗಿರುವ ಅರ್ಥಕ್ಕೆ ಅಪಮಾನ ಮಾಡುವುದಕ್ಕಲ್ಲ, ನಾತ್ಸಿ ಸೈನಿಕರು ಮಾಡಿದ್ದ ನರಮೇಧದ ಕರಿನೆರಳು ಆ ಸ್ವಸ್ತಿಕ ಚಿಹ್ನೆಯ ಮೂಲಕ ಅಮೆರಿಕನ್ನರ ಮನದಲ್ಲಿ ಮತ್ತೊಮ್ಮೆ ಬೀಳದಿರಲಿ ಎಂಬ ಸೆಂಟಿಮೆಂಟ್‌ಅನ್ನು ಗೌರವಿಸುವ ಉದ್ದೇಶ ಅಷ್ಟೆ.

ಅಮೆರಿಕದ ಒರೆಗನ್ ರಾಜ್ಯದ ಉಂಪ್ಕ್ವಾ ರಾಷ್ಟ್ರೀಯ ಅರಣ್ಯದಲ್ಲಿ ಇರುವ ಪರ್ವತಶ್ರೇಣಿಗೆ Swastika Mountain ಎಂಬ ಹೆಸರು 1900ರ ಆರಂಭದಲ್ಲೇ, ಅಂದರೆ ನಾತ್ಸಿಗಳು ಆ ಚಿಹ್ನೆಯನ್ನು ಬಳಸುವ ಮೊದಲು, ಮಾನವ ಇತಿಹಾಸದ ಕತ್ತಲೆಯ ಅಧ್ಯಾಯಕ್ಕೆ ಸಂಬಂಧಿಸುವುದಕ್ಕೂ ಮುಂಚೆಯೇ ಇಡಲಾಗಿತ್ತು. ಸುಮಾರು 4,197 ಅಡಿ ಎತ್ತರದ ಈ ಪರ್ವತಕ್ಕೆ, ಗೋವುಗಳನ್ನು ಸಾಕುತ್ತಿದ್ದ ಕ್ಲೇಟನ್ ಇ ಬರ್ಟನ್ ಎಂಬ ರೈತನಿಂದಾಗಿ ಆ ಹೆಸರು ಬಂದದ್ದು. ಅವನು ತನ್ನ ಗೋವುಗಳಿಗೆ ಸ್ವಸ್ತಿಕ ಗುರುತು ಹಾಕುತ್ತಿದ್ದನು. ಆ ಸಮಯದಲ್ಲಿ ಈ ಚಿಹ್ನೆಯನ್ನು ಶುಭದ ಸಂಕೇತವಾಗಿ ಹಲವು ಧರ್ಮಗಳಲ್ಲಿ ಬಳಸಲಾಗುತ್ತಿತ್ತು. ಜರ್ಮನಿಯಲ್ಲಿ ನಾತ್ಸಿ ಪಕ್ಷ ಈ ಚಿಹ್ನೆಯನ್ನು ಬಳಸಿದ ನಂತರ, ಸಕಾರಾತ್ಮಕ ಅರ್ಥ ಮಸುಕಾಯಿತು. ಆದರೂ ಪರ್ವತದ ಹೆಸರು ಇಷ್ಟು ವರ್ಷಗಳ ಕಾಲ ಹಾಗೆಯೇ ಉಳಿದುಕೊಂಡಿತ್ತು. ಬಹುಶಃ ಒರೆಗನ್ ರಾಜ್ಯದ ಜನರಿಗೆ ಈ ಪರ್ವತದ ಬಗ್ಗೆ ಹೆಚ್ಚು ತಿಳಿದಿರಲಿಲ್ಲ. 2022ರಲ್ಲಿ ಇಬ್ಬರು ಚಾರಣಿಗರನ್ನು ಆ ಪ್ರದೇಶದಿಂದ ರಕ್ಷಿಸಿದ ಘಟನೆ ಸುದ್ದಿಯಾದಾಗ, ಪರ್ವತದ ಹೆಸರಿನ ಕಡೆ ಜನರ ಗಮನ ಸೆಳೆಯಿತು. ಅದಾದಮೇಲೆ ಒರೆಗನ್ ನಿವಾಸಿಗಳು ಆ ಹೆಸರನ್ನು ಬದಲಾಯಿಸಲು ಒತ್ತಾಯಿಸತೊಡಗಿದರು. ಜಾಯ್ಸ್ ಮ್ಯಾಕ್ಲೀನ್ ಎಂಬಾತ ಅಧಿಕೃತವಾಗಿ ಒಂದು ಮನವಿಯನ್ನೂ ಸಲ್ಲಿಸಿದನು. ಸ್ವಸ್ತಿಕದ ಬದಲಿಗೆ 'ಮೌಂಟ್ ಹ್ಯಾಲೋ' ಎಂಬ ಹೆಸರಿಡಬೇಕೆಂದೂ, ತನ್ಮೂಲಕ ಅಲ್ಲಿನ ಯೋಂಕಾಲಾ ಕಲಪುಯಾ ಜನಾಂಗದ ನಾಯಕ ಚೀಫ್ ಹ್ಯಾಲಿಟೋ (ಹ್ಯಾಲೋ) ಹೆಸರನ್ನು ಸ್ಮರಿಸಬೇಕೆಂದೂ ಸೂಚಿಸಿದನು. ಈ ಅಹವಾಲನ್ನು ಒರೆಗನ್ ಜಿಯೋಗ್ರಾಫಿಕ್ ನೇಮ್ಸ್ ಬೋರ್ಡ್ ಅನುಮೋದಿಸಿದೆ.

ಅದೇನೇ ಇರಲಿ, ಧಾರ್ಮಿಕವಾಗಿ ಸ್ವಸ್ತಿಕದ ಮಹತ್ವ ಅರಿತಿರುವ ದೇಶಗಳಲ್ಲಿ ಅದರ ಘನತೆ ಗೌರವಗಳಿಗೇನೂ ಕುಂದು ಬಂದಿಲ್ಲ. ಲವ್, ಲೈಟ್, ಲೈಫ್ ಮತ್ತು ಲಕ್ ಇವೆಲ್ಲವನ್ನೂ ಅದು ಸಂಕೇತಿಸುತ್ತದೆಯೆಂಬ ನಂಬಿಕೆಗೂ ಏನೇನೂ ಚ್ಯುತಿಯಾಗಿಲ್ಲ. ಬೇರೇನೂ ಬೇಡ, ಶುಭವಿವಾಹ ಸಂದರ್ಭದಲ್ಲಿ ಪುರೋಹಿತರಿಂದ ''ಸುಮುಹೂರ್ತ ಸಾವಧಾನ...'' ಎಂದು ಮಂತ್ರಘೋಷ ಆಗುತ್ತಿರುವಾಗ ಮಾಲೆ ಹಿಡಿದುಕೊಂಡು ನಿಂತ ವಧೂವರರ ಮಧ್ಯೆ ಹಿಡಿದದ್ದಿರುತ್ತದಲ್ಲ ಅಂತರಪಟ, ಅದರಲ್ಲಿರುವ ಚಿಹ್ನೆಯ ಅರ್ಥವಾದರೂ ಅದೇ ತಾನೆ? ಪ್ರೀತಿ, ಜ್ಯೋತಿ, ಜೀವ, ದೈವಗಳದೇ ಪ್ರತೀಕ ಅದು ಕೂಡ. ಒಳ್ಳೆಯದಾಗಿಯೇ ಇರಬೇಕೆಂಬುದನ್ನು ಮತ್ತು ಅದರಿಂದ ಒಳ್ಳೆಯದೇ ಆಗುವುದೆಂಬುದನ್ನು ಸಾರುವ ಶುಭಾಶಯದ ಸ್ವಸ್ತಿಕ!

ಹೆಸರು ಮಾತ್ರ ದೊಡ್ಡದು, ಆದರೆ ಮೊಸರು ತೆಳ್ಳಗೇ!



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vinayakbhat1669@gmail.com

ಸುಮಾರು 20 ವರ್ಷಗಳ ಹಿಂದಿರಬಹುದು, ನಾನು ಹಾಸನದಲ್ಲಿ ಒಂದು ಖಾಸಗಿ ಕಂಪನಿಯಲ್ಲಿ ಮಾನವ ಸಂಪನ್ಮೂಲ ವಿಭಾಗದ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದೆ. ಹಳ್ಳಿ-ಹಳ್ಳಿ ತಿರುಗಿ ಮೂರು ಸಾವಿರಕ್ಕೂ ಹೆಚ್ಚು ಹೆಣ್ಣುಮಕ್ಕಳನ್ನು ಕೆಲಸಕ್ಕೆ ಸೇರಿಸಿ ಅಲ್ಲಿ ಅವರಿಗೆ ತರಬೇತಿ ನೀಡಲಾಗುತ್ತಿತ್ತು. ಅವರನ್ನು ವ್ಯವಸ್ಥಿತವಾದ ಹಾಸ್ಟೆಲ್‌ಗಳಲ್ಲಿ ಇರಿಸಿ, ಯಾವುದಕ್ಕೂ ತೊಂದರೆ ಇಲ್ಲದ ರೀತಿಯಲ್ಲಿ ಬಹಳ ಸುರಕ್ಷಿತವಾಗಿ ನೋಡಿಕೊಳ್ಳಲಾಗುತ್ತಿತ್ತು. ಎಲ್ಲವೂ ಚನ್ನಾಗಿ ನಡೆಯುತ್ತಿತ್ತು.

ಒಂದು ದಿನ ಮಹಿಳಾ ಭದ್ರತಾ ಸಿಬ್ಬಂದಿಯೊಬ್ಬರು ಬಂದು, ಸರ್ ಹಾಸ್ಟೆಲ್‌ನಲ್ಲಿ ಸಾಯಂಕಾಲ ಯಾವುದೋ ಇಂಗ್ಲಿಷ್ ಪುಸ್ತಕವನ್ನು ಎಲ್ಲರಿಗೂ ಕೊಡಲಾಗುತ್ತದೆ, ಅದರ ಪಾಠಗಳು ನಡೆಯುತ್ತವೆ, ಆಪ್ತಸಮಾಲೋಚನೆ ನಡೆಯುತ್ತವೆ, ಇದು ಕೆಲವು ಹೆಣ್ಣುಮಕ್ಕಳಿಗೆ ಇಷ್ಟವಾಗುತ್ತಿಲ್ಲ ಎಂದು ದೂರು ನೀಡಿದ್ದಾರೆ ಎಂದರು. ನೀವು ಹೇಳುವ ಆ ಇಂಗ್ಲಿಷ್ ಪುಸ್ತಕ ಯಾವುದು ಎನ್ನುವುದನ್ನು ನೋಡಬೇಕು ಎಂದೆ, ಆಕೆ ತಂದು ತೋರಿಸಿದಾಗ ಅದು ಬೈಬಲ್ಲಿನ ಪುಸ್ತಕ ಎನ್ನುವುದು ತಿಳಿಯಿತು. ಅಲ್ಲಿ ನಡೆಯುತ್ತಿರುವುದು ಮತಾಂತರದ ಪ್ರಕ್ರಿಯೆಯಾಗಿತ್ತು. ನಾನು ಕುಸಿದು ಬೀಳುವುದೊಂದು ಬಾಕಿ!. ರಾಜಕೀಯವಾಗಿ ಹಾಸನ ಬಹಳ ಸೂಕ್ಷ್ಮ ಪ್ರದೇಶ, ದೇವೇಗೌಡರ ಕುಟುಂಬ ಸಕ್ಷಮವಾಗಿದ್ದ ಕಾಲವದು. ದೇವೇಗೌಡರು ಆಗತಾನೆ ಪ್ರಧಾನಮಂತ್ರಿ ಹುದ್ದೆಯಿಂದ ಪದಚ್ಯುತಗೊಂಡು ಬಂದವರು, ಅವರ ಒಂದು ಮಗ ಮುಖ್ಯಮಂತ್ರಿ, ಇನ್ನೊಂದು ಮಗ ಮಂತ್ರಿ. ಯಾವುದೋ ಕಂಪನಿಯವರು ತಮ್ಮೂರಿಗೆ ಬಂದು ಮತಾಂತರ ಮಾಡುತ್ತಿದ್ದಾರೆ ಎನ್ನುವುದು ತಿಳಿದರೆ ಸುಮ್ಮನೆ ಬಿಟ್ಟಾರೆಯೇ ನಮ್ಮನ್ನು? ಕೊನೆಗೆ ಇದರ ಹಿಂದೆ ಇರುವವರು ಯಾರು ಎಂದು ನೋಡಿದರೆ, ಮಾನವ ಸಂಪನ್ಮೂಲ ವಿಭಾಗದಲ್ಲಿ ನನ್ನ ಕಿರಿಯ ಸಹೋದ್ಯೋಗಿಯಾಗಿದ್ದ ಒಬ್ಬ ಕ್ರೈಸ್ತ ಹುಡುಗಿ ಈ ಕೆಲಸ ಮಾಡಿದ್ದಳು. ಹಿಂದೆಲ್ಲ ಹಣಕಾಸಿನ ಅಗತ್ಯವಿರುವ ಬಡ ಜನರನ್ನು ಹೀಗೆ ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡುವ ಕೆಲಸ ಅಲ್ಲಲ್ಲಿ ನಡೆಯುತ್ತಿತ್ತು. ಈಗ ಬರೇ ಬಡವರಲ್ಲ, ವೈದ್ಯರು, ಐಟಿ ಕಂಪನಿಗಳಲ್ಲಿ ಕೆಲಸಮಾಡುತ್ತಾ ಕೈತುಂಬ ಕೆಲಸ ಮಾಡುವ ಜನರನ್ನೇ ಟಾರ್ಗೆಟ್ ಮಾಡಲಾಗುತ್ತಿದೆ. ವಿವಿಧ ವಿಧಾನಗಳಿಂದ ಅವರ ಬ್ರೇನ್ ವಾಶ್ ಮಾಡಿ ಮತಾಂತರ ಮಾಡುವ ವ್ಯವಸ್ಥಿತ ಪ್ರಯತ್ನಗಳು ನಡೆಯತ್ತಿವೆ.

ಐಟಿ ಕಂಪನಿಗಳಲ್ಲಿ ಅದರಲ್ಲೂ 'ಟಿಸಿಎಸ್'ನಂಥಾ ದಿಗ್ಗಜ ಐಟಿ ಕಂಪನಿಗಳು ಮಹಿಳೆಯರಿಗೆ ಕೆಲಸ ಮಾಡಲು ಅತ್ಯಂತ ಸೂಕ್ತ ಹಾಗೂ ಸುರಕ್ಷಿತ ಸ್ಥಳ ಎನ್ನುವ ಪ್ರತೀತಿ ಇತ್ತು, ಮಹಿಳೆಯರ ರಕ್ಷಣೆಗೆ ಅಲ್ಲಿ 'ಪೊಶ್' (POSH-Prevention of sexsual Harassment) ನಂಥಾ ಅಗತ್ಯ ನೀತಿನಿಯಮಗಳು ಇರುತ್ತವೆ, ದೂರುಗಳನ್ನು ಸ್ವೀಕರಿಸಿ ಪರಿಹರಿಸಲು ಸಮಿತಿಗಳಿರುತ್ತವೆ, ಇವನ್ನೆಲ್ಲ ಕಟ್ಟುನಿಟ್ಟಾಗಿ ಪಾಲನೆ ಮಾಡಲಾಗುತ್ತದೆ ಎಂಬ ನಂಬಿಕೆಯಿತ್ತು. ಆದರೆ ಇಂಥಾ ಹೆಸರುವಾಸಿ ಸಂಸ್ಥೆಗಳ ನಿಜಬಣ್ಣ ಈಗ ಬಯಲಾಗುತ್ತಿದೆ. ಅಂತೂ, ಎಲ್ಲರ ಮನೆಯ ದೋಸೆಯೂ ತೂತೇ ಎನ್ನುವುದು ಸಾಬೀತಾದಂತಾಯ್ತು. ಅಥವಾ ಈ ಪ್ರಕರಣವನ್ನು ಹೀಗೂ ನೋಡಬಹುದು, ವ್ಯವಸ್ಥೆಗಳೆಲ್ಲ ಅತ್ಯಂತ ಸರಿಯಾಗಿದೆ ಎಂದು ಹೇಳಲಾಗಿರುವ ಟಿಸಿಎಸ್‌ನಂಥ ಪ್ರತಿಷ್ಠಿತ ಸಂಸ್ಥೆಯಲ್ಲೇ ಇಷ್ಟೆಲ್ಲ ಅವಾಂತರಗಳು ಆಗುವಾಗ, ಸಣ್ಣ-ಪುಟ್ಟ ಸಂಸ್ಥೆಗಳಲ್ಲಿ ಕೆಲಸ ಮಾಡುವ, ಅಥವಾ ಮಹಿಳೆಯರೇ ಹೆಚ್ಚಾಗಿ ಕೆಲಸ ಮಾಡುವ ಗಾರ್ಮೆಂಟ್ಸ್ ನಂಥ ಕಂಪನಿಗಳ ಕಥೆಯೇನು ಎನ್ನುವುದು ಆತಂಕದ ವಿಷಯವಾಗಿದೆ. ಒಂದು ಕಡೆ, ಕೆಲಸದ ಸ್ಥಳದಲ್ಲಿ Diversity, Equity and Inclusion ಬಗ್ಗೆ ಉದ್ದುದ್ದ ಭಾಷಣ ಬಿಗಿಯುವ ಇಂಥಾ ಕಂಪನಿಗಳು, ತಿನ್ನುವುದು ಮಾತ್ರ ಬದನೆಕಾಯಿಯನ್ನೇ ಅಂದಂಗಾಯ್ತು. ಇಂಥಾ ಕಂಪನಿಗಳ ಹೆಸರು ಮಾತ್ರ ದೊಡ್ಡದು, ಆದರೆ ಮೊಸರು ತೆಳ್ಳಗೇ ಇದೆ ಎನ್ನುವುದು ಸಾಬೀತಾಗುತ್ತಿದೆ.

ಮಹಾರಾಷ್ಟ್ರದ ನಾಸಿಕ್‌ನಲ್ಲಿರುವ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್‌ನ ಬಿಪಿಒ ಘಟಕದಲ್ಲಿ ಕೆಲಸ ಮಾಡುವ ಹಿಂದೂ ಮಹಿಳೆಯರ ವ್ಯವಸ್ಥಿತ ಲೈಂಗಿಕ ಶೋಷಣೆ, ಬಲವಂತದ ಮತಾಂತರದ ಸುದ್ದಿಗಳು ದೇಶಾದ್ಯಂತ ಆಘಾತದ ಅಲೆಗಳನ್ನು ಸೃಷ್ಟಿಸಿವೆ. ಹಿಂದೂ ಸಿಬ್ಬಂದಿಗಳನ್ನು ಗುರಿಯಾಗಿಸಿಕೊಂಡು ಲೈಂಗಿಕ ಕಿರುಕುಳ, ಶೋಷಣೆ ಮತ್ತು ಬಲವಂತದ ಧಾರ್ಮಿಕ ಮತಾಂತರ ಪ್ರಯತ್ನಗಳ ಮಾದರಿ ಇದಾಗಿದೆ ಎಂದು ಆರೋಪಿಸಿ ಅನೇಕ ಮಹಿಳಾ ಉದ್ಯೋಗಿಗಳು ನಾಸಿಕ್ ನಗರ ಪೊಲೀಸರಿಗೆ ದೂರು ನೀಡಿದ್ದಾರೆ. ಲೈಂಗಿಕ ಶೋಷಣೆ ಮತ್ತು ಬಲವಂತದ ಮತಾಂತರದ ಈ ಕೆಟ್ಟ ಕಥೆಯು 2022ರಲ್ಲೇ ಪ್ರಾರಂಭವಾದದ್ದಾಗಿದ್ದು, ಈಗಲೂ ಕೆಲವು ಬಲಿಪಶುಗಳು ಕಿರುಕುಳವನ್ನು ಎದುರಿಸುತ್ತಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಮದುವೆಯ ಸುಳ್ಳು ಭರವಸೆಯ ಮೇಲೆ ಸಹೋದ್ಯೋಗಿಯೊಬ್ಬ ತನ್ನೊಂದಿಗೆ ಸಂಬಂಧ ಹೊಂದಿದ್ದಾನೆ ಎಂದು ಆರೋಪಿಸಿದ ಮಹಿಳೆಯೊಬ್ಬರು ನೀಡಿದ ದೂರಿನಿಂದ ಈ ಪ್ರಕರಣ ಬೆಳಕಿಗೆ ಬಂತು. ತನಿಖೆ ಮುಂದುವರೆದಂತೆ, ಹೆಚ್ಚಿನ ಮಹಿಳೆಯರು ಸಹೋದ್ಯೋಗಿಗಳ ವಿರುದ್ಧ ಲೈಂಗಿಕ ಕಿರುಕುಳದ ಆರೋಪಗಳೊಂದಿಗೆ ಮುಂದೆ ಬಂದರು. ಈ ಘಟನೆಗಳು ಇಂದು ನೆನ್ನೆಯದಲ್ಲ, ಫೆಬ್ರವರಿ 2022ರಿಂದಲೇ ನಡೆಯುತ್ತಿತ್ತು ಎಂದು ಆರೋಪಿಸಲಾಗಿದೆ.

ನಾಸಿಕ್ ಪೊಲೀಸರು ರಹಸ್ಯ ಕಾರ್ಯಾಚರಣೆಯನ್ನು ನಡೆಸಿದ್ದು, ಇದರಲ್ಲಿ ಮಹಿಳಾ ಪೊಲೀಸ್ ಅಧಿಕಾರಿಗಳು ಮಾರುವೇಷದಲ್ಲಿ ಟಿಸಿಎಸ್ ಕಚೇರಿಗೆ ಪ್ರವೇಶಿಸಿ ಅಲ್ಲಿನ ಆಗುಹೋಗುಗಳನ್ನು ಗಮನಿಸಿದ್ದಾರೆ. ಇದುವರೆಗೂ ಒಂಬತ್ತು ಪ್ರಕರಣಗಳನ್ನು ದಾಖಲಿಸಲಾಗಿದ್ದು, ಏಳು ಆರೋಪಿಗಳನ್ನು ಗುರುತಿಸಲಾಗಿದೆ. ಆರು ಮಂದಿ ನ್ಯಾಯಾಂಗ ಬಂಧನದಲ್ಲಿದ್ದರೆ, ಒಬ್ಬ ಆರೋಪಿ ತಲೆಮರೆಸಿಕೊಂಡಿದ್ದಾಳೆ. ಬಂಧನಕ್ಕೊಳಗಾದ ಆರೋಪಿಗಳು; ಆಸಿಫ್ ಅನ್ಸಾರಿ, ಶಫಿ ಶೇಖ್, ಶಾರುಖ್ ಖುರೇಷಿ (ಶಾರುಖ್ ಖುರೇಷಿ ಎಂದೂ ಕರೆಯಲ್ಪಡುತ್ತಾರೆ), ರಜಾ ಮೆಮನ್, ತೌಸಿಫ್ ಅತ್ತರ್ ಮತ್ತು ಡ್ಯಾನಿಶ್ ಶೇಖ್ ಎಂದು ಗುರುತಿಸಲಾಗಿದೆ.

ಪದೇ ಪದೆ ಅನುಚಿತ ದೈಹಿಕ ಸ್ಪರ್ಶ, ಅಶ್ಲೀಲ ಟೀಕೆಗಳು, ಲೈಂಗಿಕ ಕಿರುಕುಳ ಮತ್ತು ಕೆಲವು ಸಂದರ್ಭಗಳಲ್ಲಿ ಮದುವೆಯ ಸುಳ್ಳು ಭರವಸೆಗಳ ಅಡಿಯಲ್ಲಿ ಮತಾಂತರಗಳು ನಡೆಯುತ್ತಿತ್ತು. ಈ ಕುರಿತು ಮಾನವ ಸಂಪನ್ಮೂಲ ಇಲಾಖೆ ಸೇರಿದಂತೆ ಸಂಸ್ಥೆಯ ಉನ್ನತ ಅಧಿಕಾರಿಗಳಿಗೆ ನೀಡಿದ ದೂರುಗಳನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಲಾಗಿದೆ ಎಂದು ಸಂತ್ರಸ್ತರು ಆರೋಪಿಸಿದ್ದಾರೆ. ನಿದಾ ಖಾನ್ ಎಂದು ಗುರುತಿಸಲಾದ ಮಾನವ ಸಂಪನ್ಮೂಲ ಮುಖ್ಯಸ್ಥರು ಇದರಲ್ಲಿ ನೇರವಾಗಿ ಭಾಗಿಯಾಗಿದ್ದಾರೆ ಮತ್ತು ಪುನರಾವರ್ತಿತ ದೂರುಗಳಿಗೆ ಆಕೆ ಕಿವಿಗೊಡಲಿಲ್ಲ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ಸಂಸ್ಥೆಯ ಹಿರಿಯ ಮುಸ್ಲಿಂ ಅಧಿಕಾರಿಗಳು ಹುಡುಗಿಯರಿಗೆ ಉದ್ಯೋಗ ಮತ್ತು ಉತ್ತಮ ಸಂಬಳದ ಭರವಸೆ ನೀಡುವ ಮೂಲಕ ಆಮಿಷವೊಡ್ಡಿ ಅವರನ್ನು ಬಲೆಗೆ ಬೀಳಿಸಿ ಮತಾಂತರಿಸಿದರು, ನಮಾಜ್ ಮಾಡುವಂತೆ ಮಾಡಿದರು, ರೋಜಾ ಆಚರಿಸುವಂತೆ ಮಾಡಿದರು ಮತ್ತು ಗೋಮಾಂಸವನ್ನು ಬಲವಂತವಾಗಿ ತಿನ್ನಿಸಿದ್ದರು ಎನ್ನುವುದು ತಿಳಿದುಬಂದಿದೆ. ತನಿಖಾಧಿಕಾರಿಗಳು ಇವರಿಬ್ಬರನ್ನು ತೌಸಿಫ್ ಅತ್ತರ್ ಮತ್ತು ನಿದಾ ಖಾನ್ ಎಂದು ಗುರುತಿಸಿದ್ದು. ತಲೆಮರೆಸಿಕೊಂಡಿರುವ ನಿದಾ ಖಾನ್ ಅವರನ್ನು ಪತ್ತೆಹಚ್ಚಲು ಪೊಲೀಸರು ಹರಸಾಹಸ ಪಡುತ್ತಿದ್ದಾರೆ. ಮುಂಬೈಗೆ ವರ್ಗಾವಣೆಯಾಗುವ ಮೊದಲು ನಿದಾ ಖಾನ್ ನಾಸಿಕ್ ಕಚೇರಿಯಲ್ಲಿ ಮಾನವ ಸಂಪನ್ಮೂಲ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು. ತೌಸಿಫ್ ಮತ್ತು ನಿದಾ ಇಬ್ಬರೂ ಇತರ ಉದ್ಯೋಗಿಗಳನ್ನು ಬ್ರೈನ್ ವಾಶ್ ಮಾಡಲು ಪ್ರಯತ್ನಿಸುತ್ತಿದ್ದರು, ತೌಸಿಫ್ ಮೂರು ವರ್ಷಗಳ ಹಿಂದೆ ಮೆಕ್ಕಾದಿಂದ ಹಿಂದಿರುಗಿದ ನಂತರ ಅತ್ಯಂತ ತೀವ್ರಗಾಮಿಯಾಗಿದ್ದರು ಎನ್ನುವ ವಿಚಾರ ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಆತ ಈಗಾಗಲೇ ಮದುವೆಯಾಗಿ ಇಬ್ಬರು ಮಕ್ಕಳನ್ನು ಹೊಂದಿದ್ದವ ಎಂಬ ಸತ್ಯವನ್ನು ಮರೆಮಾಚಿ, ಮದುವೆಯ ಸುಳ್ಳು ಭರವಸೆಗಳ ಮೇಲೆ ಸಂತ್ರಸ್ತೆಯ ಮೇಲೆ ಅತ್ಯಾಚಾರ ಎಸಗಿದ್ದಾನಂತೆ. ನಿದಾ ಖಾನ್, ಯುವತಿಯರನ್ನು ಆರೋಪಿಗಳಿಗೆ ಪರಿಚಯಿಸುತ್ತಿದ್ದಳು ಮತ್ತು ಹಿಂದೂ ಧರ್ಮದ ಬಗ್ಗೆ ನಿರಂತರವಾಗಿ ಕೆಟ್ಟದಾಗಿ ಮಾತನಾಡುತ್ತಿದ್ದಳು, ಸಂತ್ರಸ್ತರಿಗೆ ನಮಾಝ್ ಮಾಡುವುದು ಮತ್ತು ಕಲ್ಮಾ ಪಠಿಸುವುದು ಹೇಗೆ ಎಂದು ಕಲಿಸುತ್ತಿದ್ದಳು ಎಂದು ಪೊಲೀಸರು ತಿಳಿಸಿದ್ದಾರೆ. ಆಪಾದಿತೆ ನಿದಾ ಖಾನ್ ಅವರಿಗೆ ಕೆಂಪುಕೋಟೆ ಭಯೋತ್ಪಾದನಾ ಕೃತ್ಯದಲ್ಲಿ ಆಪಾದಿತಳಾಗಿ ಎನ್‌ಐಎ ಕಸ್ಟಡಿಯಲ್ಲಿರುವ ಡಾ. ಶಾಹೀನ್ ಮತ್ತು

ಭಾರತದಿಂದ ಪರಾರಿಯಾಗಿ ಮಲೇಷ್ಯಾದಲ್ಲಿ ಕುಳಿತಿರುವ ಮತಾಂಧ ಝಾಕಿರ್ ನಾಯಕ್ ಅವರ ಜತೆಗೂ ಸಂಬಂಧವಿದೆ ಎನ್ನಲಾಗುತ್ತಿದೆ. ಹಾಗಾಗಿ, ಈ ಪ್ರಕರಣವನ್ನು ಪೊಲೀಸರು ಕೇವಲ ಲೈಂಗಿಕದೌರ್ಜನ್ಯದ ಅಥವಾ ಬಲವಂತದ ಮತಾಂತರದ ಪ್ರಕರಣವಾಗಿಯಷ್ಟೇ ಅಲ್ಲದೇ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಪ್ರಕರಣವಾಗಿಯೂ ನೋಡುವ ಅಗತ್ಯವಿದೆ.

ಟಿಸಿಎಸ್ ಈಗ ತನ್ನ ಹಿತಾಸಕ್ತಿಗಳನ್ನು ಭದ್ರಪಡಿಸಿಕೊಳ್ಳುವ ಪ್ರಯತ್ನದಲ್ಲಿದ್ದು, ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್, ಸಂಸ್ಥೆಯ ನಾಸಿಕ್ ಶಾಖೆಯಿಂದ ಹೊರಹೊಮ್ಮುತ್ತಿರುವ ಘಟನೆಗಳು ತೀವ್ರ ಕಳವಳಕಾರಿ ಮತ್ತು ದುಃಖಕರವಾಗಿವೆ ಎಂದು ಹೇಳುವ ಮೂಲಕ ತಿಪ್ಪೆಸಾರಿಸುವ ಕೆಲಸಮಾಡುತ್ತಿದ್ದಾರೆ. ಈ ಘಟನೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಲಾಗುತ್ತಿದೆ. ಆರೋಪಿ ನೌಕರರ ವಿರುದ್ಧ ಈಗಾಗಲೇ ಕ್ರಮ ಕೈಗೊಳ್ಳಲಾಗಿದ್ದು, ನಡೆಯುತ್ತಿರುವ ತನಿಖೆಗೆ ಕಂಪನಿ ಸಂಪೂರ್ಣ ಸಹಕಾರ ನೀಡುತ್ತಿದೆ. ಟಾಟಾ ಗ್ರೂಪ್ ತನ್ನ ಉದ್ಯೋಗಿಗಳ ಯಾವುದೇ ರೀತಿಯ ಬಲವಂತ ಅಥವಾ ದುರ್ನಡತೆಯ ಬಗ್ಗೆ ಶೂನ್ಯ ಸಹಿಷ್ಣುತೆ ನೀತಿಯನ್ನು ಹೊಂದಿದೆ. ಸತ್ಯವನ್ನು ಹೊರ ತರಲು ಮತ್ತು ಈ ಪರಿಸ್ಥಿತಿಗೆ ಕಾರಣವಾದ ಎಲ್ಲ ವ್ಯಕ್ತಿಗಳನ್ನು ಗುರುತಿಸಲು ಸಮಗ್ರ ತನಿಖೆ ನಡೆಯುತ್ತಿದೆ ಎಂದು ಪಕ್ಕಾ ರಾಜಕಾರಣಿಗಳ ಧಾಟಿಯಲ್ಲಿ ಮಾತನಾಡುತ್ತಿದ್ದಾರೆ. ಅಲ್ಲಿಗೆ ಇವರ ಜವಾಬ್ದಾರಿ ಮುಗಿದಂತಾಯಿತಲ್ಲೇ?

ದೇಶಾದ್ಯಂತ ಇದನ್ನು ಕಾರ್ಪೊರೇಟ್ ಜಿಹಾದ್ ಪ್ರಕರಣ ಎಂದು ಪರಿಗಣಿಸಲಾಗುತ್ತಿದ್ದು, ಲಕ್ಷಾಂತರ ಐಟಿ ಉದ್ಯೋಗಿಗಳಿಗೆ ರಕ್ಷಣೆ ನೀಡುವಂತೆ ಎಲ್ಲೆಡೆಯಿಂದ ಒತ್ತಾಯ ಕೇಳಿ ಬರುತ್ತಿದೆ. ನಿಮ್ಮ ನಾಸಿಕ್ ಬಿಪಿಒ ದಲ್ಲಿ ಹೊರಹೊಮ್ಮಿದ ವಿಷಯಗಳಿಗೆ ನಿಮ್ಮ ಮಂದ ಪ್ರತಿಕ್ರಿಯೆ ಅಸಮರ್ಪಕ ಮಾತ್ರವಲ್ಲದೆ ಆಕಸ್ಮಿಕ ಎನ್ನುವಂತೆ ಬಿಂಬಿಸಿ ತಳ್ಳಿಹಾಕುವಂತಿದೆ, ನಿಮ್ಮ ಅತ್ಯಂತ ಸೌಮ್ಯ ಪ್ರತಿಕ್ರಿಯೆ ನಿರಾಶಾದಾಯಕವಾಗಿದೆ ಎಂದು ಅನೇಕ ಹಿಂದೂ ಮಹಿಳಾ ಸಂಘಟನೆಗಳು ಟಿಸಿಎಸ್ ಸಂಸ್ಥೆಯನ್ನು ದೂರುತ್ತಿವೆ. ಸಾಮಾಜಿಕ ಮಾಧ್ಯಮ ಮತ್ತು ಸಾರ್ವಜನಿಕ ಸಂವಾದವು ಐಟಿ ವಲಯದಲ್ಲಿ ಕೆಲಸದ ಸ್ಥಳದ ಸುರಕ್ಷತೆ, ಯುವ ಉದ್ಯೋಗಿಗಳ ದುರ್ಬಲತೆ ಮತ್ತು ಧಾರ್ಮಿಕ ಬಲವಂತದೊಂದಿಗೆ ವೃತ್ತಿಪರ ಸುರಕ್ಷಿತ ಪರಿಸರದ ಬಗ್ಗೆ ಕಳವಳಗಳನ್ನು ಎತ್ತಿ ತೋರಿಸುತ್ತಿದೆ. ಕಾರ್ಪೊರೇಟ್ ಭಾರತದಲ್ಲಿ ಆಂತರಿಕ ದೂರು ಕಾರ್ಯವಿಧಾನಗಳ ಬಗ್ಗೆ ನಡೆಯುತ್ತಿರುವ ಚರ್ಚೆಗಳು ಮತ್ತು ಎಲ್ಲ ರೀತಿಯ ಕೆಲಸದ ಸ್ಥಳದ ಕಿರುಕುಳದ ವಿರುದ್ಧ ದೃಢವಾದ ರಕ್ಷಣೆಗಳ ಅಗತ್ಯವನ್ನು ಈ ಪ್ರಕರಣವು ಒತ್ತಿಹೇಳುತ್ತದೆ.

ಭಾರತದಲ್ಲಿ ಅಲ್ಪಸಂಖ್ಯಾತರು ಅದರಲ್ಲೂ ಮುಸ್ಲಿಮರು ಸಂಕಟದಲ್ಲಿದ್ದಾರೆ ಎಂದು ಬೊಬ್ಬೆ ಹೊಡೆಯುವುದು ಒಂದುಕಡೆಯಾದರೆ, ಇದೇ ಅಲ್ಪಸಂಖ್ಯಾತ ಮೂಲಭೂತವಾದಿಗಳಿಂದ ಹಿಂಸೆ, ಅತ್ಯಾಚಾರ, 'ಲವ್ ಜಿಹಾದ್'ಗಳಿಗೊಳಗಾವುವ ಹಿಂದೂ ಮಹಿಳೆಯರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಲೇ ಇದೆ. ಇತ್ತೀಚೆಗೆ ವರದಿಯಾದ ಟಿಸಿಎಸ್ ಸಂಸ್ಥೆಯಲ್ಲಿ ನಡೆದಿದೆ ಎನ್ನಲಾದ ಹಿಂದೂ ಹುಡುಗಿಯರ ಮೇಲಿನ ದೌರ್ಜನ್ಯವನ್ನು, ಮತಾಂತರದ ಪ್ರಯತ್ನಗಳನ್ನು ನೋಡುವಾಗ, ಅತ್ಯಂತ ದೊಡ್ಡ, ಹೆಸರುಮಾತಿನ ಐಟಿ ಸಂಸ್ಥೆಯಲ್ಲಿ ಎಲ್ಲವೂ ಸರಿಯಿಲ್ಲ ಎನ್ನುವುದು ಸಾಬೀತಾಗುತ್ತದೆ. ಎಂದಿನಂತೆ ಈ ಪ್ರಕರಣದಲ್ಲೂ ಆಪಾದಿತರು ಮುಸ್ಲಿಮ್ ಮತಾಂಧರು ಹಾಗೂ ದೌರ್ಜನ್ಯಕ್ಕೊಳಗಾದವರು ಮುಗ್ಧ ಹಿಂದೂ ಹುಡುಗಿಯರು ಎನ್ನುವುದು ಗಮನಾರ್ಹ ಸಂಗತಿಯಾಗಿದೆ. ಹಾಗಂತ ಈ ಥರದ ಅವ್ಯವಹಾರಗಳು ಕೇವಲ ಟಿಸಿಎಸ್‌ಗೆ ಸೀಮಿತವಾಗಿಲ್ಲ, ನಾಸಿಕ್‌ನ ಘಟನೆಯ ನಂತರ ದೇಶದ ದೊಡ್ಡ ಐಟಿ ಕಂಪನಿಗಳಲ್ಲಿಯೂ ತಲ್ಲಣ ಶುರುವಾಗಿದೆ. ಈ ಕುರಿತು ದೂರುಗಳು ಬರಲು ಶುರುವಾಗಿದೆ, ಅಲ್ಲಿನ ಮಹಿಳಾ ಉದ್ಯೋಗಿಗಳು ತಮ್ಮ ದೂರು ದುಮ್ಮಾನಗಳನ್ನು ಈಗ ಸಾಮಾಜಿಕ ಜಾಲತಾಣಗಳಲ್ಲಿ ತೇಲಿಬಿಡಲು ಶುರುವಿಟ್ಟುಕೊಂಡಾಗಿದೆ. ಯಾರ ಬಣ್ಣ ಏನು? ಎಂದು ತಿಳಿಯಲು ಬಹಳ ಸಮಯ ಹಿಡಿಯಲಿಕ್ಕಿಲ್ಲ. ಸದ್ಯಕ್ಕೆ ಸಿಕ್ಕಿಬಿದ್ದುರುವುದು ಟಿಸಿಎಸ್ ಕಂಪನಿ ಅಷ್ಟೆ, ಕದ್ದವರೆಲ್ಲ ಕಳ್ಳರಲ್ಲ, ಸಿಕ್ಕಿಬಿದ್ದವ ಮಾತ್ರ ಕಳ್ಳ ಎನ್ನುವುದು ಇದ್ದೇ ಇದೆಯಲ್ಲ.

ಇಷ್ಟೆಲ್ಲ ನಡೆಯುತ್ತಿದ್ದರೂ, ಈ ಪ್ರಕರಣ ಮಾಧ್ಯಮಗಳಲ್ಲಿ ಎಷ್ಟು ಸುದ್ದಿಯಾಗಬೇಕಾಗಿತ್ತೋ ಅಷ್ಟು ಆಗುತ್ತಿಲ್ಲ. ಕಾರಣ ಸರಳ, ಒಂದು ಇದು ಐಟಿ ದಿಗ್ಗಜ ಸಂಸ್ಥೆ ಟಿಸಿಎಸ್‌ನಲ್ಲಿ ನಡೆದ ಘಟನೆಯಾಗಿದೆ, ಎರಡನೇಯದಾಗಿ ಈ ಘಟನೆ ಬಿಜೆಪಿ ಅಧಿಕಾರದಲ್ಲಿರುವ ಮಹಾರಾಷ್ಟ್ರದಲ್ಲಿ ನಡೆಯುತ್ತಿದೆ. ಈ ಪ್ರಕರಣವನ್ನು ಇಲ್ಲಿಗೇ ಬಿಡುವುದಿಲ್ಲ, ಅದರ ಮೂಲಕ್ಕೆ ಹೋಗಿ ಸಂಪೂರ್ಣ ಸತ್ಯವನ್ನು ಬಯಲಿಗೆಳೆದು, ತಪ್ಪಿತಸ್ಥರಿಗೆ ಕಠಿಣಾತಿಕಠಿಣ ಶಿಕ್ಷೆ ನೀಡಲಾಗುವುದು ಎಂದು ಮಹಾರಾಷ್ಟ್ರ ಮುಖ್ಯಮಂತ್ರಿಗಳೇನೋ ತಡವಾಗಿಯಾದರೂ ಹೇಳುತ್ತಿದ್ದಾರೆ. ಸಂಸ್ಥೆ, ಬಿಜೆಪಿ ಹಾಗೂ ಮಹಾರಾಷ್ಟ್ರ ಸರಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ಕಾದು ನೋಡಬೇಕಿದೆ.

ಭಾರತದ ಗುಪ್ತಚರರು ಪಾಕಿಸ್ತಾನದ ಒಳಹೊಕ್ಕು ಅಲ್ಲಿನ ವ್ಯವಸ್ಥೆಯ ಭಾಗವಾಗಿದ್ದುಕೊಂಡು ಭಾರತದ ವಿರುದ್ಧ ಕೆಲಸಮಾಡುತ್ತಿದ್ದವರನ್ನು ಒಬ್ಬೊಬ್ಬರನ್ನಾಗಿ ಮುಗಿಸಿದ ಕಥೆಯನ್ನು 'ಧುರಂಧರ್' ಸಿನಿಮಾದಲ್ಲಿ ನೋಡಿ ಸಂತೋಷಪಡುವ ಭರದಲ್ಲಿ, ನಮ್ಮಲ್ಲಿ ಏನೆಲ್ಲ ನಡೆಯುತ್ತಿದೆ ಎನ್ನುವುದನ್ನು ನಿರ್ಲಕ್ಷ್ಯ ಮಾಡುತ್ತಿದ್ದೇವೇನೋ ಅನಿಸುತ್ತಿದೆ. ನಮ್ಮಲ್ಲಿ ಮೋದಿಯಿದ್ದಾರೆ ಎನ್ನುವ ಅತಿ ಆತ್ಮವಿಶ್ವಾಸವೂ ಭಾರತೀಯರಿಗಿರಬಹುದು. ದೇಶದೊಳಗಿನ ಸುಶಿಕ್ಷಿತ ಮತಾಂಧರು, ಮೆಡಿಕಲ್ ಕಾಲೇಜುಗಳಲ್ಲಿ, ದೊಡ್ಡ ದೊಡ್ಡ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಾ, ಗಡಿಯಾಚೆಗಿನ ಮತಾಂಧರ ಅಜೆಂಡಾಗಳನ್ನು ಸಲೀಸಾಗಿ ಮುನ್ನಡೆಸುತ್ತಿದ್ದರೂ ಗೊತ್ತಾಗದ ಭಾರತೀಯರ ಪೆದ್ದುತನವನ್ನು ತೋರಿಸಲು ಪಾಕಿಸ್ತಾನ, ಬಾಂಗ್ಲಾದೇಶಗಳೂ ಸಿನಿಮಾ ಮಾಡಬಹುದೇನೋ!

ಕಾಡಲ್ಲಿದ್ರೂ ಹುಲಿನೇ, ರೋಡಲ್ಲಿದ್ರೂ ಹುಲಿನೇ

ನೆಟ್ ಪಿಕ್ಸ್

ತುಂಟರಗಾಳಿ
ಹರಿ ಪರಾಕ್
vveditoped@gmail.com

ಖೇಮು ಮತ್ತು ಖೇಮುಶ್ರೀ ಮಧ್ಯೆ ದಿನಾ ಜಗಳ ಆಗ್ತಾ ಇತ್ತು. ಒಂದ್ ದಿನ ಸರಿ ಇದ್ರೆ, ಒಂದ್ ತಿಂಗಳು ಜಗಳ, ಕೊನೆಗೆ ಹಿಂಗೆ ದಿನಾ ಜಗಳ ಆಡ್ಕೊಂಡು ಬದುಕೋಕಾಗಲ್ಲ ಅಂತ ಇಬ್ಬರಿಗೂ ಅನ್ನಿಸಿತು. ಅದ್ಕೆ ಇಬ್ರೂ ಕೋರ್ಟ್ ಮೆಟ್ಟಿಲು ಹತ್ತಿ ಡೈವೋರ್ಸ್‌ಗೆ ಅಪ್ಲೈ ಮಾಡೋದು ಅಂತ ತೀರ್ಮಾನ ಮಾಡಿದ್ರು. ಹಂಗೆ ಮಾಡಿದ್ರು. ಕೋರ್ಟ್‌ನಲ್ಲಿ ಜಡ್ಜ್ ತುಂಬಾ ಸಂಭಾವಿತರು. ಹಾಗಾಗಿ ಇಬ್ಬರಿಗೂ ಒಳ್ಳೆ ಮಾತಿನಲ್ಲಿ ಜತೆಯಾಗಿ ಬದುಕೋಕೆ ಸಲಹೆ ನೀಡಿದ್ರು. ನೋ ಯೂಸ್, ಖೇಮು, ಖೇಮುಶ್ರೀ ಇಬ್ರೂ ಸುತರಾಂ ಒಪ್ಪಲಿಲ್ಲ. ಅಂತೂ ಇಂತೂ ಎಲ್ಲ ಪ್ರಯತ್ನಗಳ ನಂತರ ಜಡ್ಜ್ ಇವರಿಬ್ಬರಿಗೂ ಡೈವೋರ್ಸ್ ಕೊಡೋಕೆ ಅನುಮತಿ ಕೊಟ್ರು, ಈಗ ವಿಷಯ ಜೀವನಾಂಶಕ್ಕೆ ಬಂತು. ಖೇಮುಶ್ರೀ 'ನಂಗೆ ತಿಂಗಳಿಗೆ 20 ಸಾವಿರ ರುಪಾಯಿ ಜೀವನಾಂಶ ಬೇಕು' ಅಂತ ಪಟ್ಟು ಹಿಡಿದು ಕೂತಳು. ಖೇಮು 'ನನ್ ಕೈಲಿ ಸಾಧ್ಯಾನೇ ಇಲ್ಲ' ಅಂತ ಕೂತ. ಕೊನೆಗೆ ಖೇಮುನ ಒಟ್ಟಾರೆ ಇನ್ಕಮ್, ಖೇಮುಶ್ರೀಯ ಅವಶ್ಯಕತೆ ಎಲ್ಲವನ್ನೂ ಪರಿಶೀಲಿಸಿದ ಜಡ್ಜ್ ತೀರ್ಪು ಕೊಟ್ಟರು. 'ಎಲ್ಲ ದಾಖಲೆಗಳನ್ನು ನೋಡಿ, ಖೇಮುಶ್ರೀಯ ಪರಿಸ್ಥಿತಿಯನ್ನು ಗಮನಿಸಿ ಆಕೆಗೆ ಪ್ರತಿ ತಿಂಗಳು 20 ಸಾವಿರ ರುಪಾಯಿಗಳ ಜೀವನಾಂಶ ಕೊಡಬೇಕೆಂದು ನಾನು ತೀರ್ಮಾನ ಮಾಡಿದ್ದೇನೆ' ಎಂದರು. ಅದನ್ನು ಕೇಳಿದ ಖೇಮು ಫುಲ್ ಖುಷಿಯಾಗಿ ಹೇಳಿದ 'ನಿಮ್ದು ಭಾಳಾ ದೊಡ್ ಮನಸು ಸ್ವಾಮಿ, ಸಾಧ್ಯ ಆದ್ರೆ, ಅವಳಿಗೆ ನಾನೂ ಆವಾಗಾವಾಗ ಅಲ್ಪ ಸ್ವಲ್ಪ ದುಡ್ ಕೊಡೋಕೆ ಟ್ರೈ ಮಾಡ್ತೀನಿ.'

ಲೂಸ್ ಟಾಕ್ ▸▸ ನರಭಕ್ಷಕ ಹುಲಿ

- **ಅಲ್ಲಪ್ಪಾ, ಹಿಂಗೆಲ್ಲಾ ಊರೊಳಗೆ ನುಗ್ಗಿ ಮನುಷ್ಯರನ್ನ ಕೊಂದು ತಿನ್ನೋದು ತಪ್ಪಲ್ವಾ?**
- ಏನ್ ತಪ್ಪು, ಹುಲಿ ಮುಪ್ಪಾದರೆ, ಹುಲ್ಲು ತಿಂತದಾ? ಉಪ್ಪು, ಹುಳಿ, ತಿಂದು ಬೆಳೆದಿರೋ ದೇಹ. ಹುಲಿ ಕಾಡಲ್ಲಿದ್ರೂ ಹುಲಿನೇ, ರೋಡಲ್ಲಿದ್ರೂ ಹುಲಿನೇ ಗೊತ್ತಾ, ಈಗ ನೀನ್ ಸಿಕ್ಕಿದೀಯಾ.. ಕುತ್ತೇ ಮೇ ತೇರಾ ಖೂನ್ ಪೀ ಜಾವೂಂಗ.
- **ಓ...ನೀನು ಧರ್ಮೇಂದ್ರನ ಅಭಿಮಾನಿ ಅನ್ಸುತ್ತೆ, ಒಂದ್ ಅರ್ಧಗಂಟೆ ಇರು. ಇವತ್ತಿನ ಡೆಡ್‌ಲೈನ್ ಮುಗಿಸ್ಕೊಂಡ್ ವಾಪಸ್ ಬರ್ತೀನಿ, ಆಮೇಲ್ ತಿನ್ನುವಂತೆ**
- ಮಗಾ, ಪುಣ್ಯಕೋಟಿ ಕಾಲ ಎಲ್ಲ ಈವಾಗಿಲ್ಲಮ್ಮಾ, ಇದು ಕಲಿಗಾಲ.
- **ನಿಜ ಹೇಳಬೇಕಂದ್ರೆ, ಇದು ಹುಲಿಗಾಲ, ಅದ್ಸರಿ, ಈಗ ಬೋನೊಳಗೆ ಹಾಕಿದ್ದಾರಲ್ಲ ನಿನ್ನ, ಈಗ ಹೇಳು, ನಿನ್ನ ಪ್ರಕಾರ ಯಾರು ಜಾಸ್ತಿಸ್ಟಾಂಗ್? ಮನುಷ್ಯನಾ ಅಥವಾ ಹುಲಿಯಾ?**
- ಗೊತ್ತಿಲ್ಲ, ಕೆ.ವಿ. ರಾಜು ಅವರನ್ನೇ ಕೇಳಬೇಕು.
- **ಸರಿ, ಸರಿ, ಆದ್ರೆ, 'ಕಾಡು ಹೋಗು ಅಂತಿದೆ, ಊರು ಬಾ ಅಂತಿದೆ' ಅನ್ನೋ ನಿನ್ನ ಸಾಯಿಸ್ಟೇಕಂತ ಕೆಲವರು ಹೇಳಿದ್ದಾರೆ, ಏನಂತೀಯಾ?**
- ಟೈಗರ್ ಪ್ರಭಾಕರ್, ಭಾಳಾ ಠಾಕ್ರೆ, ಪಟೌಡಿ ಹೀಗೆ ಹುಲಿಗಳ ಸಂತತಿ ಕಡಿಮೆಯಾಗಿದೆ. ಹಂಗಾಗಿ ನನ್ನನ್ನ ಕೊಲ್ಲಲ್ಲ ಅಂತ ಭರವಸೆ ಇದೆ.
- **ಸಿಕ್ಕಾಕ್ಕೊಂಡಿರೋ ಬೋನಿನಲ್ಲಿ ತಿನ್ನೋಕೆ ಬೋನ್ ಸಿಗ್ತಿಲ್ಲ, ಹಂಗೇ ಸತ್ತೂ ಸಾಯಬಹುದು ನೀನು. ಹಂಗೇನಾದ್ರೂ ಆದ್ರೆ, ನಿನ್ ಕೊನೆ ಆಸೆ ಏನು?**
- ನೀವ್ಯಾರೂ ನಮ್ಮ ಹುಲಿಗಳ ಆಸೆ ತೀರ್ಸಲ್ಲ ಬಿಡ್ರಪ್ಪಾ. ಒಂದಷ್ಟು ವರ್ಷಗಳ ಹಿಂದೆ 'ಹುಲಿ ಹಿಡಿದವರು ಕಂಡಂತೆ' ಅಂತ ನನ್ ಮೇಲೊಂದ್ ಸಿನಿಮಾ ಮಾಡ್ತೀನಿ ಅಂತ ಹೇಳಿದ್ರು, ಆದ್ರೆ ಮಾಡದೇ ನನ್ನ ಆಸೆಗೆ ಹುಳಿ ಹಿಂಡಿಬಿಟ್ರು.

ಭಗವದ್ಗೀತೆ ಮತ್ತು ವಚನಗಳು, ಒಂದು ತೌಲನಿಕ ಅಧ್ಯಯನ!

ವಚನಾಮೃತ
ರವಿ ಹಂಜ್
vveditoped@gmail.com

ಪ್ರಾದೇಶಿಕವಾಗಿ ಭಾಷೆ, ಆಹಾರ, ಜನಾಂಗೀಯ ವಂಶೀಯತೆ, ಭೌಗೋಳಿಕ ಮತ್ತು ಸಾಂಸ್ಕೃತಿಕ ವ್ಯತ್ಯಾಸಗಳಿದ್ದರೂ ಸಹ, ಎಲ್ಲ ಪ್ರದೇಶಗಳ ನಡುವೆ ಅನೇಕ ಸಾಮ್ಯತೆಗಳು ಇವೆ. ಕನ್ನಡ, ಇಂಗ್ಲಿಷ್, ಹಿಂದಿ, ಸ್ಪ್ಯಾನಿಷ್, ಜರ್ಮನ್ ಅಥವಾ ಫ್ರೆಂಚ್ ಆಗಿರಲಿ, ಭಾಷಿಕವಾಗಿ ಈ ಸಾಮಾನ್ಯ ಅಂಶಗಳನ್ನು ಪ್ರತಿನಿಧಿಸುವ ಉತ್ತಮ ಉದಾಹರಣೆಗಳೆಂದರೆ ನಾಣ್ನುಡಿಗಳು! ಎಲ್ಲವುಗಳಲ್ಲೂ ಅಂತರಾರ್ಥದ ಮೂಲ ಸಾರ ಒಂದೇ ಆಗಿರುತ್ತದೆ. ಜನಾಂಗೀಯ ವಂಶೀಯತೆ ಮತ್ತು ಸಂಸ್ಕೃತಿಗಳ ಆಧಾರದ ಮೇಲೆ ಉಪಮೆ ಮತ್ತು ರೂಪಕಗಳ ನಿರೂಪಣೆ ವಿಭಿನ್ನವಾಗಿರಬಹುದು, ಆದರೆ ಅವು ಬೋಧಿಸುವ ನೈತಿಕ ಮೌಲ್ಯಗಳ ಸಾರವು ಜಾಗತಿಕವಾಗಿ ಸಾರ್ವತ್ರಿಕವೆನಿಸುತ್ತದೆ. ನಮ್ಮ ಪೂರ್ವಜರ ಜೀವನದ ಪಾಠಗಳಿಂದ ರೂಪುಗೊಂಡ ಈ ಬುದ್ಧಿವಾದದ ಮಾತುಗಳು, ಚುರುಕಾದ, ಸ್ಪಷ್ಟವಾದ, ಸರಳವಾದ ವಾಕ್ಯಗಳಲ್ಲಿ ತಲೆಮಾರುಗಳಿಂದ ತಲೆಮಾರುಗಳಿಗೆ ಉಳಿದುಕೊಂಡಿವೆ. ಕುತೂಹಲಕರ ವಿಷಯವೆಂದರೆ, ಎಲ್ಲ ವಂಶೀಯ ಗುಂಪುಗಳಲ್ಲೂ ಇರುವ ಈ ಏಕವಾಕ್ಯದ ಬುದ್ಧಿವಾದಗಳು, ಮಾನವಕುಲವೆಲ್ಲವೂ ಒಂದೇ ಎಂದು ಬೋಧಿಸುತ್ತವೆ.

ನಾವು ಹೊಸ ಭಾಷೆಗಳನ್ನು ಕಲಿಯುವಾಗ ಮತ್ತು ಆ ಭಾಷೆಗಳ ನಡುವೆ ಇರುವ ಗಮನಾರ್ಹ ಸಾದೃಶ್ಯಗಳನ್ನು ಗುರುತಿಸುವಾಗ, ಅದು ನಮಗೆ ಯಾವಾಗಲೂ ಅಚ್ಚರಿಯನ್ನುಂಟು ಮಾಡುತ್ತದೆ. ದೂರದ ಅಂತರ ಮತ್ತು ಜನಾಂಗೀಯ ವಂಶೀಯತೆ, ಜೀವನಶೈಲಿ ಮತ್ತು ಸಂಸ್ಕೃತಿಯ ವ್ಯತ್ಯಾಸಗಳಿದ್ದರೂ ಸಹ, ನೈತಿಕ ಮೌಲ್ಯಗಳು ಮತ್ತು ಮಾನವೀಯ ಭಾವನೆಗಳು ಒಂದೇ ಆಗಿವೆ. ಸುಂದರ ಮತ್ತು ಸರಳ ಜೀವನದ ಭಾವನೆಯೇ ಎಲ್ಲ ಸಂಸ್ಕೃತಿಗಳ ಏಕಮಾತ್ರ ಧ್ಯೇಯವಾಗಿತ್ತು ಎಂದು ಅನಿಸುತ್ತದೆ. ಉದಾಹರಣೆಗೆ, ಕನ್ನಡದ ಗಾದೆ, ಮನಸ್ಸಿದ್ದರೆ ಮಾರ್ಗ ಎಂಬುದು ಇಂಗ್ಲಿಷಿನಲ್ಲಿ Where there is a will, there's a way ಎಂದಾದರೆ, ಸ್ಪ್ಯಾನಿಷ್ ಭಾಷೆಯಲ್ಲಿ donde hay gana, hay mana ಎಂದಿದೆ. ಅದೇ ಗಾದೆಯ ಇಟಾಲಿಯನ್ ಭಾಷೆಯಲ್ಲಿ Volere ... potere ಎಂದೂ, ಫ್ರೆಂಚಿನಲ್ಲಿ Quand on veut, on peut ಎಂದಿದೆ. ಹೀಗೆ ಒಂದೇ ಗಾದೆಯ ಸಮಾನಾರ್ಥಕ ಗಾದೆಗಳು ಮನುಷ್ಯರ ನಡುವೆ ಯಾವುದೇ ಸಂಪರ್ಕವಿರದಿದ್ದ ಕಾಲದಿಂದಲೂ ಸಮಾನವಾಗಿವೆ. ಇಂತಹ ಐವತ್ತಕ್ಕೂ ಹೆಚ್ಚು ಸ್ಪ್ಯಾನಿಷ್ ಮತ್ತು ಕನ್ನಡದ ಗಾದೆಗಳನ್ನು ಮಿತ್ರರಾದ ರಂಗಸ್ವಾಮಿ ಮೂಕನಹಳ್ಳಿಯವರು ಸ್ಪ್ಯಾನಿಷ್ ಗಾದೆಗಳು ಎಂಬ ಕೃತಿಯನ್ನು ಬರೆದಿದ್ದರು. ಅದನ್ನು ನಾನು ಇಂಗ್ಲಿಷಿಗೆ ಅನುವಾದಿಸಿದ್ದೆ. ಕುತೂಹಲದಿಂದ ಈ ಐವತ್ತು ಗಾದೆಗಳನ್ನು ಇಟಾಲಿಯನ್ ಮತ್ತು ಫ್ರೆಂಚಿನಲ್ಲಿ ಹುಡುಕಿದಾಗ ಆ ಭಾಷೆಗಳಲ್ಲೂ ಸಮಾನಾರ್ಥಕ ಗಾದೆಗಳಿರುವುದು ತಿಳಿಯಿತು.

ಹೀಗೆ ಜಾಗತಿಕವಾಗಿ ಗಾದೆಗಳು ಹೇಗೆ ಒಂದೇ ಎನ್ನುವಂತೆ ಇರುವವೋ ಅದೇ ರೀತಿ ಮಾನವನ ವೈಯಕ್ತಿಕ ಮತ್ತು ಸಾಮಾಜಿಕ ಜೀವನ ಮೌಲ್ಯಗಳನ್ನು ಎಲ್ಲ ಮತಧರ್ಮಗಳೂ ಹೊಂದಿವೆ. ಆದರೆ, ಈ ಮತಧರ್ಮಗಳಲ್ಲಿ ಆಚರಣೆಯ ವಿಷಯಗಳನ್ನು ಬೇರ್ಪಡಿಸಿ ಕೇವಲ ಮಾನವ ಮೌಲ್ಯಗಳನ್ನು ಪರಿಗಣಿಸಿದಾಗ ಅವೆಲ್ಲವೂ ಒಂದೇ ಆಗಿವೆ ಮತ್ತವು ಮತಧರ್ಮಗಳ ಹೊರತಾಗಿವೆ. ಇಂತಹ ಧರ್ಮಾಚರಣೆಯ ಆಚೆಗಿನ ನೈತಿಕತೆಯು ಭಗವದ್ಗೀತೆಯ ಕರ್ಮಯೋಗವಾಗಿ ವಚನಗಳಲ್ಲಿ ಕಾಯಕವೇ ಕೈಲಾಸವಾಗಿದೆ.

ಹೀಗೆ ಸನಾತನವಾಗಿದ್ದ ಮತಧರ್ಮಗಳ ಸಂಹಿತೆಗನುಗುಣವಾಗಿ ಇದ್ದಂತಹ ಜೀವನ ಮೌಲ್ಯಗಳನ್ನು ಕೃಷ್ಣನು ಸರಳೀಕರಿಸಿ ಸಂಸ್ಕೃತದಲ್ಲಿ ಭಗವದ್ಗೀತೆಯ ರೂಪದಲ್ಲಿ ಹೇಳಿದ್ದಾನೆ ಎನ್ನುವಂತೆಯೇ ಬಸವಣ್ಣ ಮತ್ತು ಶರಣರು ಸಹ ಸಾಮೂಹಿಕವಾಗಿ ಕನ್ನಡದಲ್ಲಿ ವಚನಗಳ ಮೂಲಕ ಹೇಳಿದರೇ ವಿನಃ ಛೂ ಮಂತರ್ ಎಂದು ಶೂನ್ಯದಿಂದ ವಚನಗಳನ್ನು ಸೃಷ್ಟಿಸಲಿಲ್ಲ. ಈ ಎಲ್ಲ ಮಾನವ ಮೌಲ್ಯಗಳನ್ನು ಕೃಷ್ಣ ಬಸವಾದಿ ಶರಣರು ಸನಾತನ ವೇದಾಗಮ ಶಾಸ್ತ್ರಗಳಿಂದ ಹೆಕ್ಕಿ ಹಾಲಿಗೆ ಹೆಪ್ಪು ಹಾಕಿ, ಕಡೆದು ಬೆಣ್ಣೆಯನ್ನು ತೆಗೆದು ತುಪ್ಪ ಮಾಡಿ ಬಡಿಸಿದ್ದಾರೆ. ಇಂತಹ ಕೆನೆಪದರವನ್ನು ಕೊಟ್ಟಿರುವ ಕಾರಣವೇ ಶ್ರೀಸಾಮಾನ್ಯನಿಗೆ ಸಂಸಾರಿಕ ಜೀವನ ಸಾಗಿಸಲು ಬೇರೇನೂ ಬೇಕಿಲ್ಲದೇ ಇಷ್ಟನ್ನು ಪಾಲಿಸಿಕೊಂಡು ಹೋದರೆ ಸಾಕು ಎಂಬರ್ಥದಲ್ಲಿ ಗೀತೆ ಮತ್ತು ವಚನಗಳು ಇವೆ. ಹಾಗಾಗಿಯೇ ಇದು ಭಕ್ತ ಸ್ಥಲ ಯೋಗಾಚಾರ! ಭಕ್ತ ಸ್ಥಲ ಯೋಗಾಚಾರಕ್ಕಿಂತ ಹೆಚ್ಚಿನ ಆಧ್ಯಾತ್ಮಿಕ ಸಾಧನೆಗೆ ಹೆಚ್ಚಿನ ಅಧ್ಯಯನ, ತಪಸು ಬೇಕಾಗುತ್ತದೆ. ಅದಕ್ಕೆ ಯೋಗದ ಅಷ್ಟಾಂಗ ಯೋಗವಿದ್ದರೆ ವೀರಶೈವದಲ್ಲಿ ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಷಟ್‌ಸ್ಥಲಗಳು ಇರುವದು. ಹೀಗೆ ಒಂದು ಸಾಮಾನ್ಯ ತೌಲನಿಕ ಅವಲೋಕನವನ್ನು ಕೈಗೊಂಡರೆ ಎಲ್ಲವೂ ಸ್ಫಟಿಕ ಸದೃಶ ಅನಿಕೇತನದ ಗಮ್ಯವನ್ನೇ ತೆರೆದಿಡುತ್ತದೆ!

ಇರಲಿ, ಭಗವದ್ಗೀತೆಯು ಸಾಮಾಜಿಕ ಜೀವನದಲ್ಲಿ ಮಾನವನು ವಹಿಸಬಹುದಾದ ಹಲವಾರು ಕರ್ತವ್ಯ (ಪಾತ್ರ)ಗಳ ವೃತ್ತಿಪರತೆ, ಕರ್ತವ್ಯ ಸಂಹಿತೆ, ಮತ್ತು ನಡಾವಳಿಗಳ ಕೈಪಿಡಿಯಾಗಿದೆ. ಇಲ್ಲಿ ಯಾವುದೇ ಮತಧರ್ಮ ಆಚರಣೆಯ ವಿವರಗಳಿರದೇ ಕೇವಲ ಆಯಾಯ ಜವಾಬ್ದಾರಿಗಳನ್ನು ಯಾವುದೇ ಅರಿಷಡ್ವರ್ಗಗಳಿಗೆ ಎಡೆಯಾಗದೆ ಹೇಗೆ ನಿರ್ವಹಿಸಬೇಕು ಎಂಬ ಕರ್ತವ್ಯ ನಿರ್ವಹಣೆ ನಿಯಮಗಳ ಅನುಸೂಚಿ (code of conduct)ಯ ಮಾರ್ಗದರ್ಶಿಕೆಯಾಗಿ ಹೇಳಲಾಗಿದೆ. ಇಲ್ಲಿ ಮಾನವನೆಂದರೆ ಕೇವಲ ಪುರುಷನಲ್ಲದೆ ಸ್ತ್ರೀ-ಪುರುಷರಾದಿಯಾಗಿ ಎಲ್ಲ ಲಿಂಗಾತೀತರೂ ನಿರ್ವಹಿಸಬಹುದಾದ ವೈಯಕ್ತಿಕ ಶಿಶುಧರ್ಮ, ವಿದ್ಯಾರ್ಥಿಧರ್ಮ, ಗುರುಧರ್ಮ, ಪಿತೃಧರ್ಮ, ಮಾತೃಧರ್ಮ, ಗೃಹಸ್ಥಧರ್ಮ, ಮಿತ್ರಧರ್ಮಗಳಲ್ಲದೆ ಸಾಮಾಜಿಕವಾಗಿರುವ ರಾಜ, ಸೈನಿಕ, ದಾಸ, ದಾಸಿಯರಾದಿಯಾಗಿ ಆಚರಿಸುವ ಅವರವರ ವೃತ್ತಿಧರ್ಮವನ್ನು ಹೇಗೆ ರಾಗದ್ವೇಷಗಳಿಗೊಳಗಾಗದೆ ನಿರ್ವಹಿಸಬೇಕು ಎನ್ನುವುದನ್ನು ಹೇಳಲಾಗಿದೆ. ಅಂತೆಯೇ ಅಂತಹ ಕರ್ತವ್ಯಮುಖಿ ಸ್ಥಿತಪ್ರಜ್ಞತೆಯನ್ನು ಸಾಧಿಸುವ ಕರ್ಮಯೋಗಮಾರ್ಗವನ್ನು ವಿವರಿಸಲಾಗಿದೆ ಎಂದು ಸಂಕ್ಷಿಪ್ತವಾಗಿ ಹೇಳಬಹುದು.

ಇಲ್ಲಿ ಕರ್ಮ ಎಂಬುದು ಕಾಯಕವೇ ಆಗಿದೆ! ಹಾಗಾಗಿ ಗೀತೆ ಮತ್ತು ವಚನಗಳ ಸಾಮ್ಯತೆಯನ್ನು ಗಮನಿಸೋಣ. ಮೊದಲಿಗೆ ಗೀತೆಯ ಪ್ರಮುಖ ಬೋಧನೆಗಳನ್ನು ಪರಿಶೀಲಿಸಿ ನಂತರ ಅವುಗಳ ಸಮಾನಾರ್ಥದ ವಚನಗಳನ್ನು ತಾಳೆ ಹಾಕಿ ನೋಡೋಣ.

ಭಗವದ್ಗೀತೆಯ ಪ್ರಮುಖ ಬೋಧನೆಗಳು ಹೀಗಿವೆ:

ನಿನಗೆ ನಿಗದಿತ ಕರ್ತವ್ಯವನ್ನು ನಿರ್ವಹಿಸುವ ಹಕ್ಕು ಇದೆ. ಆದರೆ ಕರ್ಮ ಫಲಗಳಿಗೆ ನೀನು ಅರ್ಹನಲ್ಲ. (ಅಧ್ಯಾಯ 2, ಶ್ಲೋಕ 47) ಧರ್ಮದ ಅವನತಿ ಮತ್ತು ಅಧರ್ಮದ ಉನ್ನತಿಯಾದಾಗಲೆಲ್ಲಾ, 'ನಾನು' ಉದ್ಭವಿಸುತ್ತೇನೆ (ಅಧ್ಯಾಯ 4, ಶ್ಲೋಕ 7) 'ನಾನು' ಎಲ್ಲ ಆಧ್ಯಾತ್ಮಿಕ ಮತ್ತು ಭೌತಿಕ ಲೋಕಗಳ ಮೂಲ. ಎಲ್ಲವೂ 'ನನ್ನಿಂದ' ಹೊರಹೊಮ್ಮುತ್ತದೆ. (ಅಧ್ಯಾಯ 10, ಶ್ಲೋಕ 8)

ಇಲ್ಲಿ 'ನಾನು' ಎನ್ನುವುದು ಕೃಷ್ಣನಲ್ಲ, ಆತ್ಮ! ನಾನು, ನನ್ನಿಂದ ಎನ್ನುವುದು ಆತ್ಮವನ್ನು ಕುರಿತಾಗಿದೆ. ಒಟ್ಟಾರೆ ಗೀತೆಯ ಅಂತಿಮ ಸಂದೇಶವು, ಜಾಗೃತಿಯಿಂದ ಬಾಳುವುದು, ನಿಸ್ವಾರ್ಥವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುವುದು, ಭಕ್ತಿಯನ್ನು ಬೆಳೆಸುವುದು, ನಿಜವಾದ ಜ್ಞಾನವನ್ನು ಅನ್ವೇಷಿಸುವುದು, ಮತ್ತು 'ತನ್ನ' ಶಾಶ್ವತ ಸ್ವರೂಪವನ್ನು ಅರಿತುಕೊಳ್ಳುವುದು- ಇದರ ಮೂಲಕ ಆಂತರಿಕ ಶಾಂತಿ (ಆತ್ಮ) ಮತ್ತು ಅಂತಿಮ ಮುಕ್ತಿ (ಪರಮಾತ್ಮ) ಪಡೆಯುವುದು ಎಂದಿದೆ.

ಹೀಗೆ ಗೀತೆಯ ಆತ್ಮ(ಕೃಷ್ಣ)ದ ಸಮಗ್ರ ಸಾರವೇ ವಚನಗಳ ಆತ್ಮ (ಲಿಂಗ)ದ ವಿಸ್ತೃತ ವಾಣಿಗಳಾಗಿವೆ. ಉದಾಹರಣೆಗೆ ಗೀತೆಯ, ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ । ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ (ಯೋಗದಲ್ಲಿ ಸ್ಥಿರನಾಗಿರುವ ಅರ್ಜುನ, ಆಸಕ್ತಿಯನ್ನು ತ್ಯಜಿಸಿ ಕರ್ಮಗಳನ್ನು ಮಾಡು, ಯಶಸ್ಸು ಮತ್ತು ವೈಫಲ್ಯದಲ್ಲಿ ಸಮಭಾವನೆಯಿಂದ ಇರು; ಮನಸ್ಸಿನ ಸಮತೋಲನವೇ ಯೋಗ ಎಂದು ಕರೆಯಲ್ಪಡುತ್ತದೆ.)

ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ । ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಸ್ತ್ವಕರ್ಮಣಿ (ನಿನಗೆ ನಿರ್ದಿಷ್ಟ ಕರ್ತವ್ಯವನ್ನು ನಿರ್ವಹಿಸುವ ಹಕ್ಕು ಇದೆ, ಆದರೆ ಕರ್ಮ ಫಲಗಳಿಗೆ ನೀನು ಅರ್ಹನಲ್ಲ. ನಿಮ್ಮ ಚಟುವಟಿಕೆಗಳ ಫಲಗಳ ಕಾರಣ ಎಂದು ಎಂದಿಗೂ ಭಾವಿಸಬೇಡ, ಮತ್ತು ನಿಷ್ಕ್ರಿಯತೆಗೆ ಆಸಕ್ತಿ ಹೊಂದಬೇಡ.) ಎನ್ನುವುದನ್ನು ಆಯ್ದಕ್ಕಿ ಮಾರಯ್ಯನು ತನ್ನ ವಚನದಲ್ಲಿ,

ಕಾಯಕದಲ್ಲಿ ನಿರತನಾದಡೆ, ಗುರುದರ್ಶನವಾದಡೂ ಮರೆಯಬೇಕು,
ಲಿಂಗಪೂಜೆಯಾದಡೂ ಮರೆಯಬೇಕು,
ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು.
ಕಾಯಕವೆ ಕೈಲಾಸವಾದ ಕಾರಣ.
ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು
ಎಂದಿದ್ದಾನೆ.

ಅದೇ ರೀತಿ, ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ ನರೋಽಪರಾಣಿ । ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿ ದೇಹೀ (ಹಳೆಯವುಗಳನ್ನು ತ್ಯಜಿಸಿದ ನಂತರ ವ್ಯಕ್ತಿಯು ಹೊಸ ಬಟ್ಟೆಗಳನ್ನು ಧರಿಸುವಂತೆ, ಹಾಗೆಯೇ ಆತ್ಮವು ಹಳೆಯ ಮತ್ತು ನಿಷ್ಪ್ರಯೋಜಕವಾದ ದೇಹಗಳನ್ನು ತ್ಯಜಿಸಿದ ನಂತರ ಹೊಸ ಭೌತಿಕ ದೇಹಗಳನ್ನು ಸ್ವೀಕರಿಸುತ್ತದೆ.) ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ । ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ (ಯಾವುದೇ ಆಯುಧದಿಂದ ಆತ್ಮವನ್ನು ತುಂಡು ತುಂಡಾಗಿ ಮಾಡಲಾಗುವುದಿಲ್ಲ, ಅಗ್ನಿಯಿಂದ ಸುಡಲಾಗುವುದಿಲ್ಲ, ನೀರಿನಿಂದ ನೆನೆಸಲಾಗುವುದಿಲ್ಲ, ಅಥವಾ ಗಾಳಿಯಿಂದ ಒಣಗಿಸಲಾಗುವುದಿಲ್ಲ.) ಎನ್ನುವುದನ್ನೇ ವೀರಶೈವ ಸಿದ್ಧಾಂತವು ಆತ್ಮವನ್ನು ಲಿಂಗರೂಪಿಯಾಗಿ ಕೊಟ್ಟಿದೆ. ಲಿಂಗಕ್ಕೆ ಯಾವುದೇ ಮೈಲಿಗೆ ಇಲ್ಲ. ಇದನ್ನು ಒಮ್ಮೆ ಧರಿಸಿದರೆ ತೆಗೆಯುವ ಪ್ರಮೇಯವೇ ಇಲ್ಲ. ಹಾಗಾಗಿಯೇ ದೇವರ ದಾಸಿಮಯ್ಯನು ನಡುವೆ ಸುಳಿವಾತ್ಮ ಗಂಡೂ ಅಲ್ಲ, ಹೆಣ್ಣೂ ಅಲ್ಲ ಎಂದಿರುವುದು. ಆತ್ಮಕ್ಕೆ ಯಾವುದೇ ಮಡಿ, ಮೈಲಿಗೆ, ಹುಟ್ಟು, ಸಾವು, ಹಸಿವು ಎಂಬುದಿಲ್ಲ ಎಂದು ಅನೇಕ ವಚನಕಾರರು ತಮ್ಮ ವಚನಗಳಲ್ಲಿ ಹೇಳಿದ್ದಾರೆ. ಇದನ್ನೇ ಮೋಳಿಗೆ ಮಾರಯ್ಯನು,

ವಸ್ತುವ ಮುಟ್ಟಿ ಇಹಪರದಲ್ಲಿ ಸುಖಿಯಾದೆನೆಂಬನ್ನಬರ,
ಅದು ತನ್ನ ನೆಲೆಯೋ? ಆತ್ಮನ ಭೇದವೋ? ಎಂಬುದ ತಾನರಿತಲ್ಲಿ,
ಇಷ್ಟಲಿಂಗಕ್ಕೆ ದೃಷ್ಟವ ಕೊಟ್ಟು, ಆತ್ಮಲಿಂಗಕ್ಕೆ ತೃಪ್ತಿಯ ಕೊಟ್ಟು,
ನಿಶ್ಚಯಿಸಿಕೊಂಡೆಹೆನೆಂಬುದು ಅದೇನು ಹೇಳಾ.
ಉಭಯಭಿನ್ನವುಳ್ಳನ್ನಕ್ಕ ಪ್ರಾಣಲಿಂಗಿಯಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ ...ಎಂದಿದ್ದಾನೆ.

ಗೀತೆಯ, ಸಮದುಃಖಸುಖಃ ಸ್ವಸ್ಥಃ ಸಮಲೋಷ್ಟಾಶ್ಮಕಾಂಚನಃ । ತುಲ್ಯಪ್ರಿಯಾಪ್ರಿಯೋ ಧೀರಸ್ತುಲ್ಯನಿಂದಾತ್ಮಸಂಸ್ತುತಿಃ (ಎಲ್ಲರೂ ಸಂತೋಷ ಮತ್ತು ದುಃಖದಲ್ಲಿ ಸಮಾನ. ಆತ್ಮದಲ್ಲಿ ಕಲ್ಲು, ಮಣ್ಣು, ಚಿನ್ನ ಸಮಾನವೆಂಬ ಸಮಭಾವ ಸ್ಥಾಪಿಸುವಂತೆ, ಬುದ್ಧಿವಂತನು ಪ್ರಶಂಸೆ ಮತ್ತು ದೂಷಣೆಯನ್ನು ಸಮಾನವಾಗಿ ಪರಿಗಣಿಸುವವನು.) ಎನ್ನುವುದನ್ನು ವಚನಕಾರ ಸಿದ್ಧರಾಮನು,

ವರ್ಗ ಪಟ್ಟಣದಲ್ಲಿ ಎರಡೆಂಟು ಕಳೆಗಳನು
ಹದುಳ ಪಟ್ಟಣಮಾಡಿ ಒಪ್ಪಿತೋರಿ
ಸಮತೆ ಅಧಿಕಾರದ ಸುಮತಿಯಾದುದು.
ಗ್ರಾಮ ಭ್ರಮೆಗೆಟ್ಟುದೈ ಬಿಡು ಜ್ಯೋತಿಮರ್ತಿರ್ಮಯವೈ.
ಆನಂದ ಪಾತ್ರೆಯ ಸಮತೆ ತೈಲವನೆರೆಯೆ
ಬೆಳಗು ಪ್ರಭೆಯಾಗಿ ದೆಸೆದೆಸೆಗೆವರಿದು,
ಅತಿಶಯದ ನಿತ್ಯ ಕಪಿಲಸಿದ್ಧಮಲ್ಲಿಕಾರ್ಜುನನ
ಎಯ್ದಿದ ಬೆಳಗು ಸಮತೆಯಾದೆ...
ಎಂದಿದ್ದಾನೆ.

ಅದನ್ನೇ ಅಕ್ಕಮ್ಮನು, ಸಮಶೀಲ ನೇಮ ಒಂದಾದಲ್ಲಿ ಉಡುವ ತೊಡುವ ಕೊಡುವ ಕೊಂಬ

ಅಡಿಯೆಡೆ ಮುಂತಾಗಿ ಸಕ್ಕರೆಯ ಬುಡಶಾಖೆಯಂತೆ
ಮಧುರಕ್ಕೆ ಹೆಚ್ಚು ಕುಂದಿಲ್ಲದೆ ಇಪ್ಪ ನೇಮ ಕಟ್ಟಾಚಾರ ನಿಶ್ಚಯವಾದವಂಗೆ,
ಅಂಗ ಹಲವಲ್ಲದೆ ಕುಂದಣ ಒಂದೆ ಭೇದ.
ನೇಮ ಹಲವಲ್ಲದೆ ಜ್ಞಾನವೊಂದೆ ಭೇದ.
ಭೂಮಿ ಹಲವಲ್ಲದೆ ಅಪ್ಪುವೊಂದೆ ಭೇದ, ಬಂದ ಯೋನಿ ಒಂದೆ.
ತಾ ಮುಂದಿಕ್ಕುವ ಯೋನಿ ಒಂದಾದ ಕಾರಣ.
ಹಿಟ್ಟು ಹಲವಾದಡೆ ಅಪ್ಪದಕಲ್ಲು ಒಂದೆಯಾದಂತೆ.
ಇದು ತಪ್ಪದ ಆಚಾರ, ಇದಕ್ಕೆ ಮಿಥ್ಯತಥ್ಯವಿಲ್ಲ, ತಪ್ಪದು ನಿಮ್ಮಾಣೆ.
ಆಚಾರಕರ್ಕನಾದ ರಾಮೇಶ್ವರಲಿಂಗವೆ ನೀನೆ ಬಲ್ಲೆ.
ಎಂದಿದ್ದಾಳೆ.

ಗುರು ಚೆನ್ನಬಸವಣ್ಣನು, ಗುರುವಿನಲ್ಲಿ ಸದಾಚಾರಿ, ಲಿಂಗದಲ್ಲಿ ಶಿವಾಚಾರಿ, ಜಂಗಮದಲ್ಲಿ ಸಮಯಾಚಾರಿ.

ಇಂತೀ ತ್ರಿವಿಧಾಚಾರ ಸಂಬಂಧವಾದ ಬಳಿಕ
ತನ್ನ ಶೀಲಕ್ಕೆ ಸಮಶೀಲವಾಗದವರ
ಮನೆಯಲನುಸರಿಸಿ ನಡೆದಡೆ ಕೂಡಲಚೆನ್ನಸಂಗನ ಶರಣ,
ಪೂರ್ವಾಚಾರ್ಯ ಸಂಗನಬಸವಣ್ಣ ಮೆಚ್ಚ ಕಾಣಿರಣ್ಣಾ.
ಎಂದಿದ್ದಾನೆ.

ಭಕ್ತಿಯ ಕುರಿತಾದ ಗೀತೆಯ ಶ್ಲೋಕ, ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು । ಮಾಮೇವೈಷ್ಯಸಿ ಯುಕ್ತ್ವೈವಮಾತ್ಮಾನಂ ಮತ್ಪರಾಯಣಃ (ನನ್ನಲ್ಲೇ ಮನಸುಳ್ಳವನಾಗಿರು, ನನ್ನ ಭಕ್ತನಾಗಿರು, ನನ್ನನ್ನು ಪೂಜಿಸು, ನನಗೆ ನಮಸ್ಕರಿಸು. ಹೀಗೆ, ನಿನ್ನನ್ನು ನನ್ನೊಂದಿಗೆ ಐಕ್ಯಗೊಳಿಸಿಕೊಂಡು ಮತ್ತು ನನ್ನಲ್ಲಿ ಸಂಪೂರ್ಣವಾಗಿ ಲೀನವಾದ ನೀನು ಖಂಡಿತವಾಗಿ ನನ್ನ ಬಳಿಗೆ ಬರುತ್ತೀಯ.)

ಸರ್ವಧರ್ಮಾನ್ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ । ಅಹಂ ತ್ವಾಂ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ
(ಎಲ್ಲ ರೀತಿಯ ಧರ್ಮವನ್ನು ತ್ಯಜಿಸಿ ಮತ್ತು ನನ್ನಲ್ಲಿ ಶರಣು ಹೋಗು. ನಾನು ನಿನ್ನನ್ನು ಎಲ್ಲ ಪಾಪಕ್ರಿಯೆಗಳಿಂದ ಮುಕ್ತಿಗೊಳಿಸುತ್ತೇನೆ. ಭಯಪಡಬೇಡ.) ಎನ್ನುವುದನ್ನು ಅಲ್ಲಮಪ್ರಭು,

ಎಣ್ಣೆ ಬೇರೆ ಬತ್ತಿ ಬೇರೆ: ಎರಡೂ ಕೂಡಿ ಸೊಡರಾಯಿತ್ತು.
ಪುಣ್ಯ ಬೇರೆ ಪಾಪ ಬೇರೆ: ಎರಡೂ ಕೂಡಿ ಒಡಲಾಯಿತ್ತು.
ಮಿಗಬಾರದು, ಮಿಗದಿರಬಾರದು, ಒಡಲಿಚ್ಛೆಯ ಸಲಿಸದೆ ನಿಮಿಷವಿರಬಾರದು.
ಕಾಯಗುಣವಳಿದು ಮಾಯಾಜ್ಯೋತಿ ವಾಯುವ ಕೂಡುವ
ಮುನ್ನ, ಭಕ್ತಿಯ ಮಾಡಬಲ್ಲಡೆ ಆತನೆ ದೇವ ಗುಹೇಶ್ವರಾ.
ಎಂದಿದ್ದಾನೆ.

ಎಲ್ಲಕ್ಕೂ ಮಿಗಿಲಾಗಿ ಪರಮಪದ ಕುರಿತು ಗೀತೆಯು, ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ ।ಇತಿ ಮತ್ವಾ ಭಜನ್ತೇ ಮಾಂ ಬುಧಾ ಭಾವಸಮನ್ವಿತಾಃ (ನಾನು ಎಲ್ಲ ಆಧ್ಯಾತ್ಮಿಕ ಮತ್ತು ಭೌತಿಕ ಲೋಕಗಳ ಮೂಲ. ಎಲ್ಲವೂ ನನ್ನಿಂದ ಹೊರಹೊಮ್ಮುತ್ತದೆ. ಇದನ್ನು ತಿಳಿದುಕೊಂಡ ವಿವೇಕಿಗಳು ನನ್ನನ್ನು ತಮ್ಮ ಚೇತನವನ್ನು ನನ್ನಲ್ಲಿ ಲೀನಗೊಳಿಸಿ ಆರಾಧಿಸುತ್ತಾರೆ) ಎಂದಿದ್ದರೆ, ತೋಂಟದ ಸಿದ್ಧಲಿಂಗೇಶ್ವರರು, ಬ್ರಹ್ಮವೆನಲು ಪರಬ್ರಹ್ಮವೆನಲು

ಪರಮನೆನಲು ಪರಮೇಶ್ವರನೆನಲು
ಪರಮಾತ್ಮನೆನಲು ಪರತತ್ವವೆನಲು
ಪರಂಜ್ಯೋತಿಯೆನಲು ಪರವಸ್ತುವೆನಲು ಪರಾಪರವೆನಲು
ಇಂತಿವೆಲ್ಲಾ ನಾಮದಲ್ಲಿಯೂ ಪ್ರಕಾಶಿಸುತ್ತಿಪ್ಪಾತನು ಪರಶಿವನು.
ಪರಶಿವನೆಂದರೆ ಪರಮಾತ್ಮ.
ಪರಮಾತ್ಮನೆಂದರೆ ಮಹಾಲಿಂಗ.
ಆ ಮಹಾಲಿಂಗ ತಾನೆ ಪ್ರಸಾದಲಿಂಗವಾಗಿ ಉದ್ಭವಿಸಿತ್ತು.
ಪ್ರಸಾದಲಿಂಗದಲ್ಲಿ ಜಂಗಮಲಿಂಗ ಹುಟ್ಟಿತ್ತು.
ಜಂಗಮಲಿಂಗದಲ್ಲಿ ಶಿವಲಿಂಗ ಹುಟ್ಟಿತ್ತು.
ಶಿವಲಿಂಗದಲ್ಲಿ ಗುರುಲಿಂಗ ಜನಿಸಿತ್ತು.
ಗುರುಲಿಂಗ ಆಚಾರಲಿಂಗ ಉತ್ಪತ್ಯವಾಯಿತ್ತು.
ಇಂತೀ ಷಡ್ವಿಧಲಿಂಗವೂ ಒಂದರಿಂದೊಂದಾದವು.
ಒಂದನೊಂದ ಕೂಡಿಹವು.
ಇಂತೀ ಷಟ್ಸ್ಥಲವೂ ಏಕವೆಂದರಿವುದಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ಎಂದಿದ್ದಾರೆ.

ಒಟ್ಟಾರೆ, ಆತ್ಮ-ಪರಮಾತ್ಮವೆಂಬ ಲಿಂಗಾಂಗ-ಸಾಮರಸ್ಯಕ್ಕೆ ಮಾರ್ಗಗಳಾದ ಕರ್ಮಯೋಗ, ಭಕ್ತಿಯೋಗ ಮತ್ತು ಧ್ಯಾನ ಯೋಗಗಳೇ ಗೀತೆ ಮತ್ತು ವಚನಗಳ ಅಂಶಗಳಾಗಿವೆ. ಹೀಗೆ ಮೊಗೆದಷ್ಟೂ ಗೀತೆ ಮತ್ತು ವಚನಗಳಲ್ಲಿನ ಅರ್ಥ ಸಾಮ್ಯತೆ ಒಂದಾಗುತ್ತಾ ಎಲ್ಲ ಧರ್ಮಗಳ ತಿರುಳು ಒಂದೇ ಎಂದು ಸಾಬೀತಾಗುತ್ತದೆ. ಲಿಂಗಾಯತ ಪ್ರತ್ಯೇಕಿಗಳು ಎಷ್ಟೇ ವಿಧವಿಧವಾಗಿ 'ನಾವು ಹಿಂದೂಗಳಲ್ಲ' ಎಂದರೂ ಅವರು ಅಷ್ಟೇ ಗಾಢವಾಗಿ ಹಿಂದೂ ಮೂಲವೇ ಆಗಿದ್ದಾರೆ. ಅಂದ ಹಾಗೆ ಗೀತೆ ಮತ್ತು ವಚನ ಎರಡೂ ಪದಗಳ ಅರ್ಥವೂ ಒಂದೇ ಅಲ್ಲವೇ?!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 93

ಸಮಾಚಾರ ಸಣ್ಣದಲ್ಲ

ನಕ್ಸಲ್ ಸೆರೆ ಯತ್ನದಲ್ಲಿ 6 ಯೋಧರಿಗೆ ಗಾಯ

ರಾಂಚಿ: ಜಾರ್ಖಂಡ್ ರಾಜ್ಯದ ಪಶ್ಚಿಮ ಸಿಂಗ್ ಭೂಮ್ ಜಿಲ್ಲೆಯ ಚೈಬಾಸಾದ ಸರಂದಾ ಕಾಡಿನಲ್ಲಿ 1 ಕೋಟಿ ರು. ಬಹುಮಾನ ಘೋಷಣೆಯಾಗಿರುವ ಸಿಪಿಐ-ಮಾವೋವಾದಿ ಪಾಲಿಟ್‌ಬ್ಯೂರೊ ಸದಸ್ಯ ಮಿರ್ಸಿ ಬೆಸ್ರಾ, ನೇತೃತ್ವದ ತಂಡ ಅಡಗಿಕೊಂಡಿರುವ ಮಾಹಿತಿ ಬಂದ ಬಳಿಕ ನಕ್ಸಲ್ ಮುಕ್ತ ಜಾರ್ಖಂಡ್ ಗುರಿಯೊಂದಿಯಗೆ ಕಠಿಣ ಕಾರ್ಯಾಚರಣೆ ಕೈಗೊಂಡಿರುವ ಭದ್ರತಾ ಪಡೆಗಳು ಪ್ರದೇಶವನ್ನು ಸುತ್ತುವರಿದಿವೆ. ಮಿರ್ಸಿ ಬೆಸ್ರಾ, ಬಂಧನ ಕಾರ್ಯಾಚರಣೆಯಲ್ಲಿ ತೊಡಗಿದ್ದಾಗ ನಕ್ಸಲರು ಐಇಡಿ ಸ್ಫೋಟಿಸಿದ್ದರಿಂದ 6 ಸಿಆರ್‌ಪಿಎಫ್ ಯೋಧರು ಗಾಯಗೊಂಡಿದ್ದಾರೆ. ಕೋಬ್ರಾ, 205 ಬೆಟಾಲಿಯನ್‌ನ ಇನ್‌ಸ್ಪೆಕ್ಟರ್ ಸತ್ಯ ಪ್ರಕಾಶ್, ಯೋಧರಾದ ಶೈಲೇಶ್ ಕುಮಾರ್ ದುಬೆ, ಉತ್ತಮ್ ಸೇನಾಪತಿ, ಜಿತೇಂದ್ರ ಕುಮಾರ್ ರೈ, ಪ್ರೇಮ್ ಕುಮಾರ್ ಮತ್ತು ಕೋಬ್ರಾ, 210 ಬೆಟಾಲಿಯನ್‌ನ ಹೆಡ್ ಕಾನ್ ಸ್ಟೆಬಲ್ ಅಭಿನಯ್ ಮಿತ್ತಲ್ ಗಾಯಗೊಂಡಿದ್ದಾರೆ.

₹10 ಸಾವಿರಕ್ಕಿಂತ ಅಧಿಕ 'ಯುಪಿಐ ಪೇ'ಗೆ 1 ಗಂಟೆ

ದೆಹಲಿ: ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್ (ಯುಪಿಐ) ಮೂಲಕ 10,000 ರು.ಗಿಂತ ಹೆಚ್ಚಿನ ಮೊತ್ತದ ಪಾವತಿ ಪ್ರಕ್ರಿಯೆಯಲ್ಲಿ ಇನ್ನು ಮುಂದೆ ತಕ್ಷಣ ಹಣ ಕಡಿತ ಆಗುವುದಿಲ್ಲ. 1 ಗಂಟೆ ಬಳಿಕವೇ ಹಣ ಕಡಿತವಾಗಲಿದೆ. ಈ ಸಂಬಂಧ ಕ್ರಮಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ಮುಂದಾಗಿದೆ. ಡಿಜಿಟಲ್ ಪಾವತಿಯಲ್ಲಿನ ಅಕ್ರಮಗಳಿಗೆ ಕಡಿವಾಣ ಹಾಕಲೆಂದೇ 'ಯುಪಿಐ' ಪೇಮೆಂಟ್ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ಮಾಡಲಾಗುತ್ತಿದೆ ಎಂದು ಆರ್‌ಬಿಐ ಮೂಲಗಳು ತಿಳಿಸಿವೆ. ತಪ್ಪಾಗಿಯೋ ಅಥವಾ ಕೈತಪ್ಪಿಯೋ ಹಣ ಪಾವತಿ ಆಗಿದ್ದರೆ ಆ ಪಾವತಿಯನ್ನು ರದ್ದುಗೊಳಿಸಲು ಯುಪಿಐ ಬಳಕೆದಾರರಿಗೆ ಒಂದು ಗಂಟೆಯ ಕಾಲಾವಕಾಶ ಇರುತ್ತದೆ. 2025ರಲ್ಲಿ ಭಾರತದಲ್ಲಿ 22,931 ಕೋಟಿ ರು. ಡಿಜಿಟಲ್ ವಂಚನೆ ಪ್ರಕರಣಗಳಾಗಿವೆ. ಅಲ್ಲದೇ ದೇಶದಲ್ಲಿ 10 ಸಾವಿರ ರು.ಗಿಂತ ಹೆಚ್ಚಿನ ಹಣ ವರ್ಗಾವಣೆ ಪ್ರಕರಣಗಳಲ್ಲಿ ಹೆಚ್ಚಿನ ವಂಚನೆ ಆಗುತ್ತಿವೆ ಎಂಬ ದೂರುಗಳ ಹಿನ್ನೆಲೆ ಆರ್‌ಬಿಐ ಈ ಕ್ರಮಕ್ಕೆ ಮುಂದಾಗಿದೆ.

ಜಾರ್ಖಂಡ್: ಸಹದೇವ್ ಸೇರಿ 4 ನಕ್ಸಲರ ಅಂತ್ಯ

ರಾಂಚಿ: ಜಾರ್ಖಂಡ್ ರಾಜ್ಯದ ಛತ್ರ ಜಿಲ್ಲೆಯ ಪಿಪರ್‌ವಾರ ಪ್ರದೇಶದಲ್ಲಿ 15 ಲಕ್ಷ ರು. ಇನಾಮು ಇದ್ದ ನಕ್ಸಲ ಸಹದೇವ್ ಮಹಾತೊ ಸೇರಿದಂತೆ ನಾಲ್ವರು ನಕ್ಸಲರನ್ನು ನಕ್ಸಲ ನಿಗ್ರಹ ದಳದ ಭದ್ರತಾ ಪಡೆಗಳು ಶುಕ್ರವಾರ ಹೊಡೆದುರುಳಿಸಿವೆ.

सुभाष उर्फ सहदेव महतो

ನಿಷೇಧಿತ ಸಿಪಿಐ-ಮಾವೋವಾದಿ ನಕ್ಸಲರು ಪಿಪರ್‌ವಾರ ಪ್ರದೇಶದಲ್ಲಿರುವ ಸುಳಿವು ಸಿಕ್ಕ ಬಳಿಕ ಜಂಟಿ ಭದ್ರತಾ ಪಡೆಗಳು ಶುಕ್ರವಾರ ಸಂಜೆ ಛತ್ರ-ಹಜಾರಿಬಾಗ್ ಗಡಿಯಲ್ಲಿ ಶೋಧ ಕಾರ್ಯ ಆರಂಭಿಸಿದವು. ಛತ್ರ ಜಿಲ್ಲೆ ಪಿಪರ್‌ವಾರ ಗಡಿ ಪ್ರದೇಶ ಮತ್ತು ಹಜಾರಿಬಾಗ್‌ನ ಕೆರೆದರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಕ್ಸಲರ ಗುಂಪು ಮತ್ತು ನಕ್ಸಲ್ ನಿಗ್ರಹ ದಳದ ನಡುವೆ ಗುಂಡಿನ ಕಾಳಗ ನಡೆದು 4 ನಕ್ಸಲರು ಹತರಾದರು. ನಾಲ್ವರು ನಕ್ಸಲರ ಮೃತದೇಹಗಳು ಸಿಕ್ಕ ಸ್ಥಳದಿಂದ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಜಾರ್ಖಂಡ್ ರಾಜ್ಯ ಪೊಲೀಸ್ ಜತೆಗೆ, ಕೋಬ್ರಾ ಬೆಟಾಲಿಯನ್ ಕಮಾಂಡೊಗಳು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ಪುಣೆ ವಿಮಾನ ನಿಲ್ದಾಣ ಲ್ಯಾಂಡಿಂಗ್ ಸಮಸ್ಯೆ

ಪುಣೆ: ಪುಣೆ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ರಾತ್ರಿ 10.25ರಲ್ಲಿ ಭಾರತೀಯ ವಾಯುಪಡೆ(ಐಎಎಫ್) ವಿಮಾನದ ಲ್ಯಾಂಡಿಂಗ್ ವೇಳೆ ವಿಮಾನದಲ್ಲಿ ತೊಂದರೆ ಉಂಟಾಗಿದ್ದರಿಂದ ಬೇರೆ ವಿಮಾನಗಳ ಸಂಚಾರಕ್ಕೆ ಆ ರನ್‌ವೇ ಹಲವು ಗಂಟೆಗಳ ಕಾಲ ಲಭ್ಯವಾಗಲಿಲ್ಲ. ವಿಮಾನಗಳ ಕಾರ್ಯಾಚರಣೆಯನ್ನು ದೀರ್ಘ ಅವಧಿಗೆ ಸ್ಥಗಿತಗೊಳಿಸಲಾಯಿತು. ಐಎಎಫ್ ವಿಮಾನದ ಲ್ಯಾಂಡಿಂಗ್ ಗೇರ್ ಕೈಕೊಟ್ಟಿದ್ದರಿಂದ ವಿಮಾನ ಹಾರ್ಷ್ ಲ್ಯಾಂಡಿಂಗ್ ಮಾಡಬೇಕಾಯಿತು. ಆದರೆ, ಐಎಎಫ್ ವಿಮಾನದಲ್ಲಿದ್ದ ವಾಯುಪಡೆಯ ಎಲ್ಲಾ ಸಿಬ್ಬಂದಿ ಸುರಕ್ಷಿತರಾಗಿದ್ದಾರೆ. ವಿಮಾನದ ಚಕ್ರಗಳು ತೆರೆದುಕೊಳ್ಳದೇ ಇದ್ದ ಕಾರಣ ವಿಮಾನ ರನ್‌ವೇ ಮೇಲೆಯೇ ಬಹಳಷ್ಟು ಸಮಯ ಉಳಿಯುವಂತಾಯಿತು. ವಿಮಾನವನ್ನು ಸುರಕ್ಷಿತವಾಗಿ ರನ್‌ವೇಯಿಂದ ತೆರವುಗೊಳಿಸಲು ಸೂಕ್ಷ್ಮ ಕ್ರಮ ಅಗತ್ಯವಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

{ ಚಿರಾಗ್ ಪಾಸ್ವಾನ್ } ಕೇಂದ್ರ ಸಚಿವ

ಪ್ರಜಾಪ್ರಭುತ್ವದಲ್ಲಿ ಪ್ರತಿಪಕ್ಷಗಳಿಗೆ ನಿರ್ಣಾಯಕ ಪಾತ್ರವಿದೆ. ಆದರೆ, ಲೋಕಸಭೆ ಚರ್ಚೆ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಜಾದೂಗಾರ ಎಂದು ಕರೆದು ರಾಹುಲ್ ಗಾಂಧಿ 'ಪ್ರತಿಪಕ್ಷ ನಾಯಕ' ಸ್ಥಾನದ ಘನತೆ ತಗ್ಗಿಸಿದ್ದಾರೆ. 'ನನಗೆ ಹೆಂಡತಿ ಸಮಸ್ಯೆ ಇಲ್ಲ' ಎನ್ನುತ್ತಾ ತಮ್ಮನ್ನೇ ಅಪಹಾಸ್ಯ ಮಾಡಿಕೊಂಡಿದ್ದಾರೆ., ಇಂಥವರು ಪ್ರತಿಪಕ್ಷ ನಾಯಕರಾಗಲು ಯೋಗ್ಯರಲ್ಲ.

ಅಮೆರಿಕ ನೌಕಾಪಡೆ ಜಲಸಂಧಿಯ ದಿಗ್ಬಂಧನ ತೆರವು ತನಕ ಹೊರ್ಮುಜ್ ಬಂದ್: ಇರಾನ್

ಶಾಂತಿ ಮಾತುಕತೆ ಪೂರ್ಣಗೊಂಡು ಒಪ್ಪಂದ ಆಗುವವರೆಗೂ ನೌಕಾಪಡೆ ದಿಗ್ಬಂಧನ: ಟ್ರಂಪ್

ಹೊರ್ಮುಜ್ ಜಲಸಂಧಿ ಇಕ್ಕಟ್ಟು

ಟೆಹರಾನ್: ಅಮೆರಿಕ-ಇರಾನ್ ಎರಡೂ ದೇಶಗಳ ಕಚ್ಚಾಟದಿಂದಾಗಿ ಹೊರ್ಮುಜ್ ಜಲಸಂಧಿಯಲ್ಲಿನ ಪರಿಸ್ಥಿತಿ ಮತ್ತೆ ನನೆಗುದಿಗೆ ಬಿದ್ದಿದೆ. ಹೊರ್ಮುಜ್ ಮುಕ್ತವಾಗಿದೆ ಎಂದು ಶುಕ್ರವಾರ ಹೇಳಿದ್ದ ಇರಾನ್, ರಾತ್ರಿ ಕಳೆದು ಹಗಲಾಗುವ ವೇಳೆಗೆಲ್ಲಾ ದಾಟಿ ಬದಲಿಸಿದೆ.

ಹೊರ್ಮುಜ್ ಜಲಸಂಧಿಯನ್ನು ಕಟ್ಟುನಿಟ್ಟಾಗಿ ನಿರ್ವಹಿಸಲಾಗುತ್ತಿದೆ. ಅಮೆರಿಕದ ನೌಕಾಪಡೆಯ ಮೊಂಡುತನದಿಂದಾಗಿ ನಾವು ಹೊರ್ಮುಜ್ ಜಲಸಂಧಿಯನ್ನು ಮತ್ತೆ ಮುಚ್ಚಲಾಗಿದೆ ಎಂದು ಇರಾನ್ ಸರಕಾರದ ಮಾಧ್ಯಮ ಶನಿವಾರ ಸ್ಪಷ್ಟವಾಗಿ ಹೇಳಿದೆ. ಹೊರ್ಮುಜ್ ಈಗ ಮುಕ್ತವಾಗಿಲ್ಲ. ಅದನ್ನು 'ಪರಿಣಾಮಕಾರಿಯಾಗಿ' ಬಂದ್ ಮಾಡಿದ್ದೇವೆ ಎಂದು ಇರಾನ್‌ನ 'ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕಾರ್ಪ್ಸ್'(ಐಆರ್‌ಜಿಸಿ) ಹೇಳಿದೆ. ಹೊರ್ಮುಜ್ ಜಲಸಂಧಿ ಬಳಿ ತನ್ನ ನೌಕಾಪಡೆಯಿಂದ ದಿಗ್ಬಂಧನ ಹಾಕಿರುವ ಅಮೆರಿಕ ಸರಕಾರ, ಮೊದಲು ಶಾಂತಿ ಮಾತುಕತೆ ಮುಗಿಸಿ ಸರಿಯಾದ ರೀತಿ ಒಪ್ಪಂದಕ್ಕೆ ಬನ್ನಿ ಎಂದು ಇರಾನ್‌ಗೆ ಒತ್ತಡ ಹಾಕುತ್ತಿದೆ.

ಹೊರ್ಮುನ್ ಜಲಸಂಧಿಯಲ್ಲಿ ಯಾವುದೇ ನೌಕೆಗಳೂ ಸಂಚರಿಸಲಾಗದಂತೆ ಮಾಡಲು ಅಮೆರಿಕ ನೌಕಾಪಡೆ ದಿಗ್ಬಂಧನ ನಡೆಸಿದೆ. ಹಾಗಾಗಿಯೇ ಹೊರ್ಮುಜ್ ಜಲಸಂಧಿಯನ್ನು ಪೂರ್ಣ ಪ್ರಮಾಣದಲ್ಲಿ ಮುಚ್ಚಲಾಗಿದೆ ಎಂದು ಇರಾನ್ ಸರಕಾರಿ ಮಾಧ್ಯಮ ತಿಳಿಸಿದೆ. ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳು ಹಾದು ಹೋಗುವ ನಿಗದಿತ ಮಾರ್ಗ ಮತ್ತು ಅನುಮತಿಯನ್ನು ಇರಾನ್ ನಿರ್ಧರಿಸುತ್ತದೆ. ಅಮೆರಿಕದ ನೌಕಾಪಡೆಗಳು ದಿಗ್ಬಂಧನ ಮುಂದುವರಿಸಿರುವುದರಿಂದ ಹೊರ್ಮುಜ್ ಜಲಸಂಧಿ ಕೂಡಾ ಮುಕ್ತವಾಗಿರುವುದಿಲ್ಲ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘರ್ ಗಾಲಿಬಾಫ್, 'ಎಕ್ಸ್' ಸಂದೇಶದಲ್ಲಿ ಡೊನಾಲ್ಡ್ ಟ್ರಂಪ್‌ಗೆ ಎಚ್ಚರಿಕೆ ನೀಡಿದ್ದಾರೆ. ಆದರೆ, ಡೊನಾಲ್ಡ್ ಟ್ರಂಪ್ ಮಾತ್ರ, ಇರಾನ್ ಜತೆಗಿನ ಶಾಂತಿ ಮಾತುಕತೆ ಅರ್ಥ ಪೂರ್ಣವಾಗಿ ಮುಕ್ತಾಯಗೊಳ್ಳುವವರೆಗೂ ಹೊರ್ಮುಜ್ ಜಲಸಂಧಿಯಲ್ಲಿನ ನೌಕಾ ದಿಗ್ಬಂಧನ ಹಾಗೆಯೇ ಇರುತ್ತದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇರಾನ್ ಸಂಸತ್ತಿನ ಸ್ಪೀಕರ್ ಗಾಲಿಬಾಫ್ ಎಚ್ಚರಿಕೆಯನ್ನು ಟ್ರಂಪ್ ಪೂರ್ಣ ನಿರ್ಲಕ್ಷಿಸಿದ್ದಾರೆ.

ಅಲ್ಪ ಸಮಯ: ಕದನ ವಿರಾಮ ಜಾರಿ ಇರುವವರೆಗೂ ಹೊರ್ಮುಜ್ ಜಲಸಂಧಿಯು ಎಲ್ಲಾ ಬಗೆಯ ವಾಣಿಜ್ಯ ಹಡಗುಗಳಿಗೂ ಪೂರ್ಣವಾಗಿ ಮುಕ್ತವಾಗಿರಲಿದೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಶುಕ್ರವಾರವಷ್ಟೇ ಹೇಳಿದ್ದರು. ಶುಕ್ರವಾರ ಅಲ್ಪ ಸಮಯದವರೆಗೆ ಹೊರ್ಮುಜ್ ಮಾರ್ಗ ವಾಣಿಜ್ಯ ನೌಕೆಗಳ ಸಂಚಾರಕ್ಕೆ ಮುಕ್ತವಾಗಿತ್ತು.

ಹೊರ್ಮುಜ್ ಜಲಸಂಧಿ ಉಪಗ್ರಹದಿಂದ ಶನಿವಾರ ಗೋಚರಿಸಿದ್ದು ಹೀಗೆ. ಯಾವುದೇ ಹಡಗುಗಳ ಸಂಚಾರ ಕಾಣುಬರುತ್ತಿಲ್ಲ.

ಕ್ಷಣಕ್ಕೊಂದು ಬದಲಾವಣೆ ಕ್ಯಾಪ್ಟನ್‌ಗಳಿಗೆ ಅಪಾಯಕಾರಿ

ಹೊರ್ಮುಜ್ ಜಲಸಂಧಿಯಲ್ಲಿನ ಪ್ರಸಕ್ತ ಗೊಂದಲಮಯ ಪರಿಸ್ಥಿತಿ ವಾಣಿಜ್ಯ ನೌಕೆಗಳ ಸಂಚಾರಕ್ಕೆ ಅಪಾಯಕಾರಿಯಾಗಿ ಪರಿಣಮಿಸಿದೆ. ಹೊರ್ಮುಜ್ ಸ್ಥಿತಿ ಕ್ಷಣಕ್ಕೊಂದು ಬಗೆಯಂತೆ ಬದಲಾಗುತ್ತಿದೆ. ಶುಕ್ರವಾರ ಹೊರ್ಮುಜ್ ಪೂರ್ಣ ಮುಕ್ತ ಎನ್ನಲಾಗಿತ್ತು. ಶನಿವಾರ ಮತ್ತೆ ಬಂದ್ ಮಾಡಲಾಗಿದೆ. ಹೀಗೆ ಬದಲಾವಣೆ ಆಗುತ್ತಿರುವುದು ವಾಣಿಜ್ಯ ನೌಕೆಗಳ ಕ್ಯಾಪ್ಟನ್‌ಗಳು ಮತ್ತು ನೌಕೆಯ ಸಿಬ್ಬಂದಿಗಳ ಜೀವಕ್ಕೆ ಕಂಟಕವಾಗಿ ಪರಿಣಮಿಸಲಿದೆ. ಅಲ್ಲದೇ, ನೌಕೆಯ ಒಡೆತನ ಹೊಂದಿರುವ ಕಂಪನಿಗೆ, ವಿಮಾನ ಕಂಪನಿಗಳಿಗೂ ಕಷ್ಟಕರವಾಗಲಿದೆ ಎಂದು ಆಸ್ಟ್ರೇಲಿಯದ ಸಾಗರಯಾನ ತಜ್ಞ ಮೈಕೇಲ್ ಷೋಬ್ರಿಡ್ಜ್ 'ಅಲ್‌ಜಝೀರಾ' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ವಿಶ್ಲೇಷಣೆ ಮಾಡಿದ್ದಾರೆ.

ಬ್ರಿಟನ್ ನೌಕೆ ಮೇಲೆ ಐಆರ್‌ಜಿಸಿ ಗುಂಡು

ಇದೆಲ್ಲದರ ಮಧ್ಯೆ, ಇರಾನ್ 'ಐಆರ್‌ಜಿಸಿ'ಯ ಬಂದೂಕುಧಾರಿ ದೋಣಿಗಳೆರಡು ಬ್ರಿಟನ್‌ನ ಹಡಗಿನ ಮೇಲೆ ಅಪ್ರಚೋದಿತವಾಗಿ, ಯಾವುದೇ ನಿಯಮ ಉಲ್ಲಂಘಿಸದೇ ಇದ್ದರೂ ಗುಂಡು ಹಾರಿಸಿವೆ ಎಂದು 'ಯುನೈಟೆಡ್ ಕಿಂಗ್ಡಂನ ಮೆರಿಟೈಮ್ ಟ್ರೇಡ್ ಆಪರೇಷನ್ಸ್' ಏಜೆನ್ಸಿ ಶನಿವಾರ ಹೇಳಿದ್ದು, ಹೊರ್ಮುಜ್‌ನಲ್ಲಿನ ಸದ್ಯದ ಪರಿಸ್ಥಿತಿಯ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

1 ಗಂಟೆಗೆ 7 ಸುಳ್ಳು ಟ್ರಂಪ್ ಬಗ್ಗೆ ಟೀಕೆ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡವಳಿಕೆ, ಮಾತಿನ ಚಪಲವನ್ನು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘರ್ ಗಾಲಿಬಾಫ್ ಟೀಕಿಸಿದ್ದಾರೆ. ಡೊನಾಲ್ಡ್ ಟ್ರಂಪ್ ಒಂದು ಗಂಟೆಯಲ್ಲಿ 7 ಹೇಳಿಕೆಗಳನ್ನು ನೀಡಿದ್ದಾರೆ. ಆದರೆ ಅವೆಲ್ಲವೂ ಸುಳ್ಳುಗಳೇ ಆಗಿವೆ. ಆ ಹೇಳಿಕೆಗಳ ಅರ್ಥವೇನೆಂಬುದು ನಿಖರವಾಗಿ ಅವರಿಗೇ ಆದರೂ ಅರ್ಥವಾಗಿದೆಯೇ? ಎಂಬ ಪ್ರಶ್ನೆ ಇದೆ ಎಂದು ಸ್ಪೀಕರ್ ಗಾಲಿಬಾಫ್ ವ್ಯಂಗ್ಯವಾಡಿದ್ದಾರೆ. ಅಮೆರಿಕದ ಜತೆಗೆ 2ನೇ ಬಾರಿ ಮಾತುಕತೆ ನಡೆಸುವುದಕ್ಕೆ ಇರಾನ್ ಈವರೆಗೂ ಒಪ್ಪಿಕೊಂಡಿಲ್ಲ ಎಂದು ಇರಾನ್ ಸರಕಾರದ ಮೂಲಗಳು ಇರಾನ್‌ನ 'ತಸ್ನಿಂ' ಸುದ್ದಿಸಂಸ್ಥೆಗೆ ತಿಳಿಸಿರುವುದಾಗಿ ಶನಿವಾರ ವರದಿಯಾಗಿದೆ.

ಕಚ್ಚಾತೈಲ ಬೆಲೆ ಇಳಿಕೆ

ಇಸ್ರೇಲ್-ಲೆಬನಾನ್ ಮಧ್ಯೆ ಅಮೆರಿಕದ ನಿಗಾದಲ್ಲಿ ಕದನ ವಿರಾಮ ಘೋಷಣೆಯಾಗಿರುವುದು ಸ್ವಾಗತಾರ್ಹ. ಈ ಕದನ ವಿರಾಮ ಜಾರಿ ಇರುವವರೆಗೂ ಹೊರ್ಮುಜ್ ಜಲಸಂಧಿ ಮಾರ್ಗ ಎಲ್ಲಾ ವಾಣಿಜ್ಯ ನೌಕೆಗಳ ಸಂಚಾರಕ್ಕೂ ಮುಕ್ತವಾಗಿದೆ ಎಂದು ಇರಾನ್ ಸರಕಾರ ಶುಕ್ರವಾರ ಹೇಳಿತ್ತು. ಅದರ ಪರಿಣಾಮವಾಗಿ ಕಚ್ಚಾತೈಲ ಧಾರಣೆ 100 ಡಾಲರ್‌ಗಳ ಗಡಿಯಿಂದ ಹಿಂದಕ್ಕೆ ಸರಿದಿದೆ. ಬ್ರೆಂಟ್ ಕ್ರೂಡ್ ಕಚ್ಚಾತೈಲ ಬ್ಯಾರಲ್ ಬೆಲೆ ಶನಿವಾರದ ವಹಿವಾಟಿನಲ್ಲಿ ಶೇ.7.52ರಷ್ಟು ಇಳಿಕೆ ಕಂಡು 91.87 ಡಾಲರ್‌ಗಳಿಗೆ ತಗ್ಗಿತ್ತು.

ಖರಾತ್ ಆಪ್ತ ಜಿತೇಂದ್ರ ದಂಪತಿ ಅಪಘಾತಕ್ಕೆ ಬಲಿ

ಮುಂಬೈ: ಧರ್ಮಬೋಧನೆ ಮಾಡುವ, ಭವಿಷ್ಯ ಹೇಳುವ ನೆಪದಲ್ಲಿ ನೂರಾರು ಮಹಿಳೆಯರನ್ನು ಲೈಂಗಿಕವಾಗಿ ಶೋಷಣೆ ಮಾಡಿ, ಆ ಬಳಿಕ ಅವರಿಂದ ಕೋಟ್ಯಂತರ ಹಣ ಲಪಟಾಯಿಸಿ, ಬಳಿಕ ಸಿಕ್ಕಿಬಿದ್ದ ಮಹಾರಾಷ್ಟ್ರದ ನಾಸಿಕ್‌ನ ವಿವಾದಿತ ನಿವೃತ್ತ ಸೈನಿಕ ಅಶೋಕ್ ಖರಾತ್ ಸದ್ಯ ಜೈಲುಪಾಲಾಗಿದ್ದಾನೆ. ಆದರೆ, ಈತನ ಅತ್ಯಂತ ಆಪ್ತ ಸಹಚರ, ಖರಾತ್ ಸ್ಥಾಪಿಸಿದ್ದ 'ಶಿವಾನಿಕಾ ಟ್ರಸ್ಟ್'ನ ನಿರ್ದೇಶಕ ಜಿತೇಂದ್ರ ಶೆಲ್ಕೆ(55) ಮತ್ತು ಆತನ ಪತ್ನಿ ಅನುರಾಧ(50) ಶುಕ್ರವಾರ ರಸ್ತೆ ಅಪಘಾತದಲ್ಲಿ ದುರ್ಮರಣಕ್ಕೀಡಾದರು.

ಛತ್ರಪತಿ ಸಂಭಾಜಿನಗರದಿಂದ ಶಿರಡಿಗೆ ಹೋಗುವ ರಸ್ತೆಯ 'ಧೋತ್ರೆ' ಗ್ರಾಮದ ಬಳಿ ರಸ್ತೆಬದಿ ನಿಲುಗಡೆಯಾಗಿದ್ದ ಕಂಟೇನರ್ ಟ್ರಕ್‌ನ ಹಿಂಬದಿಗೆ ಜಿತೇಂದ್ರ ದಂಪತಿ ಇದ್ದ ಕಾರು ರಭಸದಿಂದ ಡಿಕ್ಕಿ ಹೊಡೆದಿದೆ. ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ. ಜಿತೇಂದ್ರ ಶೆಲ್ಕೆ ಮತ್ತು ಆತನ ಪತ್ನಿ ಅನುರಾಧ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಹಿಂಬದಿ ಆಸನದಲ್ಲಿದ್ದ ಮಗ ತೀವ್ರವಾಗಿ ಗಾಯಗೊಂಡಿದ್ದಾನೆ. ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ದೇಹಸ್ಥಿತಿ ಬಹಳ ಗಂಭಿರವಾಗಿದೆ.

ಶೆಲ್ಕೆ ಕುಟುಂಬ ಛತ್ರಪತಿ ಸಂಭಾಜಿ ನಗರದಿಂದ ಮುಂಬೈ-ನಾಗಪುರ ಸಮೃದ್ಧಿ ಎಕ್ಸ್ ಪ್ರೆಸ್‌ವೇ ಮಾರ್ಗವಾಗಿ ಥಾಣೆಗೆ ತೆರಳುತ್ತಿದ್ದಾಗಲೇ ಅಪಘಾತವಾಗಿದೆ. ಜಿತೇಂದ್ರ ಅವರೇ ಕಾರನ್ನು ಅತಿವೇಗದಿಂದ ಚಲಾಯಿಸುತ್ತಿದ್ದರು. ಕಾರು ವೇಗವಾಗಿ ಹೋಗಿ ಡಿಕ್ಕಿ ಹೊಡೆದಿರುವ ಪರಿಣಾಮ ಕಾರಿನ ಮುಕ್ಕಾಲು ಭಾಗ ಕಂಟೇನರ್ ಟ್ರಕ್‌ನ ಹಿಂಬದಿಯ ತಳಭಾಗಕ್ಕೆ ಸಿಲುಕಿಕೊಂಡು ಅಪ್ಪಚ್ಚಿಯಾಗಿದೆ. ಕಂಟೇನರ್ ಟ್ರಕ್ ನಡಿಗೆ ಅಂಟಿಕೊಂಡು ಬಿಟ್ಟಿದ್ದ ಕಾರನ್ನು ಬಿಡಿಸಿ ಹೊರತೆಗೆಯುವುದೇ ಅಸಾಧ್ಯ ಎನ್ನುವಂತಾಗಿತ್ತು. ಕಾರನ್ನು ಕಟಿಂಗ್ ಮೆಷಿನ್‌ಗಳಿಂದ ಕತ್ತರಿಸಿ ಹೊರತೆಗೆಯಬೇಕಾಯಿತು. ಮುಂದಿನ ಆಸನದಲ್ಲಿದ್ದ ಜಿತೇಂದ್ರ ಮತ್ತು ಪತ್ನಿಯ ದೇಹಗಳ ಅಕ್ಷರಶಃ ನಜ್ಜುಗುಜ್ಜಾಗಿದ್ದವು.

ಸುಳ್ಳು ಹೇಳುವ ಪ್ರಧಾನಿ, ಗೃಹ ಸಚಿವ ಅಮಿತ್ ಶಾ : ರಾಹುಲ್

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ, ಸಂವಿಧಾನ(131ನೇ ತಿದ್ದುಪಡಿ) ವಿಧೇಯಕ ಕುರಿತು ದೇಶದ ಜನತೆಗೆ ಸುಳ್ಳು ಹೇಳಿದ್ದಾರೆ. ಮಹಿಳಾ ಮೀಸಲು ವಿಧೇಯಕ ಎಂದು ಹೇಳಿ ಜನರನ್ನು ತಪ್ಪು ದಾರಿಗೆಳೆಯಲೆತ್ನಿಸಿದ್ದಾರೆ ಎಂದು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಶನಿವಾರ ಆರೋಪಿಸಿದ್ದಾರೆ.

ತಮಿಳುನಾಡಿನ ರಾಣಿಪೇಟೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ರಾಹುಲ್, ಮಹಿಳಾ ಮೀಸಲು ಎಂಬುದರ ಹಿಂದೆ ದೇಶದ ಚುನಾವಣಾ ಕ್ಷೇತ್ರಗಳ ನಕ್ಷೆ ಬದಲಿಸುವ, ಆ ಮೂಲಕ ರಾಜ್ಯಗಳನ್ನು ದುರ್ಬಲಗೊಳಿಸುವ ದುಷ್ಟ ಹುನ್ನಾರ ಅಡಗಿದೆ ಎಂದು ಆರೋಪಿಸಿದರು. ಈ ವಿಧೇಯಕದ ಹಿಂದೆ ಬಿಜೆಪಿಯ ಭಯಾನಕ ಯೋಚನೆ ಅಡಗಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಕೈಗೆತ್ತಿಕೊಂಡಿದ್ದ ಈ ಕ್ರಮ ರಾಷ್ಟ್ರವಿರೋಧಿ ಕೃತ್ಯವಾಗಿದೆ ಎಂದರು. ಪ್ರತಿ ರಾಜ್ಯದ ಲೋಕಸಭಾ ಸ್ಥಾನಗಳ ಸಂಖ್ಯೆ ಬದಲಿಸಲು ಬಯಸಿದ್ದರು. ದಕ್ಷಿಣ ಮತ್ತು ಈಶಾನ್ಯ ಭಾರತದ ರಾಜ್ಯಗಳನ್ನು ದುರ್ಬಲಗೊಳಿಸುವ ಇರಾದೆ ಅವರದ್ದಾಗಿದೆ. ಇದು ರಾಜ್ಯಗಳ ಒಕ್ಕೂಟದ ಆತ್ಮಕ್ಕೆ ವಿರುದ್ಧವಾಗಿದೆ. ಈ ದುಷ್ಟ ಯೋಜನೆಯನ್ನು ತಡೆಯಲು ಪ್ರತಿಪಕ್ಷಗಳು ಕಲ್ಲಿನಂತೆ ಏಕವಾಗಿ ನಿಂತು ಬಿಜೆಪಿಯನ್ನು ಸೋಲಿಸಿವೆ ಎಂದರು.

ವಿಧೇಯಕಕ್ಕೆ ಸೋಲು:ಬಿಜೆಡಿ ಸಂಭ್ರಮ

ದೆಹಲಿ: ಮಹಿಳಾ ಮೀಸಲು ಸೌಲಭ್ಯ ಒದಗಿಸುವ ವಿಧೇಯಕಕ್ಕೆ ಸೋಲಾಗಿರುವುದಕ್ಕೆ ಒಡಿಶಾ ರಾಜ್ಯದ ಪ್ರಮುಖ ಪಕ್ಷ ಬಿಜು ಜನತಾ ದಳ(ಬಿಜೆಡಿ) ಶನಿವಾರ ಸಂಭ್ರಮಿಸಿದೆ. 'ಸತ್ಯಮೇವ ಜಯತೇ, ಸತ್ಯ ಮೇಲುಗೈ ಸಾಧಿಸಿದೆ. ಸಂಸತ್ತಿನಲ್ಲಿ ಸೋಲು ಕಂಡಿದ್ದು ಮಹಿಳಾ ಮೀಸಲು ವಿಧೇಯಕವಲ್ಲ. ವಿವಾದಾತ್ಮಕವಾಗಿರುವ ಕ್ಷೇತ್ರ ಮರುವಿಂಗಡಣೆ ವಿಧೇಯಕಕ್ಕೆ ಸೋಲಾಗಿದೆ. ಇದು ಒಡಿಶಾದಂತಹ ರಾಜ್ಯಗಳಿಗೆ ದೊಡ್ಡ ವಿಜಯ ಎಂದು ಬಿಜೆಡಿಯ ಸಂಸದೀಯ ಪಕ್ಷದ ನಾಯಕ ಮಾನಸ್ ರಂಜನ್ ಮಂಗರಾಜ್ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ಬಿರಿಯಾನಿಗೆ ಕೃಷ್ಣನ ಚಿತ್ರ: ಮಾಲೀಕ ಸೆರೆ

ಅಲಪ್ಪುಳ: ಕೇರಳದ ಅಲಪ್ಪುಳದ ಚೆರ್ತಲಾದ ಮನೋರಮಾ ಜಂಕ್ಷನ್ ಬಳಿ ಇರುವ ರೆಸ್ಟೋರೆಂಟ್ 'ಮೆಹರ್ ಮಂಡಿ ಅಂಡ್ ಗ್ರಿಲ್ಸ್' ಮಾಲೀಕ ಅರ್ಷದ್, ಹೆಚ್ಚು ಗ್ರಾಹಕರನ್ನು ಆಕರ್ಷಿಸುವ ಸಲುವಾಗಿ 'ವಿಷು ಹಬ್ಬದ ಶುಭಾಶಯ' ಕೋರುವ ಪೋಸ್ಟರನ್ನು ಹೋಟೆಲ್ ಮುಂದೆ ದೊಡ್ಡದಾಗಿ ಅಳವಡಿಸಿದ್ದ. ಆದರೆ ಪೋಸ್ಟರ್‌ನಲ್ಲಿ ಶ್ರೀಕೃಷ್ಣ ಭಗವಾನರ ಚಿತ್ರ ಬಳಸಿದ್ದ. ಆ ಚಿತ್ರದ ಮುಂದೆ ಬಾಳೆ ಎಲೆಯಲ್ಲಿ ಚಿಕನ್ ಬಿರಿಯಾಗಿ ಇರುವಂತೆ ವಿನ್ಯಾಸಗೊಳಿಸಿದ್ದ. ಈ ಹೋರ್ಡಿಂಗ್ ತೀವ್ರ ವಿವಾದಕ್ಕೆ ಕಾರಣವಾಗಿದೆ. ಈ ಪೋಸ್ಟರ್ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದ್ದು, ಹಿಂದೂ ಸಂಘಟನೆಗಳು ಪ್ರತಿಭಟನೆ ನಡೆಸಿದ್ದವು. ಹಿಂದೂಗಳ, ಅದರಲ್ಲೂ ಕೃಷ್ಣ ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರಲಾಗಿದೆ ಎಂದು ವಕೀಲ ಎಂ.ವಿ. ಬಿಜು ಎಂಬವರು ದೂರು ದಾಖಲಿಸಿದ್ದರು. ಆ ಬಳಿಕ ಮೆಹರ್ ಮಂಡಿ ಗ್ರಿಲ್ಸ್‌ನ ಮಾಲೀಕ ಅರ್ಷದ್‌ನನ್ನು ಬಂಧಿಸಿರುವ ಅಲಪ್ಪುಳ ಪೊಲೀಸರು, ಧಾರ್ಮಿಕ ಭಾವನೆಗಳಿಗೆ ಧಕ್ಕೆ, ಕೋಮುದ್ವೇಷ ಪ್ರಚೋದಿಸುವ ಯತ್ನ ಆರೋಪಗಳು ಸೇರಿದಂತೆ ಭಾರತ ನ್ಯಾಯಶಾಸ್ತ್ರದ ವಿವಿಧ ಸೆಕ್ಷನ್‌ಗಳಡಿ ಅಪರಾಧ ಪ್ರಕರಣ ದಾಖಲಿಸಿದ್ದಾರೆ.

ಮಹಿಳಾ ಮೀಸಲು ವಿಧೇಯಕ್ಕೆ ಸೋಲು: ಪಟಾಕಿ ಸಿಡಿಸಿ ಸಿಎಂ ಸ್ಟಾಲಿನ್ ಸಂಭ್ರಮ

ದಿಂಡಿಗಲ್: ತಮಿಳುನಾಡು ವಿಧಾನಸಭಾ ಚುನಾವಣೆ ಪ್ರಚಾರದ ಬಿರುಸಿನ ಕಾರ್ಯಕ್ರಮದ ಮಧ್ಯೆಯೇ ಮುಖ್ಯಮಂತ್ರಿ, ದ್ರಾವಿಡ ಮುನ್ನೇತ್ರ ಕಳಗಂ(ಡಿಎಂಕೆ) ಪಕ್ಷದ ಮುಖಂಡ ಎಂ.ಕೆ.ಸ್ಟಾಲಿನ್, ಲೋಕಸಭೆಯಲ್ಲಿ ಶುಕ್ರವಾರ ಮಹಿಳಾ ಮೀಸಲು ವಿಧೇಯಕಕ್ಕೆ ಮತದಾನ ಪ್ರಕ್ರಿಯಲ್ಲಿ ಸೋಲಾಗಿರುವುದನ್ನು ಸಂಭ್ರಮಿಸಿದ್ದಾರೆ.

ಸಂವಿಧಾನಾತ್ಮಕ ತಿದ್ದುಪಡಿ ಮಹಿಳಾ ಮೀಸಲು ವಿಧೇಯಕಕ್ಕೆ ಲೋಕಸಭೆಯ ಅಂಗೀಕಾರಣ ಪಡೆದುಕೊಳ್ಳುವ ಎನ್‌ಡಿಎ ಸರಕಾರದ ಪ್ರಯತ್ನಕ್ಕೆ ಸೋಲಾಗಿದ್ದಕ್ಕೆ ಸಿಎಂ ಸ್ಟಾಲಿನ್, ದಿಂಡಿಗಲ್‌ನಲ್ಲಿ ಶನಿವಾರ ಚುನಾವಣಾ ಪ್ರಚಾರ ನಡೆಸಿರುವ ಮಧ್ಯೆಯೇ ಪಟಾಕಿಗಳನ್ನು ಸಿಡಿಸಿ, ಪಕ್ಷದ ಕಾರ್ಯಕರ್ತರಿಗೆ ಸಿಹಿ ಹಂಚಿ ವಿಜಯೋತ್ಸವ ಸಂಭ್ರಮ ಆಚರಿಸಿದರು. ಇದೇ ವೇಳೆ ಮಾತನಾಡಿದ ಸ್ಟಾಲಿನ್, ತಮಿಳುನಾಡನ್ನು ಕೆಣಕಲು ಬರಬೇಡಿ. ನಾವು ತಿರುಗಿ ಪೆಟ್ಟು ಕೊಟ್ಟರೆ ಅದನ್ನು ತಡೆದುಕೊಳ್ಳಲು ನಿಮಗೆ ಆಗುವುದಿಲ್ಲ ಎಂದೂ ಎನ್‌ಡಿಎ ಸರಕಾರಕ್ಕೆ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪರೋಕ್ಷವಾಗಿ ಹೇಳಿದರು.

ಮಹಿಳಾ ಮೀಸಲು ವಿಧೇಯಕಕ್ಕೆ ಲೋಕಸಭೆಯಲ್ಲಿನ ಸೋಲು ಕೇಸರಿ ಪಕ್ಷಕ್ಕೆ ಬಿದ್ದಿರುವ ದೊಡ್ಡ ಹೊಡೆತ. ಪ್ರಧಾನಿ ನರೇಂದ್ರ ಮೋದಿ ತಮ್ಮ 12 ವರ್ಷಗಳ ಸುದೀರ್ಘ ಆಡಳಿತದಲ್ಲಿ ಕಂಡ ಮೊದಲ ಬಲು ದೊಡ್ಡ ಸೋಲು. ಇದು ಸಾಮಾನ್ಯವಾದ ಸೋಲು ಅಲ್ಲ, ಶತಮಾನ ಕಳೆದರೂ ಮೋದಿ, ಅವರ ಬೆಂಬಲಿಗರು, ಬಿಜೆಪಿ ನೆನಪಿನಲ್ಲಿ ಉಳಿಯುವಂತಹ ಸೋಲು ಎಂದು ಗೆಲುವಿನ ನಗೆಬೀರಿದರು.

ರಾಹುಲ್‌ಗೆ ಧನ್ಯವಾದ

ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಈ ಸೋಲಿಗೆ ಕಾರಣವಾಗಿರುವುದು ನನ್ನ ಪ್ರೀತಿಯ ಸೋದರ, ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ. ಧನ್ಯವಾದ ಸೋದರ ರಾಹುಲ್ ಎಂದು ಎಕ್ಸ್ ಸಂದೇಶದಲ್ಲಿ ಸ್ಟಾಲಿನ್ ಸಂದೇಶ ಬರೆದಿದ್ದಾರೆ. ಅಲ್ಲದೇ, ಕ್ಷೇತ್ರ ಮರುವಿಂಗಡಣೆ ಕುರಿತ ನಮ್ಮ ಆತಂಕವನ್ನು ಅರ್ಥಮಾಡಿಕೊಂಡು ಮಹಿಳಾ ಮೀಸಲು ವಿಧೇಯಕವನ್ನು ಸೋಲಿಸಿದ್ದಕ್ಕೆ ಧನ್ಯವಾದ ಇಂಡಿಯ ಒಕ್ಕೂಟ, ಗೌರವಾನ್ವಿತ ಮೇಡಂ ಸೋನಿಯಾ ಗಾಂಧಿ ಅವರಿಗೆ, ಮಲ್ಲಿಕಾರ್ಜುನ ಖರ್ಗೆ, ಕಾಮ್ರೇಡ್ ಡಿ.ರಾಜಾ, ರೇವಂತ್ ಅನುಮೂಲಾ, ಸಿದ್ದರಾಮಯ್ಯ, ಮಮತಾ ಬ್ಯಾನರ್ಜಿ, ಅಖಿಲೇಶ್ ಯಾದವ್ ಅವರೆಲ್ಲರಿಗೂ ಧನ್ಯವಾದ ಎಂದೂ 'ಎಕ್ಸ್' ಸಂದೇಶದಲ್ಲಿ ಸ್ಟಾಲಿನ್ ಬರೆದಿದ್ದಾರೆ.

ತಮಿಳುನಾಡಿನ ವಾಲ್ಪರ್ ಐ ಬೆಟ್ಟದ ತಿರುವಿನಲ್ಲಿ ಉರುಳಿ ಬಿದ್ದ ವಾಹನ

ಶಾಲಾ ಸಿಬ್ಬಂದಿ ಪ್ರವಾಸಿ ಟೆಂಪೊ ಪಲ್ಟಿ: 9 ಸಾವು

ಚೆನ್ನೈ: ತಮಿಳುನಾಡಿನ ವಾಲ್ಪರ್ ಐ ಬೆಟ್ಟದ ತಿರುವು ರಸ್ತೆಯಲ್ಲಿ ಟಿಟಿ ವಾಹನ ಪಲ್ಟಿಯಾಗಿದ್ದರಿಂದ ಪ್ರವಾಸಕ್ಕೆ ತೆರಳಿದ್ದ ಕೇರಳದ ಮಲಪ್ಪುರಂನ ಒಂದೇ ಶಾಲೆಯ ಶಿಕ್ಷಕ-ಸಿಬ್ಬಂದಿ ಸಮೂಹದ 9 ಮಂದಿ ದುರ್ಮರಣಕ್ಕೀಡಾಗಿದ್ದಾರೆ.

ಬೇಸಿಗೆ ರಜೆ ಹಿನ್ನೆಲೆ ಕೇರಳದ ಮಲಪ್ಪುರಂ ಜಿಲ್ಲೆಯ ಪಾಂಗ್‌ನ ಪಲ್ಲಿಪರಂಬು ಗ್ರಾಮದ ಸರಕಾರಿ ಲೋವರ್ ಪ್ರೈಮರಿ ಶಾಲೆಯ ಐವರು ಶಿಕ್ಷಕರು ಹಾಗೂ ನಾಲ್ವರು ಸಹಾಯಕ ಸಿಬ್ಬಂದಿ ಟೆಂಪೊ ಟ್ರಾವಲರ್‌ನಲ್ಲಿ ವಾಲ್ಪರ್ ಐ ಬೆಟ್ಟಕ್ಕೆ ಪ್ರವಾಸಕ್ಕೆಂದು ತೆರಳಿದ್ದರು. ಅಲ್ಲಿಂದ ವಾಪಸಾಗುವಾಗ ಶುಕ್ರವಾರ ಸಂಜೆ 5ರ ವೇಳೆ ಘಟ್ಟ ಪ್ರದೇಶದ ಕಡಿದಾದ ತಿರುವಿನಲ್ಲಿ ಚಾಲಕನ ನಿಯಂತ್ರಣಕ್ಕೆ ಸಿಗದ ವಾಹನ ಉರುಳಿಬಿದ್ದು, ಛಿದ್ರವಾಗಿದೆ. 13ನೇ ಹೇರ್‌ಪಿನ್ ಬೆಂಡ್ ತಿರುವಿನಲ್ಲಿ ಸಾಗುತ್ತಿದ್ದಾಗ ಉರುಳಿ ಬಿದ್ದ ವಾಹನ, ಬಲು ಎತ್ತರದಿಂದ 9ನೇ ತಿರುವಿ ರಸ್ತೆಗೆ ಬಿದ್ದಿದೆ. ಬಿದ್ದ ರಭಸಕ್ಕೆ ವಾಹನ ಛಿದ್ರ ಛಿದ್ರವಾಗಿದೆ. ವಾಹನ ಬಿದ್ದ ರಭಸಕ್ಕೆ 9 ಜನರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಅಜಿತಾ(54), ರಾಮ್ಲಾ (52). ಸುಹ್ರಾ(43), ಆಶಾ (41), ಮಜೀರ್ (43), ಸಜಿತಾ(45), ಶಕೀಲಾ(37), ರುಕಿಯಾ(39) ಮತ್ತು ಹಿಶಾಮ್(12) ಮೃತರು. ಶಾಲೆಯಿಂದ ಒಟ್ಟು 16 ಮಂದಿ ಪ್ರವಾಸಕ್ಕೆ ತೆರಳಿದ್ದರು. ವ್ಯಾನ್ ಚಲಾಯಿಸುತ್ತಿದ್ದ ಮೊಹಮ್ಮದ್ ಫಾಸಿತ್(21) ಗಂಭೀರವಾಗಿ ಗಾಯಗೊಂಡಿದ್ದಾರೆ. ಶಹಾದಿನ್ (11) ಮತ್ತು ಮಸ್ನೀನ್ (10) ಗಾಯಗೊಂಡಿದ್ದಾರೆ. ಕೊಯಮತ್ತೂರಿನ ಆಸ್ಪತ್ರೆಗೆ ದಾಖಲಾಗಿರುವ ಮೂವರನ್ನೂ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಐವರು ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ ಕಡಂಪರ್ರೈ ಪೊಲೀಸರು, ಆ ಬಳಿಕ ಶವಗಳನ್ನು ಕುಟುಂಬದವರಿಗೆ ಒಪ್ಪಿಸಿದ್ದಾರೆ. ಅಪಘಾತ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ತನಿಖಾ ತಂಡವನ್ನೇ ದಿಕ್ಕು ತಪ್ಪಿಸುತ್ತಿರುವ ಪತಿ: ಎಸ್‌ಐಟಿ ಅಧಿಕಾರಿ

ನಿಧಾ ಎಲ್ಲಿದ್ದಾಳೆಯೋ ನನಗೂ ಗೊತ್ತಿಲ್ಲ: ಪತಿ

ಮುಂಬೈ: ಟಾಟಾ ಕನ್ಸಲ್ಟೆನ್ಸಿ ಸರ್ವಿಸ್ (ಟಿಸಿಎಸ್)ನ ಪುಣೆಯ ಕಚೇರಿಯಲ್ಲಿ ನಡೆದಿರುವ 'ಕಾರ್ಪೊರೇಟ್ ಜಿಹಾದ್' ಪ್ರಕರಣದ ಪ್ರಮುಖ ಆರೋಪಿ, ಎಚ್ ಆರ್ ಮ್ಯಾನೇಜರ್ ನಿಧಾ ಖಾನ್‌ಗಾಗಿ ವಿಶೇಷ ತನಿಖಾ ತಂಡ(ಎಸ್‌ಐಟಿ) ವ್ಯಾಪಕ ಶೋಧ ನಡೆಸುತ್ತಿದೆ.

ನಿಧಾಖಾನ್‌ಳ ಪತಿ ನವೀದ್ ಇಕ್ಬಾಲ್ ಖಾನ್ ಥಾಣೆಯ ಮುಂಬ್ರಾದಲ್ಲಿ ಅಮೆಜಾನ್ ವೆಬ್ ಸರ್ವಿಸಸ್‌ನಲ್ಲಿ ಲಾಜಿಸ್ಟಿಕ್ ಅಧಿಕಾರಿಯಾಗಿದ್ದಾನೆ. ಆತನನ್ನು ಠಾಣೆಗೆ ಕರೆಯಿಸಿ ಎಸ್‌ಐಟಿ ವಿಚಾರಣೆಗೆ ಒಳಪಡಿಸಿದೆ. ಆದರೆ, ಆತ 'ನನ್ನ ಪತ್ನಿ ಚಿಕ್ಕಮ್ಮನ ಮನೆಯಲ್ಲಿದ್ದಾಳೆ' ಎಂದು ಒಮ್ಮೆ ಹೇಳಿದರೆ, ಇನ್ನೊಮ್ಮೆ ಬೇರೊಂದು ಸ್ಥಳದ ಮಾಹಿತಿ ನೀಡಿದ್ದಾನೆ. ಕಡೆಗೆ 'ನನ್ನ ಪತ್ನಿ ಎಲ್ಲಿದ್ದಾಳೆ ಎಂಬುದು ನನಗೂ ಗೊತ್ತಿಲ್ಲ' ಎಂದು ಹೇಳಿ ತನಿಖಾ ತಂಡವನ್ನೇ ದಿಕ್ಕು ತಪ್ಪಿಸುತ್ತಿದ್ದಾನೆಂದು ಎಸ್‌ಐಟಿ ಅಧಿಕಾರಿಗಳು ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ.

ಟಿಸಿಎಸ್‌ನ ನಾಸಿಕ್ ಕಚೇರಿಯಲ್ಲಿದ್ದ ನಿಧಾ ಖಾನ್‌ಳನ್ನು ಆರೋಪಗಳು ಕೇಳಿಬರಲಾರಂಭಿಸಿದ ಬಳಿಕ(2 ತಿಂಗಳ ಹಿಂದೆ) ಮುಂಬೈನಲ್ಲಿನ ಮಲಾಡ್ ಮತ್ತು ಹಿರಾನಂದನಿಯಲ್ಲಿರುವ ಕಚೇರಿಗಳಿಗೆ ವರ್ಗಾಯಿಸಲಾಗಿತ್ತು. ಆದರೆ, ಆರೋಪಿ ನಿಧಾ ಖಾನ್ ಆ ಕಚೇರಿಗಳಿಗೂ ಸದ್ಯ ಬಂದಿಲ್ಲ. ಯಾರನ್ನೂ ಸಂಪರ್ಕಿಸಿಲ್ಲ ಎಂಬುದನ್ನು ಎಸ್‌ಐಟಿ ಕಂಡುಕೊಂಡಿದೆ.

ನಿದಾ ಖಾನ್ ಗರ್ಭಿಣಿ. ಆಕೆ ಈಗ ಮುಂಬೈನಲ್ಲಿದ್ದಾಳೆ ಎಂದು ಅಕೆಯ ವಕೀಲರು ತಿಳಿಸಿದ್ದಾಗಿ ಮಾಧ್ಯಮಗಳು ವರದಿ ಮಾಡಿವೆ. ಟಿಸಿಎಸ್‌ನ ನಾಸಿಕ್ ಕಚೇರಿಯಲ್ಲಿ 2022ರಿಂದಲೂ 'ಕಾರ್ಪೊರೇಟ್ ಜಿಹಾದ್' ನಡೆಸುತ್ತಾ ಈಗ ಬಂಧಿತರಾಗಿರುವ ಡ್ಯಾನಿಶ್ ಶೇಖ್ ನೇತೃತ್ವದ 6 ಟೀಂ ಲೀಡರ್‌ಗಳ ತಂಡ, ಕಂಪನಿಗೆ ಹೊಸದಾಗಿ ಕೆಲಸಕ್ಕೆ ನೇಮಕಗೊಳ್ಳುತ್ತಿದ್ದ 18ರಿಂದ 25 ವರ್ಷದ ಯುವತಿಯರನ್ನೇ ತಮ್ಮ ದುಷ್ಕ ಜಾಲಕ್ಕೆ ಗುರಿಯಾಗಿಸಿಕೊಳ್ಳುತ್ತಿದ್ದರು ಎಂದು ತಿಳಿದುಬಂದಿದೆ.

ದೂರೇ ಬಂದಿಲ್ಲ

ಈ ಮಧ್ಯೆ, ಮಹಿಳಾ ಸಿಬ್ಬಂದಿಗೆ ಲೈಂಗಿಕ ಕಿರುಕುಳ ನಡೆದಿರುವ, ಮತಾಂತರಕ್ಕೆ ಬಲವಂತ ಪಡಿಸಿರುವ ಬಗ್ಗೆ ಕಂಪನಿಯ ಕಚೇರಿಯ ನಾಸಿಕ್ ಕಚೇರಿಯಲ್ಲಿ ಈವರೆಗೂ ಯಾವುದೇ ಲಿಖಿತ ದೂರು ದಾಖಲಾಗಿಲ್ಲ ಎಂದು ಟಿಸಿಎಸ್ ಹೇಳಿಕೆ ನೀಡಿದೆ. ಆ ಮೂಲಕ ಇಡೀ ಪ್ರಕರಣವನ್ನೇ ಅಲ್ಲಗಳೆದಂತಾಗಿದೆ.

ನಾರಿಯರ ಸಿಟ್ಟು ಎದುರಿಸಿ: ವಿಪಕ್ಷಕ್ಕೆ ಶಾ ಎಚ್ಚರಿಕೆ

ದೆಹಲಿ: ಮಹಿಳೆಯರಿಗೆ ಶೇ.33 ರಷ್ಟು ಮೀಸಲು ಸೌಲಭ್ಯ ನೀಡುವ ವಿಧೇಯಕಕ್ಕೆ ಲೋಕಸಭೆಯಲ್ಲಿ ಮತದಾನದಲ್ಲಿ ಸೋಲಾಗಿರುವುದನ್ನು ಸಂಭ್ರಮಿಸಿ, ವಿಜಯೋತ್ಸವ ಆಚರಿಸುವುದು, ಗೆಲುವಿನ ಕೇಕೆ ಹಾಕುವುದು ನಿಜಕ್ಕೂ ಖಂಡನೀಯ ಎಂದು ಪ್ರತಿಪಕ್ಷಗಳ ವಿರುದ್ಧ ಕಿಡಿಕಾರಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಇದು ಕಲ್ಪನೆಗೂ ಮೀರಿದ ಕೃತ್ಯ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಮಹಿಳೆಯರಿಗೆ ಶೇ.33ರಷ್ಟು ಮೀಸಲು ಸೌಲಭ್ಯ ನೀಡಲೆಂದೇ ಸಿದ್ಧಪಡಿಸಲಾಗಿದ್ದ ವಿಧೇಯಕವನ್ನು ತಿರಸ್ಕೃತವಾಗುವಂತೆ ಮಾಡಿರುವ ಪ್ರತಿಪಕ್ಷಗಳ ನಡೆ ಖಂಡನೀಯ ಎಂದು ಅಮಿತ್ ಶಾ 'ಎಕ್ಸ್' ಸಂದೇಶದಲ್ಲಿ ಹೇಳಿದ್ದಾರೆ. ಪ್ರತಿಪಕ್ಷಗಳ ಈ ನಕಾರಾತ್ಮಕ ಧೋರಣೆಯಿಂದಾಗಿ ದೇಶದ ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳಲ್ಲಿ ಶೇ.33ರಷ್ಟು ಸ್ಥಾನಗಳ ಮೀಸಲು ಸೌಲಭ್ಯ ಸಿಗುವುದಿಲ್ಲ. ಅಷ್ಟು ಸ್ಥಾನಗಳನ್ನು ಮೀಸಲಾಗಿ ಪಡೆದುಕೊಳ್ಳುವುದು ಮಹಿಳೆಯರ ಹಕ್ಕಾಗಿದೆ. ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಮಹಿಳೆಯರ ಪರವಾದ ವಿಧೇಯಕಗಳ ವಿಚಾರದಲ್ಲಿ ಪದೇ ಪದೇ ಹೀಗೆ ಮಾಡಿವೆ. ಪ್ರತಿಪಕ್ಷಗಳವರ ಮನಸ್ಥಿತಿ ಮಹಿಳೆಯರ ಹಿತಾಸಕ್ತಿಗಾಗಿಯಾಗಲೀ, ದೇಶದ ಹಿತದೃಷ್ಟಿಗಾಗಿಯಾಗಲೀ ಇಲ್ಲ. ನಾರಿ ಶಕ್ತಿಗೆ ಪ್ರತಿಪಕ್ಷಗಳು ಮಾಡಿರುವ ಈ ಅವಮಾನ ಇಲ್ಲಿಗೇ ಕೊನೆಗೊಳ್ಳುವುದಿಲ್ಲ ಎಂದು ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳ ವಿರುದ್ಧ ಗುಡುಗಿದ್ದಾರೆ.

ಪ್ರತಿಪಕ್ಷಗಳು 2029ರ ಲೋಕಸಭಾ ಚುನಾವಣೆಯಲ್ಲಷ್ಟೇ ಅಲ್ಲದೇ, ಮುಂದೆ ಬರುವ ಪ್ರತಿ ಚುನಾವಣೆಯಲ್ಲೂ, ಪ್ರತಿ ಸ್ಥಳದಲ್ಲೂ ಮಹಿಳೆಯರ ಕೋಪವನ್ನು ಎದುರಿಸಬೇಕಾಗುತ್ತದೆ ಎಂದು ಶಾ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ಹಳೆ ವಿಧೇಯಕವನ್ನೇ ಜಾರಿಗೊಳಿಸಿ: ಪ್ರಿಯಾಂಕಾ

ದೆಹಲಿ: ಈ ಹಿಂದೆ 2023ರಲ್ಲಿ ಎಲ್ಲಾ ರಾಜಕೀಯ ಪಕ್ಷಗಳಿಂದ ಸರ್ವಸಮ್ಮತವಾಗಿ ಸಂಸತ್ತಿನಲ್ಲಿ ಸ್ವೀಕಾರವಾಗಿದ್ದ ಮಹಿಳಾ ಮೀಸಲು ವಿಧೇಯಕವನ್ನೇ ಜಾರಿಗೆ ತನ್ನಿ ಎಂದು ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ವಾದ್ರಾ, ಕೇಂದ್ರದ ಎನ್‌ಡಿಎ ಸರಕಾರವನ್ನು ಶನಿವಾರ ಒತ್ತಾಯಿಸಿದ್ದಾರೆ. ಸಂಸತ್ ಅಧಿವೇಶನವನ್ನು ಸೋಮವಾರವೂ ನಡೆಸಿರಿ. ಹಿಂದೆ ಸಮ್ಮತಿ ಪಡೆದಿರುವ ಮಸೂದೆಯನ್ನೇ ಜಾರಿಗೊಳಿಸಿ. ಆಗ ಯಾರು ಮಹಿಳೆಯರ ವಿರೋಧಿ ಎಂಬುದು ತಿಳಿಯುತ್ತದೆ. ನಾವೆಲ್ಲರೂ ಮತ ಚಲಾಯಿಸಿ ಬೆಂಬಲಿಸುತ್ತೇವೆ ಎಂದು ವಯನಾಡು ಸಂಸದೆ ಪ್ರಿಯಾಂಕಾ ಹೇಳಿದರು.

ಸಮಾಚಾರ ಸಣ್ಣದಲ್ಲ

ಚಲಿಸುತ್ತಿದ್ದಾಗಲೇ ಬಸ್‌ನಲ್ಲಿ ಬೆಂಕಿ: ಪ್ರಯಾಣಿಕರು ಪಾರು

ಹೈದರಾಬಾದ್: ಚಲಿಸುತ್ತಿದ್ದ ಖಾಸಗಿ ಬಸ್‌ನಲ್ಲಿ ಏಕಾಏಕಿ ಬೆಂಕಿ ಕಾಣಿಕೊಂಡು ಸಂಪೂರ್ಣವಾಗಿ ಸುಟ್ಟು ಕರಕಲಾಗಿರುವ ಘಟನೆ ಹೈದರಾಬಾದ್‌ನ ಕೆಪಿಎಚ್ ಬಿಯಲ್ಲಿ ನಡೆದಿದೆ. ಸಿಬ್ಬಂದಿಯ ಸಮಯಪ್ರಜ್ಞೆಯಿಂದ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ 18ಕ್ಕೂ ಹೆಚ್ಚು ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಶುಕ್ರವಾರ (ಏ.17) ರಾತ್ರಿ ಕೆಪಿಎಚ್‌ಬಿಯಲ್ಲಿ ಶ್ರೀ ದುರ್ಗಾ ಮಹೇಶ್ವರಿ ಟ್ರಾವೆಲ್ಸ್‌ಗೆ ಸೇರಿದ ಎಸಿ ಸ್ಲೀಪರ್ ಬಸ್ ಮಿಯಾಪುರದಿಂದ ಹೊರಟು ಆಂಧ್ರಪ್ರದೇಶದ ಪಾಲಕೊಲ್ಲು ಮಾರ್ಗವಾಗಿ ಎಸ್‌ಆರ್ ನಗರ ಕಡೆಗೆ ಹೋಗುತ್ತಿತ್ತು. ಈ ವೇಳೆ ಚಾಲಕನ ಕ್ಯಾಬಿನ್‌ನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದೆ. ಸಿಬ್ಬಂದಿ ಸಮಯ ಪ್ರಜ್ಞೆಯಿಂದ ಬಸ್ಸಿನಲ್ಲಿದ್ದ ಎಲ್ಲ ಪ್ರಯಾಣಿಕರನ್ನು ಕೆಳಗಿಳಿಸಿದ್ದು, ದೊಡ್ಡ ದುರಂತವೊಂದು ತಪ್ಪಿದೆ.

ಕೋಲ್ಕತ್ತಾದಲ್ಲಿ ಭಾರಿ ಪ್ರಮಾಣದ ಶಸ್ತ್ರಾಸ್ತ್ರ, ಮದ್ದುಗುಂಡು ವಶ

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಎರಡು ಹಂತದ ಮತದಾನಕ್ಕೆ ಕೆಲವೇ ದಿನಗಳು ಬಾಕಿ ಇರುವಾಗ ಕೋಲ್ಕತ್ತಾ ಪೊಲೀಸ್ ವಿಶೇಷ ಕಾರ್ಯಪಡೆ ಅಧಿಕಾರಿಗಳು ರಾಜಾಬಜಾರ್ ಸೈನ್ಸ್ ಕಾಲೇಜ್ ಸಮೀಪ ಭಾರಿ ಪ್ರಮಾಣದ ಶಸ್ತ್ರಾಸ್ತ್ರ ಹಾಗೂ ಗುಂಡುಗಳನ್ನು ವಶಪಡಿಸಿಕೊಂಡು ಒಬ್ಬನನ್ನು ಬಂಧಿಸಿದ್ದಾರೆ. ಸಂದೇಹಾಸ್ಪದವಾಗಿ ಚೀಲವೊಂದನ್ನು ಹೊತ್ತೊಯ್ಯುತ್ತಿದ್ದ ವ್ಯಕ್ತಿಯನ್ನು ಬಸ್ ನಿಲ್ದಾಣದ ಬಳಿ ತಡೆದ ಎಸ್‌ಟಿಎಫ್ ಅಧಿಕಾರಿಗಳು, ಅವನ ಬಳಿಯಿಂದ ಆರು ಸಿಂಗಲ್ ಬ್ಯಾರಲ್ ಬಂದೂಕು ಮತ್ತು 14 ಕಾಟ್ರಿಡ್ಜ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಶಸ್ತ್ರಾಸ್ತ್ರಗಳನ್ನು ಎಲ್ಲಿಗೆ ಕೊಂಡೊಯ್ಯಲಾಗುತ್ತಿತ್ತು ಮತ್ತು ಯಾರಿಗೆ ನೀಡಲು ಉದ್ದೇಶಿಸಲಾಗಿತ್ತು ಎಂಬುದನ್ನು ಪತ್ತೆಹಚ್ಚಲು ತನಿಖೆ ನಡೆಯುತ್ತಿದೆ. ರಾಜ್ಯದಲ್ಲಿ ಚುನಾವಣೆಯ ಹಿನ್ನೆಲೆ ಪೊಲೀಸರು ವಿವಿಧ ಕಡೆ ರಸ್ತೆ ತಡೆಗೋಡೆಗಳನ್ನು ನಿರ್ಮಿಸಿ ವಾಹನಗಳ ತಪಾಸಣೆ ತೀವ್ರಗೊಳಿಸಿರುವ ಸಂದರ್ಭದಲ್ಲೇ ಈ ಬೆಳವಣಿಗೆ ನಡೆದಿದೆ.

ಚಿರತೆಯಿಂದ ಅತ್ತೆಯ ರಕ್ಷಿಸಿದ ಸೊಸೆಗೆ ರಾಣಿ ಚೆನ್ನಮ್ಮ ಪ್ರಶಸ್ತಿ

ಬೆಂಗಳೂರು: ಮೈಸೂರಿನ ಸಿದ್ಧಾರ್ಥನಗರದ ಮನೆಯೊಂದಕ್ಕೆ ಚಿರತೆ ನುಗ್ಗಿದ ಸಂದರ್ಭ, ಅಸಾಧಾರಣ ಧೈರ್ಯ ಪ್ರದರ್ಶಿಸಿ ತನ್ನ ಅತ್ತೆಯನ್ನು ರಕ್ಷಿಸಿದ ಸೊಸೆಗೆ ಮುಂದಿನ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ನೀಡಿ ಗೌರವಿಸುವುದಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಮಹತ್ವದ ಘೋಷಣೆ ಮಾಡಿದ್ದಾರೆ. ಮೈಸೂರಿನ ಸಿದ್ಧಾರ್ಥನಗರದ ಮನೆಯೊಂದರಲ್ಲಿ ಚಿರತೆ ಮಂಚದಡಿ ಅಡಗಿದ್ದ ವೇಳೆ ಪ್ರಾಣದ ಹಂಗು ತೊರೆದು ವೃದ್ಧ ಅತ್ತೆಯನ್ನು ಸುರಕ್ಷಿತವಾಗಿ ಹೊರಗೆ ಕರೆತಂದ ಸೊಸೆ ಸುಜಾತಾ ಅವರ ಸಾಹಸಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮಿ ಹೆಬ್ಬಾಳಕರ್ ಪ್ರಶಂಸೆ ವ್ಯಕ್ತಪಡಿಸಿದ್ದು, ಮಾತ್ರವಲ್ಲದೇ ಅವರಿಗೆ ಪ್ರಶಸ್ತಿ ನೀಡುವ ಭರವಸೆ ನೀಡಿದ್ದಾರೆ. ಈ ಘಟನೆ ಆಕಸ್ಮಿಕವಾದರೂ, ಮಹಿಳೆಯೊಬ್ಬರ ಅಪ್ರತಿಮ ಧೈರ್ಯ ಮತ್ತು ಅತ್ತೆ-ಸೊಸೆಯ ಪವಿತ್ರ ಬಾಂಧವ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಮನೆಯ ಮಂಚದಡಿ ಚಿರತೆ ಅಡಗಿರುವುದು ತಿಳಿಯುತ್ತಿದ್ದಂತೆಯೇ, ಪ್ರಾಣದ ಹಂಗು ತೊರೆದು ಕೊಠಡಿಗೆ ನುಗ್ಗಿ, ವಯಸ್ಸಾದ ಅತ್ತೆಯನ್ನು ಅಪ್ಪಿಕೊಂಡು ಸುರಕ್ಷಿತವಾಗಿ ಹೊರಗೆ ಕರೆತಂದ ಸುಜಾತಾ ಅವರ ಸಾಹಸ ನಿಜಕ್ಕೂ ರೋಮಾಂಚನಕಾರಿ. ಸಾಕ್ಷಾತ್ ಮೃತ್ಯುವಿನ ದವಡೆಯಿಂದ ಅತ್ತೆಯನ್ನು ರಕ್ಷಿಸಿದ ಅವರ ಸಮಯಪ್ರಜ್ಞೆ ಇಡೀ ಮಹಿಳಾ ಕುಲಕ್ಕೆ ಹೆಮ್ಮೆಯ ವಿಷಯವಾಗಿದೆ ಎಂದು ಲಕ್ಷ್ಮಿ ಹೆಬ್ಬಾಳ್ಕರ್ ಮೆಚ್ಚುಗೆ ಸೂಚಿಸಿದ್ದಾರೆ.

ಕೆಂಬಾವುಟದ ಜಾಗದಲ್ಲೀಗ ಕೇಸರಿ ಬಾವುಟ

ಪಶ್ಚಿಮಬಂಗಾಳದ ನಕ್ಸಲ್ ಪೀಡಿತ ಪ್ರದೇಶದಲ್ಲಿ ಬಿಜೆಪಿ ಪ್ರಾಬಲ್ಯ

ಗ್ರೌಂಡ್ ರಿಪೋರ್ಟ್

ರಾಘವಶರ್ಮ ನಿಡ್ಲೆ

ವಿಶ್ವವಾಣಿ ಬಂಗಾಳ ಚುನಾವಣಾ ಯಾತ್ರೆ

ಬೆಳಗ್ಗೆ 11.30ರ ಸುಮಾರಿಗೆ ಆ ಸರಕಾರಿ ಶಾಲೆ ಪ್ರವೇಶಿಸಿದೆ. ಚುನಾವಣೆ ಕರ್ತವ್ಯದ ಹಿನ್ನೆಲೆಯಲ್ಲಿ ಮುಖ್ಯೋಪಾಧ್ಯಾಯ ಸೇರಿ ಇಬ್ಬರು ಶಿಕ್ಷಕರು ಮಾತ್ರ ಇದ್ದರು. 1ರಿಂದ 5ನೇ ತರಗತಿಯವರೆಗೆ ಓದುತ್ತಿದ್ದ ಮಕ್ಕಳಲ್ಲಿ ಕೆಲವರು ಬಟ್ಟೆ ಮತ್ತು ಪ್ಲಾಸ್ಟಿಕ್‌ಗಳನ್ನು ಕಟ್ಟಿ ತಯಾರು ಮಾಡಿದ್ದ ಚೆಂಡಿನಲ್ಲಿ ಫುಟ್ಬಾಲ್ ಆಡುತ್ತಿದ್ದರು. ಶಾಲೆಯ ಒಳಭಾಗದ ಗೋಡೆಯಿಂದ ಹೊರ ನೋಡಿದಾಗ ಕೆಂಪು ಕ್ರಾಂತಿಕಾರಿಗಳ ಪ್ರತಿಮೆಗಳು ರಸ್ತೆಗೆ ಮುಖ ಮಾಡಿ ನೋಡುತ್ತಿದ್ದ ದೃಶ್ಯ ಕಾಣುತ್ತಿತ್ತು.

ಹೌದು. ಅದು 1967ರಲ್ಲಿ ಭಾರತದಲ್ಲಿ ನಕ್ಸಲ್ ಚಳವಳಿ ಹುಟ್ಟುಹಾಕಿದ್ದ ನಕ್ಸಲ್ ಬಾರಿ ಪಟ್ಟಣದ ಬೆಂಗಾಯ್ ಜೋತ್ ಗ್ರಾಮ. ಗ್ರಾಮದ ಭೂಮಾಲೀಕರ ದಬ್ಬಾಳಿಕೆ ವಿರುದ್ಧ ಸೆಟೆದುನಿಂತು ಕೃಷಿಕರು, ಬಡವರು, ಆದಿವಾಸಿ ಸೇರಿದಂತೆ ಹಿಂದುಳಿದ ವರ್ಗದ ಜನರನ್ನು ಒಗ್ಗೂಡಿಸಿ ವ್ಯವಸ್ಥೆ ವಿರುದ್ಧ ಶಸ್ತ್ರಸಜ್ಜಿತ ನಕ್ಸಲ್ ಚಳವಳಿಗೆ ಕರೆಕೊಟ್ಟ ಚಾರು ಮಜುಂದಾರ್, ಸರೋಜ್ ದತ್ತಾ, ಮಹಾದೇವ ಮುಖರ್ಜಿ ಅವರ 5 ದಶಕದ ಹಿಂದಿನ ನಕ್ಸಲ್ ರಕ್ತಕ್ರಾಂತಿ ಹಾಗೂ ಹೋರಾಟಗಳನ್ನು ಬಿಂಬಿಸುವ ಸಲುವಾಗಿ ಆ ಪ್ರತಿಮೆಗಳನ್ನು ನಿರ್ಮಿಸಲಾಗಿದೆ. ಈ ಮೂವರ ಪ್ರತಿಮೆಗಳೊಂದಿಗೆ ಚೀನಾದ ಮಾವೋತ್ಸೆ ತುಂಗ್, ಲಿಂಪಿಯಾವೋ, ಲೆನಿನ್, ಆಂಗಲ್ಸ್, ಸ್ಟಾಲಿನ್ ಪ್ರತಿಮೆಗಳನ್ನೂ ಕೆತ್ತಲಾಗಿದೆ.

ಹಿಂದೊಮ್ಮೆ ಬಂಗಾಳಕ್ಕೆ ಬಂಗಾಳವನ್ನೇ ನಡುಗಿಸಿದ್ದ ನಕ್ಸಲ್ ಹೋರಾಟ ಇಲ್ಲಿ ಅಂತ್ಯವಾಗಿ ವರ್ಷಗಳೇ ಕಳೆದಿವೆ. ಆದರೆ, ಅಂದಿನ ರಕ್ತಕ್ರಾಂತಿಯ ಕರಾಳ ಅಧ್ಯಾಯವನ್ನು ಇಲ್ಲಿಂದ ಮರೆ ಮಾಚಲು ಸಾಧ್ಯವೇ ಇಲ್ಲ. 1967ರಲ್ಲಿ ನಕ್ಸಲ್ ದಂಗೆ ಎದುರಿಸಲು ಅಂದಿನ ಸರಕಾರ ಪೊಲೀಸ್ ಪಡೆಗಳನ್ನು ಸಜ್ಜುಗೊಳಿಸಲು ಪ್ರಾರಂಭಿಸಿತ್ತು. ಆಗ ಜಾರುಗಾಂವ್ ನಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಒಬ್ಬರನ್ನು ನಕ್ಸಲ್ ನಾಯಕರು ರಚಿಸಿದ್ದ ರೈತ ಸಮಿತಿ ಸದಸ್ಯರು ಹತ್ಯೆ ಮಾಡಿದ್ದರಿಂದ, ಅದಕ್ಕೆ ಪ್ರತೀಕಾರವಾಗಿ, ಪೊಲೀಸರು ಗುಂಡಿನ ದಾಳಿ ಮಾಡಿದ್ದರು. 1967ರ ಮೇ 24ರಂದು ಒಂಬತ್ತು ಮಹಿಳೆಯರೊಂದಿಗೆ ಹಸುಳೆಯೊಂದು ಮೃತಪಟ್ಟಿತು. ಇದು ಇಡೀ ಪ್ರದೇಶದಲ್ಲಿ ಅಲ್ಲೋಲಕಲ್ಲೋಲ ಎಬ್ಬಿಸಿತ್ತು. ಸಾವಿನ ಸಂಖ್ಯೆ ಹೆಚ್ಚಾದ ಸುದ್ದಿಗಳು ಕಾಳ್ಗಿಚ್ಚಿನಂತೆ ಹಬ್ಬಿತು. ನಂತರದ ದಿನಗಳಲ್ಲಿ, ನೆರೆಯ ಪ್ರದೇಶಗಳಾದ ಖಾರಿಬಾರಿ ಮತ್ತು ಫನ್ಸಿದೇವದ ಕೆಲವು ಭೂಮಾಲೀಕರನ್ನು ಹೊಡೆದು ಕೊಲ್ಲಲಾಯಿತು. ಕೆಂಪು ನಾಯಕರ ನೇತೃತ್ವದಲ್ಲಿ ಶುರುವಾದ ವರ್ಗ ಸಂಘರ್ಷ ತಾರಕಕ್ಕೇರಿತ್ತು.

ನಕ್ಸಲ್ ನಾಯಕರನ್ನು ಪೊಲೀಸರು ಬಂಧಿಸಿದರು. 1972ರಲ್ಲಿ ಚಾರು ಮಜುಂದಾರ್ ಜೈಲಿನಲ್ಲೇ ಮೃತಪಟ್ಟರು. ನಕ್ಸಲ್ ಚಳವಳಿಯಲ್ಲಿ ಸಾಥಿಯಾಗಿದ್ದ ಕಾನು ಸನ್ಯಾಲ್, ಬಂಧನದಿಂದ ಬಿಡುಗಡೆಯಾಗಿ ನಂತರ ರಾಜಕೀಯಕ್ಕಿಳಿದರು. ತಮ್ಮ ಹೋರಾಟವನ್ನೂ ಮುಂದುವರಿಸಿದ್ದರು. 2010ರಲ್ಲಿ ಆರೋಗ್ಯ ತೀರಾ ಕ್ಷೀಣಿಸಿದ್ದ ಹಿನ್ನೆಲೆಯಲ್ಲಿ ಸಿಲಿಗುರಿಯಿಂದ 25 ಕಿಮೀ ದೂರವಿದ್ದ ಸೆಫ್ತುಲ್ಲಾಜೋತ್ ಗ್ರಾಮದ ಮನೆಯಲ್ಲಿ ಅವರು ಆತ್ಮಹತ್ಯೆಗೆ ಶರಣಾದರು. ಕಾನು ಸನ್ಯಾಲ್ ಜನಿಸಿದ್ದ ಹಾಥಿಗಿಸಾ ಗ್ರಾಮದ ಮನೆಗೆ ಬೀಗ ಹಾಕಲಾಗಿದ್ದು, ಅದು ತುಕ್ಕು ಹಿಡಿದಿದೆ. 1967ರ ಹೋರಾಟದಲ್ಲಿ ತನ್ನ 15 ದಿನದ ಮಗುವನ್ನು ಬೆನ್ನಿಗೆ ಬಟ್ಟೆಯಲ್ಲಿ ಕಟ್ಟಿಕೊಂಡು ಕಾನು ಸನ್ಯಾಲ್ ಜತೆಗಿದ್ದ ಶಾಂತಿ ಮುಂಡಾ (ಈಗ 85 ವರ್ಷ) ಪಕ್ಕದ ಸಣ್ಣ ಮನೆಯೊಂದರಲ್ಲಿ ಕುಟುಂಬಸ್ಥರೊಂದಿಗೆ ವಾಸಿಸುತ್ತಿದ್ದಾಳೆ.

ಕೆಂಪು ನಾಯಕರ ಪ್ರತಿಮೆಗಳನ್ನು ನೋಡಲು ಇಲ್ಲಿ ಯಾರಾದರೂ ಬರುತ್ತಾರಾ ಎಂದು ಬೆಂಗಾಯ್ ಜೋತ್ ಸರಕಾರಿ ಶಾಲೆಯ ಮುಖ್ಯೋಪಾಧ್ಯಾಯರಲ್ಲಿ ನಾನು ಕೇಳಿದೆ. ಆ ನಾಯಕರ ಜನ್ಮದಿನ ಅಥವಾ ಅವರ ಹೋರಾಟ ಹುಟ್ಟಿದ ದಿನದಂದು ಸಿಪಿಐ(ಎಂಎಲ್) ಪಕ್ಷದ ಮುಖಂಡರು, ಕಾರ್ಯಕರ್ತರು ಇಲ್ಲಿ ಬಂದು ಪ್ರತಿಮೆಗಳಿಗೆ ಹಾರಹಾಕಿ, ನಮಸ್ಕರಿಸಿ ಹೋಗುತ್ತಾರೆ. ಉಳಿದಂತೆ, ಇದನ್ನು ಯಾರೂ ಕೇಳುವವರಿಲ್ಲ ಎಂದು ತಿಳಿಸಿದರು. 1967ರಿಂದ ಆರಂಭಗೊಂಡು ನಕ್ಸಲ್ ಕ್ರಾಂತಿ ಬೆಳೆದ ಬಗೆ, ಯುವಕ-ಯುವತಿಯರನ್ನು ಸೆಳೆದ ರೀತಿ ಹಾಗೂ ವ್ಯವಸ್ಥೆ ವಿರುದ್ಧದ ಶಸ್ತ್ರಸಜ್ಜಿತ ಹೋರಾಟದಿಂದಾಗಿ ಈ ಪ್ರದೇಶ ಕರಾಳ ಇತಿಹಾಸವೊಂದರ ಭಾಗವಾಗಿದೆ. ಚಾರು ಮಜುಂದಾರ್ ಹುಟ್ಟುಹಾಕಿದ ಸಿದ್ಧಾಂತದ ಪ್ರತಿಪಾದಕರು ಈಗಲೂ ಅವರನ್ನು ಪೂಜಿಸುತ್ತಾರೆ.

ಈ ಕೆಂಪು ನಾಯಕರ ಪ್ರತಿಮೆಗಳಿರುವ ಗ್ರಾಮದ ದಾರಿ ತೋರಿಸಿದ್ದು ಪಟ್ಟಣದ ಸ್ವಸ್ತಿಕ್ ಪುಸ್ತಕ ಭಂಡಾರದ ಅಂಗಡಿ ಮಾಲೀಕ ಸೋಮೆಂದ್ರ ಪ್ರಸಾದ್ ಬಸು. ಈ ಪಟ್ಟಣ ಮೊದಲಿಗಿಂತ ಚೆನ್ನಾಗಿದ್ದರೂ, ಇಲ್ಲಿ ಉದ್ಯೋಗದ ಸಮಸ್ಯೆ ಇದೆ. ಉತ್ಕೃಷ್ಟ ದರ್ಜೆಯ ಕಾಲೇಜುಗಳಿಲ್ಲ. ನಕ್ಸಲಿಸಮ್ ಕಮರ್ಷಿಯಲ್ ಹೋರಾಟವಾಗಿ ಬದಲಾದ ಕಾರಣ ದೇಶದಲ್ಲಿ ನೆಲೆ ಕಳೆದುಕೊಂಡಿತು. ಯಾವಾಗಲೋ ಅದನ್ನು ಹತ್ತಿಕ್ಕಬೇಕಿತ್ತು ಎಂದರು ಬಸು.

34 ವರ್ಷಗಳ ಎಡಪಕ್ಷಗಳ ಆಡಳಿತದಿಂದ ಇಲ್ಲಿ ಏನೂ ಆಗಲಿಲ್ಲ. ನನ್ನ ಮಗ ಈಗ ತಮಿಳುನಾಡಿನ ಚೆನ್ನೈನಲ್ಲಿ ಬಿ.ಟೆಕ್ ಓದುತ್ತಿದ್ದಾನೆ. ದಕ್ಷಿಣದ ರಾಜ್ಯಗಳಿಗೆ ಹೋಲಿಸಿದರೆ ಅಭಿವೃದ್ಧಿಯಲ್ಲಿ ತುಂಬಾ ಹಿಂದಿದ್ದೇವೆ. ನಿಮ್ಮಲ್ಲಿ ಹಿಂದೂ-ಮುಸ್ಲಿಂ ಧರ್ಮ ರಾಜಕಾರಣ ಇಲ್ಲ. ನಾನು ಮಮತಾ ಬ್ಯಾನರ್ಜಿ ಅಭಿಮಾನಿ ಅಲ್ಲ. ಎಡಪಕ್ಷಗಳ ಹಿಂಸಾಚಾರದ ರಾಜಕಾರಣವನ್ನು ಅವರೂ ಅನುಸರಿಸುತ್ತಾರೆ. ಆದರೆ, ಬಿಜೆಪಿಯವರ ಜಾತಿ, ಧರ್ಮ ರಾಜಕಾರಣ ದ್ವೇಷಿಸುತ್ತೇನೆ. ಅವರು ಹಿಂದಿ ಸಂಸ್ಕೃತಿ ಹೇರಿ, ಬಂಗಾಳಿ ಸಂಸ್ಕೃತಿಗೆ ಹಾನಿ ಮಾಡುತ್ತಾರೆ ಎಂದು ದೂರಿದರು. ತಮ್ಮ ಪತ್ನಿಗೆ ಲಕ್ಷ್ಮಿ ಭಂಡಾರ್ ಯೋಜನೆ ಅಡಿಯಲ್ಲಿ ರೂ. 1500 ಹಣ ಖಾತೆಗೆ ಜಮೆಯಾದಾರೂ, ರಾಜಕೀಯ ಲಾಭಕ್ಕಾಗಿ ಜಾರಿ ಮಾಡುವ ಎಲ್ಲ ಉಚಿತ ಯೋಜನೆಗಳನ್ನು ಸುಪ್ರೀಂಕೋರ್ಟ್ ರದ್ದು ಮಾಡಿದಾಗಲೇ ಈ ದೇಶಕ್ಕೆ ಒಳ್ಳೆಯದಾಗುತ್ತದೆ ಎಂಬ ಖಚಿತ ನಿಲುವನ್ನು ಅವರು ಹೊರಹಾಕಿದರು.

ನಕ್ಸಲ್ ಬಾರಿ ಬಿಜೆಪಿ ಶಾಸಕ ಆನಂದಮಯ ಬರ್ಮನ್

ನಕ್ಸಲ್ ಬಾರಿ ಮತದಾರರಾದ ಜಗದೀಶ್ ರಾಯ್, ಅಜಯ್ ಗೋರ್ ಮತ್ತು ರಾಜೇಂದ್ರ ರಾಯ್

ಉತ್ತರ ಬಂಗಾಳದಲ್ಲಿ ಚುನಾವಣಾ ಪ್ರವಾಸದುದ್ದಕ್ಕೂ ಲಕ್ಷ್ಮೀರ್ ಭಂಡಾರ್ ಯೋಜನೆ ಬಗ್ಗೆ ಕಿಡಿಕಾರುತ್ತಿದ್ದ ಕಾರು ಚಾಲಕ ಶಂಶೇರ್ ಅಲಿಗೆ ಸೋಮೆಂದ್ರ ಪ್ರಸಾದ್ ಬಸು ಅಭಿಪ್ರಾಯ ಕೇಳಿ ಬಹಳ ಖುಷಿ ಆಗಿತ್ತು. ಅರ್ಹರಿಗೆ ಮಾತ್ರ ನೆರವು ನೀಡಬೇಕು. ಸರಕಾರ ಅನರ್ಹರಿಗೂ ದುಡ್ಡು ಕೊಟ್ಟು ಸಾಕುತ್ತಿರುವುದು ಮೂರ್ಖತನ ಎಂದು ಶಂಶೇರ್ ಹೇಳುತ್ತಲೇ ಇದ್ದ. ಹಾಗಂತ, ಆತನ ಪತ್ನಿ ಮತ್ತು ತಾಯಿಗೆ ರೂ.1500+1500 ಬರುತ್ತಿದೆ. ಆವರಿಬ್ಬರು ನನ್ನ ಮಾತು ಎಲ್ಲಿ ಕೇಳುತ್ತಾರೆ? ಅವರ ವೋಟು ದೀದಿಗೆ. ನನ್ನ ವೋಟು ಈ ಬಾರಿ ಮೋದಿಗೆ ಎಂದು ತಿಳಿಸಿದ.

ನಕ್ಸಲ್ ಬಾರಿಯ ಕೇಸರೀಕರಣದ ಕಥೆ ಆಸಕ್ತಿದಾಯಕವಾಗಿದೆ. ಬಂಗಾಳ ಹೇಗೆ ಎಡಪಕ್ಷಗಳನ್ನು ಕೈಬಿಟ್ಟು ಟಿಎಂಸಿ ಕಡೆ ವಾಲಿತೋ ಅದೇ ರೀತಿ ನಕ್ಸಲ್ ಬಾರಿ ಕೂಡ ತನ್ನನ್ನು ಸೈದ್ಧಾಂತಿಕ ಬದಲಾವಣೆಗೆ ಮುಕ್ತಗೊಳಿಸಿತು. 1977ರಿಂದ 2011ರವರೆಗಿನ ಸಿಪಿಎಂ ಆಡಳಿತದ ನಂತರ ನಕ್ಸಲ್ ಬಾರಿಯಂತಹ ರಾಜಕೀಯ ನಿರ್ವಾತ ಸೃಷ್ಟಿಯಾಗಿದ್ದ ಪ್ರದೇಶವನ್ನು ಟಿಎಂಸಿ ತನ್ನದಾಗಿಸಿಕೊಳ್ಳಲು ಪ್ರಯತ್ನಿಸಿದರೂ, ನಕ್ಸಲ್ ಬಾರಿ ಒಳಗೊಂಡ ಡಾರ್ಜಿಲಿಂಗ್ ಲೋಕಸಭೆಯನ್ನು 2009ರಲ್ಲಿ ಬಿಜೆಪಿ ಗೆದ್ದುಕೊಂಡಿದ್ದರಿಂದ ಇಲ್ಲಿ ತನ್ನ ಅಸ್ತಿತ್ವವನ್ನು ಆರಂಭಿಸಲು ಬಿಜೆಪಿಗೆ ಹೊಸದೊಂದು ಶಕ್ತಿ ಸಿಕ್ಕಿತ್ತು. ದಶಕಗಳ ಕಾಲದ ಎಡಪಕ್ಷಗಳ ಕೇಡರ್ ಆಧಾರಿತ ಪ್ರಾಬಲ್ಯ ದುರ್ಬಲಗೊಂಡಿತು. 2021ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯ ಆನಂದಮಯ್ ಬರ್ಮನ್ ನಕ್ಸಲ್ಬಾರಿ-ಮಟಿಗಾರ ಕ್ಷೇತ್ರದಿಂದ ಗೆದ್ದು ದಾಖಲೆ ನಿರ್ಮಿಸಿದರು.

2011ರಲ್ಲಿ ಕಾಂಗ್ರೆಸ್ ಪಕ್ಷದ ಶಂಕರ್ ಮಲಕರ್ ಸಿಪಿಐಎಂನ ಜರೆನ್ ರಾಯ್ ವಿರುದ್ಧ 6800 ಮತಗಳಿಂದ ಗೆದ್ದಿದ್ದರು. 2016ರಲ್ಲಿ ಮತ್ತೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಶಂಕರ್ ಮಲಕರ್, ಟಿಎಂಸಿ ವಿರುದ್ಧ 18 ಸಾವಿರ ಮತಗಳ ಅಂತರದಲ್ಲಿ ಗೆದ್ದು ಬೀಗಿದರು. 2021ರಲ್ಲಿ ಕಾಂಗ್ರೆಸ್ ನ ಮಲಕರ್ ಮೂರನೇ ಸ್ಥಾನಿಯಾದರೆ, ದ್ವಿತೀಯ ಸ್ಥಾನದಲ್ಲಿದ್ದ ಟಿಎಂಸಿಯ ರಾಜೇನ್ ಸುಂದಸ್ ರನ್ನು ಬಿಜೆಪಿಯ ಆನಂದಮಯ್ ಬರ್ಮನ್ 70 ಸಾವಿರ ವೋಟುಗಳ ಅಂತರದಲ್ಲಿ ಸೋಲಿಸಿದರು. ಕಾಂಗ್ರೆಸ್ ನ ಶಂಕರ್ ಮಲಕರ್ ಈಗ ಟಿಎಂಸಿ ಸೇರಿಕೊಂಡಿದ್ದು, ಅಭ್ಯರ್ಥಿಯಾಗಿ ಬಿಜೆಪಿ ವಿರುದ್ಧ ಕಣದಲ್ಲಿದ್ದಾರೆ.

ಈಗ ನಕ್ಸಲ್ ಬಾರಿಯ ಬಹುತೇಕ ಕಡೆ ಬಿಜೆಪಿ ಪ್ರಾಬಲ್ಯ ಹೊಂದಿದೆ. ನಕ್ಸಲರಿಂದ ಭ್ರಮನಿರಸನಗೊಂಡ ಮತದಾರರ ಆದ್ಯತೆ ಬದಲಾಗಿದೆ. ರಾಮ ನವಮಿಯಂದು ನಕ್ಸಲ್ ಬಾರಿ ಭಾರಿ ಜನಸ್ತೋಮದ ಶೋಭಾಯಾತ್ರೆಗೆ ಸಾಕ್ಷಿಯಾಗಿದೆ. ಇದು ಸೈದ್ಧಾಂತಿಕ ರೂಪಾಂತರಕ್ಕೆ ಸಾಕ್ಷಿ ಎನ್ನುತ್ತಾರೆ ಯುವಕ ಆದಿವಾಸಿ ಯುವಕ ಅಜಯ್ ಗೋರ್. ಇಲ್ಲಿ ಆರೆಸ್ಸೆಸ್ ಕಾರ್ಯಕರ್ತರ ಪರಿಶ್ರಮ, ಅಲ್ಲಲ್ಲಿ ಶಾಖೆಗಳನ್ನು ನಡೆಸಿರುವುದು, ರಾಷ್ಟ್ರೀಯತೆ ಪ್ರತಿಪಾದನೆ, ಬುಡಕಟ್ಟು ಸಮುದಾಯಗಳ ಸಂಪರ್ಕ ಅಭಿಯಾನ ಸೇರಿದಂತೆ ಹಲವು ವರ್ಷಗಳ ಗ್ರೌಂಡ್ ವರ್ಕ್ ಬಿಜೆಪಿ ಪ್ರಾಬಲ್ಯಕ್ಕೆ ಕಾರಣವಾಗಿದೆ.

ನಕ್ಸಲ್ ಬಾರಿ ತನ್ನ ಕ್ರಾಂತಿಕಾರಿತ್ವದಿಂದ ದೂರ ಸರಿದಿದೆ. ವಿಶಾಲವಾಗಿ ಹರಿಯುತ್ತಿರುವ ಮೇಚಿ ನದಿಯಲ್ಲಿ ಸಾಕಷ್ಟು ನೀರು ಹರಿದಿದೆ. ಪ್ರಜಾಸತ್ತಾತ್ಮಕ ಮಾತುಕತೆ ಮತ್ತು ಅಭಿವೃದ್ಧಿ-ಆಧಾರಿತ ರಾಜಕೀಯದ ವಾಸ್ತವಗಳಿಗೆ ನಕ್ಸಲ್ ಬಾರಿ ತೆರೆದುಕೊಂಡಿದೆ. ವರ್ಗ ಸಂಘರ್ಷಗಳಲ್ಲಿ ಭಾಗಿಯಾಗಿದ್ದ ಸಮುದಾಯಗಳು ಚುನಾವಣಾ ಪ್ರಕ್ರಿಯೆಗಳಲ್ಲಿ ಭಾಗವಹಿಸುತ್ತಿವೆ. ಜನರು ತಮ್ಮ ಬದುಕಿನಲ್ಲಿ ಸುಧಾರಣೆಗಳನ್ನು ಕಾಣಬಯಸುತ್ತಿದ್ದಾರೆಯೇ ವಿನಃ ಅಶಾಂತಿ, ತಿಕ್ಕಾಟ, ರಕ್ತಪಾತ ಬೇಕಿಲ್ಲ.

ಕೇಂದ್ರ ಸರಕಾರ ಪ್ರೇರಿತ ಅಭಿವೃದ್ಧಿ, ಜಾಗತಿಕವಾಗಿ ಭಾರತ ಬಲಿಷ್ಠಗೊಂಡಿರುವುದು, ಬಂಗಾಳ ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿರುವುದು, ಕೈಗಾರಿಕೆಗಳ ಕೊರತೆ ಬಗೆಗಿನ ಯುವಕ ಅಜಯ್ ಗೋರ್ ಮಾತುಗಳನ್ನು ಹಿರಿ ವಯಸ್ಸಿನ, ಸೈಕಲ್ ರಿಪೇರಿ ಅಂಗಡಿಯ ಮಾಲೀಕ ರಾಜೇಂದ್ರ ರಾಯ್ ಒಪ್ಪಲಿಲ್ಲ. ವಿದೇಶದಿಂದ ಕಪ್ಪು ಹಣ ತಂದು ನಿಮ್ಮ ಅಕೌಂಟಿಗೆ ಹಾಕುತ್ತೇನೆ ಎಂದವರು ಎಲ್ಲಿ ಹೋದರು ಎಂದು ಅವರು ಪ್ರಶ್ನಿಸಿದರು. ಇವರ ವಾದದ ಮಧ್ಯೆ, ತನ್ನ ನಿಲುವನ್ನು ಖಚಿತಪಡಿಸದ ಜಗದೀಶ್ ರಾಯ್, ''ಮತ ಹಾಕಲು ಕ್ಯೂ ನಿಂತಾಗ ನಿರ್ಧಾರ ಮಾಡುತ್ತೇನೆ. ಜನರು ಕೂಡ ಇನ್ನೂ ತೀರ್ಮಾನ ಮಾಡಿಲ್ಲ. ಸದ್ಯ 50:50 ಫೈಟ್ ಆಗುತ್ತಿದೆ'' ಎಂದು ಮಾತು ಮುಗಿಸಿದರು.

ನಕ್ಸಲ್ ಬಾರಿಯಲ್ಲಿ ಕೆಂಪು ಕ್ರಾಂತಿಕಾರಿಗಳ ಪ್ರತಿಮೆ

ರಕ್ತಪಾತ ಪಟ್ಟಣ ಈಗ ಶಾಂತಿಯ ನೆಲೆ

ನಕ್ಸಲ್ ಬಾರಿ ಈಗ ಬದಲಾವಣೆಗೆ ತೆರೆದುಕೊಂಡು ಹಲವು ವರ್ಷಗಳಾಗಿವೆ. ಬಿಜೆಪಿ-ಟಿಎಂಸಿ ವಿರುದ್ಧದ ವಾಮಪಂಥೀಯರ ಮಾತು-ವಾದ-ಪ್ರತಿಪಾದನೆಗಳು ಜನರ ಮಧ್ಯೆ ಪ್ರಸ್ತುತತೆ ಕಳೆದುಕೊಂಡಿವೆ. ಅವರ ವಿಚಾರಧಾರೆಗಳಿಗೆ ಕಿವಿಯಾಗುವವರನ್ನು ಹುಡುಕುವ ಸ್ಥಿತಿ ಇದೆ. ನಕ್ಸಲ್ ಬಾರಿಯಲ್ಲಿ ಹುಟ್ಟಿ ವಿವಿಧ ರಾಜ್ಯಗಳಿಗೆ ವಿಸ್ತರಣೆಗೊಂಡ ನಕ್ಸಲ್ ವಾದ ಈಗ ಛತ್ತೀಸ್ ಗಢ ಹಾಗೂ ಬಂಗಾಳದ ಒಂದೆರಡು ಭಾಗಗಳಲ್ಲಿ ಬಿಟ್ಟರೆ ಉಳಿದೆಡೆ ಅಂತ್ಯ ಕಂಡಿದೆ. ಕೆಂಪು ಉಗ್ರರನ್ನು ದೇಶಾದ್ಯಂತ ವಿಸ್ತರಿಸಿದ್ದ ಈ 'ರಕ್ತಪಾತದ ಪಟ್ಟಣ' ಈಗ 'ಶಾಂತಿಯ ನೆಲೆ'ಯಾಗಿದೆ. ಎಡಪಂಥೀಯರ 'ಕೆಂಪುಕೋಟೆ'ಯನ್ನು ಕೇಸರಿಪಡೆ ಭೇದಿಸಿದೆ. ಎಲ್ಲೋ ಬೆರಳೆಣಿಕೆ ಅಂಗಡಿ-ಮುಂಗಟ್ಟು ಹಾಗೂ ಮನೆಗಳಲ್ಲಿ ಎಡಪಕ್ಷಗಳ ಕೆಂಪು ಬಾವುಟ ಕಾಣುತ್ತದೆಯೇ ವಿನಃ ಉಳಿದೆಡೆ ಬಿಜೆಪಿ ಮತ್ತು ಟಿಎಂಸಿ ಬಾವುಟಗಳದ್ದೇ ಅರ್ಭಟ.

ಸ್ವಸ್ತಿಕ್ ಪುಸ್ತಕ ಅಂಗಡಿಯ ಸೋಮೇಂದ್ರ ಪ್ರಸಾದ್ ಬಸು

ಜಾಗತಿಕ ತಂತ್ರಜ್ಞಾನ ವಲಯದಲ್ಲಿ 80000 ಉದ್ಯೋಗಗಳ ಕಡಿತ

ದೆಹಲಿ: 2026ರ ಮೊದಲ ನಾಲ್ಕು ತಿಂಗಳಲ್ಲಿ ಜಾಗತಿಕ ತಂತ್ರಜ್ಞಾನ ವಲಯದಲ್ಲಿ ಸುಮಾರು 80,000 ಉದ್ಯೋಗ ಕಡಿತಗಳು ಸಂಭವಿಸಿವೆ ಎಂದು ವರದಿಯಾಗಿದೆ. ಟ್ರೇಡಿಂಗ್ ಪ್ಲಾಟ್‌ಫಾರ್ಮ್‌ನ ವರದಿಯ ಪ್ರಕಾರ ಕೋವಿಡ್ ನಂತರ ಕಂಪನಿಗಳು ನೇಮಕಾತಿ ಸಂಖ್ಯೆಯನ್ನು ಕಡಿತಗೊಳಿಸಿವೆ. ಈಗ ಕಡಿತದ ಭಾಗವಾಗಿ ಉದ್ಯೋಗಿಗಳನ್ನು ವಜಾಗೊಳಿಸುತ್ತಿದೆ ಎಂದು ಹೇಳಿದೆ.

ಈ ವರ್ಷದ ಒಟ್ಟು ಉದ್ಯೋಗ ಕಡಿತದಲ್ಲಿ ಸುಮಾರು ಶೇ.50ರಷ್ಟು ಕೃತಕ ಬುದ್ಧಿಮತ್ತೆ ಮತ್ತು ಆಟೋಮೇಷನ್ ಅಳವಡಿಕೆಯಿಂದಾಗಿ ಸಂಭವಿಸಿದೆ. ಒಟ್ಟು ಜಾಗತಿಕ ಉದ್ಯೋಗ ಕಡಿತದ ಶೇ.77ರಷ್ಟು ಅಮೆರಿಕದಲ್ಲೇ ಸಂಭವಿಸಿದೆ. 62 ಕಂಪನಿಗಳಲ್ಲಿ 61,000 ಕ್ಕೂ ಹೆಚ್ಚು ಉದ್ಯೋಗಿಗಳು ಮನೆಗೆ ಹೋಗಿದ್ದಾರೆ.

ಒರಾಕಲ್ ಕಂಪನಿಯು ಜಾಗತಿಕವಾಗಿ ಅತಿ ಹೆಚ್ಚು ಅಂದರೆ ಸುಮಾರು 25,000ರಿಂದ 30,000 ಉದ್ಯೋಗಗಳನ್ನು ಕಡಿತಗೊಳಿಸಿದೆ. ಇದರಲ್ಲಿ ಭಾರತವೊಂದರಲ್ಲೇ ಸುಮಾರು 10,000ರಿಂದ 12,000 ಉದ್ಯೋಗಿಗಳು ಬಾಧಿತರಾಗಿದ್ದಾರೆ ಎಂದು ವರದಿಗಳು ತಿಳಿಸಿವೆ. ಅಮೇಜಾನ್ ಫೆಬ್ರವರಿ ತಿಂಗಳಿನಲ್ಲಿ ಸುಮಾರು 16,000 ಉದ್ಯೋಗಿಗಳನ್ನು ತೆಗೆದುಹಾಕಿದೆ. ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಗುರು ಟೀಕ್ ಸಮೂಹ ಅಧ್ಯಕ್ಷ ಗಂಗಾಧರ್ ಇನ್ನಿಲ್ಲ

ಬೆಂಗಳೂರು: ಗುರು ಟೀಕ್ ಸಮೂಹ ಸಂಸ್ಥೆಯ ಅಧ್ಯಕ್ಷ ಗಂಗಾಧರ್ (68) ಅವರು ಶನಿವಾರ ಸಂಜೆ ನಗರದಲ್ಲಿನ ಖಾಸಗಿ ನರ್ಸಿಂಗ್ ಹೋಂನಲ್ಲಿ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಒಬ್ಬ ಪುತ್ರ ಮತ್ತು ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಗುರು ಟೀಕ್ ಇನ್ವೆಸ್ಟ್‌ಮೆಂಟ್ ಮೈಸೂರು ಪ್ರೈವೇಟ್ ಲಿಮಿಟೆಡ್ ಸಂಸ್ಥೆಯನ್ನು ಸ್ಥಾಪಿಸಿದ್ದ ಗಂಗಾಧರ್ ಅವರು, ಸೂರ್ಯೋದಯ ಹಾಗೂ ಕರುನಾಡ ಸಂಜೆ ಪತ್ರಿಕೆಗಳನ್ನು ಪ್ರಾರಂಭಿಸಿ ಕೆಲ ವರ್ಷಗಳ ಕಾಲ ಯಶಸ್ವಿಯಾಗಿ ನಡೆಸಿದ್ದರು. ಗಂಗಾಧರ್ ಅವರ ನಿಧನಕ್ಕೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ಸಂತಾಪ ವ್ಯಕ್ತಪಡಿಸಿದೆ. ಅವರ ಅಂತ್ಯಕ್ರಿಯೆ ಭಾನುವಾರ ಹಾಸನ ಜಿಲ್ಲೆ ಅರಕಲಗೂಡು ತಾಲೂಕಿನ ಕಾಳೇನಹಳ್ಳಿಯಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

50 ಅಡಿ ಮೇಲಿನಿಂದ ಬಿದ್ದ ಸೇನಾ ಸಿಬ್ಬಂದಿಗೆ ಗಾಯ

ಬಳ್ಳಾರಿ: ನಗರದ ಹೊರವಲಯದ ಪಿ.ಡಿ.ಹಳ್ಳಿ ಭಾಗದಲ್ಲಿ ಪ್ಯಾರಾಚೂಟ್ ತರಬೇತಿ ವೇಳೆ 50 ಅಡಿ ಮೇಲಿನಿಂದ ಬಿದ್ದು ಸೇನಾ ಕರ್ನಲ್‌ಗೆ ಗಾಯವಾಗಿದ್ದು, ಕೂಡಲೇ ಅವರನ್ನು ಬೆಂಗಳೂರಿಗೆ ಏರ್‌ಲಿಫ್ಟ್ ಮಾಡಲಾಗಿದೆ. ಪಿ.ಡಿ.ಹಳ್ಳಿ ಭಾಗದಲ್ಲಿ ಹಲವು ವರ್ಷಗಳಿಂದಲೂ ಸೇನಾ ಸಿಬ್ಬಂದಿಗೆ ಪ್ಯಾರಾಚೂಟ್ ತರಬೇತಿ ನಡೆಯುತ್ತಿದೆ. ಶುಕ್ರವಾರ ಬೆಳಗ್ಗೆ 417 ಸೈನಿಕರು ಪ್ಯಾರಾಚೂಟ್ ಧರಿಸಿ ಆಗಸದಿಂದ ಜಿಗಿದಿದ್ದರು. ಈ ವೇಳೆ ಚಿನ್ನರಾಜ್ (25) ಎಂಬುವವರು ನೆಲಕ್ಕೆ ಬಿದ್ದಿದ್ದು, ಅವರ ಕಾಲಿನ ಮೂಳೆ ಮುರಿದಿದೆ. ಕೂಡಲೇ ಅವರನ್ನು ಬಳ್ಳಾರಿಯ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ಸೈನಿಕ ತರಬೇತಿ ಆಸ್ಪತ್ರೆಗೆ ಸಾಗಿಸಲು ನಿರ್ಧರಿಸಲಾಯಿತು. ಬಳ್ಳಾರಿಯ ಐಟಿಐ ಕಾಲೇಜು ಮೈದಾನಕ್ಕೆ ಬಂದಿಳಿದ ಸೇನಾ ಹೆಲಿಕಾಪ್ಟರ್ ಮೂಲಕ ಚಿನ್ನರಾಜ್ ಅವರನ್ನು ಬೆಂಗಳೂರಿಗೆ ಕರೆದೊಯ್ಯಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಒಂದೇ ದಿನದಲ್ಲಿ ಆದೇಶ ಬದಲಿಸಿದ ಅಲಹಾಬಾದ್ ಹೈ ಪೀಠ

ದ್ವಿಪೌರತ್ವ ಕೇಸಿಗೆ ಹೈಕೋರ್ಟ್ ತಡೆ: ರಾಹುಲ್‌ಗೆ ರಿಲೀಫ್

ಲಖನೌ: ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ದ್ವಿಪೌರತ್ವ ಹೊಂದಿದಾರೆ ಎಂಬ ಆರೋಪಕ್ಕೆ ಸಂಬಂಧಿಸಿದ ಎಫ್‌ಐಆರ್ ದಾಖಲಿಸುವಂತೆ ಶುಕ್ರವಾರ ತಾನೇ ನೀಡಿದ್ದ ಆದೇಶವನ್ನು ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠ ಶನಿವಾರ ತಡೆಹಿಡಿದಿದೆ.

ರಾಹುಲ್ ಗಾಂಧಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ಬಿಜೆಪಿ ಕಾರ್ಯಕರ್ತ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ಅಲಹಾಬಾದ್ ಹೈಕೋರ್ಟ್, ಎಫ್‌ಐಆರ್ ದಾಖಲಿಸುವಂತೆ ಆದೇಶಿಸಿತ್ತು. ಆದರೆ ಶನಿವಾರ ಅಂತಿಮ ಆದೇಶವನ್ನು ಹೈಕೋರ್ಟ್ ತಡೆ ಹಿಡಿದಿದೆ.

ನ್ಯಾಯಮೂರ್ತಿ ಸುಭಾಷ್ ವಿದ್ಯಾರ್ಥಿ ಅವರನ್ನು ಒಳಗೊಂಡ ಹೈಕೋರ್ಟ್ ಪೀಠ, ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ನಿರ್ದೇಶಿಸಿತ್ತು. ಟೈಪ್ ಮಾಡಿ ಸಹಿ ಮಾಡುವ ಮೊದಲು ಪೀಠ ಈ ಆದೇಶವನ್ನು ತಡೆ ಹಿಡಿದಿದೆ.

ಶನಿವಾರ ಅಪ್‌ಲೋಡ್ ಮಾಡಲಾದ ತನ್ನ ಏಪ್ರಿಲ್ 17ರ ಆದೇಶದಲ್ಲಿ, ಸಂಭಾವ್ಯ ಆರೋಪಿಗೆ ವಿಚಾರಣೆಗೆ ಅವಕಾಶ ನೀಡದ ಹೊರತು ಅರ್ಜಿಯ ಕುರಿತು ಆದೇಶ ನೀಡುವುದಿಲ್ಲ. ಆರೋಪಿಗೆ ನೋಟಿಸ್ ನೀಡದೆ, ಎಫ್‌ಐಆರ್ ದಾಖಲಿಸುವುದು ತಪ್ಪಾಗುತ್ತದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಎರಡು ಪುಟಗಳ ಆದೇಶದ ಪ್ರಕಾರ, ಜಗನ್ನಾಥ್ ವರ್ಮಾ ಮತ್ತು ಇತರರು ವರ್ಸಸ್ ಯುಪಿ ಸರ್ಕಾರ ಹಾಗೂ ಇತರರು ಪ್ರಕರಣದಲ್ಲಿ ಅಲಹಾಬಾದ್ ಹೈಕೋರ್ಟ್‌ನ 2014 ರ ಪೂರ್ಣ ಪೀಠದ ತೀರ್ಪನ್ನು ನೋಡಿದ ನಂತರ ಪೀಠವು ತೀರ್ಪನ್ನು ತಡೆಹಿಡಿಯಲು ನಿರ್ಧರಿಸಿತು.

ರಾಹುಲ್ ಗಾಂಧಿಗೆ ನೋಟಿಸ್ ನೀಡದೆ ಈ ಅರ್ಜಿಯನ್ನು ನಿರ್ಧರಿಸಬಾರದು ಎಂದು ಗಮನಿಸಿದ ನ್ಯಾಯಾಲಯವು, ಏಪ್ರಿಲ್ 20ಕ್ಕೆ ಅರ್ಜಿಯ ವಿಚಾರಣೆಯನ್ನು ಮುಂದೂಡಿದೆ.

ಕರ್ನಾಟಕ ಮೂಲದ ಬಿಜೆಪಿ ಕಾರ್ಯಕರ್ತ ಎಸ್. ವಿಘ್ನೇಶ್ ಶಿಶಿರ್ ಅವರು ರಾಹುಲ್ ಗಾಂಧಿ ದ್ವಿಪೌರತ್ವ ಹೊಂದಿದ್ದಾರೆಂದು ಆರೋಪಿಸಿ ಅರ್ಜಿ ಸಲ್ಲಿಸಿದ್ದರು. ಈ ಮೊದಲು ಜನವರಿ 28 ರಂದು ಲಖೌನ ವಿಶೇಷ ನ್ಯಾಯಾಲಯವು ರಾಹುಲ್ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿದ್ದ ವಿಘ್ನೇಶ್ ಅವರ ಅರ್ಜಿಯನ್ನು ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಜನಗಣತಿಗೆ ಗೈರಾದ ಸಿಬ್ಬಂದಿ ವಿರುದ್ಧ ಕ್ರಮ

ಬೆಂಗಳೂರು: ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯಲಿರುವ ಭಾರತದ ರಾಷ್ಟ್ರೀಯ ಜನಗಣತಿ-2027 ಕಾರ್ಯದ ಅಂಗವಾಗಿ ಗಣತಿದಾರರು ಮತ್ತು ಮೇಲ್ವಿಚಾರಕರಾಗಿ ನೇಮಕ ಗೊಂ ಡಿರುವ ಎಲ್ಲಾ ಅಧಿಕಾರಿ ಮತ್ತು ನೌಕರರು ಗಳು ಈ ಕೂಡಲೇ ತಮಗೆ ನಿಯೋಜಿಸಿ ರುವ ಗಣತಿ ಬ್ಲಾಕ್ ಹಾಗೂ ಮೇಲ್ವಿಚಾರಕರ ಸರ್ಕಲ್ ಗಳಲ್ಲಿ ಕಡ್ಡಾಯ ವಾಗಿ ಕೆಲಸಕ್ಕೆ ಹಾಜರಾಗಿ ಕರ್ತವ್ಯ ನಿರ್ವಹಿಸುವಂತೆ ಪ್ರಧಾನ ಜನಗಣತಿ ಅಧಿಕಾರಿ ಹಾಗೂ ಕೇಂದ್ರ ನಗರ ಪಾಲಿಕೆ ಆಯುಕ್ತರಾದ ರಾಜೇಂದ್ರ ಚೋಳನ್ ಸೂಚಿಸಿದ್ದಾರೆ.

ನಿಯೋಜಿಸಲಾದ ಗಣತಿದಾರರು ಹಾಗೂ ಮೇಲ್ವಿಚಾರಕರುಗಳಿಗೆ ಅಂತಿಮ ಕರೆ:

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ 4068 ಗಣತಿದಾರರನ್ನು ಮತ್ತು 518 ಮೇಲ್ವಿಚಾರಕರನ್ನು ರಾಷ್ಟ್ರೀಯ ಜನಗಣತಿ 2027ರ ಕಾರ್ಯಕ್ಕೆ ಈಗಾಗಲೇ ನಿಯೋ ಜಿಸಿ ಆದೇಶವನ್ನು ನೀಡಲಾಗಿರುತ್ತದೆ. ನಿಯೋಜಿತ ಎಲ್ಲಾ ಅಧಿಕಾರಿ ಮತ್ತು ನೌಕರರಿಗೆ ತರಬೇತಿಯನ್ನು ನೀಡಲಾಗಿ ರುತ್ತದೆ. ತರಬೇತಿಗೆ ಗೈರು ಹಾಜರಾಗಿರುವ ಅಧಿಕಾರಿ ಮತ್ತು ನೌಕರರಿಗೆ ಈಗಾಗಲೇ ಕಾರಣ ಕೇಳಿ ಪತ್ರ ಜಾರಿಗೊಳಿಸಲಾಗಿರುತ್ತದೆ. ತರಬೇತಿಗೆ ಗೈರುಹಾಜರಾಗಿ ರುವ ಹಾಗೂ ತರಬೇತಿಗೆ ಹಾಜರಾಗಿ ನೇಮಿಸಲಾದ ಸ್ಥಳಕ್ಕೆ ಕರ್ತವ್ಯಕ್ಕೆ ಗೈರು ಹಾಜರಾಗಿರುವ ಗಣತಿದಾರರು ಮತ್ತು ಮೇಲ್ವಿಚಾರಕರು ಕೂಡಲೇ ನೇಮಿಸಿದ ವಾರ್ಡ್ ವ್ಯಾಪ್ತಿಯಲ್ಲಿ ಕರ್ತವ್ಯಕ್ಕೆ ಹಾಜರಾಗಲು ತಿಳಿಸಲಾಗಿದೆ.

ಶಾಸಕ ವಿನಯ್ ಕುಲಕರ್ಣಿ ಕೈದಿ ನಂಬರ್ 16110

ಬೆಂಗಳೂರು: ಧಾರವಾಡ ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ದೋಷಿಯಾಗಿ ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಶಾಸಕ ವಿನಯ್ ಕುಲಕರ್ಣಿಗೆ 16110 ಎಂಬ ಸಂಖ್ಯೆಯ ಕೈದಿ ನಂಬರ್ ನೀಡ ಲಾಗಿದೆ. ಪರಪ್ಪನ ಅಗ್ರಹಾರ ಜೈಲಿನಲ್ಲಿ ಸಂಖ್ಯೆಯ ಗುರುತು ನೀಡಲಾಗಿದೆ.

ನ್ಯಾಯಾಲಯದ ತೀರ್ಪು ಹೊರಬಿದ್ದ ಬಳಿಕ ಪೊಲೀಸರು ವಿನಯ್ ಕುಲಕರ್ಣಿ ಮತ್ತು ಇತರ ಅಪರಾಧಿಗಳನ್ನು ಬಿಗಿ ಭದ್ರತೆಯಲ್ಲಿ ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕರೆದೊಯ್ದರು. ಜೈಲಿನ ನಿಯಮಾವಳಿಗಳ ಪ್ರಕಾರ ಅವರ ವೈದ್ಯಕೀಯ ತಪಾಸಣೆ ನಡೆಸಿ, ಬಳಿಕ ಜೈಲಿನ ದಾಖಲೆ ಪುಸ್ತಕದಲ್ಲಿ ಅವರ ಹೆಸರನ್ನು ನಮೂದಿಸಲಾಯಿತು. ಈ ವೇಳೆ ವಿನಯ್ ಕುಲಕರ್ಣಿ ಅವರಿಗೆ 16110 ಎಂಬ ಸಜಾ ಕೈದಿ ಸಂಖ್ಯೆಯನ್ನು ನೀಡಲಾಯಿತು. ಇತರೆ ಅಪರಾಧಿಗಳಿಗೂ ಕೈದಿ ನಂಬರ್ ನೀಡಲಾಗಿದೆ. ಜನರ ಮಧ್ಯೆ ಇರುತ್ತಿದ್ದ ನಾಯಕನಿಗೆ ಈಗ ಬಿಳಿ ಬಣ್ಣದ ಕೈದಿ ವಸ್ತ್ರವನ್ನು ನೀಡಲಾಗಿದೆ. ಅಧಿಕಾರದ ದರ್ಪದ ಬಟ್ಟೆಗಳನ್ನು ಕಳಚಿಟ್ಟು, ಸಾಮಾನ್ಯ ಕೈದಿಯಂತೆ ಬಿಳಿ ವಸ್ತ್ರ ಧರಿಸಿದಾಗ ಅವರ ಮುಖ ಮಂಕಾಗಿತ್ತು ಎಂದು ಮೂಲಗಳು ಹೇಳಿವೆ.

ಜೈಲಿನ ಮೂಲಗಳ ಪ್ರಕಾರ, ವಿನಯ್ ಕುಲಕರ್ಣಿ ಪರಪ್ಪನ ಅಗ್ರಹಾರಕ್ಕೆ ಬಂದ ಮೊದಲ ದಿನವೇ ಕುಗ್ಗಿಹೋಗಿದ್ದರು. ಜೈಲಿನ ಕೋಣೆ ಹಾಗೂ ಅಲ್ಲಿನ ವಾತಾವರಣ ಅವರಿಗೆ ಜೀರ್ಣಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬುದು ಅವರ ನಡವಳಿಕೆಯಿಂದ ಸ್ಪಷ್ಟವಾಗುತ್ತಿತ್ತು.

ಜೈಲಿನ ಮೆನುವಿನಂತೆ ನೀಡಲಾದ ರಾಗಿಮುದ್ದೆ ಮತ್ತು ಅನ್ನ-ಸಾರನ್ನು ಅವರು ಮೌನವಾಗಿಯೇ ಸ್ವೀಕರಿಸಿದರು. ಹೆಚ್ಚಿನ ಆಹಾರ ಸೇವಿಸಲು ಅವರು ಮನಸ್ಸು ಮಾಡಲಿಲ್ಲ ಎಂದು ತಿಳಿದುಬಂದಿದೆ. ಐಷಾರಾಮಿ ಜೀವನ ನಡೆಸುತ್ತಿದ್ದ ವಿನಯ್ ಕುಲಕರ್ಣಿ ಅವರಿಗೆ ಜೈಲಿನಲ್ಲಿ ಮಲಗುವುದು ಅತೀವ ಕಷ್ಟಕರವಾಗಿತ್ತು. ತಡರಾತ್ರಿಯವರೆಗೂ ನಿದ್ದೆ ಬಾರದೆ ಅವರು ಚಿಂತಾಕ್ರಾಂತರಾಗಿದ್ದರು.

ತನ್ನ ರಾಜಕೀಯ ಜೀವನ ಮತ್ತು ಭವಿಷ್ಯದ ಬಗ್ಗೆ ಯೋಚಿಸುತ್ತಾ ಕಂಬಿಗಳ ಹಿಂದೆ ಮಂಕಾಗಿ ಕುಳಿತಿದ್ದರು. ಯಾರೊಂದಿಗೂ ಹೆಚ್ಚು ಮಾತನಾಡದೆ, ಒಬ್ಬರೇ ಕುಳಿತ ದೃಶ್ಯ ಜೈಲಿನ ಸಿಬ್ಬಂದಿಯ ಗಮನಕ್ಕೆ ಬಂದಿವೆ.

ಮೊದಲ ಬಾರಿಗೆ ಕಾರ್ಯಾಚರಣೆಗೆ ಶ್ವಾನದಳ ಬಳಕೆ

ನರಹಂತಕ ಕಾಡಾನೆ ಸೆರೆ

ಹಾಸನ: ಬೇಲೂರು ತಾಲೂಕಿನ ಕಾನಳ್ಳಿ ಅರಣ್ಯ ಪ್ರದೇಶದಲ್ಲಿದ್ದ ದೈತ್ಯಾಕಾರದ ನರಹಂತಕ ಕಾಡಾನೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಸೆರೆಹಿಡಿದಿದ್ದಾರೆ. ಇದೇ ಮೊದಲ ಬಾರಿಗೆ ಶ್ವಾನದಳವನ್ನು ಬಳಸಿ ಕಾಡಾನೆ ಇರುವ ಜಾಗವನ್ನು ಪತ್ತೆಹಚ್ಚಲಾಯಿತು.

ಶನಿವಾರ ಮೂರನೇ ದಿನದ ಕಾರ್ಯಾಚರಣೆ ಆರಂಭಿಸಿದ್ದ ಇಟಿಎಫ್ ಸಿಬ್ಬಂದಿ ಮುಂಜಾನೆಯೇ ಕಾಡಾನೆ ಇರುವ ಸ್ಥಳವನ್ನು ಪತ್ತೆ ಮಾಡಿದ್ದರು. ದೈತ್ಯಾಕಾರದ ಕಾಡಾನೆ ಜತೆ ಕ್ಯಾಪ್ಟನ್ ಕಾಡಾನೆ ಸಹ ಇತ್ತು. ಈ ವೇಳೆ ಕುಮ್ಕಿ ಆನೆಗಳೊಂದಿಗೆ ತೆರಳಿ ನರಹಂತಕ ಕಾಡಾನೆಗೆ ಅರವಳಿಕೆ ಚುಚ್ಚುಮದ್ದು ನೀಡಲಾಯಿತು. ಚುಚ್ಚುಮದ್ದು ನೀಡುತ್ತಿದ್ದಂತೆ ನರಹಂತಕ ಒಂಟಿಕೋರೆ ಕಾಡಾನೆ ಹಾಗೂ ಕ್ಯಾಪ್ಟನ್ ಕಾಡಾನೆ ಜತೆಯಲ್ಲಿಯೇ ಓಡಲಾರಂಭಿಸಿದ್ದವು. ಬೆನ್ನಟ್ಟಿದ ಕಾರ್ಯಾಚರಣೆ ತಂಡ ಎರಡು ಕಾಡಾನೆಗಳನ್ನು ಬೇರ್ಪಡಿಸಿತು. ಸ್ವಲ್ಪ ದೂರು ಓಡಿ ಪ್ರಜ್ಞೆತಪ್ಪಿ ಬಿದ್ದ ಕಾಡಾನೆಯನ್ನು, ಕುಮ್ಕಿ ಆನೆಗಳು ಸುತ್ತುವರಿದವು. ಬಳಿಕ ಕಾಡಾನೆಗೆ ನೀರು ಹಾಕಿ ಆರೈಕೆ ಮಾಡಿ ಹಗ್ಗದಲ್ಲಿ ಕಟ್ಟಲಾಯಿತು. ನರಹಂತಕ ಕಾಡಾನೆ ಸೆರೆಯಿಂದ ಬೇಲೂರು ಭಾಗದ ಜನರು ನಿಟ್ಟುಸಿರು ಬಿಟ್ಟಿದ್ದಾರೆ.

ಬೇಲೂರು ತಾಲೂಕಿನ ಕಾನಳ್ಳಿ ಅರಣ್ಯ ಪ್ರದೇಶದಲ್ಲಿದ್ದ ದೈತ್ಯಾಕಾರದ ನರಹಂತಕ ಕಾಡಾನೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಸೆರೆಹಿಡಿದರು.

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಪಂಜಾಬ್	5	4	0	9
ಬೆಂಗಳೂರು	6	4	2	8
ರಾಜಸ್ಥಾನ್	5	4	1	8
ಹೈದರಾಬಾದ್	6	3	3	6
ಡೆಲ್ಲಿ	5	3	2	6
ಗುಜರಾತ್	5	3	2	6
ಚೆನ್ನೈ	6	2	4	4
ಲಖನೌ	5	2	3	4
ಮುಂಬೈ	5	1	4	2
ಕೋಲ್ಕತಾ	6	0	5	1

ಸಮಾಚಾರ ಸಣ್ಣದಲ್ಲ

ಟಿ20 ನಾಯಕ ಸ್ಥಾನಕ್ಕೆ ಅಯ್ಯರ್-ರಜತ್ ಸ್ಪರ್ಧೆ

ಮುಂಬೈ: ಕಳೆದ ಒಂದು ವರ್ಷದಿಂದ ಕಳಪೆ ಫಾರ್ಮ್‌ನಲ್ಲಿರುವ ಸೂರ್ಯ ಕುಮಾರ್ ಅವರನ್ನು ಟಿ20 ಅಂತಾರಾಷ್ಟ್ರೀಯ ತಂಡದ ನಾಯಕತ್ವದಿಂದ ಕೆಳಗಿಳಿಸುವ ಪ್ರಸ್ತಾವಗಳ ನಡುವೆ, ಉತ್ತರಾಧಿಕಾರಿ ಸ್ಥಾನಕ್ಕೆ ಶ್ರೇಯಸ್ ಅಯ್ಯರ್ ಮತ್ತು ರಜತ್ ಪಾಟೀದಾರ್ ಹೆಸರು ಕೇಳಿ ಬರುತ್ತಿದೆ. ಐಪಿಎಲ್ ಟೂರ್ನಿಯಲ್ಲಿ ಪಂಜಾಬ್ ತಂಡದ ನಾಯಕ ಸ್ಥಾನ ವಹಿಸಿರುವ ಶ್ರೇಯಸ್ ಅಯ್ಯರ್ ಸದ್ಯ ಅದ್ಭುತ ಫಾಮ್‌ನಲ್ಲಿದ್ದು, ತಂಡವು ಯಾವುದೇ ಪಂದ್ಯ ಸೋಲದೆ ಅಗ್ರಸ್ಥಾನದಲ್ಲಿದೆ. ಮುಂಬೈ ಮೂಲದ ಶ್ರೇಯಸ್ ನಾಯಕನ ಸ್ಥಾನಕ್ಕೆ ಮುಂಚೂಣಿ ಯಲ್ಲಿದ್ದು, ಜಿಂಬಾಬ್ವೆ, ಐರ್ಲೆಂಡ್ ಮತ್ತು ಇಂಗ್ಲೆಂಡ್ ವಿರುದ್ಧದ ಮುಂದಿನ ಟಿ20 ಸರಣಿಗೆ ಅವರ ಆಯ್ಕೆ ಖಚಿತ ಎನ್ನಲಾಗುತ್ತಿದೆ.ಕಳೆದ ಒಂದು ವರ್ಷದಲ್ಲಿ ಎಲ್ಲಾ ಸ್ವರೂಪಗಳನ್ನು ಸೇರಿಸಿ ಅಯ್ಯರ್ ಕೇವಲ ಆರು ಪಂದ್ಯಗಳಲ್ಲಿ ಮಾತ್ರ ಆಡಿದ್ದರೂ, ಬಿಸಿಸಿಐ ಇತ್ತೀಚಿನ ಕೇಂದ್ರ ಒಪ್ಪಂದ ಪಟ್ಟಿಯಲ್ಲಿ ಅವರನ್ನು ಗ್ರೇಡ್ ಬಿ ವಿಭಾಗದಲ್ಲಿ ಸೇರಿಸಿಕೊಂಡಿದೆ. ಆರ್‌ಸಿಬಿ ನಾಯಕ ರಜತ್ ಪಾಟೀದಾರ್ ಕೂಡ ನಾಯಕನ ಸ್ಥಾನದ ರೇಸ್‌ನಲ್ಲಿದ್ದಾರೆ. ಪಾಟೀದಾರ್ ನೇತೃತ್ವದ ತಂಡವೂ ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದೆ.

ಪಾಕ್ ಟೆಸ್ಟ್ ತಂಡಕ್ಕೆ ಸರ್ಫರಾಜ್ ಕೋಚ್

ಇಸ್ಲಾಮಾಬಾದ್: ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಮುಂದಿನ ತಿಂಗಳು ನಡೆಯಲಿರುವ ಬಾಂಗ್ಲಾದೇಶ ವಿರುದ್ಧದ ಎರಡು ಪಂದ್ಯಗಳ ಟೆಸ್ಟ್ ಸರಣಿಗಾಗಿ ಮಾಜಿ ನಾಯಕ ಸರ್ಫರಾಜ್ ಅಹ್ಮದ್ ಅವರನ್ನು ಮುಖ್ಯ ಕೋಚ್ ಆಗಿ ನೇಮಕ ಮಾಡಿದೆ. ಶಾನ್ ಮಸೂದ್ ತಂಡದ ನಾಯಕರಾಗಿ ಮುಂದುವರಿಯಲಿದ್ದಾರೆ. 2017 ರಲ್ಲಿ ಪಾಕಿಸ್ತಾನಕ್ಕೆ ಚಾಂಪಿಯನ್ಸ್ ಟ್ರೋಫಿ ಗೆದ್ದು ಕೊಟ್ಟಿದ್ದ ಸರ್ಫರಾಜ್, ಇತ್ತೀಚೆಗಷ್ಟೇ ಅಂತ ರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು.

ತಂಡದ ಆಯ್ಕೆ: ಈ ಸರಣಿಗಾಗಿ 16 ಸದಸ್ಯರ ತಂಡವನ್ನು ಪ್ರಕಟಿಸಲಾ ಗಿದ್ದು, ಇದರಲ್ಲಿ ನಾಲ್ವರು ಹೊಸ ಆಟಗಾರರಿಗೆ ಅವಕಾಶ ನೀಡಲಾಗಿದೆ.

ತವರಿನಲ್ಲಿ ಆರ್‌ಸಿಬಿಗೆ ಸೋಲುಣಿಸಿದ ಕನ್ನಡಿಗ

ರಾಹುಲ್‌ಗೆ ಗೆಲುವಿನ ಗಿಫ್ಟ್

ಕ್ಯಾಪಿಟಲ್ಸ್ ತಂಡದ ಕೀಪರ್ ಜನುಮದಿನಕ್ಕೆ ಸ್ಟಬ್ಸ್, ಮಿಲ್ಲರ್ ಕೊಡುಗೆ

ಬೆಂಗಳೂರು: ಪಂದ್ಯ ಗೆಲ್ಲಲು ಕೇವಲ ಆರು ಎಸೆತಗಳಲ್ಲಿ 15 ರನ್ ಬೇಕು... ಕ್ರೀಸ್‌ನಲ್ಲಿರು ವುದು ಡೆಲ್ಲಿ ತಂಡದ ಮಿಲ್ಲರ್ ಹಾಗೂ ಸ್ಟಬ್ಸ್. ಆ ಕಟ್ಟಕಡೆಯ ಓವರ್ ಜವಾಬ್ದಾರಿ ಹೊತ್ತಿದ್ದು ಆರ್‌ಸಿಬಿಯ ಶೆಫರ್ಡ್. ಮೊದಲ ಎಸೆತದಲ್ಲಿ ಲೆಗ್‌ಬೈನಲ್ಲಿ 1 ರನ್.. ಡೆಲ್ಲಿ ಪಾಲಿಗೆ ಹೋಯಿತು. ಎರಡನೇ ಎಸೆತದಲ್ಲಿಯೂ ಒಂದು ರನ್. ಮೂರನೇ ಎಸೆತ... ಬ್ಯಾಟಿಂಗ್ ಗೆ ನಿಂತಿದ್ದು ಮಿಲ್ಲರ್. ಹೊಡೆದಿದ್ದು ಸಿಕ್ಸರ್. ನಾಲ್ಕನೇ ಎಸೆತವೂ ಸಿಕ್ಸರ್! ಅಲ್ಲಿಗೆ ಆರ್‌ಸಿಬಿ ಕೊಟ್ಟಿದ್ದ 175 ರನ್‌ಗಳಿಗೆ ಸಮನಾಂತರ ಸ್ಕೋರ್ ಆಯಿತು. ಆಗ, ಗೆಲುವಿಗೆ ಬೇಕಿತ್ತು ಕೇವಲ 2 ಎಸೆತದಲ್ಲಿ ಗೆಲ್ಲಲು ಬೇಕಿದ್ದು ಒಂದೇ ರನ್... ಕಡೆಯ ಎಸೆತ ಬೌಂಡರಿ... ಡೆಲ್ಲಿಗೆ ಜಯದ ಸಂಭ್ರಮ.

ಇದು ಶನಿವಾರದಂದು ಬೆಂಗಳೂರಿನ ಚಿನ್ನ ಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಾಗೂ ಡೆಲ್ಲಿ ಕ್ಯಾಪಿಟಲ್ಸ್ (ಡಿಸಿ) ತಂಡಗಳ ನಡುವಿನ ಐಪಿಎಲ್ ಪಂದ್ಯದ ಕ್ಲೈಮ್ಯಾಕ್ಸ್ ಚಿತ್ರಣ! ಆರ್‌ಸಿಬಿ ನೀಡಿದ್ದ 176 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಡೆಲ್ಲಿ ಪಡೆಯು, ಒಂದು ಹಂತದಲ್ಲಿ ಕೇವಲ 87 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿ ದ್ದಾಗ ಆಸರೆಯಾದ ಮಧ್ಯಮ ಕ್ರಮಾಂಕದ ಟ್ರೈಸನ್ ಸ್ಟಬ್ಸ್ ಹಾಗೂ ಡೇವಿಡ್ ಮಿಲ್ಲರ್, ತಮ್ಮ ಮಿಂಚಿನ ಬ್ಯಾಟಿಂಗ್‌ನಿಂದ ತಂಡದ ಗೆಲುವಿನ ಕನಸನ್ನು ನನಸು ಮಾಡಿದರು.

ಕಾಕತಾಳೀಯವಾಗಿ ಏ. 18ರಂದು ಡೆಲ್ಲಿ ತಂಡದ ವಿಕೆಟ್ ಕೀಪರ್, ಕನ್ನಡಿಗ ಕೆಎಲ್ ರಾಹುಲ್ ಅವರ 34ನೇ ಹುಟ್ಟುಹಬ್ಬ. ಅವರ ತವರಿನ ಅಂಗಳದಲ್ಲೇ ಡೆಲ್ಲಿ ತಂಡಕ್ಕೆ ಸಂದ ಈ ಜಯ ಸಂದರ್ಭೋಚಿತ ಉಡುಗೊರೆ ಯಂತಿತ್ತು. 176 ರನ್‌ಗಳ ಗುರಿಯನ್ನು ಬೆನ್ನ ಟ್ಟಿದ ಡೆಲ್ಲಿ ತಂಡಕ್ಕೆ ಆರಂಭದಲ್ಲೇ ಆಘಾತ ನೀಡಿದ ಆರ್‌ಸಿಬಿಯ ಭುವನೇಶ್ವರ್,

ಕೆಎಲ್ ರಾಹುಲ್

ಆರ್‌ಸಿಬಿ ಆಧರಿಸಿದ ಸಾಲ್ಟ್

ಟಾಸ್ ಗೆದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ಅಕ್ಷರ್ ಪಟೇಲ್, ಆರ್‌ಸಿಬಿ ತಂಡವನ್ನು ಮೊದಲು ಬ್ಯಾಟಿಂಗ್‌ಗೆ ಇಳಿಸಿದರು. ಆರಂಭಿಕರಾದ ಸಾಲ್ಟ್ ಹಾಗೂ ಕೊಹ್ಲಿ ಉತ್ತಮ ಆರಂಭವನ್ನು ನೀಡಿದರು. ಮೊದಲ ವಿಕೆಟ್‌ಗೆ ಅರ್ಧಶತಕದ ಜೊತೆಯಾಟ ನೀಡುವಷ್ಟರಲ್ಲಿ ಕೊಹ್ಲಿ ಬೇಗನೇ ನಿರ್ಗಮಿಸಿದರು. ಆನಂತರ ಕ್ರೀಸ್‌ಗೆ ಕಾಲಿಟ್ಟಿದ್ದು ದೇವದತ್ ಪಡಿಕ್ಕಲ್. ಅವರ ಜೊತೆಗೂಡಿ ಸಾಲ್ಟ್ ಅವರು ಮತ್ತೊಂದು ಅರ್ಧಶತಕದ ಜೊತೆಯಾಟ ನೀಡುವಷ್ಟರಲ್ಲಿ ಪಡಿಕ್ಕಲ್ ಅವರು ವಿಕೆಟ್ ಚೆಲ್ಲಿ ಹೊರನಡೆದರು. ಅವರ ಬೆನ್ನಲ್ಲೇ ಸಾಲ್ಟ್ ಕೂಡ ನಿರ್ಗಮಿಸಿದರು. ಆರಂಭದಿಂದಲೂ ಬಿರುಸಿನ ಆಟಕ್ಕೆ ಮುಂದಾಗಿ, 38 ಎಸೆತಗಳಲ್ಲಿ 4 ಸಿಕ್ಸರ್ 3 ಬೌಂಡರಿ ಸೇರಿದಂತೆ 63 ರನ್‌ಗಳನ್ನು ಬಾರಿಸಿದ್ದ ಅವರ ಆಟವನ್ನು ಇನಿಂಗ್ಸ್‌ನ 11ನೇ ಓವರ್‌ನಲ್ಲಿ ಕುಲ್ದೀಪ್ ನಾಯರ್ ಕಟ್ಟಿಹಾಕಿದರು. ಆಗ, ಕ್ರೀಸ್‌ನಲ್ಲಿ ಜೊತೆಯಾಗಿದ್ದು ನಾಯಕ ರಜತ್ ಪಾಟಿದಾರ್ ಹಾಗೂ ಟಿಮ್ ಡೇವಿಡ್. ಆದರೆ, ರಜತ್ ಪಾಟೀದಾರ್ ಅವರು ಹೆಚ್ಚು ಆಡಲಿಲ್ಲ. ಆ ಸಂದರ್ಭದಲ್ಲಿ ಟಿಮ್ ಡೇವಿಡ್ ಅವರಿಗೆ ಜೊತೆಯಾದ ಜಿತೇಶ್ ಶರ್ಮಾ ಕೂಡ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ರೊಮಾರಿಯೊ ಶೆಫರ್ಡ್ ಕೂಡ ಹೀಗೆ ಬಂದು ಹಾಗೆ ಹೋದರು. ಕ್ರುನಾಲ್ ಪಾಂಡ್ಯ, ರಸಿಖ್ ಸಲಾಂ ಕೂಡ ಹೊಡೆಯುವ ಛಾತಿ ತೋರಲಿಲ್ಲ. ಕಟ್ಟಕಡೆಗೆ ರಸಿಖ್ ಹಾಗೂ ಭುವನೇಶ್ವರ್ ಕುಮಾರ್ ಅವರು ಔಟಾಗದೇ ಉಳಿದರು. ಹೀಗೆ, ಮಧ್ಯಮ ಕ್ರಮಾಂಕದ ಕುಸಿತದಿಂದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, 20 ಓವರ್‌ಗಳಲ್ಲಿ ಕೇವಲ 175 ರನ್ ಮಾತ್ರ ಗಳಿಸಿತು.

ಆರಂಭಿಕರಾದ ಪಥುಂ ನಿಸ್ಸಾಂಕಾ ಅವರನ್ನು ಬೇಗನೇ ಪೆವಿಲಿಯನ್‌ಗೆ ಅಟ್ಟಿ ದರು. ಆನಂತರ, ಕರುಣ್ ನಾಯರ್, ಸಮೀರ್ ರಿಜ್ವಿಯವರನ್ನು ಹೊರಹಾಕಿದರು. ಅಷ್ಟರ ಲ್ಲಾಗಲೇ ಕೇವಲ 18 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿದ್ದ ಡೆಲ್ಲಿಯ ಪರವಾಗಿ ಕ್ರೀಸ್‌ಗೆ ಇಳಿದ ನಾಯಕ ಅಕ್ಷರ್ ಪಟೇಲ್, ರಿಟೈರ್ಡ್ ಹರ್ಟ್ ಆಗಿ ಹೊರನಡೆದರು. ಅಲ್ಲಿಗೆ, ಡೆಲ್ಲಿ ತಂಡ ಕೇವಲ 87 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡ ಡೆಲ್ಲಿ ಸಂಕಷ್ಟದಲ್ಲಿತ್ತು.

ಆಗ ಜೊತೆಯಾದ ತ್ರಿಸ್ಟನ್ ಸ್ಟಬ್ಸ್ (ಅಜೇಯ 60) ತಮ್ಮ ಬಿರುಸಿನ ಆಟಕ್ಕೆ ಮುಂದಾದರು. ಅವರಿಗೆ ಕ್ರೀಸ್‌ನಲ್ಲಿ ಸೂಕ್ತ ಬೆಂಬಲವಾಗಿ ನಿಂತ ಡೇವಿಡ್ ಮಿಲ್ಲರ್ (ಅಜೇಯ 22) ಭರ್ಜರಿ ಆಟವಾಡಿ ತಂಡ ವನ್ನು ಗೆಲುವಿನ ದಡ ಮುಟ್ಟಿಸಿದರು. ಅದ ರಲ್ಲೂ ವಿಶೇಷವಾಗಿ, ತಂಡಕ್ಕೆ ಕಡೆಯ ಓವರ್ ನಲ್ಲಿ ಗೆಲ್ಲಲು 15 ರನ್ ಬೇಕಿದ್ದಾಗ ಎರಡು ಸಿಕ್ಸರ್ ಎತ್ತಿ ತಂಡಕ್ಕೆ ಅನಾಯಾಸ ವಾಗಿ ಜಯ ತಂದುಕೊಟ್ಟರು.

ರಾಹುಲ್ ಅರ್ಧಶತಕ: ತಂಡದ ಗೆಲುವಿನಲ್ಲಿ ಬರ್ತ್‌ಡೇ ಬಾಯ್ ಕೆಎಲ್ ರಾಹುಲ್ ಅವರ ಆಕರ್ಷಕ ಅರ್ಧಶತಕವನ್ನು ಮರೆ ಯುವ ಹಾಗಿಲ್ಲ. ಆರಂಭಿಕರಾಗಿ ಕಣಕ್ಕಿಳಿ ದಿದ್ದ ಅವರು 34 ಎಸೆತಗಳಲ್ಲಿ 6 ಬೌಂಡರಿ 2 ಸಿಕ್ಸರ್ ಸಹಿತ 57 ರನ್ ಗಳಿಸಿದ್ದಾರೆ.

ಆರ್‌ಸಿಬಿ ದಾಖಲೆ: ಶನಿವಾರದಂದು ಡೆಲ್ಲಿ ವಿರುದ್ಧ ಆಡುವ ಮೂಲಕ ಆರ್‌ಸಿಬಿ ಹೊಸ ದಾಖಲೆಯೊಂದನ್ನು ಬರೆಯಿತು. ತನ್ನ ತವರಿನಲ್ಲಿ 100 ಪಂದ್ಯಗಳನ್ನಾಡಿದ ಮೊದಲ ಐಪಿಎಲ್ ತಂಡ ಎಂಬ ಹೆಗ್ಗಳಿಕೆಗೆ ಪಾತ್ರ ವಾಯಿತು. ಸ್ವಾರಸ್ಯವೇನೆಂದರೆ, 19 ವರ್ಷ ಗಳ ಹಿಂದೆ ಇದೇ ದಿನ (ಏ. 18, 2008), ಇದೇ ಕ್ರೀಡಾಂಗಣದಲ್ಲಿ ಚೊಚ್ಚಲ ಐಪಿಎಲ್ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಕೆಕೆಆರ್ ವಿರುದ್ಧ ಆರ್‌ಸಿಬಿ ಸೋತಿತ್ತು.

ಸ್ಕೋರ್ ಬೋರ್ಡ್

ಆರ್‌ಸಿಬಿ 175/8 — 20 ಓವರ್

ಆಟಗಾರ	ಔಟ್	ರನ್	ಎಸೆತ	4s	6s
ಫಿಲ್ ಸಾಲ್ಟ್	ಸಿ ಸ್ಟಬ್ಸ್ ಬಿ ಕುಲ್ದೀಪ್	63	38	4	3
ವಿರಾಟ್ ಕೊಹ್ಲಿ	ಸಿ ನಿಸ್ಸಾಂಕ ಬಿ ಎನ್ಗಿಡಿ	19	26	3	0
ಪಡಿಕ್ಕಲ್	ಸಿ ಮಿಲ್ಲರ್ ಬಿ ಪಟೇಲ್	18	13	1	1
ಪಾಟೀದಾರ್	ಸಿ ರಾಹುಲ್ ಬಿ ಮುಕೇಶ್	8	4	0	1
ಟಿಮ್ ಡೇವಿಡ್	ಸಿ ನಟರಾಜನ್ ಬಿ ಪಟೇಲ್	26	17	3	1
ಜಿತೇಶ್ ಶರ್ಮಾ	ಸಿ ಮಿಲ್ಲರ್ ಬಿ ಎನ್ಗಿಡಿ	14	20	1	0
ಶಫರ್ಡ್	ಎಲ್‌ಬಿ ಬಿ ಕುಲ್ದೀಪ್	1	4	0	0
ಕ್ರುನಾಲ್	ರನೌಟ್ (ರಾಹುಲ್/ಎನ್ಗಿಡಿ)	12	10	0	1
ರಸಿಖ್ ಸಲಾಂ	ಅಜೇಯ	0	0	0	0
ಭುವನೇಶ್ವರ್	ಅಜೇಯ	3	2	0	0

ವಿಕೆಟ್ ಪತನ: 11-52, 2-99, 3-105, 4-131, 5-146, 6-149, 7-172, 8-172

ಬೌಲಿಂಗ್

ಅಕಿಬ್ ನಬಿ	3	0	36	0
ಮುಕೇಶ್ ಕುಮಾರ್	4	0	32	1
ಲುಂಗಿ	4	0	39	2
ಕುಲ್ದೀಪ್ ಯಾದವ್	4	0	32	2
ಟಿ ನಟರಾಜನ್	2	0	16	0
ಅಕ್ಷರ್ ಪಟೇಲ್	3	0	18	2

ಡೆಲ್ಲಿ 179/4 — 19.5 ಓವರ್

ಆಟಗಾರ	ಔಟ್	ರನ್	ಎಸೆತ	4s	6s
ನಿಸ್ಸಾಂಕಾ	ಎಲ್‌ಬಿ ಭುವನೇಶ್ವರ್	1	3	0	0
ಕೆಎಲ್ ರಾಹುಲ್	ಸಿ ಕೊಹ್ಲಿ ಬಿ ಪಾಂಡ್ಯ	57	34	6	2
ಕರುಣ್ ನಾಯರ್	ಸಿ ಸಾಲ್ಟ್ ಬಿ ಭುವನೇಶ್ವರ್	5	5	1	0
ತ್ರಿಸ್ಟನ್ ಸ್ಟಬ್ಸ್	ಅಜೇಯ	60	47	4	1
ಅಕ್ಷರ್ ಪಟೇಲ್	ರಿಟೈರ್ಡ್ ಹರ್ಟ್	26	19	3	0
ಮಿಲ್ಲರ್	ಅಜೇಯ	22	10	1	2

ವಿಕೆಟ್ ಪತನ: 1-2, 2-16, 3-18, 4-87, 4-134

ಬೌಲಿಂಗ್

ಭುವನೇಶ್ವರ್ ಕುಮಾರ್	4	0	26	3
ಜೋಶ್ ಹ್ಯಾಜೆಲ್‌ವುಡ್	4	0	38	0
ರಸಿಖ್ ಸಲಾಂ	4	0	40	0
ಕ್ರುನಾಲ್ ಪಾಂಡ್ಯ	4	0	24	1
ಸುಯಾಶ್ ಶರ್ಮಾ	3	0	31	0
ಶೆಫರ್ಡ್	0.5	0	17	0

ಪಂದ್ಯಶ್ರೇಷ್ಠ: ತ್ರಿಸ್ಟನ್ ಸ್ಟಬ್ಸ್

ತವರಿನಲ್ಲಿ ಸೂಪರ್ ಕಿಂಗ್ಸ್ ಮಣಿಸಿದ ಸನ್‌ರೈಸರ್ಸ್

ಹೈದರಾಬಾದ್: ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಕರಾರುವಾಕ್ ಪ್ರದರ್ಶನ ನೀಡುವ ಮೂಲಕ ಸನ್‌ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ತಂಡ, ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ವಿರುದ್ಧ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ 10 ರನ್‌ಗಳಿಂದ ಜಯ ಸಾಧಿ ಸಿತು. ಇಲ್ಲಿನ ಚೆಪಾಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ್ದ ಸನ್‌ರೈಸರ್ಸ್ ತಂಡ, ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 194 ರನ್ ಗಳಿಸಿತ್ತು. ಈ ಮೊತ್ತವನ್ನು ಬೆನ್ನಟ್ಟಿದ ಚೆನ್ನೈ ಪಡೆ, 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 184 ರನ್ ಮಾತ್ರ ಗಳಿಸಲಷ್ಟೇ ಶಕ್ತವಾಯಿತು.

ಟಾಸ್ ಗೆದ್ದಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡ, ಮೊದಲು ಆತಿಥೇಯ ತಂಡವನ್ನು ಬ್ಯಾಟಿಂಗ್‌ಗೆ ಇಳಿಸಿತು. ಅದರಂತೆ, ಕ್ರೀಸಿಗಿಳಿದ ಹೈದರಾಬಾದ್ ಪಡೆಗೆ ಆರಂಭಿಕರಾದ ಅಭಿಷೇಕ್ ಶರ್ಮಾ (59), ಟ್ರಾವಿಸ್ ಹೆಡ್ (23) ಉತ್ತಮ ಆರಂಭ ನೀಡಿದರು. ಆದರೆ, ಮಧ್ಯಮ ಕ್ರಮಾಂಕ ದಲ್ಲಿ ಹೆನ್ರಿಚ್ ಕ್ಲಾಸೆನ್ ಬಿಟ್ಟರೆ ಮಿಕ್ಕ ವರ್ಯಾರೂ ಆಡಲಿಲ್ಲ. ಚೆನ್ನೈ ವೇಗಿಗಳಾದ ಜ್ಯಾಮಿ, ಅಂಶುಲ್, ಮುಕೇಶ್ ಅವರುಗಳು ಮಧ್ಯಮ ಕ್ರಮಾಂಕ ಕುಸಿಯುವಂತೆ ಮಾಡಿದರೂ ಹೆನ್ರಿಚ್‌ರವರ (59) ವೀರೋಚಿತ ಆಟ, ತಂಡದ ಮೊತ್ತವನ್ನು 190ರ ಗಡಿ ದಾಟಿಸಲು ನೆರವಾಯಿತು. ಆನಂತರ ಬ್ಯಾಟಿಂಗ್‌ಗೆ ಇಳಿದ ಚೆನ್ನೈ ಆರಂಭಿಕರಾದ ಸಂಜು ಸ್ಯಾಮ್ಸನ್, ಋತುರಾಜ್ ಅವರನ್ನು ಬೇಗನೆ ಕಳೆದುಕೊಂಡರೂ, ಮಧ್ಯಮ ಕ್ರಮಾಂಕದ ಆಯುಷ್ (30), ಮ್ಯಾಥ್ಯೂ (34), (25) ಹಾಗೂ ಶಿವಂ ದುಬೆ (21) ಅವರ ಪ್ರಯತ್ನದ ಹೊರತಾಗಿಯೂ ಚೆನ್ನೈ ಗೆಲುವಿನ ಗುರಿ ಮುಟ್ಟಲಿಲ್ಲ.

ಸಂಕ್ಷಿಪ್ತ ಸ್ಕೋರ್: ಸನ್‌ರೈಸರ್ಸ್ ಹೈದರಾಬಾದ್ 20 ಓವರ್‌ಗಳಲ್ಲಿ 9ಕ್ಕೆ 194 (ಅಭಿಷೇಕ್ 59, ಹೆನ್ರಿಚ್ 59; ಜ್ಯಾಮಿ 37ಕ್ಕೆ 3, ಅಂಶುಲ್ 22ಕ್ಕೆ 3);

ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 8ಕ್ಕೆ 184 (ಮ್ಯಾಥ್ಯೂ 34, ಸರ್ಫರಾಜ್ 25; ಇಶಾನ್ 29ಕ್ಕೆ 3, ಅಂಶುಲ್ 22ಕ್ಕೆ 3, ನಿತೀಶ್ ಕುಮಾರ್ 31ಕ್ಕೆ 2).

ರಶೀದ್‌ಗೆ ಗಂಡು ಮಗು



ಕಾಬೂಲ್: ಅಫ್ಘಾನಿಸ್ತಾನದ ಸ್ಟಾರ್ ಕ್ರಿಕೆಟಿಗ ರಶೀದ್‌ಖಾನ್ ಅವರು ಶನಿವಾರ ತಮ್ಮ ಜೀವನದ ಅತ್ಯಂತ ಸಂಭ್ರಮದ ಕ್ಷಣವನ್ನು ಹಂಚಿಕೊಂಡಿದ್ದು, ತಮಗೆ ಗಂಡು ಮಗು ಜನಿಸಿರುವುದಾಗಿ ಪ್ರಕಟಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ತಮ್ಮ ನವಜಾತ ಶಿಶುವಿನ ಮೊದಲ ನೋಟದ ಚಿತ್ರವನ್ನು ಹಂಚಿಕೊಂಡಿರುವ ಅವರು, ಮಗನಿಗೆ 'ಅಸ್ಲಾನ್‌ಖಾನ್' ಎಂದು ಹೆಸರಿಟ್ಟಿರುವುದಾಗಿ ತಿಳಿಸಿದ್ದಾರೆ. ರಶೀದ್ ಹಂಚಿಕೊಂಡಿರುವ ಭಾವನಾತ್ಮಕ ಫೋಟೋದಲ್ಲಿ ಮಗುವಿನ ಪರಿಚಯವಿರುವ ಪುಟ್ಟ ಮರದ ಫಲಕವಿದೆ.

ಗೆಲುವಿನ ಹಾದಿಗೆ ಮರಳಲು ರಾಜಸ್ಥಾನ ತಯಾರಿ

ಈಡನ್ ಗಾರ್ಡನ್ ಮೈದಾನದಲ್ಲಿ ಕೆಕೆಆರ್ ವಿರುದ್ಧ ಸೆಣಸು

ಕೋಲ್ಕತಾ: ಆರಂಭದಿಂದಲೂ ಆರ್ಭಟಿಸಿ ಸತತವಾಗಿ ಗೆಲ್ಲುತ್ತ ಕಳೆದ ಪಂದ್ಯದಲ್ಲಿ ಸೋಲು ಕಾಣುವ ಮೂಲಕ ಗಾಯಗೊಂಡ ಹುಲಿಯಂತಾ ಗಿರುವ ರಾಜಸ್ಥಾನ ರಾಯಲ್ಸ್ (ಆರ್.ಆರ್), ಏ. 19ರಂದು ನಡೆಯಲಿರುವ ತನ್ನ ಮುಂದಿನ ಪಂದ್ಯದಲ್ಲಿ ಕೆಕೆಆರ್ ತಂಡವನ್ನು ಎದುರಿಸಲು ಸಜ್ಜಾಗಿದೆ. ಐಪಿಎಲ್ ಅಂಕಪಟ್ಟಿಯ ಪ್ರಕಾರ ಹಾಲಿ ಟೂರ್ನಿಯಲ್ಲಿ ರಾಜಸ್ಥಾನ ತಂಡ, ಐದು ಪಂದ್ಯಗಳನ್ನಾಡಿದ್ದು ನಾಲ್ಕು ಪಂದ್ಯಗಳಲ್ಲಿ ಗೆಲುವು ಕಂಡಿದೆ. ತನ್ನ ಕಳೆದ ಪಂದ್ಯದಲ್ಲಿ ಸನ್‌ರೈಸರ್ಸ್ ತಂಡದ ವಿರುದ್ಧ ಸೋಲು ಕಂಡಿದೆ. ಹಾಗಾಗಿ, ಮತ್ತೆ ಗೆಲುವಿನ ಟ್ರ್ಯಾಕ್‌ಗೆ ಮರಳಲು ಕೋಲ್ಕತಾ ತಂಡದ ವಿರುದ್ಧ ಅದು ಗೆಲ್ಲಲೇಬೇಕಿದೆ.

ರಿಯಾನ್ ಪರಾಗ್ ನೇತೃತ್ವದ ರಾಜಸ್ಥಾನ ರಾಯಲ್ಸ್ ತಂಡದಲ್ಲಿ ಸೂರ್ಯವಂಶಿ, ಧ್ರುವ್ ಜುರೆಲ್ ಅದ್ಭುತ ಫಾರ್ಮ್‌ಲ್ಲಿದ್ದಾರೆ. ಯಶಸ್ವಿ ಜೈಸ್ವಾಲ್ ಕೂಡಾ ತಂಡದ ಬಲವಾಗಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಚಾಹಲ್ ಅವರಂತಹ ಬೌಲರ್‌ಗಳು ಎದುರಾಳಿಗಳಿಗೆ ಸವಾಲಾಗಲಿದ್ದಾರೆ. ಈ ಬಾರಿಯ ಸೀಸನ್‌ನಲ್ಲಿ ಕೆಕೆಆರ್ ತಂಡವು ಅತ್ಯಂತ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದೆ. ತಂಡವು ಆಡಿರುವ 6 ಪಂದ್ಯಗಳಲ್ಲಿ ಒಂದೂ ಗೆದ್ದಿಲ್ಲ. ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನಕ್ಕೆ ಕುಸಿದಿದೆ. ಹೀಗಾಗಿ, ಟೂರ್ನಿಯಲ್ಲಿ ಜೀವಂತವಾಗಿರಲು ಕೆಕೆಆರ್ ತಂಡಕ್ಕೆ ಈ ಪಂದ್ಯದಲ್ಲಿ ಗೆಲುವು ಅನಿವಾರ್ಯವಾಗಿದೆ.

VS ಕೆಕೆಆರ್ ರಾಜಸ್ಥಾನ | ಮುಖಾಮುಖಿ 29 | ರಾಜಸ್ಥಾನ ಗೆಲುವು 13 | ಕೆಕೆಆರ್ ಗೆಲುವು 16

ಬ್ಯಾಟಿಂಗ್ ಮತ್ತು ಬೌಲಿಂಗ್ ಸಾಮರ್ಥ್ಯ: ಕೆಕೆಆರ್ ತಂಡದ ಪರವಾಗಿ ಈ ಸೀಸನ್‌ನಲ್ಲಿ ಯುವ ಆಟಗಾರ ರಘುವಂಶಿ ಭರವಸೆಯ ಆಟಗಾರನಾಗಿ ಹೊರಹೊಮ್ಮಿದ್ದಾರೆ. ಅ ಇವರೊಂದಿಗೆ ಆಲ್-ರೌಂಡರ್ ಕ್ಯಾಮರೂನ್ ಗ್ರೀನ್ ಮೇಲೆ ಹೆಚ್ಚಿನ ನಿರೀಕ್ಷೆಯಿದೆ. ಆದರೆ, ತಂಡದ ಇತರ ಹಿರಿಯ ಆಟಗಾರರ ವೈಫಲ್ಯ ಕೆಕೆಆರ್ ತಂಡವನ್ನು ಚಿಂತೆಗೀಡು ಮಾಡಿದೆ.

ಪಂದ್ಯದ ಸಮಯ: ಮಧ್ಯಾಹ್ನ 3.30
ಸ್ಥಳ: ಈಡನ್ ಗಾರ್ಡನ್ (ಕೋಲ್ಕತಾ)

ಇನ್ನೊಂದು ಸೋಲು ಕೆಕೆಆರ್ ತಂಡವನ್ನು ಟೂರ್ನಿಯಿಂದ ಹೊರಹಾಕಲಿದೆ. ಭಾನುವಾರದ ಪಂದ್ಯಕ್ಕೆ ಬೌಲರ್ ಮಥೀಷ ಪತಿರಾನ ಲಭ್ಯವಿರುವುದಿಲ್ಲ. ಈಗಾಗಲೇ ಸತತ ಸೋಲಿನಿಂದ ಕಂಗೆಟ್ಟಿರುವ ತಂಡಕ್ಕೆ ಈ ಪಂದ್ಯದಲ್ಲಾದರೂ ಒಂದು ಗೆಲುವು ಸಿಕ್ಕರೆ ಆಟಗಾರರಲ್ಲಿ ಹೊಸ ಉತ್ಸಾಹ ತುಂಬಬಲ್ಲದು.

ಉಡ್ತಾ ಪಂಜಾಬ್ ಕಟ್ಟಿ ಹಾಕುವುದೇ ಲಖನೌ?

ಚಂಡೀಗಢ: ಈ ಬಾರಿಯ ಐಪಿಎಲ್‌ನಲ್ಲಿ ಅಂಕ ಪಟ್ಟಿಯ ಅಗ್ರಸ್ಥಾನಿ ಪಂಜಾಬ್ ಕಿಂಗ್ಸ್ ತಂಡವು ತನ್ನ ಬ್ಯಾಟಿಂಗ್ ಬಲದೊಂದಿಗೆ, ತನ್ನದೇ ತವರಿನಲ್ಲಿ ಮತ್ತೊಂದು ಗೆಲುವನ್ನು ಸಾಧಿಸಲು ಸಜ್ಜಾಗಿದೆ. ಭಾನುವಾರ (ಏ. 19) ಚಂಡೀಗಡದಲ್ಲಿ ನಡೆಯಲಿರುವ ಪಂದ್ಯದಲ್ಲಿ ಅದು ದುರ್ಬಲ ಲಖನೌ ಪಡೆಯನ್ನು ಎದುರಿಸಲಿದೆ.

ಪಂಜಾಬ್ ತಂಡವು ಈ ಋತುವಿನಲ್ಲಿ ಸೋಲಿಲ್ಲದ ಏಕೈಕ ತಂಡವಾಗಿ ಹೊರಹೊಮ್ಮಿದ್ದು, ಆಡಿದ ಐದು ಪಂದ್ಯಗಳಲ್ಲಿ ನಾಲ್ಕರಲ್ಲಿ ಜಯಗಳಿಸಿದೆ (ಒಂದು ಪಂದ್ಯ ಮಳೆಯಿಂದಾಗಿ ರದ್ದಾಗಿದೆ). ಶ್ರೇಯಸ್ ಅಯ್ಯರ್ ನೇತೃತ್ವದ ಈ ತಂಡವು 1.067ರ ಅತ್ಯುತ್ತಮ ನೆಟ್ ರನ್ ರೇಟ್ ಹೊಂದಿದ್ದು, ಚೇಸಿಂಗ್ ಸಮಯದಲ್ಲಿ ತೋರುತ್ತಿರುವ ಲೆಕ್ಕಾಚಾರದ ಬ್ಯಾಟಿಂಗ್ ಪ್ರದರ್ಶನವೇ ಇದಕ್ಕೆ ಮುಖ್ಯ ಕಾರಣವಾಗಿದೆ. 2025ರ ಆವೃತ್ತಿಯಿಂದೀಚೆಗೆ ಪಂಜಾಬ್ ಕಿಂಗ್ಸ್ ಚೇಸಿಂಗ್ ಮಾಡುವಾಗ ಆಡಿದ 11 ಪಂದ್ಯಗಳಲ್ಲಿ 9 ಪಂದ್ಯಗಳನ್ನು ಗೆದ್ದಿದ್ದು, ತನ್ನ ಪ್ರಾಬಲ್ಯವನ್ನು ಮೆರೆದಿದೆ. ಇತ್ತೀಚೆಗೆ ಮುಂಬೈ ಇಂಡಿಯನ್ಸ್ ವಿರುದ್ಧದ ಗೆಲುವಿನಲ್ಲೂ ಇದು ಸಾಬೀತಾಗಿದೆ.

ಮತ್ತೊಂದೆಡೆ, ಲಖನೌ ಸೂಪರ್ ಜೈಂಟ್ಸ್

ಪಂದ್ಯದ ಸಮಯ: ರಾತ್ರಿ 7.30
ಸ್ಥಳ: ಚಂಡೀಗಡ

ತಂಡವು ಸಂಕಷ್ಟದಲ್ಲಿದ್ದು, ಅಂಕಪಟ್ಟಿಯಲ್ಲಿ ಏಳನೇ ಸ್ಥಾನಕ್ಕೆ ಕುಸಿದಿದೆ. ಸತತ ಸೋಲುಗಳಿಂದ ಕಂಗೆಟ್ಟಿರುವ ತಂಡಕ್ಕೆ ನಾಯಕ ರಿಷಬ್ ಪಂತ್ ಅವರ ಗಾಯದ ಸಮಸ್ಯೆ ಮತ್ತಷ್ಟು ತಲೆನೋವು ತಂದಿದೆ. ಕಳೆದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧದ ಮೊಣಕೈ ಗಾಯಕ್ಕೆ ತುತ್ತಾಗಿದ್ದ ಪಂತ್, ಮೂರು ಎಸೆತಗಳನ್ನು ಎದುರಿಸಿದ ನಂತರ ನಿವೃತ್ತರಾಗಿ ಹೊರನಡೆದಿದ್ದರು. ಬಳಿಕ ಬ್ಯಾಂಡೇಜ್ ಹಾಕಿಕೊಂಡು ಮೈದಾನಕ್ಕೆ ಮರಳಿದರೂ ಕೇವಲ 1 ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ಭಾನುವಾರದ ಪಂದ್ಯಕ್ಕೆ ಅವರ ಲಭ್ಯತೆ

VS ಪಂಜಾಬ್ ಲಖನೌ | ಮುಖಾಮುಖಿ 6 | ಪಂಜಾಬ್ ಗೆಲುವು 3 | ಲಖನೌ ಗೆಲುವು 3

ಇನ್ನೂ ಅನಿಶ್ಚಿತವಾಗಿದೆ. ಲಖನೌ ತಂಡವು ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ಮುಕುಲ್ ಚೌಧರಿ ಮತ್ತು ಆಯುಷ್ ಬದೋನಿಯವರ ಹೋರಾಟದ ಹೊರತಾಗಿಯೂ ಕೇವಲ 146 ರನ್ ಗಳಿಸಲಷ್ಟೇ ಶಕ್ತವಾಗಿತ್ತು.

ಪಂಜಾಬ್‌ನಲ್ಲಿ ಈ ಇಬ್ಬರು ಪ್ರಬಲ: ಈ ಆವೃತ್ತಿಯಲ್ಲಿ ಲಖನೌ ತಂಡವು ಈವರೆಗಿನ ಯಾವುದೇ ಪಂದ್ಯದಲ್ಲೂ 200 ರನ್‌ಗಳ ಗಡಿಯನ್ನು ದಾಟಿಲ್ಲ. ಆದರೆ ಪಂಜಾಬ್ ಈಗಾಗಲೇ ಎರಡು ಬಾರಿ ಈ ಸಾಧನೆ ಮಾಡಿದೆ. ಪಂಜಾಬ್ ಆರಂಭಿಕ ಆಟಗಾರ ಪ್ರಭ್‌ಸಿಮ್ರನ್ ಸಿಂಗ್ ಮತ್ತು ನಾಯಕ ಶ್ರೇಯಸ್ ಅಯ್ಯರ್ ಅದ್ಭುತ ಫಾರ್ಮ್‌ನಲ್ಲಿದ್ದು, ಕ್ರಮವಾಗಿ 172.95 ಮತ್ತು 187.96 ರ ಸ್ಟ್ರೈಕ್ ರೇಟ್ ಅಡಿಯಲ್ಲಿ ರನ್ ಗಳಿಸಿದ್ದಾರೆ. ಪ್ರಿಯಾಂಶ್ ಆರ್ಯ ಮತ್ತು ಕೂಪರ್ ಕೊನೊಲಿ ಕೂಡ ತಂಡದ ಬ್ಯಾಟಿಂಗ್ ಶಕ್ತಿಗೆ ಬಲ ತುಂಬುತ್ತಿದ್ದಾರೆ. ಬೌಲಿಂಗ್‌ನಲ್ಲಿ ವೇಗಿ ಅರ್ಷದೀಪ್ ಸಿಂಗ್ ಮುಂಬೈ ವಿರುದ್ಧ 3 ವಿಕೆಟ್ ಪಡೆಯುವ ಮೂಲಕ ಫಾರ್ಮ್‌ಗೆ ಮರಳಿದ್ದಾರೆ.

ಕಿಂಗ್ಸ್ ರಭಸ ತಡೆಯುವುದೇ ಸವಾಲು: ಪಂಜಾಬ್ ಬ್ಯಾಟಿಂಗ್ ದಾಳಿಯನ್ನು ತಡೆಯಲು ಲಖನೌ ಬೌಲರ್‌ಗಳು ಹರಸಾಹಸ ಪಡಬೇಕಿದೆ. ಪ್ರಿನ್ಸ್ ಯಾದವ್ 9 ವಿಕೆಟ್ ಪಡೆಯುವ ಮೂಲಕ ಲಖನೌದ ಯಶಸ್ವಿ ಬೌಲರ್ ಎನಿಸಿಕೊಂಡಿದ್ದರೆ, ಆವೇಶ್ ಖಾನ್ ಮತ್ತು ಮೊಹಮ್ಮದ್ ಶಮಿ ಅವರಿಗೆ ಸಾಥ್ ನೀಡಬೇಕಿದೆ. ಕಳೆದ ಪಂದ್ಯದಲ್ಲಿ ಶಮಿ ಮತ್ತು ದಿಗವೇಶ್ ರಾಠಿ ದುಬಾರಿಯಾಗಿದ್ದು, ಈ ಪಂದ್ಯದಲ್ಲಿ ಪುಟಿದೇಳುವ ನಿರೀಕ್ಷೆಯಿದೆ. ಬ್ಯಾಟಿಂಗ್ ವಿಭಾಗದಲ್ಲಿ ಮುಕುಲ್ ಚೌಧರಿ, ಏಡನ್ ಮ್ಯಕ್ರಮ್, ಮಿಚೆಲ್ ಮಾರ್ಷ್ ಮತ್ತು ಆಯುಷ್ ಬದೋನಿ ರನ್ ಗಳಿಸುತ್ತಿದ್ದರೂ, ತಂಡಕ್ಕೆ ಗೆಲುವು ತಂದುಕೊಡಲಾಗುತ್ತಿಲ್ಲ. ನಿಕೋಲಸ್ ಪೂರನ್ ಫಾರ್ಮ್‌ನಲ್ಲಿಲ್ಲ.

ವಿರಾಮ
ಓದುವ ಲೋಕಕ್ಕೆ ಓದುವ ನಿಲ್ದಾಣ

ವಿಶ್ವವಾಣಿ
19.04.2026
ಭಾನುವಾರ

ನಮ್ಮ ದೇಶದ ವೈವಿಧ್ಯತೆಯನ್ನು ಹಲವು ರೀತಿಯಲ್ಲಿ ಹೊಗಳಿದ್ದಾರೆ. ವೈವಿಧ್ಯತೆಯಲ್ಲಿ ಏಕತೆ ಎಂಬ ವಾಕ್ಯವನ್ನು ಸ್ವಾತಂತ್ರ್ಯ ಹೋರಾಟಗಾರರು ಸಹ ಬಳಸಿದ್ದಾರೆ. ನಮ್ಮ ರಾಜ್ಯದ ವೈವಿಧ್ಯಮಯ ಆಚರಣೆಗಳ ಪಟ್ಟಿ ಮಾಡಿದರೆ, ಉತ್ತರ ಕರ್ನಾಟಕದ ಕೆಲವು ಹಳ್ಳಿಗಳಲ್ಲಿ ಆಚರಿಸುವ ಮುಳ್ಳಿನ ಹಬ್ಬವು ಅಗ್ರಸ್ಥಾನದಲ್ಲಿ ನಿಲ್ಲಬಲ್ಲದು! ಯುಗಾದಿ ಅಥವಾ ದೀಪಾವಳಿಯ ಸಮಯದಲ್ಲಿ, ಬೃಹತ್ ಮುಳ್ಳಿನ ರಾಶಿಯನ್ನು ಹಳ್ಳಿಯ ಪ್ರಮುಖ ಭಾಗದಲ್ಲಿ ಪೇರಿಸಿ, ಅದರ ಮೇಲೆ ಕುಣಿದಾಡುವ ಯುವಕರ ಉತ್ಸಾಹ ಮತ್ತು ಉಲ್ಲಾಸಕ್ಕೆ, ಭಕ್ತಿಯೇ ತಳಪಾಯ. ಹಬ್ಬದ ಆಚರಣೆಯ ಭಾಗವಾಗಿ ಮುಳ್ಳಿನ ರಾಶಿಯ ಮೇಲೇರುವ ಯುವಕರು, ನೋವನ್ನು ಮರೆತು ಭಕ್ತಿಯನ್ನು ತೋರುತ್ತಾರೆ. ಮುಳ್ಳಿನ ರಾಶಿಯ ಮೆರವಣಿಗೆಯು ತಮಟೆ ಸದ್ದಿನೊಂದಿಗೆ ಮುಂದುವರಿದು, ಊರಿನ ಪ್ರಮುಖ ದೇಗುಲಕ್ಕೆ ಸಾಗುವುದು ಮತ್ತೊಂದು ವಿಶೇಷ! ಗ್ರಾಮೀಣರು ಆಚರಿಸುವ ಈ ಪರಿಯ ಯುಗಾದಿಯ ಸಂಭ್ರಮವು ನಿಜಕ್ಕೂ ಅಪರೂಪದ್ದು!

ಮುಳ್ಳುಗಳೇ ಹೂವಾಗುವ ಗ್ರಾಮೀಣ ಯುಗಾದಿ!

» ಸೋಮಲಿಂಗಪ್ಪ ಬೆಣ್ಣಿ

ಮೈ ಜುಂ ಎನ್ನುವಂತಿರುವ ಮುಳ್ಳು ಗಿಡಗಳು, ನೆತ್ತಿಯ ಮೇಲೆ ಕೆಂಡದಂತೆ ಸುಡುವ ಬೇಸಿಗೆಯ ಬಿಸಿಲು. ಪಕ್ಕದಲ್ಲಿ ಹುರುಪೇರಿಸುವ ಡೊಳ್ಳಿನ ಬಡಿತ. ಭಕ್ತಿಯ ಪರಾಕಾಷ್ಠೆಯನ್ನು ಮೈಯೊಳಗಿಳಿಸಿಕೊಂಡ ಯುವಕರ ಪಡೆ; ಅವರೆಲ್ಲರೂ ಆ ಮುಳ್ಳು ಗಿಡಗಳ ರಾಶಿಯ ಮೇಲೆ ಹಾರುತ್ತಿದ್ದುದನ್ನು ಸುತ್ತಲೂ ನೆರೆದ ಗ್ರಾಮೀಣ ಜನರು ಬೆರಗುಗಣ್ಣಿನಿಂದ ನೋಡುತ್ತಾ ನಿಂತಿದ್ದಾರೆ; ಎಲ್ಲರೂ ಭಕ್ತಿಯಿಂದ ನಮಿಸುತ್ತಿದ್ದಾರೆ, ಮುಳ್ಳು ಗಿಡಗಳ ಮೇಲೆ ಏರುತ್ತಿರುವ ಯುವಕರಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಇಂತಹ ಉಲ್ಲಾಸದ ಸಂದರ್ಭಗಳನ್ನು ಕಂಡಾಗ ಹೊಳೆಯುವ ಉತ್ತರ ಒಂದೇ: ಉತ್ತರ ಕರ್ನಾಟಕದ ಹಲವು ಹಳ್ಳಿಗಳಲ್ಲಿ ಯುಗಾದಿ ಅಥವಾ ಕಾರ್ತಿಕ ಮಾಸದ ಹಬ್ಬಗಳು ಸಂಭ್ರಮದಿಂದ ಈ ಪ್ರಕಾರವಾಗಿ, ವೈವಿಧ್ಯಮಯವಾಗಿ ನಡೆಯುತ್ತಿವೆ ಎಂದರ್ಥ.

ಉತ್ತರ ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಪ್ರತಿವರ್ಷ ಯುಗಾದಿ ಹಾಗೂ ಕಾರ್ತಿಕ ಮಾಸದ ಹಬ್ಬಗಳಲ್ಲಿ ಮುಳ್ಳು ಹಬ್ಬವೂ ವಿಶೇಷವಾಗಿ ಚಾಲ್ತಿಯಲ್ಲಿದೆ. ಆಯಾ ಗ್ರಾಮದ ಮಾರುತೇಶ್ವರ, ಗ್ರಾಮದೇವತೆ ಹಾಗೂ ನಾನಾ ದೇವರ ಹೆಸರಿನ ಮೇಲೆ ನಡೆಯುವ ಈ ಸಾಹಸಮಯ ಹಬ್ಬವು ನೋಡಲು ಒಂದು ರೋಮಾಂಚಕ ಅನುಭವ. ಭಕ್ತಿ ಮತ್ತು ಸಾಹಸ ಬೆರೆತಿರುವ ಈ ಆಚರಣೆಯು, ಯುಗಾದಿಯ ಸಂಭ್ರಮವನ್ನು ನೂರ್ಮಡಿಗೊಳಿಸುತ್ತದೆ, ನೆರೆದವರನ್ನು ಬೆರಗಾಗಿಸುತ್ತದೆ. ವಿಶೇಷವಾಗಿ ಕೊಪ್ಪಳ ಜಿಲ್ಲೆಯ ಗಬ್ಬೂರು, ಅಬ್ಬಿಗೇರಿ, ಲಾಚನಕೇರಿ, ಹ್ಯಾಟಿಮುಂಡರಗಿ, ಬಹದ್ದೂರಬಂಡಿ ಸೇರಿದಂತೆ ಹಲವಾರು ಹಳ್ಳಿಗಳಲ್ಲಿ ಈ ಹಬ್ಬವು ವಿಶೇಷವಾಗಿ ಆಚರಣೆಯಲ್ಲಿದೆ.

ಅಗಸಿಯ ಮುಂದೆ ಮುಳ್ಳಿನ ರಾಶಿ!

ಇಲ್ಲಿನ ಕೆಲವು ಹಳ್ಳಿಗಳಲ್ಲಿ ಕಾರ್ತಿಕ ಮಾಸದ ಹಬ್ಬದಲ್ಲಿ ಮುಳ್ಳು ಹಬ್ಬ ಆಚರಿಸಿದರೆ ಹಲವು ಹಳ್ಳಿಗಳಲ್ಲಿ ಯುಗಾದಿ ಹಬ್ಬದಲ್ಲಿ ಮುಳ್ಳು ಹಬ್ಬ ಆಚರಿಸಲಾಗುತ್ತದೆ. ಹಬ್ಬದ ದಿನ ಊರಿನ ತುಂಬೆಲ್ಲ ಸಡಗರ, ಸಂಭ್ರಮ. ಊರಿನ ಜನರು ತಮ್ಮ ಗ್ರಾಮದ ಹೊರವಲಯದಲ್ಲಿನ ಜಾಲಿ, ಖಾರಿ, ಕವಳಿ ಮತ್ತಿತರ ಕಠಿಣ ಮತ್ತು ಬಿರುಸಾದ ಮುಳ್ಳುಗಳನ್ನು ಹೊಂದಿರುವ ಮರದ ಕೊಂಬೆಗಳನ್ನು ಕಡಿದು ತಂದು ಊರ 'ಅಗಸಿ'ಯ ಮುಂದೆ ಗುಡ್ಡೆ ಹಾಕುತ್ತಾರೆ. ಡೊಳ್ಳು ಮತ್ತಿತರ ಸಾಂಪ್ರದಾಯಿಕ ವಾದ್ಯಗಳೊಂದಿಗೆ ಗ್ರಾಮದ ಪ್ರಮುಖ ಬೀದಿಯಲ್ಲಿ ಮುಳ್ಳು ಕೊಂಪೆಯನ್ನು ಮೆರವಣಿಗೆ ರೀತಿಯಲ್ಲಿ ಕೊಂಡೊಯ್ಯಲಾಗುತ್ತದೆ. ಅಂದರೆ, ಈ ಮುಳ್ಳಿನ ದೊಡ್ಡ ದೊಡ್ಡ ಕೊಂಬೆಗಳೇ, ಜನರಿಂದ ಪೂಜಿಸಲ್ಪಡುವ ಸಾಮಗ್ರಿಗಳು; ಈ ಆಚರಣೆಯಲ್ಲಿ ಭಕ್ತಿ ಇದೆ, ಶ್ರದ್ಧೆ ಇದೆ.

ಚೂಪಾದ ಮುಳ್ಳುಗಳಿಂದ ತುಂಬಿದ ಆ ಕೊಂಬೆಗಳನ್ನು ಮೆರವಣಿಗೆಯಲ್ಲಿ ತರುವಾಗ, ಅದನ್ನು ನೋಡಲು ಆ ಊರಿನ ಹಾಗೂ ಸುತ್ತಮುತ್ತಲಿನ ನೂರಾರು ಭಕ್ತರು ಅಲ್ಲಿ ನೆರೆದಿರುತ್ತಾರೆ. ಡೊಳ್ಳಿನ ನಾದಕ್ಕೆ ಊರಿನ ಯುವಕರು ಆವೇಶಕ್ಕೆ ಒಳಗಾಗುತ್ತಾರೆ; ಮುಳ್ಳಿನ ರಾಶಿಗೆ ನಮಿಸುವುದು ಆರಂಭಿಕ ಹಂತ. ಭಕ್ತಿಯು ಇನ್ನಷ್ಟು ಔನ್ನತ್ಯಕ್ಕೆ ಏರುವುದು ಈಗ ಶುರು. ಭಕ್ತಿಯ ಪರಾಕಾಷ್ಠೆಯನ್ನು ತಲುಪಿದ ಯುವಕರು, ನಾ ಮುಂದು ತಾ ಮುಂದು ಎಂದು ಸ್ಪರ್ಧೆಗಿಳಿದವರಂತೆ ಮುಳ್ಳಿನ ರಾಶಿಯ ಮೇಲೆ ಜಿಗಿದು ಕುಣಿಯತೊಡಗುತ್ತಾರೆ. ಸುತ್ತಲೂ ನೂರಾರು ಸಂಖ್ಯೆಯಲ್ಲಿ ಜಮಾಯಿಸುವ ಹಳ್ಳಿಯ ಜನರು, ಹೆಂಗಳೆಯರು, ಮಕ್ಕಳು ಬಹು ಬೆರಗಿನಿಂದ ಮತ್ತು ಭಕ್ತಿಯಿಂದ ಈ ದೃಶ್ಯವನ್ನು ಕಣ್ತುಂಬಿಕೊಳ್ಳುತ್ತಾರೆ. ಊರಿನ ಅಗಸಿಯಿಂದ ಪ್ರಾರಂಭವಾಗುವ ಈ ಮುಳ್ಳು ಜಿಗಿತದ ಹಬ್ಬವು ಗ್ರಾಮದ ಆರಾಧ್ಯ ದೇವರ ಗುಡಿಯನ್ನು ತಲುಪಲು ಸುಮಾರು ಎರಡರಿಂದ ಮೂರು ಗಂಟೆಗಳಾದರೂ ಬೇಕು. ಆ ಇಡೀ ಅವಧಿಯಲ್ಲಿ ಬೀದಿಯುದ್ದಕ್ಕೂ ಈ ಸಾಹಸದ ಪ್ರದರ್ಶನ, ಭಕ್ತಿಯಿಂದ ಮುಳ್ಳಿನ ರಾಶಿಯ ಮೇಲೇರಿ ಯುವಕರು ಕುಣಿಯುವ ದೃಶ್ಯ!

ಭಕ್ತಿಯ ಶಕ್ತಿ ನೋವಿಗೆ ಮುಕ್ತಿ

ಅತ್ತ ದೇವರ ಮೇಲಿನ ಭಕ್ತಿ, ಇತ್ತ ಡೊಳ್ಳಿನ ಹೊಡೆತದ ಸದ್ದು ಅಷ್ಟೇ ಅಲ್ಲ, ಸುತ್ತಲೂ ನೋಡುತ್ತ ನಿಂತ ಸಾವಿರಾರು ಜನರ ಕುತೂಹಲ ಮತ್ತು ಪ್ರೋತ್ಸಾಹವೂ

ಉತ್ಸಾಹಿ ಯುವಕರನ್ನು ಬಡಿದೆಬ್ಬಿಸುತ್ತದೆ. ಭಕ್ತಿ ಮತ್ತು ಸಕಾರಾತ್ಮಕ ಉತ್ಸಾಹವನ್ನು ಮೈದುಂಬಿಕೊಂಡ ಯುವಕರ ಪಡೆ ಅಂತಹ ಕಠೋರ ಮುಳ್ಳಿನ ಮೇಲೆ ಜಿಗಿದಾಡಿದರೂ, ಅವರಿಗೆ ಮುಳ್ಳು ಚುಚ್ಚಿದ ಅನುಭವವಾಗುವುದಿಲ್ಲ ಎನ್ನುವುದು ಇಲ್ಲಿನ ವಿಶೇಷ. ಭಕ್ತಿಯ ಪರಾಕಾಷ್ಠೆಯಿಂದಾಗಿ, ಅವರ ಮನೋಸ್ಥೈರ್ಯವು ಅಧಿಕಗೊಂಡು, ಅವರನ್ನು ನೋವಿನಿಂದ ಮುಕ್ತಿಯಾಗಿಸುತ್ತದೆ. ಮುಳ್ಳುಗಳು ಅವರಿಗೆ ಚುಚ್ಚುವುದಿಲ್ಲ ಎನ್ನಲಾಗದು, ಆದರೆ, ಅದರಿಂದಾಗುವ ನೋವು ಅವರನ್ನು ಬಾಧಿಸುವುದಿಲ್ಲ, ದೇವರ ಸೇವೆ ಎಂಬಂತೆ ಅವರು ಮುಳ್ಳುಗಳ ಮೇಲೆ ಜಿಗಿಯುತ್ತಾರೆ, ಕುಣಿಯುತ್ತಾರೆ. ಇದನ್ನು, ಕೊಂಡ ಹಾಯುವುದು ಮತ್ತು ಗೆಂಡ ಸೇವೆಗೆ ಹೋಲಿಸಬಹುದು; ಕೊಂಡ ಹಾಯುವಾಗಲೂ ಸಹ, ಬೆಂಕಿಯು ಕಾಲಿನ ಅಡಿ ಇದ್ದರೂ, ಭಕ್ತಿಯಿಂದ ಕೊಂಡ ಹಾಯುವವರಿಗೆ ಅದರಿಂದ ಭಯವಾಗದು, ನೋವಾಗದು. ಅದೇ ರೀತಿ, ಹಬ್ಬದ ದಿನ, ಆಚರಣೆಯ ಭಾಗವಾಗಿ ಮುಳ್ಳುಗಳ ಮೇಲೆ ಏರುವ, ಜಿಗಿದಾಡುವ ಯುವಕರಿಗೂ ನೋವಾಗದು, ಬದಲಿಗೆ ಅಪರೂಪದ ಧೈರ್ಯವನ್ನು ಪ್ರದರ್ಶಿಸುತ್ತಾ, ಅವರೆಲ್ಲರೂ ಮುಳ್ಳುಗಳಲ ಮೇಲೆ ಜಿಗಿಯುತ್ತಾರೆ.

ಭಕ್ತಿ, ಏಕಾಗ್ರತೆ, ಮನೋಧೈರ್ಯ, ಛಲವು ಎಂತಹ ಕಠಿಣ ಸವಾಲನ್ನೂ ಸ್ವೀಕರಿಸಲು ಶಕ್ತಿಯನ್ನು ನೀಡುತ್ತದೆ ಎಂಬುದಕ್ಕೆ ಉದಾಹರಣೆಯಾಗಿ ಇಂತಹ ಹಬ್ಬಗಳನ್ನು ನೋಡಬಹುದು. ಜತೆಗೆ, ನೈಜ ಬದುಕಿನಲ್ಲಿ ಎದುರಾಗುವ ಹಲವು ಕಷ್ಟದ ಮತ್ತು ಬಿಕ್ಕಟ್ಟಿನ ಸನ್ನಿವೇಶಗಳನ್ನು ಎದುರಿಸಲು, ಇಂತಹ ಭಕ್ತಿಪೂರ್ವಕ ಸಾಹಸ ಪ್ರದರ್ಶನಗಳು ಜನರಲ್ಲಿ ಮನೋಸ್ಥೈರ್ಯವನ್ನು ತುಂಬುತ್ತವೆ.

ಅದೆಷ್ಟೋ ತಲೆಮಾರುಗಳಿಂದ ನಡೆದುಕೊಂಡು ಬಂದಿರುವ ಈ ಸಾಹಸಮಯ ಹಬ್ಬಗಳು ಇಂದಿಗೂ ಮುಂದುವರಿದುಕೊಂಡು ಬಂದಿರುವುದು ನಮ್ಮ ನಾಡಿನ ಗ್ರಾಮೀಣ ಧಾರ್ಮಿಕ ಪರಂಪರೆ ಹಾಗೂ ವೈವಿಧ್ಯತೆಯನ್ನು ಬಿಂಬಿಸುತ್ತವೆ. ಯುಗಾದಿ ಮತ್ತು ದೀಪಾವಳಿಯ ಸನ್ನಿವೇಶದಲ್ಲಿ ಭಕ್ತಿಯಿಂದ ನಡೆಯುವ ಇಂತಹ ಮುಳ್ಳು ಹಬ್ಬವು, ಸ್ಥಳೀಯರಿಗೆ ಗೌರವಯುತ ಆಚರಣೆ. ತಮ್ಮ ಊರಿನ ಅಸ್ಮಿತೆ ಎಂಬಂತೆ, ಇಂತಹ ಮುಳ್ಳು ಹಬ್ಬಗಳನ್ನು ಆಚರಿಸುತ್ತಿರುವುದು, ಉತ್ತರ ಕರ್ನಾಟಕದ ಹಲವು ಹಳ್ಳಿಗೆ ವಿಶೇಷ ಎಂದೇ ಹೇಳಬಹುದು.

ಶಂಕರ ಭಗವತ್ಪಾದರ ಕಾಲ ಯಾವುದು?

» ನಾರಾಯಣ ಯಾಜಿ

ಶಂಕರಾಚಾರ್ಯರ ಸಿದ್ಧಾಂತದ ಕುರಿತು ವಿವಾದವಿರುವಂತೆ ಈ ಮಹಾನ್ ಜಗದ್ಗುರುಗಳ ಅವತಾರ ಕಾಲದ ಕುರಿತು ಆಧುನಿಕ ಇತಿಹಾಸಕಾರರು ಮತ್ತು ಪ್ರಾಚೀನ ಮಠೀಯ ಪರಂಪರೆಗಳ ನಡುವೆ ಒಂದು ದೊಡ್ಡ ಜಿಜ್ಞಾಸೆಯೇ ಇದೆ. ಶಂಕರರ ಕಾಲವು ಕ್ರಿ.ಶ. 8ನೇ ಶತಮಾನ (ಕ್ರಿ.ಶ. 788–820) ಎಂದು ಪ್ರಚಲಿತವಿದೆ. ಆದರೆ ಪುರಿಯ ಗೋವರ್ಧನ ಪೀಠ, ಕಂಚಿಕಾಮಕೋಟಿ, ದ್ವಾರಕಾ 'ಪೀಠವಂಶಾವಳಿ' ಮತ್ತು ಗುರು ಪರಂಪರೆಗಳ ಪ್ರಕಾರ ಆದಿ ಶಂಕರಾಚಾರ್ಯರು ಜನಿಸಿದ್ದು ಇಂದಿಗೆ ಸುಮಾರು 2500 ವರ್ಷಗಳ ಹಿಂದೆ! ಈ ಪರಂಪರೆಗಳಲ್ಲಿ ಪ್ರಮುಖವಾದದ್ದು ಪುರಿಯ ಗೋವರ್ಧನ ಪೀಠದ ಪ್ರಂಪರೆಯ ಅಖಂಡ ಗುರುಗಳ ವಿವರ. ಈ ಪೀಠದ ಪರಂಪರೆಯ ಪ್ರಕಾರ, ಆಚಾರ್ಯ ಶಂಕರರು ಇಂದಿನ ಆಧುನಿಕ ಇತಿಹಾಸಕಾರರು ಸೂಚಿಸುವಂತೆ ಕ್ರಿ.ಶ. 8ನೇ ಶತಮಾನದಲ್ಲಿ ಹುಟ್ಟಿದವರಲ್ಲ; ಬದಲಾಗಿ, ಅವರು ಅದಕ್ಕಿಂತಲೂ ಬಹಳ ಹಿಂದಿನ ಕಾಲದ ಮಹಾನ್ ಅವತಾರ. ಈ ಪರಂಪರೆಯ ಗಣನೆಯ ಪ್ರಕಾರ, ಶಂಕರಾಚಾರ್ಯರ ಜನ್ಮ ಕ್ರಿ.ಪೂ. 507 (ಅಥವಾ ಸುಮಾರು ಕ್ರಿ.ಪೂ. 5ನೇ ಶತಮಾನ)ಕ್ಕೆ ಸೇರಿದದ್ದು ಎಂದು ಹೇಳಲಾಗುತ್ತದೆ. ಇದನ್ನು ಅವರು ಕಲಿ ಯುಗದ ಪ್ರಾರಂಭದದಿನದಿಂದ ಇದುತನಕ (2593ವರ್ಷಗಳು) ಆಧಾರದ ಮೇಲೆ ನಿರ್ಧರಿಸುತ್ತಾರೆ.

ಕೆಲವು ಪರಂಪರೆಗಳು ಕಾಪಿಟ್ಟುಕೊಂಡು ಬಂದಿರುವ ದಾಖಲೆ ಮತ್ತು ನಂಬಿಕೆಗಳ ಪ್ರಕಾರ, ಶಂಕರಾಚಾರ್ಯರು ಇಂದಿಗೆ ಸುಮಾರು 2500 ವರ್ಷಗಳ ಹಿಂದೆ ಇದ್ದರು! ಆದರೆ ಆಧುನಿಕ ಇತಿಹಾಸಕಾರರು, ಶಂಕರರ ಕಾಲವನ್ನು 8ನೇ ಶತಮಾನ ಎಂದು ಲೆಕ್ಕಹಾಕಿದ್ದಾರೆ. ಈ ಕುರಿತು ಇರುವ ಜಿಜ್ಞಾಸೆಯ ಒಂದು ಕಿರುನೋಟ ಇಲ್ಲಿದೆ.

ಗೋವರ್ಧನ ಪೀಠದ ಪೀಠವಂಶಾವಳಿ ಅಂದರೆ ಗುರುಗಳ ಅಖಂಡ ಹೆಸರನ್ನು ಗಮನಿಸಿದರೆ, ಶಂಕರಾಚಾರ್ಯರಿಂದ ಇಂದಿನವರೆಗೂ ಬಂದಿರುವ ಪೀಠಾಧಿಪತಿಗಳ ಸಂಖ್ಯೆ ಸುಮಾರು 140 ರಿಂದ 150 ಪೀಠಾಧಿಪತಿಗಳು ಆಗಿಹೋಗಿದ್ದಾರೆ. ಒಂದು ಗುರುಗೆ ಸರಾಸರಿ 15 – 20 ವರ್ಷಗಳ ಕಾಲಾವಧಿ ತೆಗೆದುಕೊಂಡರೂ140 ಗುರುಗಳು ಎಂದರೆ ಸುಮಾರು 2000– 2500 ವರ್ಷಗಳ ಅವಧಿಗಳಾಗುತ್ತವೆ. ಇದನ್ನೇ ಆಧರಿಸಿ ಪುರಿ ಪೀಠವು, ಶಂಕರರ ಕಾಲವನ್ನು ಕ್ರಿ.ಪೂ. 5ನೇ ಶತಮಾನಕ್ಕೆ ಕೊಂಡೊಯ್ಯುತ್ತದೆ.

ಇದರ ಜೊತೆಗೆ, ಈ ಪರಂಪರೆ ಮತ್ತೊಂದು ಪ್ರಮುಖ ವಿಷಯವನ್ನು ಉಲ್ಲೇಖಿಸುತ್ತದೆ. ಅವರ ಪ್ರಕಾರ, ಶಂಕರರು ಬುದ್ಧನ ನಿರ್ವಾಣದ ನಂತರದ ಕೆಲವೇ ಕಾಲದಲ್ಲಿ ಅವತರಿಸಿದವರು. ಅಂದರೆ, ಬೌದ್ಧ ಧರ್ಮವು ಭಾರತದಲ್ಲಿ ವ್ಯಾಪಕವಾಗಿ ಹರಡುತ್ತಿದ್ದ ಸಂದರ್ಭದಲ್ಲಿ, ವೇದಸಂಪ್ರದಾಯದ ಪುನರುಜ್ಜೀವನಕ್ಕಾಗಿ ಶಂಕರರು ಅವತರಿಸಿದರು ಎಂಬ ದರ್ಶನವನ್ನು ಈ ಪೀಠವು ಪ್ರತಿಪಾದಿಸುತ್ತದೆ. ಹೀಗಾಗಿ, ಶಂಕರರು ಬೌದ್ಧ ತತ್ತ್ವಗಳ ನಂತರ ಬಂದವರು ಎಂಬುದನ್ನು ಒಪ್ಪಿಕೊಂಡರೂ, ಅದು ಕ್ರಿ.ಶ. 8ನೇ ಶತಮಾನವಲ್ಲ; ಅದಕ್ಕಿಂತ ಬಹಳ ಹಿಂದಿನ ಕಾಲವೆಂದು ಅವರು ನಿರ್ಧರಿಸುತ್ತಾರೆ.

ಶಂಕರ ಜಯಂತಿ ವಿಶೇಷ



ಪ್ರಸಿದ್ಧ ಕಲಾವಿದ ರಾಜಾ ರವಿವರ್ಮ ರಚಿಸಿದ ಶಂಕರಾಚಾರ್ಯರ ಚಿತ್ರ.

ಗೋವರ್ಧನ ಪೀಠದ ಈ ವಾದದಲ್ಲಿ ಕೇವಲ ಗುರುಪಟ್ಟಿ ಮಾತ್ರವಲ್ಲ, ಕೆಲವು ಪರಂಪರಾತ್ಮಕ ಗ್ರಂಥಗಳೂ ಸಹ ಉಲ್ಲೇಖವಾಗುತ್ತವೆ. ಉದಾಹರಣೆಗೆ, ಕಾಶ್ಮೀರದ 'ರಾಜತರಂಗಿಣಿ', ನೇಪಾಳದ ರಾಜವಂಶಾವಳಿಗಳು ಮತ್ತು ದ್ವಾರಕಾ ಮತ್ತು ಪುರಿ ಪೀಠಗಳ ಗುರುಪರಂಪರೆಗಳು ಶಂಕರರನ್ನು ಪ್ರಾಚೀನ ಕಾಲಕ್ಕೆ ಕೊಂಡೊಯ್ಯುತ್ತವೆ ಎಂದು ಅವರು ಅಭಿಪ್ರಾಯಪಡುತ್ತಾರೆ.

ಕಂಚಿ ಕಾಮಕೋಟಿ ಸಂಪ್ರದಾಯ

ಇನ್ನೊಂದು ಮುಖ್ಯವಾದ ವಿಷಯವೆಂದರೆ ಕಂಚಿ ಕಾಮಕೋಟಿ ಸಂಪ್ರದಾಯವೂ ಸಹ ಶಂಕರರ ಕಾಲವನ್ನು 2500 ವರ್ಷಗಳಿಗೆ ಕೊಂಡೊಯ್ಯುತ್ತದೆ. ಈ ಪೀಠದ ಗುರುಗಳಾಗಿದ್ದ ಮಹದೇವ (ನಾಲ್ಕನೇ) ಎನ್ನುವವರು ವ್ಯಾಸಾಚಲರೆನ್ನುವವರು (ಪೂರ್ವಾಶ್ರಮದಲ್ಲಿ ಕುಪ್ಪಣ್ಣ) ಎನ್ನುವವರು ರಚಿಸಿದ್ದಾರೆಂದು ನಂಬಲಾದ 'ವ್ಯಾಸಚಲೀಯ'ವೆನ್ನುವ ಗ್ರಂಥವನ್ನು ಎನ್. ವೆಂಕಟರಾಮನ್ ಎನ್ನುವ ವಿದ್ವಾಂಸರು ಉಲ್ಲೇಖಿಸಿದ್ದಾರೆ. ಅದರಲ್ಲಿ 'ಪ್ರಾಚೀನ ಶಂಕರ ವಿಜಯ' ಎನ್ನುವ ಗ್ರಂಥದ ಉಲ್ಲೇಖ ಬರುತ್ತದೆ. ಅದರ ಪ್ರಕಾರ ಶಂಕರರು ಅವತರಿಸಿದ ಕಾಲದ ಶ್ಲೋಕದ ವಿವರ ಹೀಗಿದೆ.

ಅಬ್ಧೇ ಕಲೇರನಲವರ್ಷಶರಾಕ್ಷಿಸಂಖ್ಯೆ
ಶ್ರೀನನ್ದನೇ ದಿನಮಣಾವುದಗಧ್ವಭಾಜಿ
ರಾಧೇಽಖದಿಪಞ್ಚಮಿತಿಥಾವಸಿತೇತರಾಯಾಮ್
ವಾರೇ ರವೇರದಿತಿಭೇ ಶುಭಯೋಗಯುಕ್ತೇ ॥
ಲಗ್ನೇ ಶುಭೇ ಶುಭಯುತೇ ಸುಷುವೇ ಕುಮಾರಂ
ಶ್ರೀಪಾರ್ವತೀವ ಸುಖಿನೀ ಶುಭವೀಕ್ಷಿತೇ ಚ
ಜಾಯಾ ಸತೀ ಶಿವಗುರೋರ್ನಿಜತುಙ್ಗಸಂಸ್ಥೆ
ಸೂರ್ಯೆ ಕುಜೇ ರವಿಸುತೇ ಚ ಗುರೌ ಚ ಕೇನ್ದ್ರೇ ॥

ಅದರ ಪ್ರಕಾರ ವೈಶಾಖ ಶುದ್ಧ ಪಂಚಮಿ ತಿಥಿ, ಭಾನುವಾರ, ಪುನರ್ವಸು ನಕ್ಷತ್ರದ ಅಭಿಜಿನ್ಮುಹೂರ್ತದಲ್ಲಿ ಕರ್ಕಾಟಕ ಲಗ್ನ, ರವಿಕುಜಗುರುಶನಿಗಳು ಉಚ್ಚರಾಗಿರುವಾಗ, ಶುಕ್ರ ಕೇಂದದಲ್ಲಿ ಉಚ್ಚನಾಗಿರುವಾಗ ಬುಧ ರವಿಯ ಯುತಿಯಲ್ಲಿ ಆರ್ಯಾಂಬೆ ಮಗನನ್ನು ಪಡೆದಳು ಎಂದಿದೆ. ಅದರ ಪ್ರಕಾರ ಶಂಕರರ ಜನನ ಕ್ರಿ.ಪೂ. 509 (ಯುಧಿಷ್ಠಿರ ಶಕ 2631) ರಲ್ಲಿ. ಜೊತೆಗೆ ರಕ್ತಾಕ್ಷಿ ಸಂವತ್ಸರದ (ಕ್ರಿ. ಪೂ. 477) ವೈಶಾಖ ಶುದ್ಧ ದ್ವಾದಶೀ ದಿನ ಭೌತಿಕ ದೇಹವನ್ನು ತ್ಯಜಿಸಿದರು ಎನ್ನುವ ವಿವರಣೆ ಇದೆಯೆಂದು ಶ್ರೀ ಸಚ್ಚಿದಾನಂದ ಸರಸ್ವತೀ ಸ್ವಾಮಿಗಳು ತಿಳಿಸುತ್ತಾರೆ. ಆದರೆ ಅವರಿಗೂ 'ವ್ಯಾಸಚಲೀಯ'ದ ಮೂಲಶ್ಲೋಕ ಸಿಕ್ಕಿಲ್ಲ; ಅದನ್ನು 'ಮಾಧವೀ ಶಂಕರ ವಿಜಯ'ದಲ್ಲಿ ಉಲ್ಲೇಖಿಸಿರುವುದನ್ನು ಗಮನಿಸಿದ್ದೇನೆ ಎನ್ನುತ್ತಾರೆ.

ಆದರೆ ಶೃಂಗೇರಿ ಮಠದ ಪ್ರಕಾರ ಈಶ್ವರ ಸಂವತ್ಸರದಲ್ಲಿವೈಶಾಖ ಸುದ್ಧ ಪಂಚಮಿ, ಆದ್ರ್ರಾನಕ್ಷತ್ರದ ಮಿಥುನಲಗ್ನದಲ್ಲಿ ಆಚಾರ್ಯರ ಜನನವಾಯಿತು ಎಂದಿದೆ. ವಿಕ್ರಮ ಶಕೆ ಎಂತಲೂ ವಿವರಗಳಿವೆ. ಶಂಕರಾಚಾರ್ಯರ ಕುರಿತು ಬೇರೆಲ್ಲಾ ವಿವರಣೆಗಳು, ಕುಮಾರಿಲಭಟ್ಟರ ಮತ್ತು ಮಂಡನ ಮಿಶ್ರರ ವಾದ ಮೊದಲಾದವುಗಳ ಕುರಿತು ಹೆಚ್ಚಿನ ವ್ಯತ್ಯಾಸವೂ ಇಲ್ಲ. ಈ ಎಲ್ಲಾ ಸಂಗತಿಗಳನ್ನು ಗಮನಿಸಿದ ಟಿ. ಎಂ. ಪಿ. ಮಹಾದೇವನ್, ಕೆ. ಸಚ್ಚಿದಾನಂದ ಮೂರ್ತಿ, ಸುರೇಂದ್ರನಾಥ ದಾಸಗುಪ್ತ, ಪಾಲ್ ಹ್ಯಾಕರ್ ಮೊದಲಾದ ವಿದ್ವಾಂಸರು ಭಾರತೀಯ ಅದ್ವೈತ ಪರಂಪರೆಯ ಆಂತರಿಕ ಸ್ವರೂಪವನ್ನು ವಿಶ್ಲೇಷಿಸುವ ಸಂದರ್ಭದಲ್ಲಿ, ''ಶಂಕರಾಚಾರ್ಯ'' ಎಂಬುದು ಕೇವಲ ಐತಿಹಾಸಿಕ ವ್ಯಕ್ತಿಯ ಹೆಸರಲ್ಲ; ಅದು ಗುರುಪೀಠದ ನಿರಂತರತೆಯನ್ನು ಸೂಚಿಸುವ ಪದವಿಯೂ ಆಗಿದೆ ಎನ್ನುವ ಅಭಿಪ್ರಾಯ ಪಡುತ್ತಾರೆ. ಈ ಎಲ್ಲ ಸಿದ್ಧಾಂತಗಳೂ ಸಹ ವೈಶಾಖ ಶುದ್ಧ ಪಂಚಮಿಯನ್ನು ಶಂಕರ ಜಯಂತಿಯನ್ನಾಗಿ ಒಪ್ಪಿಕೊಂಡಿದ್ದಾರೆ.

ಕ್ರಿ.ಪೂ. 5ನೇ ಶತಮಾನದಲ್ಲಿ ಬೌದ್ಧ ಧರ್ಮದ ಸ್ಥಿತಿ ಮತ್ತು ಶಂಕರರ ಕಾಲದ ನಡುವಿನ ಸಂಬಂಧವನ್ನು ನಾವು ಈ ಕೆಳಗಿನ ಆಯಾಮಗಳಲ್ಲಿ ವಿಶ್ಲೇಷಿಸಬಹುದು:

ಇತಿಹಾಸದ ಕೆಲವು ದಾಖಲೆಗಳ ಪ್ರಕಾರ, ಗೌತಮ ಬುದ್ಧನ ನಿರ್ವಾಣವಾಗಿದ್ದು ಕ್ರಿ.ಪೂ. 483 ಅಥವಾ 544ರಲ್ಲಿ (ವಿಭಿನ್ನ ಅಭಿಪ್ರಾಯಗಳಿವೆ). ಶಂಕರರು ಕ್ರಿ.ಪೂ. 509ರಲ್ಲಿ ಜನಿಸಿದರು ಎಂಬ ಮಠಗಳ ಸಂಪ್ರದಾಯವನ್ನು ಒಪ್ಪಿಕೊಂಡರೆ, ಶಂಕರರು ಬುದ್ಧನ ಸಮಕಾಲೀನರಾಗುತ್ತಾರೆ ಅಥವಾ ಬುದ್ಧನ ನಂತರದ ಕೇವಲ 30–40 ವರ್ಷಗಳಲ್ಲಿ ಬಂದವರಾಗುತ್ತಾರೆ.

ಆ ಕಾಲದಲ್ಲಿ ಬೌದ್ಧ ಧರ್ಮವು ಖಂಡನೆ ಮಾಡುವಷ್ಟು ಪ್ರಬಲವಾಗಿರಲಿಲ್ಲ. ಇತಿಹಾಸದ ಪ್ರಕಾರ, ಕ್ರಿ.ಪೂ. 5ನೇ ಶತಮಾನದಲ್ಲಿ ಬೌದ್ಧ ಧರ್ಮವು ಇನ್ನೂ ಶೈಶವಾವಸ್ಥೆಯಲ್ಲಿತ್ತು. ಅದು ಮಗಧದ ಸುತ್ತಮುತ್ತಲ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿತ್ತು. ಬೌದ್ಧ ಧರ್ಮವು ಅಖಂಡ ಭಾರತದಾದ್ಯಂತ ಹರಡಿ, ವೈದಿಕ ಧರ್ಮಕ್ಕೆ ದೊಡ್ಡ ಸವಾಲಾಗಿದ್ದು ಸಮ್ರಾಟ್ ಅಶೋಕನ (ಕ್ರಿ.ಪೂ. 3ನೇ ಶತಮಾನ) ಕಾಲದ ನಂತರ. ಜೊತೆಗೆ ಶಂಕರರು ತಮ್ಮ ಭಾಷ್ಯಗಳಲ್ಲಿ ಬೌದ್ಧ ಧರ್ಮದ ವಿವಿಧ ಶಾಖೆಗಳಾದ ಮಾಧ್ಯಮಿಕ (ಶೂನ್ಯವಾದ) ಮತ್ತು ವಿಜ್ಞಾನವಾದಗಳನ್ನು ಬಹಳ ವ್ಯವಸ್ಥಿತವಾಗಿ ಖಂಡಿಸಿದ್ದಾರೆ. ಈ ತಾರ್ಕಿಕ ಪಂಥಗಳು ಅಭಿವೃದ್ಧಿಯಾಗಿದ್ದು ಕ್ರಿ.ಶ. 2ನೇ ಶತಮಾನದಿಂದ 5ನೇ ಶತಮಾನದ ಅವಧಿಯಲ್ಲಿ (ನಾಗಾರ್ಜುನ, ಅಸಂಗ, ವಸುಬಂಧು ಮುಂತಾದವರಿಂದ). ಶಂಕರರು ಬುದ್ಧನ ವ್ಯಕ್ತಿತ್ವವನ್ನಾಗಲಿ ಅಥವಾ ಪ್ರಾಥಮಿಕ ಬೌದ್ಧ ಧರ್ಮವನ್ನಾಗಲಿ ಖಂಡಿಸಲಿಲ್ಲ. ಅವರು ಖಂಡಿಸಿದ್ದು ವೇದಗಳನ್ನು ನಿರಾಕರಿಸುವ ಮತ್ತು ಜಗತ್ತನ್ನು ಕೇವಲ ಶೂನ್ಯ ಎಂದು ಕರೆದ ನಂತರದ ಬೌದ್ಧ ದಾರ್ಶನಿಕ ಸಿದ್ಧಾಂತಗಳನ್ನು. ಇಂತಹ ಪ್ರೌಢ ದಾರ್ಶನಿಕ ಸಿದ್ಧಾಂತಗಳು ಕ್ರಿ.ಪೂ. 5ನೇ ಶತಮಾನದಲ್ಲಿ ಅಷ್ಟು ಪ್ರಬಲವಾಗಿರಲಿಲ್ಲ ಎಂಬುದು ಆಧುನಿಕ ಇತಿಹಾಸಕಾರರ ಪ್ರಬಲವಾದ. ಕ್ರಿ.ಪೂ. 5ನೇ ಶತಮಾನದಲ್ಲಿ ಬೌದ್ಧ ಧರ್ಮವು ರಾಜಕೀಯವಾಗಿ ಅಥವಾ ಸಾಮಾಜಿಕವಾಗಿ ಅಷ್ಟು ಪ್ರಬಲವಾಗಿರಲಿಲ್ಲ. ನಾವು ಇಂದು ಓದುತ್ತಿರುವ ಶಂಕರರ ಬೌದ್ಧಿಕ ದಿಗ್ವಿಜಯದ ಚಿತ್ರಣವು (ವಿಶೇಷವಾಗಿ ದಾರ್ಶನಿಕ ಸಂಘರ್ಷ) ಕ್ರಿ.ಶ. 7 ನೇ ಶತಮಾನದ ಪರಿಸ್ಥಿತಿಗೆ ಹೆಚ್ಚು ಹತ್ತಿರವಾಗಿದೆ.

ಅಂತಿಮವಾಗಿ, ಈ ವಿಚಾರದಲ್ಲಿ ಒಂದು ಸೂಕ್ಷ್ಮ ಸತ್ಯವನ್ನು ಮನಗಾಣಬೇಕು. ಶಂಕರರ ಕಾಲದ ಕುರಿತು ಇರುವ ಈ ಭಿನ್ನಾಭಿಪ್ರಾಯಗಳು, ಅವರ ಮಹತ್ವವನ್ನು ಕಡಿಮೆ ಮಾಡುವುದಿಲ್ಲ. ಇತಿಹಾಸವು ಅವರನ್ನು ಒಂದು ಶತಮಾನದಲ್ಲಿ ಸೀಮಿತಗೊಳಿಸಲು ಪ್ರಯತ್ನಿಸಿದರೂ, ಪರಂಪರೆ ಅವರನ್ನು ಅನಂತ ಕಾಲದ ಪ್ರವಾಹದಲ್ಲಿ ನೋಡುವುದು. ಈ ಎರಡರ ಮಧ್ಯೆ ನಿಂತು ನೋಡುವಾಗ, ನಮಗೆ ಗೋಚರವಾಗುವುದು ಶಂಕರರು ಕೇವಲ ಒಂದು ಕಾಲಘಟ್ಟದ ವ್ಯಕ್ತಿಯಲ್ಲ; ಅವರು ಒಂದು ದರ್ಶನ, ಒಂದು ಚೈತನ್ಯ, ಒಂದು ನಿರಂತರ ಪರಂಪರೆ.

ಈ ಹಿನ್ನೆಲೆಯಲ್ಲಿ ಶಂಕರ ಭಗವತ್ಪಾದರ ಕಾಲವನ್ನು ಏಳು ಅಥವಾ ಎಂಟನೆಯ ಶತಮಾನ ಎನ್ನುವದನ್ನು ಒಪ್ಪಿಕೊಳ್ಳುವುದು ತಾತ್ವಿಕವಾಗಿ ಸರಿಯಾಗುತ್ತದೆ.

ಪುಸ್ತಕ ವಿಮಾನ

ಕಲಾವಿದನ ಒಡಲಾಳ

» ಪ್ರೊ. ಜಿ.ಎನ್. ಉಪಾಧ್ಯ ಮುಂಬೈ

ಇದು ಹಿರಿಯ ಕಲಾವಿದ ಗುಣಪಾಲ ಉಡುಪಿ ಅವರಯಶೋಗಾಥೆಯನ್ನು ಅನಾವರಣ ಗೊಳಿಸಿರುವ ಕೃತಿ. ಐದು ಅಧ್ಯಾಯ ಹಾಗೂ ಅನೇಕ ಉಪ ಅಧ್ಯಾಯಗಳಲ್ಲಿ ಹರಡಿಕೊಂಡಿದ್ದು ಬಹುಮುಖ ಪ್ರತಿಭೆಯ ಗುಣಪಾಲ ಅವರು ವಿವಿಧ ಕ್ಷೇತ್ರಗಳಲ್ಲಿ ಮಾಡಿದ ಸಾಂಸ್ಕೃತಿಕ ಪರಿಚಾರಿಕೆಯನ್ನು ಇಲ್ಲಿ ಪ್ರಭಾಕರ ದೇವಾಡಿಗ ಅವರು ತೆರೆದಿಟ್ಟಿದ್ದಾರೆ.

ಯಕ್ಷಗಾನ ಕಲಾವಿದರಾಗಿ, ರಂಗನಟರಾಗಿ, ಕನ್ನಡ ಸಿನಿಮಾ ನಟರಾಗಿ, ನಾಟಕಕಾರರಾಗಿ, ಅನುವಾದಕರಾಗಿ, ಸಾಂಸ್ಕೃತಿಕ ನೇತಾರರಾಗಿ, ಕರಾಟೆ ಪಟುವಾಗಿ ನಾನಾ ನೆಲೆಗಳಲ್ಲಿ ದೂರದ ಮುಂಬೈಯಲ್ಲಿ ಸಾಧನೆ ಮಾಡಿದವರು ಗುಣಪಾಲ ಉಡುಪಿ. ಅವರದು ಬಹುಭಾಷಿಕ ಸಂವೇದನೆ. ನ. ಸದ್ದುಗದ್ದಲವಿಲ್ಲದೇ ಗುಣಪಾಲ ಅವರು ಮಾಡಿದ ಕಲಾ ಕೈಂಕರ್ಯವನ್ನು ಇಲ್ಲಿ ಲೋಕಸಮ್ಮುಖ ಗೊಳಿಸಲಾಗಿದೆ.

ಗುಣಪಾಲ ಅವರದು ಹೋರಾಟದ ಬದುಕು. ಏಕಲವ್ಯನಂತೆ ಅವರು ಯಕ್ಷಗಾನ ಕಲೆಯಲ್ಲಿ ಹಿಡಿತ ಸಾಧಿಸಿ ಸೈ ಎನಿಸಿಕೊಂಡ ಕಲಾವಿದ. ಬಡತನದ ಕಾರಣದಿಂದ ಸಣ್ಣ ಪ್ರಾಯದಲ್ಲೇ ಮುಂಬೈಗೆ ಬಂದು, ಗ್ಯಾರೇಜೊಂದರಲ್ಲಿ ಕೆಲಸ ಮಾಡುತ್ತಲೇ ಕಲಾವಿದನಾಗಿ ವಿಕಾಸಗೊಂಡ ಪರಿ,



ಲಲಿತರಂಗ ಗುಣನಾಯಕ
(ಗುಣಪಾಲ ಉಡುಪಿ ಬದುಕು ಬರಹ)
ಪ್ರಭಾಕರ ದೇವಾಡಿಗ,
ಅಭಿಜಿತ್ ಪ್ರಕಾಶನ,
ಮುಂಬೈ, ಸಂಪರ್ಕ :8451018825
ಬೆಲೆ: ರು. 150/

ಆ ಬಳಿಕ ಅವರು ಗೈದ ರಂಗ ಪರಿಚಾರಿಕೆ, ಅವರ ಜೀವನಯಾನ ಯಾರನ್ನೂ ಬೆರಗುಗೊಳಿಸುವಂತಿದೆ. ಕಂಪನಿ ನಾಟಕ, ವಿವಿಧ ಯಕ್ಷಗಾನ ಮೇಳಗಳಲ್ಲಿ ಅವರು ಬಹು ಬೇಡಿಕೆಯ ಕಲಾವಿದರಾಗಿ ಜನಪ್ರಿಯರಾದವರು.

ಇವರು ಚಲನಚಿತ್ರಗಳಲ್ಲೂ ಅಭಿನಯಿಸಿದ್ದಾರೆ. 'ಸಂದರ್ಭ', 'ಒಂದು ಊರಿನ ಕಥೆ', 'ಪ್ರೇಮವೇ ಬಾಳಿನ ಬೆಳಕು' ಮೊದಲಾದ ಸಿನಿಮಾಗಳಲ್ಲಿ ಅವರು ನಟಿಸಿದ್ದಾರೆ. ಮುಂಬೈ ಹಾಗೂ ಕನ್ನಡ ದೂರದರ್ಶನಗಳಲ್ಲಿ ಕಲಾವಿದರಾಗಿ ನಟಿಸಿದವರು. ಮುಂಬೈಯಲ್ಲಿ ತುಳು ಕನ್ನಡ ಹಿಂದಿ ರಂಗಭೂಮಿಯಲ್ಲಿಯು ಕಲಾವಿದನಾಗಿ ಅವರು ಮೆರೆದವರು. ಸ್ವತಹ ತಾವೇ ಕೆಲವು ನಾಟಕಗಳನ್ನು ಬರೆದು ಆಡಿಸಿ ಹೊಸ ಕಲಾವಿದರನ್ನು ಬೆಳಕಿಗೆ ತಂದರು. ಹೊರನಾಡಿ ನಲ್ಲಿದ್ದು ತನು ಶುದ್ಧ ಮನ ಶುದ್ಧ ಭಾವ ಶುದ್ಧವಾಗಿ ಕನ್ನಡ ಸಂಸ್ಕೃತಿಯ ಬೆಳವಣಿಗೆಗೆ ನಿರಂತರವಾಗಿ ಶ್ರಮಿಸಿದ ಈ ಕಲಾವಿದನಿಗೆ ಈಗ 76ರ ಹರೆಯ. ಈ ಹಿರಿಯ ಕಲಾವಿದನನ್ನು ಇನ್ನಾದರೂ ಕರ್ನಾಟಕ ಸರ್ಕಾರ ಗೌರವಿಸುವಂತಾಗಬೇಕು.

ದಕ್ಷಿಣ ಭಾರತದ ಬಹುಭಾಗದ ಪರಿಸರವನ್ನು, ವಾತಾವರಣವನ್ನು ಮತ್ತು ಜನರ ಬದುಕನ್ನು ಕಾಪಾಡುತ್ತಿರುವ ಪಶ್ಚಿಮ ಘಟ್ಟಗಳು ಅವ್ಯಾಹತ ವಿನಾಶವನ್ನು ಎದುರಿಸುತ್ತಿದೆ. ಪಶ್ಚಿಮ ಘಟ್ಟಗಳ ಮೌಲ್ಯವನ್ನು ವಿವರಿಸುವ ಈ ಕೃತಿ, ಒಂದು ಎಚ್ಚರಿಕೆಯ ಗಂಟೆಯನ್ನೇ ಬಾರಿಸುತ್ತಿದೆ; ಜನರು, ಅಧಿಕಾರದಲ್ಲಿರುವವರು ಕೇಳಿಸಿಕೊಳ್ಳಬೇಕಷ್ಟೆ.

ಎಚ್ಚರಿಕೆಯ ಗಂಟೆ ಬಾರಿಸುತ್ತಿದೆ!

» ಪ್ರಸಾದ್ ಜಿ.ಎಂ. ಮೈಸೂರು

ಇತ್ತೀಚೆಗೆ ಪಶ್ಚಿಮ ಘಟ್ಟಗಳಿಗೆ ಸಂಬಂಧಿಸಿದ ಕೃತಿಯೊಂದು ಕನ್ನಡಕ್ಕೆ ಅನುವಾದಗೊಂಡಿದೆ. ಬಿ. ವಿಜು ಅವರು ಬರೆದ 'ಫ್ಲಡ್ ಅಂಡ್ ಫ್ಯುರಿ: ಇಕಾಲಾಜಿಕಲ್ ಡಿವಾಸ್ಟೇಷನ್ ಇನ್ ವೆಸ್ಟರ್ನ್ ಘಾಟ್ಸ್' ಕೃತಿಯನ್ನು ಕಾರ್ತಿಕಾದಿತ್ಯ ಬೆಳ್ಗೋಡುರವರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಪಶ್ಚಿಮ ಘಟ್ಟಗಳು ಸೂಕ್ಷ್ಮ ಪರಿಸರ ವಲಯವಾಗಿದ್ದು, ಯುನೆಸ್ಕೋ ಮಾನ್ಯತೆಯನ್ನೂ ಪಡೆದಿದೆ. ಪಶ್ಚಿಮ ಘಟ್ಟಗಳಿಗೆ ನಿರಂತರವಾಗಿ ಆಗುತ್ತಿರುವ ಅಪಾಯಗಳ ಬಗ್ಗೆ ಜಾಗೃತಿ ಮೂಡಿಸುವಂತೆ ಈ ಪುಸ್ತಕ ರೂಪುಗೊಂಡಿದೆ.

ಕೇರಳದಿಂದ ಗುಜರಾತಿನವರೆಗೆ ವ್ಯಾಪಿಸಿರುವ ಪಶ್ಚಿಮ ಘಟ್ಟಗಳು ಇಂದು ತಾಪಮಾನ ಏರಿಕೆ, ಹವಾಮಾನ ಬದಲಾವಣೆ, ಭೂ ಕುಸಿತ, ನೆರೆ, ಪ್ರವಾಹ, ಎಗ್ಗಿಲ್ಲದೆ ಸಾಗುತ್ತಿರುವ ಅನವಶ್ಯಕ ಅಭಿವೃದ್ಧಿ ಕಾಮಗಾರಿಗಳು, ಸಾಮೂಹಿಕ ಅರಣ್ಯ ನಾಶ, ಮಿತಿಮೀರಿದ ಗಣಿಗಾರಿಕೆ, ನದಿಗಳ ಮಾಲಿನ್ಯ, ನಗರೀಕರಣ ಹಾಗೂ ವ್ಯವಸ್ಥೆಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಅಪಾಯಕ್ಕೆ ಸಿಲುಕಿವೆ. ''ದೇವಭೂಮಿಯ ಮಹಾಪತನ'' ಕೃತಿಯಲ್ಲಿ ಕೇರಳದ ಇಡುಕ್ಕಿ, ಪತ್ತನಂತಿಟ್ಟ, ಕುಟ್ಟನಾಡು, ಚಾಲಕುಡಿ, ಪಾಲಕ್ಕಾಡ್, ವಯನಾಡ್, ಕರ್ನಾಟಕದ ಕೊಡಗು ಮತ್ತು ಚಿಕ್ಕಮಗಳೂರು, ಗೋವಾದ ಬಿಚೋಲಿಂ, ಮಹಾರಾಷ್ಟ್ರದ ಸಿಂಧುದುರ್ಗಗಳಲ್ಲಿ ಪಶ್ಚಿಮ ಘಟ್ಟಗಳಿಗೆ ಆಗುತ್ತಿರುವ ಅಪಾಯವನ್ನು ತೆರೆದಿಡಲಾಗಿದೆ.

ಕೃತಿಯ ಆರಂಭದಲ್ಲಿ ಅನುವಾದಕರು ''ಪಶ್ಚಿಮ ಘಟ್ಟದ ಪ್ರತಿಯೊಂದು ಅನುಕೂಲಗಳನ್ನು ಒಂದಿಷ್ಟು ಬಿಡದಂತೆ ಅನುಭವಿಸುತ್ತಿರುವ ನಾವು, ಪ್ರತಿಯಾಗಿ ಪಶ್ಚಿಮ ಘಟ್ಟಕ್ಕೆ ಏನನ್ನು ಕೊಟ್ಟಿದ್ದೇವೆ?'' ಎಂದು ಪ್ರಶ್ನಿಸಿದ್ದಾರೆ. ಈ ಪ್ರಶ್ನೆಗೆ ನಾವೆಲ್ಲರೂ ಉತ್ತರಿಸಬೇಕಿದೆ. ಈ ಕೃತಿಯು ಮಾನವನಿಂದ ಪರಿಸರದ ಮೇಲೆ ಆಗುತ್ತಿರುವ ಹತ್ಯಾಕಾಂಡದ ಕೊಲಾಜ್ ಕೃತಿಯಂತಿದ್ದು, ಮಾನವನ ದುರಾಸೆ ಪ್ರಕೃತಿಯನ್ನು ಹೇಗೆ ಹಾಳುಮಾಡುತ್ತಿದೆ ಎಂದು ಕೃತಿಕಾರರು ವಿವರಿಸಿದ್ದಾರೆ. ಕೇರಳದಲ್ಲಿ ಹಲವರ ಸಾವಿಗೆ ಕಾರಣವಾದ ಪ್ರವಾಹದ ಹಿಂದಿರುವ ಕಾರಣಗಳನ್ನು ಬಿಚ್ಚಿಟ್ಟಿದ್ದಾರೆ. ಈ ಕೃತಿಯ ಲೇಖಕರು ಪಶ್ಚಿಮ ಘಟ್ಟಗಳು ವ್ಯಾಪಿಸಿರುವ ರಾಜ್ಯಗಳಲ್ಲಿ ವ್ಯಾಪಕವಾಗಿ ಸಂಚರಿಸಿದ್ದಾರೆ. ಪರಿಸರ ಮತ್ತು ಅದರ ಸಂರಕ್ಷಣೆ ಬಗ್ಗೆ ಒಲವು ಹೊಂದಿರುವವರು ಈ ಕೃತಿಯನ್ನು ತಪ್ಪದೇ ಓದಬೇಕು.

ಇಲ್ಲಿರುವ ಹಲುವ ಛಾಯಾಚಿತ್ರಗಳು ಮನಸ್ಸಿಗೆ ತಟ್ಟುತ್ತವೆ, ಪ್ರಮುಖ ಅಂಕಿ-ಅಂಶಗಳು ಓದುಗರ ಕಣ್ತೆರೆಸುವಂತಿವೆ. ಕೇರಳದ ಸಂನ್ಯಾಸಿ ನಾರಾನಾಥು ಬ್ರಾಂಥನ್ ಬೆಟ್ಟದ ಮೇಲಿಂದ ದೊಡ್ಡ ಕಲ್ಲುಗಳನ್ನು ಉರುಳಿಸಿ, ಅದನ್ನು ನೋಡಿ ನಗುತ್ತಿರುವ ಪ್ರಸಂಗವನ್ನು ಹೇಳುತ್ತಾ, ಈ ಮೂಲಕ ಮನುಷ್ಯನ ದುರಾಸೆಯಿಂದ ಪಶ್ಚಿಮ ಘಟ್ಟಗಳಿಗೆ ಆಗುತ್ತಿರುವ ತೊಂದರೆಗಳನ್ನು ರೂಪಕದ ಸ್ವರೂಪದಲ್ಲಿ ಹೇಳಿದ್ದಾರೆ. 2018ರಲ್ಲಿ ಕೇರಳದಲ್ಲಿ ಸಂಭವಿಸಿದ ಪ್ರವಾಹವನ್ನು ದೀರ್ಘಕಾಲೀನ ಪರಿಸರ ವಿನಾಶದ ನೇರ



ದೇವಭೂಮಿಯ ಮಹಾಪತನ
ಮೂಲ : ಬಿ. ವಿಜು
ಅನು: ಕಾರ್ತಿಕಾದಿತ್ಯ ಬೆಳ್ಗೋಡು
ಪ್ರ: ಕಾಂಕ್ಲೇವ್ ಮಾಧ್ಯಮ ಮತ್ತು ಪ್ರಕಾಶನ ಬೆಂಗಳೂರು
ಬೆಲೆ ರು.325/-

ಪರಿಣಾಮವಾಗಿ ರೂಪಿಸುವ ಕೆಲಸವನ್ನು, ಪಶ್ಚಿಮ ಘಟ್ಟಗಳ ವ್ಯಾಪ್ತಿಯಲ್ಲಿ ನಡೆದ ಅಕ್ರಮ ಗಣಿಗಾರಿಕೆ ಮತ್ತು ಅರಣ್ಯನಾಶದ ದೊಡ್ಡ ಪ್ರಮಾಣದ ಪರಿಣಾಮವನ್ನು ಈ ಪುಸ್ತಕ ದಾಖಲಿಸುತ್ತದೆ. ಕೈಗಾರಿಕಾ ಅಭಿವೃದ್ಧಿಯಿಂದ ಬುಡಕಟ್ಟು ಜನಾಂಗದವರು ಸೇರಿದಂತೆ ಸ್ಥಳೀಯ ಸಮುದಾಯಗಳ ಸುಸ್ಥಿರ ಜೀವನಶೈಲಿಯನ್ನು ಹೇಗೆ ಹಾಳುಗೆಡವಲಾಗುತ್ತಿದೆ ಎಂಬುದನ್ನು ವಿಶ್ಲೇಷಣೆಯೊಂದಿಗೆ ತೆರೆದಿಟ್ಟಿದೆ. 2018ರ ಪ್ರಾಕೃತಿಕ ವಿಕೋಪಗಳಿಗೆ ಪ್ರೊ. ಮಾಧವ್ ಗಾಡ್ಗಿಳ್ ನೇತೃತ್ವದ ಪಶ್ಚಿಮ ಘಟ್ಟಗಳ ಪರಿಸರ ವಿಜ್ಞಾನ ತಜ್ಞರ ಸಮಿತಿಯ ವರದಿಯನ್ನು ನಿರ್ಲಕ್ಷ್ಯ ಮಾಡಿದ್ದು ನೇರ ಕಾರಣ ಎಂದು ಇಲ್ಲಿ ಪುರಾವೆ ಸಹಿತ ಹೇಳಲಾಗಿದೆ.

ಸಹಸ್ರಾರು ವರ್ಷಗಳಿಂದ ನಮ್ಮನ್ನು ಪೋಷಿಸುತ್ತಾ ಬಂದಿರುವ ಪಶ್ಚಿಮ ಘಟ್ಟಗಳ ಅಮೂಲ್ಯ ಪರಿಸರ ವ್ಯವಸ್ಥೆ ಬಗ್ಗೆ ಇಂದು ಅಧಿಕಾರದಲ್ಲಿರುವವರಿಗೆ ಮತ್ತು ಬಹುಪಾಲು ಉದ್ಯಮಿಗಳಿಗೆ, ಜನರಿಗೆ ಗಮನವಿಲ್ಲ. ಅದರ ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಯಾರೂ ಕಾರ್ಯೋನ್ಮುಖವಾಗುತ್ತಿಲ್ಲ. ಇದೊಂದು ದುರಂತವೇ ಸರಿ. ಪಶ್ಚಿಮ ಘಟ್ಟಗಳ ಬಗ್ಗೆ ನಮ್ಮ ಧೋರಣೆಯನ್ನು ತಿದ್ದುಕೊಳ್ಳಲು ಪ್ರಕೃತಿ ನಮಗೆಲ್ಲರಿಗೂ ಎಚ್ಚರಿಕೆ ಗಂಟೆ ಕೊಡುತ್ತಿದೆ, ಅಲ್ಲಿ ನಿರಂತರವಾಗಿ ನಡೆಯುತ್ತಿರುವ ವಿನಾಶವನ್ನು ಈ ಪುಸ್ತಕ ವಿವರಿಸಿ, ಆ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ನಡೆಸುತ್ತಿದೆ.

ಕನ್ನಡಪ್ರೇಮಿಯ ನೆನಪುಗಳು

ಕನ್ನಡದ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿದ್ದು, ಕನ್ನಡ ಪರ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಬಾ.ಹ. ಉಪೇಂದ್ರ ಅವರು ಇತ್ತೀಚೆಗೆ ಇಹಲೋಕ ತ್ಯಜಿಸಿದ ಸಂದರ್ಭದಲ್ಲಿ, ಅವರ ನೆನಪಿನಲ್ಲಿ ಅವರ ಗೆಳೆಯರು, ಹಿತೈಷಿಗಳು ಮತ್ತು ಕನ್ನಡಾಭಿ ಮಾನಿಗಳು ರೂಪಿಸಿದ ಪುಸ್ತಕವಿದು. ವಿವಿಧ ಹುದ್ದೆಗಳಲ್ಲಿದ್ದುಕೊಂಡು, ತಮ್ಮ ಕರ್ತವ್ಯದ ಜವಾಬ್ದಾರಿಯನ್ನು ನಿಭಾಯಿಸುತ್ತಲೇ, ಅದೇ ಸಂದರ್ಭ ದಲ್ಲಿ ಕನ್ನಡ ಪರಿ ಕಾಳಜಿಯನ್ನು ಜೀವಂತವಾಗಿಟ್ಟುಕೊಂಡು, ಕನ್ನಡ ಹೋರಾಟಗಳಲ್ಲಿ ಭಾಗವಹಿಸಲು ಸಾಧ್ಯ ಎಂದು ತೋರಿಸಿಕೊಟ್ಟವರು ಬಾ.ಹ. ಉಪೇಂದ್ರ. ಸಾರ್ವಜನಿಕ ಕ್ಷೇತ್ರದ ದೊಡ್ಡ ಉದ್ದಿಮೆ ಯೊಂದರಲ್ಲಿ ಹಿರಿಯ ಅಧಿಕಾರಿ ಯಾಗಿದ್ದುಕೊಂಡಿ ದ್ದಾಗಲೇ, ಆ ಸಂಸ್ಥೆಯಲ್ಲಿ ಕನ್ನಡದ ಮೇಲಾಗುತ್ತಿದ್ದ ದಬ್ಬಾಳಿಕೆಯನ್ನು ವಿರೋಧಿಸಿ, ತಮ್ಮ ಕಾರ್ಯಕ್ಷೇತ್ರದಲ್ಲಿ



ಕನ್ನಡ ನುಡಿಯೋಧ ಬಾ. ಹ.ಉಪೇಂದ್ರ
ಸಂ: ಎಸ್.ಶಿವಲಿಂಗಯ್ಯ,
ಬಿ.ವಿ.ರವಿಕುಮಾರ್, ಆರ್.ರಾಮಸ್ವಾಮಿ
ಪ್ರ: ಕನ್ನಡ ಗೆಳೆಯರ ಬಳಗ, ಕತ್ರಿಗುಪ್ಪೆ,
ಬೆಂಗಳೂರು, 08026794508
ಬೆಲೆ: ಕನ್ನಡ ಪ್ರೀತಿ

ಕನ್ನಡದ ಅನುಷ್ಠಾನಕ್ಕೆ ಸಕ್ರಿಯವಾಗಿ ಸಹಕರಿಸಿ ದವರು. ಅವರ ಇಲಾಖೆಯ ಸಿಬ್ಬಂದಿಯು ಕನ್ನಡದಲ್ಲೇ ವ್ಯವಹರಿಸಲು, ಕಚೇರಿ ಸಂಬಂಧಿಸಿದ ಕೆಲವು ದಾಖಲೆಗಳನ್ನು ತಯಾರಿಸಲು ಅನುಮತಿ ನೀಡಿದ್ದರು. ಆದರೆ, ಇದನ್ನು ಮೆಚ್ಚದೇ ಇದ್ದ ಅವರ ಹಿರಿಯ ಅಧಿಕಾರಿಗಳು, ಇವರ ಪದೋನ್ನತಿಗೆ ತೊಡಕನ್ನುಂಟು ಮಾಡಿದ್ದರು! ಇದರ ಅರಿವಿದ್ದುಕೊಂಡೇ, ಕನ್ನಡದ ಹೋರಾಟವನ್ನು ಮುಂದುವರಿಸಿ ಕೊಂಡು ಬಂದು, ನಿವೃತ್ತಿಯ ನಂತರವೂ ಕನ್ನಡಪರ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು, ಬಾ.ಹ. ಉಪೇಂದ್ರ ಅವರು. ಜತೆಗೆ, ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ನಡೆಯುತ್ತಿದ್ದ ಕನ್ನಡದ ಕೆಲಸಗಳಿಗೆ ಉದಾರವಾಗಿ ಧನಸಹಾಯವನ್ನೂ ಮಾಡುತ್ತಿದ್ದ ದಾನಿ. ಅವರು ಲೇಖಕರೂ ಹೌದು. ಕರ್ನಾಟಕಕ್ಕೆ, ಕನ್ನಡಕ್ಕೆ ಇವರು ನೀಡಿದ ಕೊಡುಗೆಯನ್ನು ಆತ್ಮೀಯವಾಗಿ ನೆನಪಿಸಿಕೊಂಡು, ಸುಮಾರು 36 ಜನರು ಬರೆದ ಬರಹಗಳು ಇಲ್ಲಿವೆ. ಕನ್ನಡ ಪರ ಮನಸ್ಸುಗಳ ಕೊಡುಗೆಯನ್ನು ಹೀಗೂ ಸ್ಮರಿಸಬಹುದು ಎಂಬುದಕ್ಕೆ ಉತ್ತಮ ಉದಾಹರಣೆಯಂತಿದೆ ಈ ಪುಟ್ಟ ಪುಸ್ತಕ.

ಐದು ಸಂಪುಟಗಳಲ್ಲಿ ಮೌಲಿಕ ಬರಹಗಳು

'ಯಡೆಸಾಲು' ಹೆಸರಿನಲ್ಲಿ ಐದು ಸಂಪುಟಗಳಲ್ಲಿ ಹೊರಬಂದಿರುವ ಬರಹ ಮತ್ತು ಕೃತಿಗಳು ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಸಾಮಾಜಿಕ ಮಹತ್ವವನ್ನು ಹೊಂದಿವೆ.

» ದ್ವಾರನಕುಂಟೆ ಪಾತಣ್ಣ

ಸಾಹಿತಿಗಳು ಹೊರತರುವ ಸಮಗ್ರ ಸಾಹಿತ್ಯ ಸಂಪುಟಗಳ ಕುರಿತು ಎಸ್ ಜಿ ಸಿದ್ದರಾಮಯ್ಯ ಅವರು ಹೇಳುತ್ತಾರೆ : 'ಸಮಗ್ರ ಎನ್ನುವುದು ಯಾವಾಗಲೂ ಅಸಮಗ್ರದ ಅರಿವಿನೆಚ್ಚರದಲ್ಲಿ ಪರಿಭಾವನೆಗೆ ದಕ್ಕುವ ಪದ. ಸಮಗ್ರ ಎನ್ನುವುದು ಆ ಕ್ಷಣದ ಒಟ್ಟು ಮೊತ್ತದ ಲೆಕ್ಕರೂಪವೇ ಹೊರತು ಅದು ಪರಿಪೂರ್ಣ ಸಮಗ್ರವಲ್ಲ. ಬರಹಕ್ಕೆ ಸಂಬಂಧಪಟ್ಟಂತೆ ಈ ಪದ ಪ್ರಯೋಗ ಬರಹಗಾರನೊಬ್ಬನು ಬರೆಯುವುದನ್ನು ನಿಲ್ಲಿಸಿದಾಗ ಮಾತ್ರ ಅದುವರೆಗಿನ ಅವನ ಬರಹದ ಬರವಣಿಗೆಗೆ ಅವನ ಸಮಗ್ರ ಬರಹ ಎಂಬ ಪ್ರಯೋಗ ಸರಿ ಹೋಗುತ್ತದೆ. ಆದರೆ ಇನ್ನೂ ಬರಹಗಾರ ಜೀವಂತವಿದ್ದಾಗ ಆ ಪದಪ್ರಯೋಗ ಸರಿ ಹೊಂದುವುದಿಲ್ಲ. ಹೀಗಾಗಿ ಇವು ನನ್ನ ಗದ್ಯ ಸಮಗ್ರಗಳಲ್ಲ, ಅಸಮಗ್ರವೇ ಆಗಿವೆ''. ಎಸ್. ಜಿ ಸಿದ್ದರಾಮಯ್ಯ ಅವರು ತಮ್ಮ ಎಲ್ಲಾ ಬರಹಗಳನ್ನು 'ಯಡೆಸಾಲು' ಎಂಬ ಐದು ಸಂಪುಟಗಳಲ್ಲಿ ಅಡಕಗೊಳಿಸಿದ್ದು, ಆ ಸಂದರ್ಭದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವಿದು.

'ಯಡೆಸಾಲು' ಸಂಪುಟ ಒಂದರಲ್ಲಿ ಜಾನಪದಕ್ಕೆ ಸಂಬಂಧಿಸಿದ ಬರಹಗಳು, ಸಂಪುಟ ಎರಡರಲ್ಲಿ ಕಥೆ, ಕಾದಂಬರಿ, ನಾಟಕ, ವಿಮರ್ಶೆಗಳು, ಸಂಪುಟ ಮೂರರಲ್ಲಿ ಕಾವ್ಯ, ಮುನ್ನುಡಿಗಳು, ಸಂಪುಟ ನಾಲ್ಕರಲ್ಲಿ ಸಂಸ್ಕೃತಿ, ಸಮಾಜ, ವಿಚಾರ, ಪ್ರವಾಸಗಳು ಹಾಗೂ ಸಂಪುಟ ಐದರಲ್ಲಿ ವಚನ ಧರ್ಮ, ಅರಿವಿನ ಬೆರಗು ಈ ರೀತಿಯ ಬರಹಗಳಿವೆ.

ಸಂಪುಟ ಒಂದು : ಜಾನಪದ: ಇದರಲ್ಲಿ ಎರಡು ವಿಭಾಗಗಳಿವೆ. ಮೊದಲನೆಯ ವಿಭಾಗದಲ್ಲಿ ಜನಪದಕ್ಕೆ ಸಂಬಂಧಿಸಿದ 10 ಲೇಖನಗಳಿವೆ. 'ಕೆರೆಗೆ ಹಾರ' ಈಗಾಗಲೇ ಜನಜನಿತವಾದ ಒಂದು ಕಥನ ಗೀತೆ; ಈ ಕಥನ ಗೀತೆ ಬಗ್ಗೆ ಅನೇಕ ಅಧ್ಯಯನಗಳು ಬಂದಿವೆ. ಇಂತಹ ಕಥನಗೀತೆಯ ಮಹತ್ವವನ್ನು, ಇದರ ಆಳದೊಳಗೆ ಅಡಗಿರುವ ಮಾನವೀಯ ತುಮುಲವನ್ನು ಎಸ್ ಜಿ ಸಿದ್ದರಾಮಯ್ಯ ಅವರು ತಲಸ್ಪರ್ಶಿ ಒಂದು ಲೇಖನದಲ್ಲಿ ಕಟ್ಟಿಕೊಟ್ಟಿದ್ದಾರೆ. ಎರಡನೇ ವಿಭಾಗದ 'ಹಾಲುಮತ ಪುರಾಣ'ದಲ್ಲಿ ಏಳು ಅಧ್ಯಾಯಗಳಿವೆ. ಪುರಾಣದ ವಿವಿಧ ಶಾಖೆಗಳಾದ ಮಹಾಕಾವ್ಯ, ಜನಪದ ಪುರಾಣ, ಅವುಗಳ ಚರಿತ್ರೆಗಳ ನೆಲೆಯಲ್ಲಿ ಒಳನೋಟದ ವಿಶಾಲವಾದ ಅರ್ಥವ್ಯಾಖ್ಯಾನಕ್ಕೆ ಒಳಗಾಗಿವೆ. ಇದರಲ್ಲಿ ಬರುವ 'ಕುರುಬರ ವೃತ್ತಿ ಧರ್ಮ, ಅವರ ಸಮೂಹ ಪ್ರಜ್ಞೆಯ ಕುರಿತಾದ ಬರಹದಲ್ಲಿ, ಜಾಗತಿಕ ಇತಿಹಾಸದಲ್ಲಿ ಕುರುಬ ಜನಾಂಗವೇ ಜಗತ್ತಿನ ಮೂಲ ಪುರುಷ ಎಂಬುದನ್ನು ತಿಳಿಸಲಾಗಿದೆ. ಜೊತೆಗೆ ಕುರುಬರ ಆಚಾರ, ವಿಚಾರ, ಒಳಪಂಗಡ, ಮದುವೆ ವೃತ್ತಾಂತ ಮುಂತಾದವುಗಳನ್ನು ವಿಸ್ತಾರವಾಗಿ ದಾಖಲಿಸಿದ್ದಾರೆ, ಕುರುಬರ ಆರಾಧ್ಯ ದೈವ ಮೈಲಾರಲಿಂಗನ ಕಾವ್ಯ, ಮಹಾಲಿಂಗನ ಕಾವ್ಯ ಮೊದಲಾದವುಗಳು, 'ಚರಿತ್ರೆಯನ್ನು ಪುರಾಣದ ಆವರಣದಲ್ಲಿ ಬರೆದು ಕಟ್ಟಿದ ಕಾವ್ಯ' ಎನ್ನುತ್ತಾರೆ.

ಸಂಪುಟ ಎರಡರಲ್ಲಿ ಕಥೆ, ಕಾದಂಬರಿ, ನಾಟಕ, ವಿಮರ್ಶೆಗಳಿವೆ. ಕುವೆಂಪು ಅವರ 'ಕಾನೂರು ಮದುಮಗಳು ಹೀಗೆ' ಎಂಬ ಶೀರ್ಷಿಕೆಯಲ್ಲಿ ಕಾನೂರು ಹೆಗ್ಗಡತಿ ವಸ್ತುವಿನೊಂದಿಗೆ ರಾಮಾಯಣದ ಕಥಾನಕದ ವಿಘಟನೆಯ ತುಲನಾತ್ಮಕ ವಿಶ್ಲೇಷಣೆ ಇದೆ. ಕಾನೂರು ಹೆಗ್ಗಡತಿಗೆ ರಾಮಾಯಣವನ್ನು ಹೋಲಿಸಿದರೆ, ಮದುಮಗಳು ಮಹಾಭಾರತವನ್ನು ಹೋಲುತ್ತದೆ; ಮಗಳು ಮತ್ತು ಹೆಗ್ಗಡತಿಯ ಬದುಕಿನ ವಿವಕ್ಷೆ ಕೂಡ ಈ ಸ್ಥಿತ್ಯಂತರದ ಮುಖಾಮುಖಿತ್ವದಲ್ಲಿ ಸಂಬಂಧಾತ್ಮಕ ಬಂಧಪೂರ್ಣತೆಯನ್ನು ಒಳಗೊಂಡ ಗತಿಯದು ಎನ್ನುತ್ತಾರೆ.



ಯಡೆ ಸಾಲು ಐದು ಸಂಪುಟಗಳು
ಲೇ: ಎಸ್ ಜಿ ಸಿದ್ದರಾಮಯ್ಯ

12ನೆಯ ಶತಮಾನದ ವಚನ ಕ್ರಾಂತಿಯನ್ನು ವಸ್ತುವಾಗಿಸಿಕೊಂಡ ರಚಿತವಾದ ನಾಟಕಗಳಾದ ಕಾರ್ನಾಡರ 'ತಲೆದಂಡ', ಲಂಕೇಶರ 'ಸಂಕ್ರಾಂತಿ', ಶಿವಪ್ರಕಾಶ್‌ರ 'ಮಹಾಚೈತ್ರ' ನಾಟಕಗಳನ್ನು ತೌಲನಿಕವಾಗಿ ಪರಿಭಾವಿಸುವುದು ತುಂಬಾ ಕುತೂಹಲದ ಸಂಗತಿ ಎಂದಿದ್ದಾರೆ. 'ಸಂಬಂಜ ಅನ್ನೋದು ದೊಡ್ಡದು ಕಣಾ' ಲೇಖನದಲ್ಲಿ 1979ರಲ್ಲಿ ಧರ್ಮಸ್ಥಳದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಗೋಪಾಲಕೃಷ್ಣ ಅಡಿಗರನ್ನು ಸಮ್ಮೇಳನ ಅಧ್ಯಕ್ಷರಾಗಿ ಮಾಡಿದ ಸಂದರ್ಭದಲ್ಲಿ ಉಂಟಾದ ವಾದ - ವಿವಾದಗಳ ಕುರಿತು ಬರೆದಿದ್ದಾರೆ; ಸಮ್ಮೇಳನದಲ್ಲಿ ದಲಿತ ಪರ ಕುರಿತ ಗೋಷ್ಠಿಯನ್ನು ಇಡುವಂತೆ ಒತ್ತಡಗಳು ಬಂದಾಗ, ಅಂದಿನ ಕಸಾಪ ಅಧ್ಯಕ್ಷರು ನೀಡಿದ ಒಂದು ಹೇಳಿಕೆಯು, ಆ ದಿನಗಳಲ್ಲಿ ಬಂಡಾಯ ಸಾಹಿತ್ಯ ಸಂಘಟನೆಗೆ ಕಾರಣವಾಯಿತು, ಅದನ್ನು ದಿಟ್ಟವಾಗಿ ಎದುರಿಸಿ ಸ್ಪಷ್ಟ ನಿಲುವು ತಳೆದವರು ಚಂಪಾ ಅವರೊಬ್ಬರೇ ಎಂದು ಗುರುತಿಸಿದ್ದಾರೆ.

ಕಾವ್ಯ ಕುರಿತು

ಸಂಪುಟ ಮೂರರಲ್ಲಿ ಕಾವ್ಯ ಕುರಿತ ವಿಮರ್ಶೆಗಳು ಹಾಗೂ ವಿವಿಧ ಕವನಸಂಕಲನಕ್ಕೆ ಬರೆದ ಮುನ್ನುಡಿಗಳಿವೆ. ಪುತಿನ ಅವರ ಬೆದೆ ಒಲುಮೆ ಮತ್ತು ದಾಳಿಂಬೆ ಕವನಗಳನ್ನು ವಿಮರ್ಶೆ ಮಾಡಿದ್ದಾರೆ. ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟ, ವೀಚಿ, ಜಿಎಸ್ಎಸ್, ಚಂದ್ರಶೇಖರ ಕಂಬಾರ, ಸು ರಂ ಎಕ್ಕುಂಡಿ, ನಿಸಾರ್ ಅಹಮದ್ ಮುಂತಾದವರ ಕಾವ್ಯ ಸಾಧ್ಯತೆಗಳನು, ಕಲಾತ್ಮಕತೆಯನ್ನು ಮೀಮಾಂಸೆ ಮತ್ತು ವಿಮರ್ಶೆಯ ಸಿದ್ಧಾಂತಗಳ ಅಡಿಯಲ್ಲಿ ಚರ್ಚಿಸಿದ್ದಾರೆ.

ಸಂಪುಟ ನಾಲ್ಕರಲ್ಲಿ ಸಂಸ್ಕೃತಿ, ಸಮಾಜ, ವಿಚಾರ, ಪ್ರವಾಸ ಕುರಿತ ಬರಹಗಳನ್ನು ಅಡಕಗೊಳಿಸಲಾಗಿದೆ. ಒಂದು ಭಾಷೆ, ಒಂದು ಧರ್ಮ, ಒಂದು ಸಂಸ್ಕೃತಿ, ಒಂದು ಪರಂಪರೆ, ಜಾತಿ ವ್ಯವಸ್ಥೆ, ಸರ್ವಾಧಿಕಾರಿ ಧೋರಣೆ ಹಾಗೂ ಸಮಾಜದಲ್ಲಿ ನರಳುತ್ತಿರುವ ಬಹು ಸಮುದಾಯಗಳ ನೋವುಗಳ ಪರವಾದ ವಿಚಾರಗಳನ್ನು ಚರ್ಚಿಸುವ, ಅವರ ಪರವಾಗಿ ಧ್ವನಿ ಎತ್ತುವ ದಿಟ್ಟತನದ ಮನೋಭಾವದ ಹಿನ್ನೆಲೆಯಲ್ಲಿ ಮೂಡಿಬಂದ ಬರಹಗಳು ಇವು. ಮುಖ್ಯವಾಗಿ ಕನ್ನಡ ಭಾಷೆ - ಬದುಕು ಹಿನ್ನಲೆಯಲ್ಲಿ ಹಲವಾರು ಬರಹಗಳಿವೆ. ಪ್ರಾದೇಶಿಕ ಭಾಷೆ ಉಳಿದರೆ ಬಹುತ್ವ ಭಾರತವನ್ನು ಕಾಣಲು ಸಾಧ್ಯ, ಪ್ರಾದೇಶಿಕ ಭಾಷೆಯಲ್ಲೇಎಲ್ಲಾ ಆಡಳಿತ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅವಕಾಶ ಕಲ್ಪಿಸಿದರೆ ಕನ್ನಡ ಕನ್ನಡಿಗ ಕರ್ನಾಟಕ ಸಶಕ್ತವಾಗುತ್ತದೆ ಎನ್ನುತ್ತಾರೆ.

ಸಂಪುಟ ಐದರಲ್ಲಿ, ನಾಲ್ಕು ವಿಭಾಗಗಳಿವೆ. ಮೊದಲನೇ ವಿಭಾಗವು ಲಿಂಗಾಯತ ಕನ್ನಡ ವಚನ ಧರ್ಮದ ಅಡಿಯಲ್ಲಿ ಬರುವ ಐದು ಅಧ್ಯಾಯಗಳಿವೆ. ಅದರಲ್ಲಿ ಲಿಂಗಾಯತ ಪರ್ಯಾಯ ಧರ್ಮ ಕ್ರಾಂತಿಯ ಹೆಜ್ಜೆ ಹಿಡಿದು, ಹಿಂದೂ ಧರ್ಮ ಎಂಬುದೇ ಇತ್ತೀಚಿನ ಪರಿಕಲ್ಪನೆ, ಈ ಚಳುವಳಿಯ ನೇತೃತ್ವವನ್ನು ವಹಿಸಿಕೊಂಡವರು ಬಸವಣ್ಣನೆಂಬ ಶೀರ್ಷಿಕೆಗಳಲ್ಲಿ ವಿಚಾರ ಮಂಡನೆ ಮಾಡಿದ್ದಾರೆ. ಮೂರನೇ ವಿಭಾಗ ವಚನಧರ್ಮ ಅರಿವಿನ ಬೆರಗು ಇದರಲ್ಲಿ 159 ಲೇಖನಗಳಿವೆ. 12ನೇ ಶತಮಾನದ ವಚನಕಾರರು ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಬಸವಾದಿ ಶರಣರು ಸಮಾಜದಲ್ಲಿ ಬೇರೂರಿದ್ದ ಜಾತಿ ಪದ್ಧತಿ, ಅಸಮಾನತೆಯ ವಿರುದ್ಧ ಹೋರಾಡಿ ವಚನ ಚಳುವಳಿಗೆ ನಾಂದಿ ಹಾಡಿದರು. ಎಸ್ ಜಿ ಸಿದ್ದರಾಮಯ್ಯ ಅವರು ವಚನ ಸಾಹಿತ್ಯವನ್ನು ಅಧ್ಯಯನ - ಅಧ್ಯಾಪನ - ಉಪನ್ಯಾಸ - ಬರವಣಿಗೆ ಇತ್ಯಾದಿಯಾಗಿ ಜೀವನದುದ್ದಕ್ಕೂ ಅಳವಡಿಸಿಕೊಂಡಿದ್ದಾರೆ. ಯಾವುದೇ ಸಭೆ ಸಮಾರಂಭವಾಗಲಿ ಅವರು ವಚನದೊಂದಿಗೆ ಪ್ರಾರಂಭಿಸಿ, ಅದನ್ನು ಅರ್ಥೈಸುವ ರೀತಿ ಅಸಾಮಾನ್ಯವಾದುದು. ವಚನ ಸಾಹಿತ್ಯದ ಬೆಳವಣಿಗೆಗೆ ಅಹರ್ನಿಶಿ ದುಡಿದಿದ್ದಾರೆ.

ಈ ಐದು ಸಂಪುಟಗಳನ್ನು ಪುಟ್ಟ ಬರಹವೊಂದರಲ್ಲಿ, ಇಡಿಯಾಗಿ ವಿಮರ್ಶಿಸುವುದು ಕಷ್ಟಸಾಧ್ಯವಾದ ಕೆಲಸ ಎನ್ನಬಹುದು. ಆದ್ದರಿಂದ ಈ ಐದು ಸಂಪುಟಗಳನ್ನು ಪರಿಚಯಾತ್ಮಕವಾಗಿ ಪ್ರಸ್ತುತಪಡಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಈ ಐದು ಸಂಪುಟಗಳ ಒಟ್ಟಾರೆ ಕೊಡುಗೆ ಬಹು ಮೌಲ್ಯ ಉಳ್ಳದ್ದು.

ವಿಶ್ವವಾಣಿ ಅಂಕಿತ ಟಾಪ್ ಟೆನ್



1 ಕಾರಂತ ಸುಳಿಯಲ್ಲಿ
(ಶಿವರಾಮ ಕಾರಂತರನ್ನು ಕುರಿತು ಅವರ ಮಕ್ಕಳು ಬರೆದ ಕಾರಂತರ ಕಥೆ)
ಲೇ: ಉಲ್ಲಾಸಕಾರಂತ, ಮಾಲವಿಕಾ ಕಪೂರ, ಕ್ಷಮಾರಾವ್
ಕನ್ನಡಕ್ಕೆ: ವಿಶ್ವೇಶ್ವರಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ: ರೂ 395/-



2 ಗ್ರಾಮಫೋನ್ ಪಿನ್ ರಹಸ್ಯ
(ಭಾರತದ ಷರ್ಲಾಕ್ ಹೋಮ್ಸ್, ಬೆಂಗಾಲಿ ಪತ್ತೇದಾರ ವ್ಯೋಮಕೇಶ ಬಕ್ಷಿಯ ಸಾಹಸಗಳು)
ಬಂಗಾಳಿ ಮೂಲ: ಶರದೇಂದು ಬಂದೋಪಾಧ್ಯಾಯ
ಕನ್ನಡಕ್ಕೆ: ಎಂ.ವಿ. ನಾಗರಾಜರಾವ್
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ: ರೂ 250/-



3 ಕಥಾನಾಯಕನ ಕಥೆ - ಡಾ। ರಾಜಕುಮಾರ್ ಆತ್ಮ ಚರಿತ್ರೆ
(ನಾನೇ ಹೇಳಿ ಬರೆಸಿದ ನನ್ನ ಕಥೆ - ರಾಜಕುಮಾರ್)
ನಿರೂಪಣೆ: ಚಿ.ದತ್ತರಾಜ್
ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬೆಲೆ: ರೂ 1200/-

4 ನನ್ನ ಹೆಸರು ಗೌಹರ್ ಜಾನ್
(ಪ್ರಸಿದ್ಧ ಸಂಗೀತ ಕಲಾವಿದೆಯೊಬ್ಬರ ಜೀವನ ಕಥೆ. 2012 ರ ಸಾಹಿತ್ಯ ಅಕಾಡೆಮಿ ಯುವ ಪುರಸ್ಕೃತ ಕೃತಿ)
ಲೇ: ವಿಕ್ರಮ್ ಸಂಪತ್
ಅನು: ಶ್ರೀ ಗೌರಿ ಎಸ್.ಜೋಶಿ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ: ರೂ 595/-



5 ಶೂದ್ರ ಬಂಡಾಯ
(ಜಾತಿ ಸಮಸ್ಯೆಗೆ ಪರಿಹಾರವನ್ನೂ ಧರ್ಮದಲ್ಲಿಯೇ ಹುಡುಕಬೇಕಿದೆ ಎನ್ನುತ್ತಾರೆ ಕಂಚ ಐಲಯ್ಯ ಅವರು)
ಲೇ: ಕಂಚ ಐಲಯ್ಯ
ಅನು: ಜಯಲಕ್ಷ್ಮಿ.ಬಿ
ಪ್ರ: ಜೀರುಂಡೆ ಪ್ರಕಾಶನ, ಬೆಂಗಳೂರು
ಬೆಲೆ: ರು 350/-



6 ವಿಕ್ರಮಾದಿತ್ಯ
(ಯಾವುದೇ ಯುದ್ಧಗಳನ್ನು ಸೋಲದ, ಇಮ್ಮಡಿಯ ನಂತರ ಅತಿ ಹೆಚ್ಚು ಕಾಲ ವಾತಾಪಿ ಶಾಸನ ನಿರ್ವಹಿಸಿದ ಪುಲಕೇಶಿ ಪುತ್ರನ ಸಾಹಸಗಾಥೆ.)
ಲೇ: ಸಂತೋಷಕುಮಾರ ಮೆಹೆಂದಳೆ
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ: ರೂ 499/-



7 ಶಿಶುನಾಳ ಶರೀಫ್ ಸಾಹೇಬರು
(ಶ್ರೇಷ್ಠ ಸಂತ ಕವಿ, ತತ್ವಜ್ಞಾನಿ, ಅನುಭಾವಿ, ಸಮಾಜಸುಧಾರಕ ಶಿಶುನಾಳ ಶರೀಫರ ಬದುಕು ಬರಹ)
ಲೇ: ಶಿವಾನಂದ ಗುಬ್ಬಣ್ಣವರ
ಪ್ರ: ಸಾಹಿತ್ಯ ಅಕಾಡೆಮಿ, ನವದೆಹಲಿ
ಬೆಲೆ: ರೂ 100/-



8 ಬೇವಾಚ್
(ಲೈವ್ ಬ್ಯಾಂಡ್ ನರ್ತಕಿಯೊಬ್ಬಳ ಕತ್ತಲೆ ಬದುಕಿನ ಕಥೆ)
ಲೇ: ನೌಶಾದ್ ಜನ್ನತ್
ಪ್ರ: ವೀರಲೋಕ, ಬೆಂಗಳೂರು
ಬೆಲೆ: ರೂ 225/-



9 ದಡ ಸೇರಿಸು ತಂದೆ
(ಈ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಕಥಾ ಸಂಕಲನ)
ಲೇ: ಅಮರೇಶ ನುಗಡೋಣಿ
ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ
ಬೆಲೆ: ರೂ 200/-

10 ಟ್ರೀ ಆಫ್ ಲೈಫ್
(ಉತ್ತರ ಕರ್ನಾಟಕದ ಹಿನ್ನೆಲೆಯ ಡಾ। ಲೋಹಿತ್ ನಾಯ್ಕರ ಅವರ ಹೊಸ ಕಥೆಗಳು)
ಲೇ: ಡಾ। ಲೋಹಿತ್ ನಾಯ್ಕರ
ಪ್ರ: ಮನೋಹರ ಗ್ರಂಥ ಮಾಲಾ, ಧಾರವಾಡ
ಬೆಲೆ: ರೂ 300/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

ಕದನ ಕುತೂಹಲ!

ಮನೆಯಲ್ಲಿ ಜಗಳಗಳಿಂದಾಗುವ ಕೋಪತಾಪಕ್ಕೆ ಬೆದರಿ, ಅದರ ಸಹವಾಸವೇ ಬೇಡವೆಂದು ಮೌನವಾಗಿಯೇ ದಿನಗಳನ್ನು ಕಳೆದ ಲೇಖಕಿ, ಮದುವೆಯಾದ ನಂತರ ಜಗಳಾಡುವುದನ್ನು ಕಲಿತದ್ದಾದರೂ ಹೇಗೆ? ಅದಕ್ಕೆ ಯಾರ ಮಾರ್ಗದರ್ಶನ?

» ಪ್ರಭಾಮಣಿ ನಾಗರಾಜ

ಸುಲಲಿತ ಪ್ರಬಂಧ

ಹೊತ್ತು ಮೂಡಿ ಕುಕ್ಕುಟಗಳು 'ಕೊಕ್ಕೋ' ಎನ್ನುವ ಮೊದಲೇ, ಹಕ್ಕಿಗಳ ಚಿಲಿಪಿಲಿ ಗಾನ ಕಣ್ಮುಚ್ಚಿ ಕನಸು ಕಾಣುತ್ತಿದ್ದ ಮಕ್ಕಳ ಕಿವಿಗಳನ್ನು ಒಂದು ಸದ್ದು ಪ್ರವೇಶಿಸುತ್ತದೆ : ಅದೇ ಅಕ್ಕಪಕ್ಕದವರ ಕರ್ಣಕಠೋರವಾದ ಜಗಳದ ಅಬ್ಬರದ ಸುಪ್ರಭಾತದ ವಾದ್ಯ! ಅಷ್ಟರಲ್ಲಾಗಲೇ ಎದ್ದು ದೇವರ ನಾಮ ಹೇಳಿಕೊಳ್ಳುತ್ತಿದ್ದ ಅಜ್ಜಿ ಜಗಳದಲ್ಲಿನ ಅವಾಚ್ಯಗಳನ್ನು ಸಹಿಸದೆ ಕಿವಿಮುಚ್ಚಿಕೊಂಡು 'ರಾಮ, ರಾಮ' ಎನ್ನುವಾಗಲೇ ದಿನನಿತ್ಯದ ಕಾರ್ಯ ಪರಂಪರೆಯಲ್ಲಿ ತೊಡಗಿರುತ್ತಿದ್ದ ಅಮ್ಮ ರೇಡಿಯೋ ಆನ್ ಮಾಡಿ ಗರಿಷ್ಟ ವಾಲ್ಯೂಮ್ ಕೊಟ್ಟು, ಆ ಜಗಳದ ನಡುನಡುವೆ ಮೂಡಿಬರುವ ಕೆಲವು ಕೆಟ್ಟ ಪದಗಳು ಎದ್ದಾಕ್ಷಣವೇ ಮಕ್ಕಳ ಕಿವಿಯ ಮೇಲೆ ಬೀಳದಂತೆ ಜಾಗ್ರತೆ ವಹಿಸುತ್ತಿದ್ದರು.

ಒಮ್ಮೊಮ್ಮೆ ಅದೇ ಜಗಳದಲ್ಲಿ ನಮ್ಮತ್ತೆಯದೂ ಪಾಲಿದ್ದರಂತೂ ಕೇಳುವಂತೆಯೇ ಇರಲಿಲ್ಲ. ಅವರು ಪ್ರತಿದಿನವೂ ತಪ್ಪದೇ ಓದುತ್ತಿದ್ದ ಕುಮಾರವ್ಯಾಸಭಾರತದ ಪ್ರಭಾವದಿಂದಲೋ ಏನೋ ಸುಸಂಸ್ಕೃತ ಪದಪುಂಜಗಳೊಂದಿಗೇ, ತಾವು ಪ್ರೀತಿಯಿಂದ ಬೆಳೆಸಿದ ಗಿಡಗಳನ್ನು ಧ್ವಂಸಮಾಡಿದ ದನಗಳ ಮಾಲೀಕರ ಜನ್ಮ ಜಾಲಾಡುತ್ತಿದ್ದರು.

ಬೆಳಗಿನಿಂದ ರಾತ್ರಿಯವರೆಗೂ ಸುತ್ತಮುತ್ತಾ ಒಂದಲ್ಲಾ ಒಂದು ಜಗಳವಾಗುತ್ತಿದ್ದರೂ ಅದರಿಂದ ಸ್ವಲ್ಪವೂ ವಿಚಲಿತವಾಗದಂತೆ ನಮ್ಮ ಬಾಲ್ಯ ಮುನ್ನಡೆಯುತ್ತಿತ್ತು. ಆದರೂ ನಮ್ಮನಮ್ಮ ನಡುವೆ ಆಗಾಗ ನಡೆಯುತ್ತಿದ್ದ ಕೋಳಿಜಗಳಗಳನ್ನು ಬಿಡಿಸುವುದರಲ್ಲೇ ಮನೆಯವರಿಗೆ ಸಾಕುಸಾಕಾಗಿ ಮಕ್ಕಳೂ ಎಲ್ಲಿ ಜಗಳಗಂಟರಾಗುತ್ತಾರೋ ಎಂದು ಪರಿತಪಿಸುವಂತಾಗುತ್ತಿತ್ತು. ಇದಕ್ಕೆ ಅಪವಾದವೆನ್ನುವಂತೆ ನಾನು ಮಾತ್ರ ಯಾವ ಜಗಳದಲ್ಲೂ ಭಾಗಿಯಾಗದೇ ಬಲಾಢ್ಯರಿಗೆ ತಗ್ಗಿಬಗ್ಗಿ ನಡೆಯುತ್ತಾ ಸೋಲುವುದರಲ್ಲೇ ಸಂತೃಪ್ತಳಾಗಿ ಹಿರಿಯರ ಮೆಚ್ಚುಗೆಗೆ ಪಾತ್ರಳಾಗಿದ್ದೆ. ಆದರೆ ಸಹಜ ರಾಜಸ ಪ್ರವೃತ್ತಿಯ ನಮ್ಮತ್ತೆ ಮಾತ್ರ 'ಇಷ್ಟೊಂದು ಮೆದುಗಳಾದರೆ ಮುಂದೆ, ಮದುವೆಯಾದ ಮೇಲೆ ಹೇಗೆ ನಿಭಾಯಿಸುತ್ತೋ' ಎಂದು ಅಲವತ್ತುಕೊಳ್ಳುತ್ತಿದ್ದರು.

ನಮ್ಮ ಹಳ್ಳಿಯಲ್ಲಿ ಮಾತುಮಾತಿಗೂ ಜಗಳ ನಡೆಯುತ್ತಿದ್ದು ವಿಕೋಪಕ್ಕೆ ಹೋಗಿ ಹೊಡೆದಾಡುವ ಹಂತವನ್ನೂ ತಲುಪುತ್ತಿದ್ದುದು ತೀರಾ ಸಾಮ್ಯ. ಕುಟುಂಬದ ಒಳಗಿನ ಕಲಹವಾಗಲೀ, ಕುಟುಂಬಗಳ ನಡುವಿನದಾಗಲೀ ಅಪರಿಹಾರ್ಯವೆನಿಸಿದಾಗ, ಶಾಂತಿಪ್ರಿಯರಾದ ನಮ್ಮ ತಂದೆಯ ಬಳಿಗೆ ಜಗಳಾಡಿದವರು ಬರುತ್ತಿದ್ದರು. ಅವರು 'ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ' ಎಂದು ಒಮ್ಮೊಮ್ಮೆ ಸಮಾಧಾನಿಸಿದರೆ 'ಕಾದ ಮನೆ ಕಲ್ಲಾಯ್ತು, ಹೋರಿದ್ದ ಮನೆ ಹುಲ್ಲಾಯ್ತು' ಎಂಬ ಗ್ರಾಮ್ಯ ನುಡಿಗಟ್ಟನ್ನು ಹೇಳಿ ಜಗಳದ ಪರಿಣಾಮವನ್ನು ತಿಳಿಸುವ ಪ್ರಯತ್ನ ಮಾಡುತ್ತಿದ್ದರು. ಆ ಕ್ಷಣದಲ್ಲಿ, ಜಗಳ ಉಪಶಮನವಾಗುತ್ತಿತ್ತು; ಆದರೆ, ಅದು ತಾತ್ಕಾಲಿಕ! ನಾಯಿಬಾಲ ಡೊಂಕು ಎನ್ನುವಂತೆ ಹೊಸಹೊಸ ಕಾರಣಗಳಿಗೆ ಕಾದಾಟ ನಡೆಯುವುದಂತೂ ತಪ್ಪುತ್ತಿರಲಿಲ್ಲ.

ಶಾಲೆಗೆ ಹೋಗಲು ಪ್ರಾರಂಭಿಸಿದ ನಂತರ ಜೊತೆಯವರು ಕ್ಷುಲ್ಲಕ ಕಾರಣಗಳಿಗೂ ಕಿತ್ತಾಡುವುದನ್ನು ನೋಡಿ ಯಾರ 'ಬಳಿಯೂ ಸಲುಗೆಯಿಂದಿರಲು ನನಗೆ ಭಯವಾಗತೊಡಗಿತು; ಆಗ ನಾನು ಅನುಸರಿಸುತ್ತಿದ್ದುದು ತಟಸ್ಥಳಾಗುವ ಸ್ಥಿತಿ. ಕೆಲವು ಬಾರಿ ಶಾಲೆಯ ಮಕ್ಕಳ ಕಿತಾಪತಿಯಿಂದ ತಲೆ ಚಿಟ್ಟುಹಿಡಿಸಿಕೊಂಡ ಶಿಕ್ಷಕರೇನೋ 'ಅವಳನ್ನು ನೋಡಿ ಕಲಿಯಿರಿ' ಎಂದು ಮೆಚ್ಚುಗೆ ಸೂಸಿದರೂ, ಅದು ಕ್ಷಣಿಕ; ಉಪಾಧ್ಯಾಯರ ಮೆಚ್ಚುಗೆಯನ್ನು ಕಂಡು, ಅಸೂಯೆಗೊಂಡ ನಮ್ಮ ಸಹಪಾಠಿಗಳಿಂದ 'ಒಂಟರಬಡುಕ ಸುಂಟರಗಾಳಿ' ಎನಿಸಿಕೊಳ್ಳುವಂತಾಯ್ತು.

ಮದುವೆಯ ನಂತರ!

ಅಂತೂ ಇಂತೂ ಶಾಂತಿಧೂತಳಂತೆ ವಿದ್ಯಾಭ್ಯಾಸ ಮುಗಿಸಿ ಕೆಲಸಕ್ಕೂ ಸೇರಿದ್ದೇನೋ ಆಯ್ತು. ಆದರೆ ಹೀಗೇ ಏಕಾಂಗವೀರಳಾಗಿ ವೈವಾಹಿಕ ಜೀವನದಲ್ಲಿ ಮುನ್ನಡೆಯಲಾಗಲಿಲ್ಲ. ಹೇಗೋ ಏನೋ ಎಂಬ ಅಳುಕಿನಲ್ಲಿ ಹೊಸದರಲ್ಲಿ ಸ್ವಲ್ಪಸ್ವಲ್ಪವೇ ಅಧಿಕಾರ ಚಲಾವಣೆ ಮಾಡುತ್ತಾ ಇದ್ದ ನನ್ನವರು, ಸಂಪೂರ್ಣ ಸ್ವಾಮ್ಯಕ್ಕೊಳಪಡಲು ಮಡದಿ ಸಿದ್ಧಳಿಲ್ಲವೆನ್ನುವುದನ್ನು ಮನಗಂಡು ಭಿನ್ನಾಭಿಪ್ರಾಯ ತಲೆದೋರಿದಾಗಲೆಲ್ಲಾ ವಾಗ್ಬಾಣಗಳನ್ನು ಪ್ರಯೋಗಿಸುತ್ತಾ ನೇರ ಹೋರಾಟಕ್ಕೇ ಆಹ್ವಾನ ನೀಡಲಾರಂಭಿಸಿದರು. ಮೊದಲೇ ಜಗಳವೆಂದರೇ ಮಾರುದೂರ ಹಾರುತ್ತಿದ್ದ ನಾನು ಹೇಗೂ ತಪ್ಪಿಸಿಕೊಳ್ಳಲಾರದೇ ಪ್ರಾರಂಭಿಕ ಮೌನರೋಧನದ ನಂತರ, ತುಸು ಜಾಗೃತಳಾದೆ; ಅವರ ಹೂಡುವ ಅಸ್ತ್ರಗಳಿಗೆ ಪ್ರತ್ಯಸ್ತ್ರ ಹೂಡುವ ತಂತ್ರಗಳನ್ನು ಕಲಿತುಕೊಂಡು, ನಿಧಾನವಾಗಿ ಅವರದೇ ನಡೆ-ನುಡಿಗಳನ್ನೇ ಗಮನಿಸುತ್ತಾ, ಪ್ರತಿ ಅಸ್ತ್ರ ಹೂಡಲು ಒಂದೊಂದಾಗಿ ಅಭ್ಯಾಸ ಮಾಡಿಕೊಳ್ಳಲಾರಂಭಿಸಿದೆ. ಹೀಗಾಗಿ ಕಲಹಮಲ್ಲರಾದ ನನ್ನವರೇ ನನ್ನ ಕಲಹಕಲಿಕಾ ಮಾರ್ಗದರ್ಶಕರೆಂದು ನಿಸ್ಸಂಶಯವಾಗಿ ಒಪ್ಪಿಕೊಳ್ಳುವಂತಾಯ್ತು.

ಕ್ರಮೇಣ 'ಗುರುವಿನಮಿಂಚಿನ ಶಿಷ್ಯ'ಳಾಗಿ ಅವರಿಗೆ ಸರಿಪಟ್ಟಿಕೊಂಡು ಕಲಹ ಮಾಡುವ ಕಲೆ ಕರತಲಾಮಲಕವಾಗುವಂತಾಗಿ, 'ಅಲ್ಲಾ, ಈ ಜಗಳಮಾಡುವುದರಲ್ಲಿಯೂ ಎಂಥಾ ಖುಷಿಯಿದೆ' ಎಂದು ಕಂಡುಕೊಂಡೆ! ಅಚ್ಚರಿ ಪಟ್ಟೆ! ಜಗಳವಿರದ ಮನೆಯಿರಲು ಸಾಧ್ಯವೇ ಎಂಬ ಪರಮ ಸತ್ಯದ ಅರಿವಾದ ನಂತರ ಅದರ ಧನಾತ್ಮಕ ಅಂಶವಾದ ಮನದೊಳಗಿನ ಒಂದೊಂದೇ ಮಾತು ಹೊರಬರುವುದರಿಂದ ಮನಸ್ಸಿನ ಒತ್ತಡ ಕಡಿಮೆಯಾಗುವುದು ಎನ್ನುವುದೂ ಮನದಟ್ಟಾಗಿ, ಶಾಂತಿದೂತಳಂತಿದ್ದ ನನ್ನ ಸಪ್ಪೆ ಜೀವನಕ್ಕೆ ವಿದಾಯ ಹೇಳಿದೆ. ಆಹಾ, ನನ್ನಲ್ಲೇ ಹುದುಗಿದ್ದ ಅಪಾರ ಸಾಮರ್ಥ್ಯವನ್ನು ಹೊರಹೊಮ್ಮಿಸಿದ ಕಲಹಾನಂದವೇ!

ದೇವ ದಾನವರ ಕದನ!

ಈ ಕಲಹವೆನ್ನುವುದು ಇವತ್ತು-ನಿನ್ನೆಯದಲ್ಲ. ನಮ್ಮ ಪುರಾಣಗಳಲ್ಲಿರುವಂತೆ ಸಮುದ್ರ ಮಂಥನದ ಸಂದರ್ಭದಲ್ಲಿ ದೇವತೆಗಳು ಮತ್ತು ದಾನವರ ನಡುವೆ ಮಹಾನ್ ಕದನವೇ ನಡೆದಿದೆ. ಮಹಾಭಾರತದಲ್ಲಿ ಅಧಿಕಾರ ಲಾಲಸೆಗಾಗಿ ಕೌರವರು ಮತ್ತು ಪಾಂಡವರ ನಡುವೆ ಘನಘೋರವಾದ ಕುರುಕ್ಷೇತ್ರಯುದ್ಧವೇ ಆಗಿದೆ. 'ಕಲಹ ಪ್ರಿಯ'ರೆಂದೇ ಪ್ರಸಿದ್ಧರಾಗಿದ್ದ ನಾರದ ಮುನಿಗಳು, ದೇವ-ದಾನವರು, ರಾಜ-ಮಹಾರಾಜರು, ಋಷಿ-ಮುನಿಗಳ ನಡುವೆ ಕಲಹ ಮಾಡುವಂತೆ ಪ್ರೇರೇಪಿಸಬಲ್ಲವರಾಗಿದ್ದರು. 'ನಾರದರೆಲ್ಲೆಲ್ಲಿ ಕದನಕಿಕ್ಕುವರೊ…' ಎಂದು ಕದನ ಕುತೂಹಲಿಯಾಗಿದ್ದ ನಮ್ಮತ್ತೆ ಆಗಾಗ ಹಾಡುತ್ತಿದ್ದರು! ಪ್ರಸಿದ್ಧ ರೋಮನ್ ಸಾಮ್ರಾಜ್ಯವು ಪತನಗೊಂಡಿದ್ದು ಆಂತರಿಕ ಕಲಹಗಳಿಂದಲೇ ಎಂದು ಸಾರುತ್ತದೆ. ಪ್ರಸ್ತುತ ಸನ್ನಿವೇಶದಲ್ಲಿಯೂ ಜಗತ್ತಿನಾದ್ಯಂತ ವೈಮನಸ್ಯದಿಂದುಂಟಾದ ಸಂಘರ್ಷಗಳ ವೈಪರೀತ್ಯಗಳನ್ನು ನೋಡುತ್ತಲೇ ಇದ್ದೇವೆ.

ಪ್ರಾಣಿಜಗತ್ತಿನಲ್ಲಿಯೂ ಆಹಾರಕ್ಕೆ, ಆವಾಸಸ್ಥಾನಕ್ಕೆ ಕಾದಾಡುವುದು ಸರ್ವೇಸಾಮಾನ್ಯ. ಮರಿಗಳನ್ನು ಕಾಪಾಡುವುದಕ್ಕೆ ತಮ್ಮ ಜೀವವನ್ನೇ ಫಣಕ್ಕಿಟ್ಟು ಹೋರಾಡುತ್ತವೆ. ನಮ್ಮ ಗದ್ದೆಯ ಹತ್ತಿರ ಆಲದ ಮರದ ಪೊಟರೆಯಲ್ಲಿ ಹಕ್ಕಿಯ ಮೊಟ್ಟೆ ಎಗರಿಸಲು ಹಾವು ಬಂದಾಗ ತಾಯಿಹಕ್ಕಿಯ ಆಕ್ರಮಣದ ಹೋರಾಟ, ಚೀತ್ಕಾರ ಬಹಳ ಜೋರಾಗಿರುತ್ತಿತ್ತು!

ಇನ್ನು ಒಂದು ಹೆಣ್ಣಿಗಾಗಿ, ಗಂಡುಗಳೆರಡು ನಡೆಸುವ ಕಾಳಗವಂತೂ ಬಲು ಭೀಕರ. ಮನುಷ್ಯರಲ್ಲೂ ಇಂಥಾ ಮೃಗೀಯ ವರ್ತನೆಯ ಸುದ್ದಿಗಳು ಆಗಾಗ ಬರುತ್ತಲೇ ಇರುತ್ತವೆ. ನಮ್ಮ ಕಡೆ ವೈಷಮ್ಯದ ದಾಂಪತ್ಯವನ್ನು 'ಬೆಕ್ಕಿನ ಸಂಸಾರ' ಎನ್ನುವ ವಾಡಿಕೆಯಿದೆ. ನಮ್ಮ ಗಾರ್ಡನ್ ಮತ್ತು ಟೆರೇಸ್‌ಗಳನ್ನೇ ತಮ್ಮ ಕದನಕ್ಷೇತ್ರವಾಗಿಸಿಕೊಳ್ಳುವ ಬೆಕ್ಕುಗಳ ಹೋರಾಟದ ಪೂರ್ವ ಚೀರಾಟದಿಂದ ಎಷ್ಟೋಬಾರಿ ಬೆಚ್ಚಿಬಿದ್ದಿದ್ದೇವೆ. ನೀರುನಾಯಿಗಳು ಕಾದಾಟವನ್ನೇ ಆಡುತ್ತಾ ಕದನಕಲೆಯಲ್ಲಿ ಪಳಗುತ್ತವಂತೆ!

ಕದನ ಕುತೂಹಲ ರಾಗವು ಪಟ್ಣಂ ಸುಬ್ರಮಣ್ಯ ಅಯ್ಯರ್ ಅವರು ಜನಪ್ರಿಯಗೊಳಿಸಿರುವ, ಕೇಳುಗರಲ್ಲಿ ಉತ್ಸಾಹ ಮತ್ತು ಶೌರ್ಯದ ಭಾವನೆಯನ್ನು ಮೂಡಿಸುವ ರಾಗವಾಗಿದೆ. ಶ್ರೋತೃಗಳು ಸಂಗೀತದಲ್ಲಿ ತನ್ಮಯರಾಗಿ ಇನ್ನೇನು ನಿದ್ರಾದೇವಿಗೆ ಶರಣಾಗುವ ವೇಳೆಗೆ 'ರಘುವಂಶ ಸುಧಾಂಬುಧೀ ಚಂದ್ರಿಕೆ' ಎಂದು ಪ್ರಾರಂಭಿಸಿದಾಕ್ಷಣವೇ ಥಟ್ಟನೆ ಎಚ್ಚರಗೊಳ್ಳುತ್ತಾರೆಂದರೆ, ಅದರ ಕೀರ್ತಿ 'ಕದನ'ಕ್ಕೇ ಸಲ್ಲಬೇಕಲ್ಲವೇ! ಕದನ ಕುತೂಹಲ ರಾಗವೆನ್ನುವುದು ಯುದ್ಧದ ಮುನ್ನ ವೀರನ ಮನಸ್ಸಿನಲ್ಲಿ ಮೂಡುವ ವಿಶಿಷ್ಟ ಭಾವಸ್ಥಿತಿಯನ್ನು ಸೂಚಿಸುವ ಸಾಹಿತ್ಯಾತ್ಮಕ ಪದಗುಚ್ಛವೆಂದೂ ಹೇಳುತ್ತಾರೆ. ಈಗಂತೂ ಜಗತ್ತಿನ ಎಲ್ಲಾ ಕಡೆ ಸ್ಟ್ರಾಟಜಿಕ್ ವಾರ್‌ಗಳು! ಸಪ್ತ ಸಾಗರದಾಚೆಯ ಬಹು ದೊಡ್ಡ ದೇಶವೊಂದು, ತೈಲದ ಆಸೆಗೋ, ಇನ್ನಾವುದೋ ಪ್ರಲೋಭಕ್ಕೋ ಒಳಗಾಗಿ, ಬೇರೆ ಬೇರೆ ದೇಶಗಳ ಮೇಲೆ ಬಾಂಬ್ ಹಾಕಿ, ಕದನವನ್ನು ಆಗಾಗ ಚಾಲ್ತಿಯಲ್ಲಿಟ್ಟು ಸುದ್ದಿ ಮಾಡುತ್ತಲೇ ಇರುತ್ತದೆ. ಇತ್ತ, ನಮ್ಮ ಸನಿಹಕ್ಕೇ ಬಂದರೆ, ಸಾಹಿತ್ಯಕ್ಷೇತ್ರದಲ್ಲಿಯೂ ಆಗಾಗ ಲೇಖಕರು ಹಾಗೂ ವಿಮರ್ಶಕರ ನಡುವೆ ಮುಸುಕಿನೊಳಗಿನ ಗುದ್ದಾಟದಂಥಾ ಕೋಲ್ಡ್ ವಾರ್‌ಗಳು ನಡೆಯುತ್ತಲೇ ಇರುತ್ತವೆ. ಬಹಳ ಸೀರಿಯಸ್ ಆಯ್ತಲ್ವಾ?

ಉಂಡು ಮಲಗುವ ತನಕವೆ?

'ಗಂಡ-ಹೆಂಡತಿಯ ಜಗಳ ಉಂಡು ಮಲಗುವ ತನಕ' ಎಂದರೆ ವಿರಸ ತಾತ್ಕಾಲಿಕವಾಗಿದ್ದು ಸರಸದೊಂದಿಗೆ ಮುಕ್ತಾಯವಾಗುತ್ತದೆ ಎಂಬ ಜನಜನಿತವಾದ ಉಕ್ತಿಯೊಂದಿದೆ. ಆದರೆ ಈಗೀಗ ಆ ಜಗಳವು ಕೋರ್ಟ್ ಮೆಟ್ಟಿಲೇರುವವರೆಗೂ ಮುಂದುವರೆಯುತ್ತಿರುವುದು ವಿಷಾದನೀಯ. ಏನುಮಾಡುವುದು, ಪರಿಸ್ಥಿತಿ, ಮನಃಸ್ಥಿತಿ ಆದರೂ ಇತ್ತೀಚೆಗೆ ವಿದೇಶೀ ಹೈಕೋರ್ಟ್ ಒಂದರಲ್ಲಿ ನ್ಯಾಯಾಧೀಶರ ನಡುವೆ ಜಗಳದ ಕಾವೇರಿ ಕೈಕೈಮಿಲಾಯಿಸುವ ವಿಡಿಯೋ ನೋಡಿದಾಗ ಬೇಲಿಯೇ ಎದ್ದು ಹೊಲವನ್ನು ಮೇಯ್ದಂತಾಗಿ ನ್ಯಾಯ ಕೇಳಲು ಹೋಗುವುದಾದರೂ ಎಲ್ಲಿಗೆ ಎನಿಸದಿರುವುದಿಲ್ಲ!

ಶಾಂತಿಯ ಪಡೆಯ ಸದಸ್ಯಳಾಗಿಯೇ ಬೆಳೆದಿದ್ದ ನಾನು, ವಿವಾಹದ ನಂತರ, ಜಗಳ ಮಾಡುವುದನ್ನು ಕಲಿತುಬಿಟ್ಟೆನೆಂದು ಬೀಗಬಹುದು, ಮಾತಿಗೆ ಮಾತಿನ ತಿರುಗೇಟು ಕೊಡುತ್ತಾ ಕಲಹಾನಂದವನ್ನೂ ಹೊಂದಬಹುದು, ಆದರೆ ಮನೆಯೇ ಮೊದಲ ಪಾಠಶಾಲೆಯಾದ್ದರಿಂದ ನಮ್ಮಂಥಾ ಕುಟುಂಬಗಳಲ್ಲಿ ಮಾತು ಕಲಿಯುವ ಮುನ್ನವೇ ಮಕ್ಕಳೂ ಜಗಳವಾಡುವುದನ್ನೇ ಕಲಿತುಬಿಟ್ಟರೆ! 'ಕುಟುಂಬದಲ್ಲಿ ಕಲಹ ಉಪ್ಪಿನಷ್ಟು ಇರಬೇಕು, ಜಾಸ್ತಿಯಾಯ್ತೆಂದರೆ ಊಟವೇ ಹಾಳು!' ಎಂಬ ಅಜ್ಜಿಯ ಮಾತಿನಂತೆ, ವಾದ ವಿವಾದ, ಜಗಳ ಮತ್ತು ಮನಸ್ತಾಪಗಳು ಹಿತಮಿತವಾಗಿದ್ದರೆ ಮಾತ್ರ, ನಮ್ಮ ಬದುಕು ಹಸನಾದೀತು. ಏನಂತೀರಿ? (ಪ್ರತಿಕ್ರಿಯಿಸಿ: viramapost@gmail.com)

ವಿರಾಮದ ಪೋಸ್ಟ್ ಆಫೀಸು

ಮಕ್ಕಳು ತಂದೆಯ ಕುರಿತು ಬರೆದ 'ಕಾರಂತರ ಸುಳಿಯಲ್ಲಿ' ಪುಸ್ತಕವನ್ನು ನಾನು ಇನ್ನೂ ಓದಿಲ್ಲ; ಇದೊಂದು ಉತ್ತಮ ಪ್ರಯತ್ನ ಎನಿಸುತ್ತದೆ. ಓರ್ವ ವ್ಯಕ್ತಿಯನ್ನು ಅವರ ಮಕ್ಕಳು ವಿವಿಧ ರೀತಿಯಲ್ಲಿ ಗ್ರಹಿಸುವುದು ಸಾಧ್ಯ. ನಮ್ಮ ತಂದೆಯವರ (ಎಚ್.ಎಸ್.ಶಂಕರನಾರಾಯಣ : 1925– 2012) ಬಗೆಗಿನ ಒಂದು ಪುಸ್ತಕವನ್ನು ಹೊರತರುವಾಗ ನನ್ನ ಅಕ್ಕ, ತಮ್ಮ ಹಾಗೂ ನಾನು ಪ್ರತ್ಯೇಕ ಲೇಖನಗಳನ್ನು ಬರೆದಿದ್ದೆವು. ಅದಕ್ಕೂ ಮುಂಚೆ ಅವರ ದಿನಚರಿ ಟಿಪ್ಪಣಿಗಳು ಹಾಗೆಯೇ ಪ್ರತ್ಯೇಕ ಗ್ರಂಥವಾಗಿ ಹೊರಬಂದಿತ್ತು. ಇನ್ನು ಕಾರಂತರ ಕಾದಂಬರಿಗಳನ್ನು ಓದಿ ಪ್ರಭಾವಿತನಾಗಿದ್ದೇನೆ. ನಾನು ಕಾರಂತರನ್ನು ಮತ್ತು ಲೀಲಮ್ಮ ಅವರನ್ನು ಎರಡು ಬಾರಿ ಭೇಟಿಯಾಗಿದ್ದೆ. ಶಿವರಾಮ ಕಾರಂತರ ಮಗ, ಉಲ್ಲಾಸರನ್ನು ಹಾಗೂ 'ಮ' ಅವರನ್ನು ಪ್ರತ್ಯೇಕವಾಗಿ ಬೇರೆ ಬೇರೆ ಸಂದರ್ಭಗಳಲ್ಲಿ ಭೇಟಿಮಾಡಿದ್ದೇನೆ. ಒಟ್ಟಾರೆ ಇಷ್ಟು ಹೇಳಬಹುದು– ನಿಮ್ಮ ಪುರವಣಿಯಲ್ಲಿ ಪ್ರಕಟಗೊಂಡ ಪುಸ್ತಕ ವಿಮರ್ಶೆಯನ್ನೋದಿದ ನಂತರ, 'ಕಾರಂತರ ಸುಳಿಯಲ್ಲಿ' ಪುಸ್ತಕವನ್ನು ಓದಲು ಬಹಳ ಕುತೂಹಲ ಮೂಡಿದೆ.

• ಎಚ್.ಎಸ್.ಮಂಜುನಾಥ ಗೌರಿಬಿದನೂರು

'ವಿರಾಮ' ಪುರವಣಿಯಲ್ಲಿ, ಬೆಂ. ಶ್ರೀ. ರವೀಂದ್ರ ಅವರು ಬೆನ್ನು ನೋವಿನ ಚಿಕಿತ್ಸೆಯ ಕುರಿತ ಬರಹ ಹಾಸ್ಯ ಮಿಶ್ರಿತ ಎನಿಸಿದ್ದರೂ, ಸಮಾಯೋಚಿತವಾಗಿದೆ. ಈ ಹಿಂದೆ ನನಗೂ ಇಂತಹದ ಅನುಭವ ಆಗಿತ್ತು. ನಾನು ಗಾಂಧೀ ಬಜಾರ್ ಅಂಗಡಿ ಮೆಟ್ಟಲು ಹತ್ತುವಾಗ ಸ್ವಲ್ಪ ನಿಧಾನಿಸಿದಾಗ, ರಸ್ತೆಯಿಂದ ಎತ್ತರದ ಪಾದಚಾರಿ ಮಾರ್ಗಕ್ಕೆ ಹತ್ತಲು ಕಷ್ಟಪಟ್ಟಾಗ ಮತ್ತು ಇನ್ನೊಮ್ಮೆ ಮೈಸೂರಿಗೆ ಹೋಗಲು ಬಸ್ ಹತ್ತಲು ಕಷ್ಟಪಟ್ಟಾಗ, ಸನಿಹದಲ್ಲೇ ಇದ್ದ ಇಂತಹ ವ್ಯಕ್ತಿಗಳು ನನ್ನನ್ನು ಮಾತನಾಡಿಸಿದ್ದರು! ಅವರ ತಂದೆ ಕಾಲು ನೋವಿನಿಂದ ತುಂಬಾ ಕಷ್ಟಪಡುತ್ತಿದ್ದರೆಂದು ನಾಟಿ ವೈದ್ಯರಿಂದ ಅದು ಸರಿ ಹೋಗಿದೆಯಂದು ತಿಳಿಸಿ ನನಗೂ ಅವರಿಂದ ಚಿಕಿತ್ಸೆ ತೆಗೆದುಕೊಳ್ಳಲು ಸಲಹೆ ನೀಡಿದರು. ಮುಂದುವರೆದು ಅವರೇ ಮನೆಗೆ ಬಂದು ಔಷಧಿ ತಯಾರಿಸಿ ಕೊಡುವುದಾಗಿಯೂ, ನಾನು ಎರಡು ಲೀಟರ್ ಕೊಬ್ಬರಿ ಎಣ್ಣೆ ತಂದಿಟ್ಟರಬೇಕೆಂದು, ಅವರು ಕೆಲವು ಪುಡಿಗಳನ್ನು 'ನಾಟಿ' ವೈದ್ಯರಿಂದ ತೆಗೆದುಕೊಂಡು ಬರುವುದಾಗಿ ತಿಳಿಸಿದ್ದರು. ತಾವೇ ಮನೆಗೆ ಬಂದು ಔಷಧಿ ತಯಾರಿಸಿಕೊಡುವುದಾಗಿ ತಿಳಿಸಿದರು. ಆಗ ನಾನು 'ಮೊದಲು ನಿಮ್ಮ ತಂದೆಯವರನ್ನು ನೋಡಿ ಮಾತನಾಡ ಬೇಕು, ಆಮೇಲೆ ಮುಂದಿನ ವಿಚಾರ' ಎಂದು ಹೇಳಿ, 'ಈಗಲೇ ನನ್ನ ಕಾರಿನಲ್ಲೇ ನಿಮ್ಮ ಮನೆಗೆ ಹೋಗಿ ನಿಮ್ಮ ತಂದೆಯವರನ್ನು ಭೇಟಿ ಮಾಡೋಣ' ಎಂದು ಹೇಳುತ್ತಲೇ, ಅವರು ಇಲ್ಲೇ ಸ್ವಲ್ಪ ಕೆಲಸವಿದೆ, ನೀವು ಇಲ್ಲೇ ಇರಿ, 10 ನಿಮಿಷದಲ್ಲಿ ಬರುತ್ತೀನಿ ಎಂದವರು, ಪತ್ತೆ ಇಲ್ಲ! ಅವರ ಬಲೆಗೆ ಬೀಳದೆ ತಪ್ಪಿಸಿಕೊಂಡದ್ದೇ ರೋಚಕ ಅನುಭವ. ಇದೂ ಒಂದು ತರಹದ ಡಿಜಿಟಲ್ ಅರೆಸ್ಟ್ ಹಾಗೂ ಇಂತಹ ಮೋಸಗಾರರಿಗೆ ಶಿಕ್ಷೆ ಆಗಬೇಕು.

• ಮುಕುಂದ, ದಾವಣಗೆರೆ

'ಕಾರಂತರ ಸುಳಿಯಲ್ಲಿ' ಪುಸ್ತಕದ ಕುರಿತು ವಿರಾಮ ಪುರವಣಿಯಲ್ಲಿ ಆಯ್ದ ಭಾಗಗಳನ್ನು ಪ್ರಕಟಿಸಿದ್ದಕ್ಕಾಗಿ ಧನ್ಯವಾದಗಳು. ಆ ಭಾಗಗಳನ್ನು ಓದಿದ ನಂತರ, ಆ ಪುಸ್ತಕವನ್ನು ಖರೀದಿಸಿ ಓದುವ ಆಸಕ್ತಿ ಹುಟ್ಟಿದೆ; ಪುಸ್ತಕದ ಆಯ್ದ ಭಾಗಗಳು ಪ್ರಕಟಗೊಂಡ ವಿರಾಮದ ಮುಖಪುಟ, ಅದರಲ್ಲಿದ್ದ ಕಾರಂತರ ದೊಡ್ಡ ಗಾತ್ರದ ಛಾಯಾಚಿತ್ರ ಮತ್ತು ಪುಟವಿನ್ಯಾಸವು ಬಹಳ ಸೊಗಸಾಗಿ ಮೂಡಿಬಂದಿದೆ.

• ಯಲ್ಲಪ್ಪ ದೊಡ್ಡಮನಿ, ನಾಗರಭಾವಿ

ಸೌದೆ ಒಲೆಯಲ್ಲಿ ಅಡುಗೆನಾ?

» ಗೊರೂರು ಶಿವೇಶ್

ಮಾಸ್ತರರು ತರಗತಿಯಲ್ಲಿ ಎಲ್ಲರ ಗಮನ ಸೆಳೆದು ಕೇಳಿದರು, 'ಮಕ್ಕಳೇ, ಎಲ್ಪಿಜಿ ಅಂದ್ರೆ ಏನು?' ಒಬ್ಬ ತಕ್ಷಣ ಗ್ಯಾಸ್ ಸರ್! ಅಂದ.

ಮಾಸ್ತರು ನಕ್ಕು, 'ಗ್ಯಾಸ್ ಅಂತ ಗೊತ್ತುಪ್ಪ, ಅದರ ಅಬ್ರಿವೇಶನ್ ಬಿಡಿಸಿ ಹೇಳಿ?' ಅಂದರು. ಮಧ್ಯ ಬೆಂಚಿನ ಮಾನಸ ಪುಸ್ತಕದಲ್ಲಿ ಮುಖ ಹುದುಗಿಸಿ 'ಲಿಕ್ವಿಡ್ ಪೆಟ್ರೋಲ್ ಗ್ಯಾಸ್' ಎಂದಳು. ಪಕ್ಕದಲ್ಲೇ ಇದ್ದ ಪಾರ್ವತಿ ಅವಳ ಉತ್ತರದ ಲಿಂಕ್ ಹಿಡಿದು, ಲಿಕ್ವಿಫೈಡ್ ಪೆಟ್ರೋಲಿಯಂ ಗ್ಯಾಸ್ ಸರ್ ಎಂದು ತಿದ್ದಿದಳು. ಮಾಸ್ತರು ನಗುತ್ತಾ, 'ಸೈನ್ಸ್ ಪ್ರಕಾರ ಸರಿ. ಆದ್ರೆ ಆರ್ಟ್ಸ್ ಪ್ರಕಾರ ಅಥವಾ ಸೋಷಿಯಲ್ ಪಾಠದ ಪ್ರಕಾರ ಏನಂತ ಬಿಡಿಸಬಹುದು?' ಎಂದು ಕೇಳಿದರು. ಎಲ್ಲರೂ ಗಲಿಬಿಲಿಯಾದರು, ಉತ್ತರ ಗೊತ್ತಿರಲಿಲ್ಲ.

ಮಾಸ್ತರು ವಿವರಿಸಿದರು, ಎಲ್ಪಿಜಿ ಅಂದರೆ ಲಿಬರಲೈಸೇಷನ್, ಪ್ರೈವೇಟೈಸೇಷನ್ ಮತ್ತು ಗ್ಲೋಬಲೈಸೇಷನ್; ಅಂದ್ರೆ

ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ. ಆಗ ಕೊನೆ ಬೆಂಚಿನ ಕರ್ಣ 'ಸರ್, ಸೋಶಿಯಲ್ ಸರ್ ಇದರಲ್ಲಿ, 'ಜಿ' ಅಂದ್ರೆ 'ಗೋಳೀಕರಣ' ಅಂತ ಬರ್ಸಿದ್ದಾರೆ ಅಂದ.

ಹೌದು, ಗೋಳೀಕರಣ ಅಂದ್ರೆ ಏನು ಗೊತ್ತಾ? ಮಾಸ್ತರು ಕೇಳಿದರು.

ನನಗೆ ಗೊತ್ತು ಎದ್ದು ನಿಂತ ರಾಜೇಶ 'ಗೋಳೀಕರಣ ಎಂದರೆ ಗೋಳು ಉಯ್ಕೊಳ್ಳೋದು' ಅಂತ. ಈಗ ಗ್ಯಾಸ್ ಇಲ್ಲ ಅಂತ ಗ್ಯಾಸ್ ಕಂಪನಿಯವರು ಜನರಿಗೆ ಗೋಳು ಕೊಡ್ತಾ ಇದ್ದಾರಲ್ಲ ಅದೇ ಎಂದ. ವಿದ್ಯಾರ್ಥಿಗಳೆಲ್ಲ ನಕ್ಕರು. ಅದಲ್ಲ' ಮಾಸ್ತರರು ಮುಂದುವರಿಸಿದರು

ಈಗ ಇಡೀ ಪ್ರಪಂಚವೇ ಒಂದು ಹಳ್ಳಿ ಇದ್ದಂತೆ. ಅಕ್ಕ-ಪಕ್ಕದ ರಾಷ್ಟ್ರಗಳು ಅಕ್ಕಪಕ್ಕದ ಮನೆಗಳ ತರಹ. ಪಕ್ಕದ ಮನೆಯಲ್ಲಿ ಬೆಂಕಿ ಬಿದ್ದರೆ ನಮ್ಮ ಮನೆಗೂ ಬಿಸಿ ಮುಟ್ಟುತ್ತೆ, ಅಲ್ವಾ? ಹಾಗೆಯೇ ಇರಾನ್, ಇರಾಕ್‌ನಲ್ಲಿ ಯುದ್ಧವಾದರೆ ಅದರ ಪರಿಣಾಮ ನಮ್ಮ ಮೇಲೂ ಆಗುತ್ತೆ. 'ಅದು ಹೇಗೆ ಸರ್?' ಎಲ್ಲರೂ ಕುತೂಹಲದಿಂದ ಕೇಳಿದರು.

ಮಾಸ್ತರು ವಿವರಿಸಿದರು: ಹೆಚ್ಚಿನ ರಾಷ್ಟ್ರಗಳಿಗೆ ಬೇಕಾದ ಪೆಟ್ರೋಲ್, ಡೀಸೆಲ್ ಈ ಅರಬ್ ರಾಷ್ಟ್ರಗಳಿಂದಲೇ ಬರಬೇಕು. ಯುದ್ಧದಿಂದ ಪೂರೈಕೆ ನಿಂತರೆ ಬೆಲೆ ಏರುತ್ತದೆ. ಈಗಾಗಲೇ ಗ್ಯಾಸ್ ಸರಿಯಾಗಿ ಸಿಗದೇ ಹೋಟೆಲ್‌ಗಳು ತಿಂಡಿ ದರ ಏರಿಸಿವೆ. ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಾದರೆ ಬಸ್, ಲಾರಿ ಸಾಗಾಣಿಕೆ ವೆಚ್ಚ ಹೆಚ್ಚಾಗಿ ಅಕ್ಕಿ, ರಾಗಿ, ತರಕಾರಿ ಹೀಗೆ ಎಲ್ಲದರ ಬೆಲೆಯೂ ಏರುತ್ತದೆ. ಇದರ ಪರಿಣಾಮ ಸಾಮಾನ್ಯ ಜನರ ಮೇಲೆ ಆಗುತ್ತೆ. ಹೀಗೆ 'ಈ ಎಲ್ಪಿಜಿ' ಅಂದರೆ ಇಂಧನ ದರವು 'ಆ ಎಲ್ಪಿಜಿ' ಗೋಳೀಕರಣದ ಮೇಲೆ ಅವಲಂಬಿಸಿದೆ, ತಿಳಿತಾ?' ಎಂದರು ಮಾಸ್ತರು.

'ಸಾರ್, ರಘು ಇದರ ಮೇಲೊಂದು ಹಾಡು ಹೇಳ್ತನಂತೆ 'ಹೇಳಪ್ಪ' ಮಾಸ್ತರರು ಹೇಳಿದೊಡನೆ ರಘು ಎದ್ದು ನಿಂತು,

ಎಲ್.ಪಿ.ಜಿ. ಸುಬ್ಬುಲಕ್ಷ್ಮಿಗೆ ಬರಿ ಓಳು
ಸಿ ಎನ್ ಜಿ ಆಟೋರಾಜರಿಗೆ ಬರಿ ಗೋಳು
ಗ್ಯಾಸ್ ರೇಟನು ಕೇಳಿ ಹೋಟೆಲ್ಲು
ಹೊಗೆ ಬಿಡುವ ಒಲೆಯನು ಹಚ್ಚಿತಲ್ಲೋ!

ಹಾಡನ್ನು ಕೇಳಿದ ಎಲ್ಲಾ ವಿದ್ಯಾರ್ಥಿಗಳು ಓ ಎನ್ನುತ್ತಾ ಚಪ್ಪಾಳೆ ತಟ್ಟಿದರು. ಮಾಸ್ತರರು ತಲೆ ಚಚ್ಚಿಕೊಂಡರೂ, ಅವರ ಮುಖದಲ್ಲೂ ಮಂದಹಾಸ!

ಇಲ್ಲಿದೆ ಮಂಗ್ಯಾನ ಮಹಲ್!

ಧಾರವಾಡದ ನೂರಾರು ವರ್ಷಗಳ ಇತಿಹಾಸವನ್ನು ಆಸಕ್ತಿಯಿಂದ ನೋಡಲು ಅವಕಾಶ ಮಾಡಿಕೊಟ್ಟ 'ಹೆರಿಟೇಜ್ ವಾಕ್' ಇತ್ತೀಚೆಗೆ ಆಯೋಜನೆಗೊಂಡಿತ್ತು.



» ಸುರೇಶ ಗುದಗನವರ

ಪಾರಂಪರಿಕ ಸ್ಥಳಗಳಿಗೆ ಹೆಜ್ಜೆ ಹಾಕುವ ಆಸಕ್ತಿಗೆ ಇನ್‌ಟ್ಯಾಕ್ ಸಂಸ್ಥೆ ನೀಡಿರುವ ಹೆಸರು ಪಾರಂಪರಿಕ ನಡಿಗೆ. ಸ್ಥಳ ಪುರಾಣ, ಇತಿಹಾಸ, ಸಾಂಸ್ಕೃತಿಕ ಮಹತ್ವ ಗೊತ್ತಿರುವ ನುರಿತ ಸಹೃದಯಿ ನಿಗದಿಯಾದ ಸ್ಥಳಗಳ ಬಗ್ಗೆ ವಿವರಣೆಗಳನ್ನು ನೀಡುತ್ತಾರೆ. ಇತಿಹಾಸ ಮತ್ತು ಪಾರಂಪರಿಕ ಪ್ರಜ್ಞೆಯನ್ನು ರೂಪಿಸುವ ಕಾಳಜಿಯಿಂದ ತಮ್ಮ ಗ್ರಹಿಕೆಗಳನ್ನು ಹಂಚಿಕೊಳ್ಳುತ್ತಾರೆ. ಆಸಕ್ತರ ಪ್ರಶ್ನೆಗಳಿಗೆ ಉತ್ತರವನ್ನು ಅವರು ನೀಡುತ್ತಾರೆ.

ಧಾರವಾಡವು ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕವಾಗಿ ಪ್ರಮುಖ ನಗರ ಎಂದು ಪ್ರಸಿದ್ಧಿ ಪಡೆದಿದೆ. ವಿದ್ಯಾಕಾಶಿ ಎಂಬುದು ಇಲ್ಲಿಗೆ ಅನ್ವರ್ಥ ನಾಮ. ಈ ವಿದ್ಯಾಕಾಶಿಯ ಪಾರಂಪರಿಕ ಇತಿಹಾಸ ತಿಳಿಯುವ ಆಸಕ್ತಿ ಇದ್ದರೂ ತಿಳಿಸುವವರು ಯಾರು, ಮಾರ್ಗದರ್ಶನ ನೀಡುವವರು ಯಾರು ಎಂಬ ಸಮಸ್ಯೆ. ಇದಕ್ಕೆಂದೇ, 'ಇನ್‌ಟ್ಯಾಕ್' ಎಂಬ ಸಂಸ್ಥೆ 'ಪಾರಂಪರಿಕ ನಡಿಗೆ' ಆಯೋಜಿಸಿದೆ.

ಧಾರವಾಡದ ಪಾರಂಪರಿಕ ನಡಿಗೆ ನಡೆದದ್ದು ಇದೇ ಎಪ್ರಿಲ್ 7ರಂದು. ಐತಿಹಾಸಿಕ ಸ್ಥಳಗಳಲ್ಲಿ ಒಂದಾಗಿರುವ ಹೊಸಯಲ್ಲಾಪುರದ ಶುಕ್ರವಾರ ಪೇಟೆಯ 'ಮಂಗ್ಯಾನ ಮಹಲ್'ದಿಂದ ಗಾಂಧಿಚೌಕದ ದತ್ತ ಮಂದಿರದ ಹಿಂದಿರುವ ಸಂಸ್ಕೃತ ಪಾಠಶಾಲೆಯವರೆಗೆ ಬೆಳಿಗ್ಗೆ 6.30 ರಿಂದ 8.30ರ ವರೆಗೆ ಎರಡು ಗಂಟೆಗಳ ಹೆರಿಟೇಜ್ ವಾಕ್ ಕಾರ್ಯಕ್ರಮವನ್ನು ಇಂಟ್ಯಾಕ್ ಸದಸ್ಯರಿಗೆ ಆಯೋಜಿಸಿತ್ತು.

ಮಹಡಿಯೇರಿದ ಮಂಗ್ಯಾ!

ಅಂದು ಬೆಳಿಗ್ಗೆ 6.15ಕ್ಕೆ ನಾವೆಲ್ಲ ಹೊಸಯಲ್ಲಾಪುರದಲ್ಲಿರುವ ಡಾ.ಶಶಿಧರ ನರೇಂದ್ರ ಅವರ ಮನೆಯಲ್ಲಿ ಸೇರಿದೆವು. ಮೊದಲು ಹತ್ತಿರದಲ್ಲಿದ್ದ ಮಂಗ್ಯಾನ್ ಮಹಲ್‌ಗೆ ಭೇಟಿ ಕೊಟ್ಟೆವು. ಅಂದಾಜು 1890ರಲ್ಲಿ ಹಾವೇರಿಯ ವಕೀಲರಾದ ಭೀಮರಾವ್ ಜೋಶಿ ಅವರು ಶುಕ್ರವಾರ ಪೇಟೆಯಲ್ಲಿ ನಾಲ್ಕಂತಸ್ತಿನ ಇಮಾರತನ್ನು ಕಟ್ಟಿಸಿದರು. ಆಗ ಧಾರವಾಡದಲ್ಲಿ ಇದೊಂದೇ ಬಹುಮಹಡಿಯ ಮನೆಯಾಗಿತ್ತು. ಮನೆಯಲ್ಲಿಯೇ ಚಿಕ್ಕದಾದ ಚೊಕ್ಕದಾದ ಹನುಮಂತ ದೇವರ ಗುಡಿಯನ್ನು ಕಟ್ಟಿಸಿದರು. ಅಲ್ಲಿ ಅವರ ಅವಿಭಕ್ತ ಕುಟುಂಬ ನೆಲೆಸಿತ್ತು. ವರ್ಷಗಳು ಕಳೆದಂತೆ ಜೋಶಿಯವರ ಮಕ್ಕಳು, ಮೊಮ್ಮಕ್ಕಳು ನೌಕರಿಗಾಗಿ ದೊಡ್ಡ ಪಟ್ಟಣಗಳನ್ನು ಸೇರಿದರು. ಮನೆಯಲ್ಲಿ ಜನಸಂಖ್ಯೆ ಕಡಿಮೆಯಾಯಿತು. ಮೇಲಿನ ಎರಡು ಅಂತಸ್ತುಗಳು ಖಾಲಿಯಾದವು. ಕ್ರಮೇಣ ಊರ ಹೊರಗಿನ ನೂರಾರು ಮಂಗಗಳು ಮೇಲಿನ ಎರಡು ಅಂತಸ್ತುಗಳನ್ನು ಆಕ್ರಮಿಸಿಕೊಂಡವು. ಮುಂಜಾನೆ, ಸಂಜೆ ಹೊತ್ತಿನಲ್ಲಿ ಮಂಗಗಳು ಚೇಷ್ಟೆ ಮಾಡುವದನ್ನು ಓಣಿಯ ಹುಡುಗರು-ಜನರು ನೋಡುತ್ತ ನಿಲ್ಲುತ್ತಿದ್ದರು. ಆಗ ಜನರು ಈ ಮನೆಗೆ 'ಮಂಗ್ಯಾನ್ ಮಹಲ್' ಎಂದೂ ಕರೆದರು. ನಂತರ ಮಂಗಗಳ ಉಪದ್ರವ ತಾಳದೇ ಮೇಲಿನ ಅಂತಸ್ತುಗಳನ್ನು ಕೆಡವಲಾಯಿತು. ಹೆಸರು ಮಾತ್ರ ಮಂಗ್ಯಾನ ಮಹಲ್ ಎಂದೇ ಉಳಿಯಿತು!

ನಂತರ ವಚನ ಪಿತಾಮಹ ಫ.ಗು.ಹಳಕಟ್ಟಿಯವರ ಮನೆ, ಶ್ರೀ ಕಲ್ಮೇಶ್ವರ ದೇವಸ್ಥಾನ, ಮಳೆಮಲ್ಲೇಶ್ವರ ಮಹಾಸಂಸ್ಥಾನ ಹಿರೇಮಠ, ಡಾ.ಬಸವರಾಜ ರಾಜಗುರು ಅವರ ಸಮಾಧಿ, ನುಚ್ಚುಂಬಲಿ ಬಾವಿ, ಡಾ.ಗಂಗೂಬಾಯಿ ಹಾನಗಲ್ ಅವರು ಜನಿಸಿದ ಮನೆ ಗಂಗೋತ್ರಿ, ಬಸದಿ ಓಣಿಯಲ್ಲಿ ಬೆಟಗೇರಿ ಕೃಷ್ಣ ಶರ್ಮರ ಮನೆ, ಭಗವಾನ ಆದಿನಾಥ ಬಸದಿ, ಹಿಂದುಸ್ಥಾನಿ ಗಾಯಕಿ ಸುಲಭಾದತ್ತ ನೀರಲಗಿ, ವಿನಾಯಕ ತೊರವಿ ಅವರ ಮನೆ, ಗೋಂದಳಿ ಸಮಾಜದ ಸಂತ ಸಮಾಜ ಹರಿಮಂದಿರ, ಠಾಕೂರ ತಾಲೀಮ ಗರಡಿ ಮನೆ, ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾದ ಗಾಂಧಿ ಹಿಂದಿ ಪ್ರೌಢಶಾಲೆ-ಚಾಚಾ ನೆಹರು ಶಿಶು ವಿಹಾರ-ಪಾರ್ಶ್ವನಾಥ ಹಿಂದಿ ಪ್ರಾಥಮಿಕ ಶಾಲೆ, ಕಾಮನಕಟ್ಟೆ, ಕಿತ್ತೂರ ಚೆನ್ನಮ್ಮ ಗುರುಗಳ ವಂಶಸ್ಥ ಕಟ್ಟಿಮಠರ ಮನೆ, ಕಾಳಿಕಾ ದೇವಸ್ಥಾನ, ನಂದಿಕೋಲ ಬಸವಣ್ಣ, ನಗರೇಶ್ವರ ದೇವಸ್ಥಾನ, ಭೂಸಪೇಟೆಯ ಕಾಮಣ್ಣ, ಪೋತ್ನಿಸ್ ಓಣಿಯ ದ.ರಾ.ಬೇಂದ್ರೆಯವರು ಜನಿಸಿದ ಮನೆ, ಮನೋಹರ ಗ್ರಂಥ ಮಾಲೆಯ ಜಿ.ಬಿ.ಜೋಶಿಯವರ ಮನೆ, ಹೆಬ್ಬಳ್ಳಿ ಅಗಸಿ, ಗಣಪತಿ ದೇವಸ್ಥಾನ, ವಿಕ್ಟೋರಿಯಾ ಹೈಸ್ಕೂಲ (ವಿದ್ಯಾರಣ್ಯ ಶಾಲೆ), ಸಮಾಜ ಪುಸ್ತಕಾಲಯ, ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆ ಮತ್ತು ದತ್ತ ಮಂದಿರಗಳೀಗೆ ಭೇಟಿ ನೀಡಿದೆವು.

ತುಪ್ಪದ ದೋಸೆ

ದತ್ತ ಮಂದಿರ ಬದಿಯಲ್ಲಿಯೇ ಇದ್ದ ಪಾರಂಪರಿಕ ಬಾಂಬೆ ರೆಸ್ಟೋರೆಂಟಿನಲ್ಲಿ ತುಪ್ಪದ ದೋಸೆ ಸವಿದೆವು. ಸವಿದೆವು. ವೈವಿಧ್ಯಮಯವಾದ ದೋಸೆ ತಯಾರಿಕೆಯೊಂದಿಗೆ, ಅದನ್ನು ಗ್ರಾಹಕರಿಗೆ ನೀಡುವ ಬಗೆಯಲ್ಲಿಯೇ ಧಾರವಾಡದ ದೋಸೆಗಳ ವೈಶಿಷ್ಟ್ಯ ಅಡಗಿದೆ. ಎನ್ಕೆ ಅವರು ಮುಂಜಾನೆ ದೋಸೆ ತಿಂದರೆ ಸಾಯಂಕಾಲವರೆಗೂ ಕೈ ವಾಸನೆ ಹೋಗುತ್ತಿರಲಿಲ್ಲ ಎಂದು ಹೇಳುತ್ತಿದ್ದನ್ನು ನೆನಪಿಸಿಕೊಂಡರು. ನಂತರ ನಾವೆಲ್ಲ ಜಕಣಿಬಾವಿಗೆ ತೆರಳಿದೆವು. ಇದು 62 ಫೂಟ ಆಳವಿದ್ದು, ಇದರ ನೀರನ್ನು ಕುಡಿಯುತ್ತಿದ್ದರು. ಆದರೆ ಈಗ ಜಕ್ಕಣಿಬಾವಿಯನ್ನು ಗುರುತಿಸಲು ಅಸಾಧ್ಯವಾಗದ ಸ್ಥಿತಿ ಇದೆ. ಅದರ ಪಕ್ಕದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಗೋಳಿಬಾರಿನಲ್ಲಿ ಮಡಿದ ಹುತಾತ್ಮರ ನೆನಪಿನ ಸ್ಮಾರಕವಿದೆ. ಅಸಹಕಾರ ಚಳವಳಿಯ ಸಂದರ್ಭದಲ್ಲಿ 1921 ಜುಲೈ 1ರಂದು ಧಾರವಾಡದ ಜಕಣಿಬಾವಿ ಬಳಿ ಪೊಲೀಸರು ಜನರ ಮೇಲೆ ಗುಂಡು ಹಾರಿಸಿದಾಗ, ಮಲ್ಲಿಕಸಾಬ್ ಮರ್ದಾನ ಸಾಬ್, ಗೌಸುಸಾಬ್ ಖಾದರಸಾಬ್ ಮತ್ತು ಅಬ್ದುಲ್‌ಗಫಾರ ಚೌಕ್‌ಥಾಯಿ ಎಂಬವರು ಮೃತರಾದರು. ಅವರ ನೆನಪಿಗಾಗಿ ಇಲ್ಲಿ ಒಂದು ಸ್ಮಾರಕ ನಿರ್ಮಿಸಲಾಗಿದೆ. ಇಂಟ್ಯಾಕ್ ಸಂಸ್ಥೆಯ ಸಂಚಾಲಕ ಡಾ. ಮೋಹನ ಮಠ ಅವರಿಗೆ 82 ವರ್ಷಗಳಾಗಿದ್ದು, ಅವರು ಪಾರಂಪರಿಕ ನಡಿಗೆಯ ನೇತೃತ್ವ ವಹಿಸಿದ್ದರು. ಪಟ್ಟಣವೊಂದರ ಪರಂಪರೆಯನ್ನು ಇಂತಹ ನಡಿಗೆಯ ಮೂಲಕ ಅರಿಯುವ ಪ್ರಕ್ರಿಯೆಯು, ನಮ್ಮ ಅರಿವನ್ನು ವಿಸ್ತರಿಸುವುದರಲ್ಲಿ ಸಂಶಯವಿಲ್ಲ.

ಆಲಿವ್ ಎಣ್ಣೆಯ ದೌರ್ಬಲ್ಯಗಳು!

ಕ್ಷ ಕಿರಣ

ವಿದೇಶಿ ವಸ್ತುಗಳೆಂದರೆ ಶ್ರೇಷ್ಠ ಎಂಬ ಭಾವನೆ ಅನೇಕರಲ್ಲಿದೆ. ಟಿವಿ ಜಾಹೀರಾತುಗಳಲ್ಲಿ ಹಾರ್ಟ್‌ಹೆಲ್ತ್‌ಗೆ ಆಲಿವ್ ಆಯಿಲ್ ಒಳ್ಳೆಯದು ಎಂದು ನೋಡಿ, ಸಾವಿರಾರು ರೂಪಾಯಿ ಕೊಟ್ಟು ಆ ಎಣ್ಣೆಯನ್ನು ತರುತ್ತಾರೆ. ಅದನ್ನು ನಮ್ಮ ದೋಸೆ, ಸಾರು ಮತ್ತು ಒಗ್ಗರಣೆಗೆ ಧಾರಾಳವಾಗಿ ಬಳಸುತ್ತಾರೆ. ಇದು ಕೆಲವರು ಮಾಡುತ್ತಿರುವ ಅತಿ ದೊಡ್ಡ ತಪ್ಪು.

ಉಷ್ಣತೆಯೇ ಇಲ್ಲಿನ ಸಮಸ್ಯೆ. ಎಕ್ಸ್‌ಟ್ರಾ ವರ್ಜಿನ್ ಆಲಿವ್ ಆಯಿಲ್ ಒಂದು ಉತ್ತಮ ಸೂಪರ್ ಫುಡ್, ಸಂಶಯವಿಲ್ಲ. ಇದರಲ್ಲಿ 'ಫಿನಾಲ್ಸ್' ಎಂಬ ಸೂಕ್ಷ್ಮವಾದ ಆಂಟಿಆಕ್ಸಿಡೆಂಟ್‌ಗಳಿರುತ್ತವೆ. ಆದರೆ ಇವು ಉಷ್ಣತೆಯನ್ನು ತಾಳಲಾರದೇ ನಮ್ಮ ಒಗ್ಗರಣೆಯ ಕಟು ಶಾಖಕ್ಕೆ ನಾಶವಾಗುತ್ತವೆ. ಅಂದರೆ, ಸಾವಿರ ರೂಪಾಯಿ ಕೊಟ್ಟು ತಂದ ಎಣ್ಣೆಯ ಸತ್ವವೆಲ್ಲಾ ಬೂದಿಯಾದಂತೆ. ಅಷ್ಟೇ ಅಲ್ಲ, ಹೆಚ್ಚು ಕಾಯಿಸಿದರೆ ಇದು ಬೇಗನೆ ಹೊಗೆಯಾಡಲು ಶುರುವಾಗಿ, ಕಹಿ ಮತ್ತು ವಿಷಕಾರಿಯಾಗಿ ಬದಲಾಗುತ್ತದೆ.

ಪೊಮೇಸ್ ಆಯಿಲ್ ಎಂಬ ಕೈಗಾರಿಕಾ ಕಸ

ಅಪ್ಪಟ ಆಲಿವ್ ಆಯಿಲ್ ದುಬಾರಿ ಎಂದು ಅನೇಕರು ಅದರ ಅಗ್ಗದ ಆವೃತ್ತಿಗಳಾದ

ಪೊಮೇಸ್ ಆಲಿವ್ ಆಯಿಲ್ ಅಥವಾ ಪ್ಯೂರ್ ಆಲಿವ್ ಆಯಿಲ್ ತರುತ್ತಾರೆ. ದಯವಿಟ್ಟು ಇದನ್ನು ಮಾಡಬೇಡಿ. ಏಕೆಂದರೆ, ಪೋಮೋಸ್ ಒಳ್ಳೆಯದಲ್ಲ! ಉತ್ತಮ ಗುಣಮಟ್ಟದ ಎಣ್ಣೆಯನ್ನು ಹಿಂಡಿದ ನಂತರ ಉಳಿಯುವ ಆಲಿವ್ ಚರಟದಿಂದ, ಹೆಕ್ಸೇನ್ ನಂತಹ ರಾಸಾಯನಿಕ ಬಳಸಿ ಹಿಂಸಿಸಿ ತೆಗೆದ ಎಣ್ಣೆ ಪೊಮೇಸ್. ಇದು ನಮ್ಮ ಅಗ್ಗದ ಸೂರ್ಯಕಾಂತಿ ಎಣ್ಣೆಯಷ್ಟೇ ಹಾಳು. ಇದರಲ್ಲಿ ನಮ್ಮ ಶೇಂಗಾ ಎಣ್ಣೆಗಿಂತ ಯಾವ ವಿಶೇಷ ಗುಣಗಳೂ ಇಲ್ಲ. ಆದರೆ ಬೆಲೆ ಮಾತ್ರ ಮೂರ್ನಾಲ್ಕು ಪಟ್ಟು ಹೆಚ್ಚು!

ಮೆಡಿಟರೇನಿಯನ್ ಆಹಾರ ಆರೋಗ್ಯಕರ, ಏಕೆಂದರೆ ಅವರು ಆಲಿವ್ ಎಣ್ಣೆಯನ್ನು ಸಲಾಡ್ ಅಥವಾ ಬ್ರೆಡ್ ಮೇಲೆ ಹಸಿಯಾಗಿ ಬಳಸುತ್ತಾರೆ. ಕರಿಯಲು ಬಳಸುವುದಿಲ್ಲ. ಭಾರತೀಯರಾದ ನಾವು ಅಧಿಕ ಉಷ್ಣತೆಯಲ್ಲಿ ಒಗ್ಗರಣೆ ಕೊಟ್ಟು ಅಡುಗೆ ಮಾಡುವವರು. ಬೆಂಕಿಯನ್ನು ತಡೆದುಕೊಳ್ಳುವ ಶಕ್ತಿ ಆಲಿವ್ ಎಣ್ಣೆಗಿಲ್ಲ.

ತಪ್ಪು ಕಲ್ಪನೆಗಳು ಮತ್ತು ವಾಸ್ತವ:

ತಪ್ಪು ಕಲ್ಪನೆ: ಆಲಿವ್ ಆಯಿಲ್ ಪ್ರಪಂಚದಲ್ಲೇ ಅತ್ಯಂತ ಆರೋಗ್ಯಕರ ಎಣ್ಣೆ.

ವಾಸ್ತವ: ಹಸಿಯಾಗಿ ಬಳಸಿದರೆ ಮಾತ್ರ ಅದು ಆರೋಗ್ಯಕರ. ಕಾಯಿಸುವ ಭಾರತೀಯ ಅಡುಗೆಗೆ ತುಪ್ಪ, ತೆಂಗಿನ ಎಣ್ಣೆ ಅಥವಾ ಶೇಂಗಾ ಎಣ್ಣೆಗಳೇ ಹೆಚ್ಚು ಸ್ಥಿರ ಮತ್ತು ಶ್ರೇಷ್ಠ.

ತಪ್ಪು ಕಲ್ಪನೆ: ತೂಕ ಇಳಿಸಲು ಆಲಿವ್ ಎಣ್ಣೆಯನ್ನು ಬಳಸಬೇಕು.

ವಾಸ್ತವ: ಎಣ್ಣೆ ಎಲ್ಲಿಯದೇ ಆಗಲಿ, ಕ್ಯಾಲೋರಿ ಒಂದೇ (ಪ್ರತಿ ಗ್ರಾಮಿಗೆ 9 ಕ್ಯಾಲೋರಿ). ಹೆಚ್ಚು ತಿಂದರೆ ತೂಕ ಏರುವುದು ಖಂಡಿತ. ಆದರೆ ಯಾವುದೇ ಆರೋಗ್ಯಕರ ಎಣ್ಣೆಯನ್ನು ಸೇವಿಸಿದಾಗ ಹೊಟ್ಟೆ ಬೇಗ ತುಂಬಿದ ಹಾಗಾಗುವುದರಿಂದ ಕೆಲವರಿಗೆ ಅದರಿಂದ ತೂಕ ಇಳಿಸಲು ಸಹಾಯ.

ತಪ್ಪು ಕಲ್ಪನೆ: ಪೊಮೇಸ್ ಆಯಿಲ್ ಒಳ್ಳೆಯ ಬಜೆಟ್ ಆಯ್ಕೆ.

ವಾಸ್ತವ: ಅದು ಸಂಸ್ಕರಿಸಿದ ಕೈಗಾರಿಕಾ ತ್ಯಾಜ್ಯ. ಹಣ ಉಳಿಸಬೇಕಿದ್ದರೆ ತಾಜಾ ಸ್ಥಳೀಯ ಶೇಂಗಾ ಎಣ್ಣೆ ಬಳಸಿ, ಪೊಮೇಸ್ ಬೇಡ.

ನಿಮ್ಮ ಬಳಿ ಎಕ್ಸ್‌ಟ್ರಾ ವರ್ಜಿನ್ ಆಲಿವ್ ಎಣ್ಣೆ ಇದ್ದರೆ, ಅದನ್ನು ಸಲಾಡ್, ಸೂಪ್ ಅಥವಾ ಬೇಯಿಸಿದ ತರಕಾರಿಗಳ ಮೇಲೆ ಹಸಿಯಾಗಿ ಬಳಸಿ. ಒಗ್ಗರಣೆಗೆ ಆಲಿವ್ ಆಯಿಲ್ ಹಾಕಬೇಡಿ. ಆ ಶಾಖವನ್ನು ತಡೆದುಕೊಳ್ಳಲು ಅದಕ್ಕೆ ಶಕ್ತಿಯಿಲ್ಲ. ಅದಕ್ಕೆ ತುಪ್ಪ, ತೆಂಗಿನೆಣ್ಣೆ ಅಥವಾ ಶೇಂಗಾ ಎಣ್ಣೆ ಬಳಸಿ. ಬಾಟಲ್ ಮೇಲೆ ಪೊಮೇಸ್ ಎಂದು ಬರೆದಿದ್ದರೆ, ಅದನ್ನು ಖರೀದಿಸಬೇಡಿ.

ಅಡುಗೆ ಎಣ್ಣೆಯ ವಿಷಯದಲ್ಲಿ ಪಾಶ್ಚಾತ್ಯರನ್ನು ಕುರುಡಾಗಿ ಅನುಕರಿಸಬೇಡಿ. ನಮ್ಮ ವಾತಾವರಣ ಬೇರೆ, ನಮ್ಮ ಅಡುಗೆ ಶೈಲಿ ಬೇರೆ. ಪ್ರಕೃತಿ ಅವರಿಗೆ ಆಲಿವ್ ನೀಡಿದೆ, ನಮಗೆ ತೆಂಗು, ಶೇಂಗಾ ಮತ್ತು ತುಪ್ಪವನ್ನು ನೀಡಿದೆ. ನಮ್ಮ ಮಣ್ಣಿನದು ನಮಗೆ ಶ್ರೇಷ್ಠ.

ಅಮೆರಿಕದಲ್ಲಿ ಓದಲು ನನಗೆ ಇಷ್ಟವಿಲ್ಲ! ಏನು ಮಾಡಲಿ?

ಪ್ರದೀಪ್ ಕುಮಾರ ಎಸ್. ಶಿವಮೊಗ್ಗ

- **ಭಟ್ರೇ, ನನ್ನ ಪೋಷಕರು ನನ್ನನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಅಮೆರಿಕಕ್ಕೆ ಕಳುಹಿಸಲು ಬಯಸುತ್ತಾರೆ. ಆದರೆ ನನಗೆ ಭಾರತದಲ್ಲೇ ಉಳಿದುಕೊಂಡು ಓದಬೇಕು ಮತ್ತು ಇಲ್ಲಿಯೇ ನೆಲೆಸಬೇಕು ಎಂಬ ಆಸೆ ಇದೆ. ನನ್ನ ಎಲ್ಲ ಸಂಬಂಧಿಕರು ಅಮೆರಿಕದಲ್ಲಿರುವುದರಿಂದ, ನನ್ನನ್ನು ಕೂಡ ಅಲ್ಲಿಗೆ ಕಳುಹಿಸುವುದು ಅವರಿಗೊಂದು ಗೌರವದ ವಿಷಯವಾಗಿದೆ. ನಾನು ಭಾರತದಲ್ಲೂ ಉತ್ತಮ ಅವಕಾಶಗಳಿವೆ ಎಂದು ಅವರನ್ನು ಮನವರಿಕೆ ಮಾಡಲು ಪ್ರಯತ್ನಿಸುತ್ತಿದ್ದೇನೆ, ಆದರೆ ಅವರು ಒಪ್ಪುತ್ತಿಲ್ಲ. ನಾನು ನನ್ನ ಪೋಷಕರನ್ನು ಹೇಗೆ ಮನಪರಿವರ್ತನೆ ಮಾಡಿಸಬಹುದು?**

– ಪ್ರದೀಪ ಅವರೇ, ಪೋಷಕರ ಈ ನಿಲುವು ಮತ್ತು ನಿಮ್ಮ ತುಡಿತಗಳ ನಡುವಿನ ಸಂಘರ್ಷ ಅರ್ಥವಾಗುವಂಥದ್ದು. ಭಾರತೀಯ ಪೋಷಕರಿಗೆ ಸಾಮಾನ್ಯವಾಗಿ ಅಮೆರಿಕ ಎಂದರೆ ಕೇವಲ ವಿದ್ಯಾಭ್ಯಾಸವಲ್ಲ, ಅದೊಂದು ಸಾಮಾಜಿಕ ಪ್ರತಿಷ್ಠೆಯೂ ಹೌದು. ಆದರೆ, ನಿಮ್ಮ ವೃತ್ತಿಜೀವನ ಮತ್ತು ಜೀವನದ ಆಯ್ಕೆ ನಿಮ್ಮದಾಗಿರಬೇಕು. ಹಾಗಾದರೆ ಅವರನ್ನು ಪ್ರೀತಿಯಿಂದಲೇ ಹೇಗೆ ಒಪ್ಪಿಸಬಹುದು? ಪೋಷಕರಿಗೆ ಅಮೆರಿಕದ ಬಗ್ಗೆ ಇರುವ ಆಕರ್ಷಣೆ 'ಅಲ್ಲಿ ಹೋದರೆ ಜೀವನ ಸೆಟ್ ಆಗುತ್ತದೆ' ಎಂಬ ಹಳೆಯ ನಂಬಿಕೆ. ನೀವು ಇದನ್ನು ತರ್ಕಬದ್ಧವಾಗಿ ಎದುರಿಸಬೇಕು.

ನೀವು ಓದಬಯಸುವ ಕ್ಷೇತ್ರದಲ್ಲಿ ಭಾರತದಲ್ಲಿರುವ ಐಐಟಿ, ಐಐಎಸ್‌ಸಿ ಅಥವಾ ಇತರೆ ಉನ್ನತ ಸಂಸ್ಥೆಗಳ ಬಗ್ಗೆ ಅವರಿಗೆ ಮಾಹಿತಿ ನೀಡಿ. ಭಾರತ ಇಂದು ವಿಶ್ವದ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಎಂಬ ಅಂಶವನ್ನು ಅವರಿಗೆ ಮನವರಿಕೆ ಮಾಡಿ. ಇಲ್ಲಿಯೇ ಇದ್ದು ಸಾಧನೆ ಮಾಡಿದ ಯುವ ಉದ್ಯಮಿಗಳ ಉದಾಹರಣೆ ನೀಡಿ.

ಸಂಬಂಧಿಕರು ಅಮೆರಿಕದಲ್ಲಿದ್ದಾರೆ ಎಂಬ ಕಾರಣಕ್ಕೆ ನಿಮ್ಮನ್ನು ಕಳುಹಿಸುವುದು ಅವರಿಗೆ 'ಗೌರವ'ದ ವಿಷಯವಾಗಿರಬಹುದು. 'ಅಮೆರಿಕದಲ್ಲಿ ಸಾಮಾನ್ಯ ಕೆಲಸ ಮಾಡುವುದಕ್ಕಿಂತ, ಭಾರತದಲ್ಲೇ ಇದ್ದು ದೊಡ್ಡ ಮಟ್ಟದ ಸಾಧನೆ ಮಾಡಿ ಹೆಸರು ಮಾಡುವುದು ಕುಟುಂಬಕ್ಕೆ ಹೆಚ್ಚು ಹೆಮ್ಮೆ ತರುತ್ತದೆ' ಎಂದು ಅವರಿಗೆ ವಿವರಿಸಿ. ಸುತ್ತಮುತ್ತ ಎಲ್ಲರೂ ಇದ್ದಾರೆ ಎಂಬುದಕ್ಕಿಂತ, ನಾನು ಖುಷಿಯಾಗಿರುವುದು ನಿಮಗೆ ಮುಖ್ಯವಲ್ಲವೇ? ಎಂದು ಕೇಳಿ.

ನೀವು ಭಾರತದಲ್ಲಿ ಉಳಿಯಬೇಕು ಎಂದು ಹಠ ಮಾಡುತ್ತಿಲ್ಲ, ಬದಲಿಗೆ ಇಲ್ಲಿ ನಿಮಗೆ ಒಂದು ಭವಿಷ್ಯದ ಯೋಜನೆ ಇದೆ ಎಂದು ಅವರಿಗೆ ಸಾಬೀತುಪಡಿಸಿ. ಮುಂದಿನ 5 ವರ್ಷಗಳಲ್ಲಿ ನೀವು ಇಲ್ಲಿ ಏನು ಮಾಡಲು ಬಯಸುತ್ತೀರಿ? ಯಾವ ಕಂಪನಿಯಲ್ಲಿ ಕೆಲಸ ಮಾಡಬಹುದು ಅಥವಾ ಯಾವ ಉದ್ದಿಮೆ ಆರಂಭಿಸಬಹುದು? ಇವುಗಳ ಬಗ್ಗೆ ಒಂದು ಸ್ಪಷ್ಟವಾದ ಪ್ಲಾನ್ ಅವರ ಮುಂದಿಟ್ಟರೆ, ಅವರಿಗೆ ನಿಮ್ಮ ನಿರ್ಧಾರದ ಮೇಲೆ ನಂಬಿಕೆ ಬರುತ್ತದೆ.

ಅಮೆರಿಕದಲ್ಲಿರುವ ಸಂಬಂಧಿಕರ ಜೀವನದ ಕಷ್ಟಗಳ ಬಗ್ಗೆಯೂ ಮಾತನಾಡಿ. ಅಲ್ಲಿನ ಒಂಟಿತನ, ಕೆಲಸದ ಒತ್ತಡ ಮತ್ತು ಭಾರತದಲ್ಲಿ ಪೋಷಕರ ಜತೆಗಿರುವ ಸುಖ ಇವುಗಳನ್ನು ಹೋಲಿಕೆ ಮಾಡಿ. 'ನೀವು ವಯಸ್ಸಾದಾಗ ನಾನು ನಿಮ್ಮ ಜೊತೆಗಿರಬೇಕು' ಎಂಬುದು ನನ್ನ ಆಸೆ ಎಂಬ ಮಾತು ಯಾವುದೇ ಪೋಷಕರ ಮನಸ್ಸನ್ನು ಕರಗಿಸುತ್ತದೆ.

ನಿಮ್ಮ ಕುಟುಂಬದಲ್ಲಿ ನಿಮ್ಮ ಪೋಷಕರು ಯಾರ ಮಾತಿಗೆ ಬೆಲೆ ಕೊಡುತ್ತಾರೋ (ಉದಾಹರಣೆಗೆ, ಅಜ್ಜಿ-ತಾತ, ನೆಚ್ಚಿನ ಚಿಕ್ಕಪ್ಪ ಅಥವಾ ಶಿಕ್ಷಕರು), ಅವರ ಸಹಾಯ ಪಡೆಯಿರಿ. ಅವರಿಗೆ ನಿಮ್ಮ ನಿಲುವನ್ನು ವಿವರಿಸಿ, ಅವರು ಪೋಷಕರ ಜತೆ ಮಾತನಾಡಲು ವಿನಂತಿಸಿ.

ಪೋಷಕರ ಹಠದ ಹಿಂದೆ ನಿಮ್ಮ ಬಗ್ಗೆ ಕಾಳಜಿಯೇ ಇರುತ್ತದೆ. ನೀವು ಭಾರತದಲ್ಲೂ ಅಷ್ಟೇ ಸುಖವಾಗಿ, ಗೌರವಯುತವಾಗಿ ಬಾಳಬಹುದು ಎಂಬ ಭರವಸೆ ಅವರಿಗೆ ಸಿಕ್ಕರೆ, ಖಂಡಿತವಾಗಿಯೂ ಅವರು ನಿಮ್ಮ ನಿರ್ಧಾರಕ್ಕೆ ಬೆಂಬಲ ನೀಡುತ್ತಾರೆ. ತಾಳ್ಮೆಯಿಂದ, ಸಿಟ್ಟಿಲ್ಲದೆ ಅವರ ಜತೆ ಸಮಾಲೋಚನೆ ನಡೆಸಿ. ನಿಮ್ಮ ಮುಂದಿನ ವಿದ್ಯಾಭ್ಯಾಸಕ್ಕೆ ಶುಭವಾಗಲಿ!

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ವಾಸು, ಶಿವಮೊಗ್ಗ

- **ಸಂಪಾದಕರೇ, ನನ್ನ ಪತ್ನಿಗೆ ಕಳೆದ ಕೆಲವು ವರ್ಷಗಳಿಂದ ಒಸಿಡಿ (ಅತಿಯಾದ ಸ್ವಚ್ಛತೆ ಮತ್ತು ಕ್ರಮಬದ್ಧತೆಯ ಒತ್ತಡ) ಸಮಸ್ಯೆ ಇದೆ. ನಾವು ವಿವಾಹವಾಗಿ ಈಗ 20 ವರ್ಷಗಳಾದವು. ಆದರೆ ಅವರ ಈ ಸ್ವಭಾವದಿಂದ ನನ್ನ ಜೀವನದಲ್ಲಿ ಸಾಕಷ್ಟು ಒತ್ತಡ ಮತ್ತು ಅಶಾಂತಿ ಉಂಟಾಗುತ್ತಿದೆ. ಇದರಿಂದ ನಮ್ಮ ನಡುವೆ ಆಗಾಗ ಜಗಳಗಳೂ ಆಗುತ್ತಿವೆ. ಸ್ವಚ್ಛತೆ ಮತ್ತು ಹೈಜಿನ್ ಮುಖ್ಯವೆಂದು ನಾನು ಅರ್ಥಮಾಡಿಕೊಂಡಿದ್ದೇನೆ, ಆದರೆ ಅದಕ್ಕೂ ಒಂದು ಮಿತಿ ಇರಬೇಕು ಎಂದು ಅವಳಿಗೆ ಹೇಗೆ ತಿಳಿಸಬೇಕು?**

– ವಾಸು ಅವರೇ, ನಿಮ್ಮ ಇಪ್ಪತ್ತು ವರ್ಷಗಳ ದಾಂಪತ್ಯ ಜೀವನದಲ್ಲಿ ಈ ಹಂತದಲ್ಲಿ ನೀವು ಎದುರಿಸುತ್ತಿರುವ ಮಾನಸಿಕ ಒತ್ತಡ ನಿಜಕ್ಕೂ ಸವಾಲಿನದ್ದು. ಇಷ್ಟು ವರ್ಷಗಳ ಪಯಣದ ನಂತರವೂ ಇಂಥ ವಿಷಯಗಳ ಬಗ್ಗೆ ಜಗಳವಾಗುವುದು ಮನಸ್ಸಿಗೆ ನೋವುಂಟು ಮಾಡುತ್ತದೆ ಎಂಬುದು ಅರ್ಥವಾಗುತ್ತದೆ. ಒಸಿಡಿ (OCD - Obsessive Compulsive Disorder) ಎಂಬುದು ಕೇವಲ ಒಂದು ಸ್ವಭಾವ ಅಥವಾ ಹಠ ಅಲ್ಲ, ಅದು ಮನಸ್ಸಿನ ನಿಯಂತ್ರಣ ಮೀರಿ ನಡೆಯುವ ಒಂದು ವೈದ್ಯಕೀಯ ಸ್ಥಿತಿ ಎಂಬುದನ್ನು ಮೊದಲು ನಾವು ಅರಿತುಕೊಳ್ಳಬೇಕು. ಅವರಿಗೆ ನೀವು ಇದನ್ನು ಪ್ರೀತಿಯಿಂದ ಮತ್ತು ತಾಳ್ಮೆಯಿಂದ ತಿಳಿಹೇಳಬೇಕು.

ಜಗಳ ನಡೆಯುತ್ತಿರುವಾಗ ಅಥವಾ ಅವಳು ಶುಚಿಗೊಳಿಸುವ ಕೆಲಸದಲ್ಲಿ ಮಗ್ನರಾಗಿರುವಾಗ ಈ ಬಗ್ಗೆ ಮಾತನಾಡಬೇಡಿ. ಇಬ್ಬರೂ ನಿರಾಳವಾಗಿದ್ದಾಗ, 'ನನಗೆ ನಿನ್ನ ಆರೋಗ್ಯದ ಬಗ್ಗೆ ಕಾಳಜಿಯಿದೆ' ಎಂಬ ಧಾಟಿಯಲ್ಲಿ ಮಾತು ಆರಂಭಿಸಿ. ಅವರ ಮೇಲೆ ಯಾವುದೇ ಆರೋಪ ಮಾಡಬೇಡಿ. ನಿಮ್ಮ ಈ ಶ್ರಮದಿಂದ ನನಗೂ ಮತ್ತು ನಿಮಗೂ ಆಯಾಸವಾಗುತ್ತಿದೆ ಎಂದು ತಿಳಿಸಿ. ಸ್ವಚ್ಛತೆ ಮತ್ತು ಹೈಜಿನ್ ಬಗ್ಗೆ ನಿಮ್ಮ ಸಹಮತವಿದೆ ಎಂಬುದನ್ನು ಮೊದಲು ಅವರಿಗೆ ಸ್ಪಷ್ಟಪಡಿಸಿ. ನಂತರ, ಯಾವ ವಿಷಯಗಳು ಅತಿಯಾದವು ಎಂದು ನಿಮಗೆ ಅನಿಸುತ್ತದೆಯೋ ಅವುಗಳನ್ನು ಪಟ್ಟಿ ಮಾಡಿ. ಉದಾಹರಣೆಗೆ, ಒಂದೇ ವಸ್ತುವನ್ನು ಪದೇ ಪದೇ ತೊಳೆಯುವುದು, ಯಾರಾದರೂ ಮನೆಗೆ ಬಂದಾಗ ತೀವ್ರವಾದ ಆತಂಕಕ್ಕೊಳಗಾಗುವುದು, ಈ ಮಿತಿ ದಾಟಿದಾಗ ಮನೆಯ ನೆಮ್ಮದಿಯ ಮೇಲೆ ಬೀರುತ್ತಿರುವ ಪರಿಣಾಮವನ್ನು ವಿವರಿಸಿ.

ಒಸಿಡಿ ಇರುವವರು ಸ್ವಚ್ಛತೆ ಮಾಡದಿದ್ದರೆ ಏನೋ ಅನಾಹುತವಾಗಿಬಿಡುತ್ತದೆ ಎಂಬ ತೀವ್ರವಾದ ಆತಂಕ ಅನುಭವಿಸುತ್ತಿರುತ್ತಾರೆ. ನೀನು ಹೀಗೆ ಮಾಡದಿದ್ದರೆ ಏನಾಗುತ್ತದೆ ಎಂದು ನಿನಗೆ ಅನಿಸುತ್ತದೆ? ಎಂದು ಕೇಳಿ. ಅವರ ಭಯವನ್ನು ಅಣಕಿಸದೆ, ಅದಕ್ಕೆ ತಾರ್ಕಿಕವಾಗಿ ಧೈರ್ಯ ತುಂಬಲು ಪ್ರಯತ್ನಿಸಿ.

ಒಸಿಡಿ ಎಂಬುದು ತರ್ಕದಿಂದ ಅಥವಾ ಕೇವಲ ತಿಳಿಹೇಳುವುದರಿಂದ ಪೂರ್ಣವಾಗಿ ಗುಣವಾಗುವಂಥದ್ದಲ್ಲ. 20 ವರ್ಷಗಳ ನಂತರವೂ ಈ ಸಮಸ್ಯೆ ಹೆಚ್ಚಾಗುತ್ತಿದ್ದರೆ, ಇದಕ್ಕೆ ವೈದ್ಯಕೀಯ ಚಿಕಿತ್ಸೆ ಅಥವಾ ಕೌನ್ಸೆಲಿಂಗ್ ಅಗತ್ಯವಿರಬಹುದು.

ನಿಮ್ಮ ಜೀವನದಲ್ಲಿ ಉಂಟಾಗುತ್ತಿರುವ ಅಶಾಂತಿ ಮತ್ತು ಒತ್ತಡವನ್ನು ಅವರಿಗೆ ಪ್ರಾಮಾಣಿಕವಾಗಿ ವಿವರಿಸಿ. ನಿನ್ನ ಈ ಅಭ್ಯಾಸದಿಂದ ನನಗೆ ನಿನ್ನ ಜತೆ ಸಮಯ ಕಳೆಯಲು ಸಾಧ್ಯವಾಗುತ್ತಿಲ್ಲ, ಇದು ನಮ್ಮ ಸಂಬಂಧದ ಮೇಲೆ ಪರಿಣಾಮ ಬೀರುತ್ತಿದೆ ಎಂದು ಹೇಳುವುದು ಅವರಲ್ಲಿ ಬದಲಾವಣೆ ತರಬಹುದು.

ಅಶೋಕ, (ಇಮೇಲ್ ಮೂಲಕ)

- **ಭಟ್ರೇ, ನನಗೆ ನನ್ನ ಸ್ನೇಹಿತರ ಪ್ರಗತಿಯನ್ನು ಸಹಿಸಲು ಸಾಧ್ಯವಾಗುವುದಿಲ್ಲ. ವಿಪರೀತ ಹೊಟ್ಟೆಕಿಚ್ಚಿನ ಸ್ವಭಾವದವನು ನಾನು. ಇದನ್ನು ಪೂರ್ತಿ ಜೀರೋ ಮಾಡುವುದು ಹೇಗೆ?**

–ಅಶೋಕ ಅವರೇ, ಮೊದಲನೆಯದಾಗಿ ಈ ವಿಷಯವನ್ನು ಒಪ್ಪಿಕೊಂಡಿದ್ದಕ್ಕೇ ನಿಮಗೊಂದು ಪ್ರಶಸ್ತಿ ಕೊಡಬೇಕು! ಯಾಕಂದರೆ, ಅರ್ಧ ಜಗತ್ತು ಹೊಟ್ಟೆಕಿಚ್ಚಿನಿಂದ ಬೇಯುತ್ತಿದ್ದರೂ ಮೇಲೆ ಮಾತ್ರ ನನಗೆ ಯಾರ ಬಗ್ಗೆಯೂ ಮತ್ಸರವಿಲ್ಲ ಎಂದು ಸತ್ಯಹರಿಶ್ಚಂದ್ರನಂತೆ ನಟಿಸುತ್ತಿರುತ್ತದೆ. ಇದನ್ನು ಪೂರ್ತಿ 'ಜೀರೋ' ಮಾಡುವುದು ಹೇಗೆ ಅಂತೀರಾ? ಹೇಳುತ್ತೇನೆ, ಕೇಳಿ.

ನಿಮ್ಮ ಸ್ನೇಹಿತರು ವಿದೇಶ ಪ್ರವಾಸದ ಫೋಟೋ ಹಾಕಿದಾಗ, ನೀವು ಇಲ್ಲಿ ಸಾಂಬಾರ್ ಕಲಸುತ್ತಿದ್ದರೆ ಹೊಟ್ಟೆ ಉರಿಯುವುದು ಸಹಜ. ಅವರ ಪ್ರಗತಿ ನಿಮಗೆ ಕಾಣದಿದ್ದರೆ, ಉರಿ ತಾನಾಗಿಯೇ ಆರುತ್ತದೆ. ಕಣ್ಣಿಗೆ ಕಾಣದ್ದು, ಹೊಟ್ಟೆಗೆ ಉರಿಯದು ಎಂಬುದು ಪರಮ ಸತ್ಯ. ಪ್ರತಿಯೊಬ್ಬನ ಯಶಸ್ಸಿನ ಹಿಂದೆ ಒಂದು ಕಿರಿಕಿರಿ ಕಥೆ ಇರುತ್ತದೆ. ನಿಮ್ಮ ಗೆಳೆಯ ಪ್ರಮೋಷನ್ ಪಡೆದರೆ, ಅವನು ಬಾಸ್ ಹತ್ತಿರ ಎಷ್ಟು ಬೈಸಿಕೊಂಡಿದ್ದಾನೆ ಅಥವಾ ಅವನಿಗೆ ಎಷ್ಟು ಕೂದಲು ಉದುರಿದೆ ಎಂದು ಯೋಚಿಸಿ. ಅವರ ಸುಖದ ಹಿಂದೆ ಅಡಗಿರುವ ದುಃಖವನ್ನು ಹುಡುಕಿದರೆ ನಿಮಗೇ ಅವರ ಮೇಲೆ 'ಪಾಪ' ಅನಿಸಿ ಹೊಟ್ಟೆ ತಣ್ಣಗಾಗುತ್ತದೆ!

ಜೀವನ ಎಂಬುದು ದೋಸೆ ತವ ಇದ್ದಂತೆ. ಒಬ್ಬರ ದೋಸೆ ಬೇಗ ಬೇಯುತ್ತದೆ, ಇನ್ನೊಬ್ಬರದ್ದು ಲೇಟು. ಅವರ ದೋಸೆ ಕೆಂಪಗಾಗಿದೆ ಎಂದು ನೀವು ನಿಮ್ಮ ತವಕ್ಕೆ ನೀರು ಹಾಕಿಕೊಂಡರೆ ದೋಸೆ ಏಳುವುದಿಲ್ಲ. ಬೇರೆಯವರ ತೋಟದಲ್ಲಿ ಎಷ್ಟು ಹಣ್ಣಾಗಿದೆ ಎಂದು ಎಣಿಸುವ ಬದಲು, ನಿಮ್ಮ ತೋಟದಲ್ಲಿ ಕನಿಷ್ಠ ಒಂದು ಮೂಲಂಗಿ ಬೆಳೆಯುತ್ತಿದೆಯೇ ಎಂದು ನೋಡಿ. ನಿಮ್ಮ ಕೆಲಸದಲ್ಲಿ ನೀವು ಬ್ಯುಸಿಯಾದರೆ, ಪಕ್ಕದವನ ಬಿಳಿ ಬಟ್ಟೆ ನೋಡಲು ಟೈಮೇ ಇರುವುದಿಲ್ಲ.

ಹೊಟ್ಟೆಕಿಚ್ಚು ಎಂಬುದು ಪೆಟ್ರೋಲ್ ಇದ್ದಂತೆ; ಅದನ್ನು ಬೇರೆಯವರ ಮೇಲೆ ಸುರಿದರೆ ಜಗಳವಾಗುತ್ತದೆ, ನಿಮ್ಮ ಗಾಡಿಗೆ ಹಾಕಿಕೊಂಡರೆ ನೀವು ವೇಗವಾಗಿ ಹೋಗಬಹುದು. ಇದನ್ನು 'ಜೀರೋ' ಮಾಡಬೇಡಿ, ಬದಲಿಗೆ ಆ ಉರಿಯನ್ನೇ 'ಫ್ಯೂಯಲ್' ಮಾಡಿಕೊಂಡು ನೀವೂ ಬೆಳೆಯಿರಿ! ನಂತರ ಒಂದು ದಿನ ನಿಮ್ಮ ಗೆಳೆಯರು ನಿಮ್ಮನ್ನು ನೋಡಿ ಹೊಟ್ಟೆ ಉರಿಸಿಕೊಳ್ಳುವಂತೆ ಮಾಡಿ, ಆಗ ಸ್ಕೋರ್ ಸಮನಾಗುತ್ತದೆ!

ಅರುಣಾ ಬಿ. (ಇಮೇಲ್ ಮೂಲಕ)

- **ಭಟ್ರೇ, ನಾನು ಕಳೆದ ಮೂರು ವರ್ಷಗಳಿಂದ ಒಂದು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಕೆಲಸವನ್ನು ಕಚೇರಿ ಸಮಯದ ಒಳಗೇ ಪೂರ್ಣಗೊಳಿಸುತ್ತೇನೆ. ಆದರೆ ಕಚೇರಿ ಸಮಯ ಮುಗಿದ ಕೂಡಲೇ ಮನೆಗೆ ಹೋಗುವಾಗ, ಇತರರು ನನ್ನನ್ನು ಬೇಗ ಹೋಗುತ್ತಿರುವಂತೆ ನೋಡುತ್ತಾರೆ. ಹಲವರು ಕಚೇರಿಯಲ್ಲಿ ತಡವಾಗಿ ಉಳಿಯುವುದನ್ನು ತುಂಬಾ ಕಷ್ಟಪಟ್ಟು ಕೆಲಸ ಮಾಡುವಂತೆ ತೋರಿಸುತ್ತಾರೆ. ವಾಸ್ತವದಲ್ಲಿ ಕೆಲವರು ಕಚೇರಿ ಸಮಯದಲ್ಲೇ ಸಮಯವನ್ನು ಸರಿಯಾಗಿ ಬಳಸದೇ, ನಂತರ ತಡವಾಗಿ ಉಳಿಯುತ್ತಾರೆ. ಈ ರೀತಿ ತಡವಾಗಿ ಕೆಲಸ ಮಾಡುವುದು ತುಂಬಾ ಕಷ್ಟಪಟ್ಟು ಕೆಲಸ ಮಾಡುವಂತೆ ಕಾಣಿಸುವ ಒಂದು ಸಂಸ್ಕೃತಿ ನಮ್ಮ ಕಂಪನಿಯಲ್ಲಿ ಬೆಳೆದಿದೆ. ಇದು ನನಗೆ ತುಂಬಾ ಅಸಹನೀಯವಾಗುತ್ತಿದೆ. ಈ ಪರಿಸ್ಥಿತಿಗೆ ಯಾವುದೇ ಪರಿಹಾರ ಇದೆಯೇ?**

–ಅರುಣಾ ಅವರೇ, ಇದು ಇಂದಿನ ಕಾರ್ಪೊರೇಟ್ ಜಗತ್ತಿನಲ್ಲಿ ಅನೇಕರು ಎದುರಿಸುತ್ತಿರುವ ಒಂದು ಗಂಭೀರ ಸಮಸ್ಯೆ. ಕಚೇರಿಯಲ್ಲಿ ತಡವಾಗಿ ಉಳಿಯುವುದೇ ಶ್ರದ್ಧೆ ಎಂದು ಭಾವಿಸುವ ಈ ಪ್ರವೃತ್ತಿಯನ್ನು 'Toxic Work Culture' ಅಥವಾ 'Presenteeism' ಎನ್ನಲಾಗುತ್ತದೆ. ನಿಮ್ಮ ಕೆಲಸವನ್ನು ಸಮಯಕ್ಕೆ ಸರಿಯಾಗಿ ಮುಗಿಸಿ ಹೊರಡುವುದು ನಿಮ್ಮ ದಕ್ಷತೆಯನ್ನು ತೋರಿಸುತ್ತದೆಯೇ ಹೊರತು ಸೋಮಾರಿತನವನ್ನಲ್ಲ.

ನೀವು ಕಚೇರಿ ಸಮಯದಲ್ಲೇ ಕೆಲಸ ಮುಗಿಸುತ್ತಿದ್ದೀರಿ ಎಂಬುದು ನಿಮ್ಮ ಮ್ಯಾನೇಜರ್‌ಗೆ ಸ್ಪಷ್ಟವಾಗಿ ತಿಳಿದಿರಲಿ. ವಾರದ ಕೊನೆಯಲ್ಲಿ ಅಥವಾ ಪ್ರತಿದಿನ ಸಂಜೆ ನೀವು ಮಾಡಿದ ಕೆಲಸಗಳ 'ಖರಿಚತ್ರಿತ್ಕಿಭಿ ಟಟ್ಟರಿ' ಅನ್ನು ಇಮೇಲ್ ಮೂಲಕ ಕಳುಹಿಸಿ. ಇದರಿಂದ ನಿಮ್ಮ ಕೆಲಸದ ವೇಗ ಮತ್ತು ಗುಣಮಟ್ಟದ ಬಗ್ಗೆ ಅಧಿಕೃತ ದಾಖಲೆ ಇರುತ್ತದೆ. ಕೆಲಸ ಮುಗಿದಿದೆ ಎಂದು ಗೊತ್ತಾದ ಮೇಲೆ ಯಾರೂ ನಿಮ್ಮನ್ನು ಪ್ರಶ್ನಿಸಲು ಸಾಧ್ಯವಿಲ್ಲ.

ಒಂದು ವೇಳೆ ನಿಮ್ಮ ಮ್ಯಾನೇಜರ್ ಅಥವಾ ಸಹೋದ್ಯೋಗಿಗಳು ನಿಮ್ಮ ಬೇಗ ಹೊರಡುವ ಅಭ್ಯಾಸದ ಬಗ್ಗೆ ಪರೋಕ್ಷವಾಗಿ ಮಾತನಾಡುತ್ತಿದ್ದರೆ, ಮುಚ್ಚುಮರೆಯಿಲ್ಲದೇ ಸಂವಹನ ನಡೆಸಿ. ನಾನು ಕಚೇರಿ ಅವಧಿಯಲ್ಲಿ ಸಮಯವನ್ನು ಪೂರ್ಣವಾಗಿ ಬಳಸಿಕೊಂಡು ನನ್ನ ಎಲ್ಲ ಗುರಿಗಳನ್ನು ಮುಗಿಸುತ್ತೇನೆ, ಇದರಿಂದ ನನಗೆ ಸಂಜೆ ವೈಯಕ್ತಿಕ ಜೀವನಕ್ಕೆ ಸಮಯ ನೀಡಲು ಸಾಧ್ಯವಾಗುತ್ತಿದೆ ಎಂದು ಹೆಮ್ಮೆಯಿಂದಲೇ ಹೇಳಿ.

ಬಹಳಷ್ಟು ಕಂಪನಿಗಳಲ್ಲಿ ಎಷ್ಟು ಗಂಟೆ ಕೆಲಸ ಮಾಡಿದರು ಎನ್ನುವುದಕ್ಕಿಂತ ಏನು ಸಾಧಿಸಿದರು ಎನ್ನುವುದು ಮುಖ್ಯವಾಗುತ್ತದೆ. ನಿಮ್ಮ ಕೆಪಿಐ (KPI) ಅಥವಾ ಗುರಿಗಳನ್ನು ಮೀರಿದ ಸಾಧನೆ ಮಾಡಿದಾಗ, ನೀವು ಎಷ್ಟು ಗಂಟೆಗೆ ಮನೆಗೆ ಹೋಗುತ್ತೀರಿ ಎಂಬುದು ಗೌಣವಾಗುತ್ತದೆ. ನಿಮ್ಮ ಔಟ್‌ಪುಟ್ ಅತ್ಯುತ್ತಮವಾಗಿದ್ದರೆ, ಇತರರ ಟೀಕೆಗಳಿಗೆ ತಾನಾಗಿಯೇ ಉತ್ತರ ಸಿಗುತ್ತದೆ. ಯಾರೋ ತಡವಾಗಿ ಉಳಿಯುತ್ತಾರೆ ಎಂಬ ಕಾರಣಕ್ಕೆ ನೀವು ಮುಜುಗರ ಪಡುವ ಅಗತ್ಯವಿಲ್ಲ. ನೀವು ಸಮಯಕ್ಕೆ ಸರಿಯಾಗಿ ಹೊರಡುವ ಮೂಲಕ ಇತರರಿಗೂ ಒಂದು ಉತ್ತಮ ಉದಾಹರಣೆಯಾಗಬಹುದು. ಕೆಲಸ ಮತ್ತು ವೈಯಕ್ತಿಕ ಜೀವನದ ಸಮತೋಲನ (Work-Life Balance) ಕಾಪಾಡಿಕೊಳ್ಳುವುದು ನಿಮ್ಮ ಹಕ್ಕು.

ಕಚೇರಿ ಸಮಯ ಮುಗಿದ ನಂತರ ಬರುವ ಕರೆಗಳು ಅಥವಾ ಇಮೇಲ್‌ಗಳಿಗೆ ತುರ್ತು ಇಲ್ಲದಿದ್ದರೆ ಪ್ರತಿಕ್ರಿಯಿಸಬೇಡಿ. ನೀವು ಸಮಯಕ್ಕೆ ಸರಿಯಾಗಿ ಲಭ್ಯವಿರುತ್ತೀರಿ ಮತ್ತು ಕೆಲಸ ಮುಗಿಸುತ್ತೀರಿ ಎಂಬ ನಂಬಿಕೆ ಮೂಡಿದರೆ, ಕ್ರಮೇಣ ಜನರ ದೃಷ್ಟಿಕೋನ ಬದಲಾಗುತ್ತದೆ.

ನೆನಪಿಡಿ, ಕಚೇರಿಯಿಂದ ಬೇಗ ಹೊರಡುವುದು ತಪ್ಪಲ್ಲ. ತಡವಾಗಿ ಕುಳಿತುಕೊಳ್ಳುವುದು ಶ್ರದ್ಧೆಯ ಸಂಕೇತವಲ್ಲ, ಅದು ಹೆಚ್ಚಾಗಿ ಸಮಯ ನಿರ್ವಹಣೆಯ ವೈಫಲ್ಯ ಅಥವಾ ಕೇವಲ ಪ್ರದರ್ಶನಕ್ಕಾಗಿ ಮಾಡುವ ಕೆಲಸವಾಗಿರುತ್ತದೆ. ನಿಮ್ಮ ದಕ್ಷತೆಯ ಮೇಲೆ ನಿಮಗೆ ನಂಬಿಕೆಯಿರಲಿ, ಅನಗತ್ಯವಾಗಿ ಅಪರಾಧಿ ಪ್ರಜ್ಞೆ ಅನುಭವಿಸಬೇಡಿ. ನಿಮ್ಮ ವೃತ್ತಿಜೀವನವು ಓಟದ ಸ್ಪರ್ಧೆಯಲ್ಲ, ಅದೊಂದು ಸುದೀರ್ಘ ಪಯಣ; ಅಲ್ಲಿ ಆರೋಗ್ಯ ಮತ್ತು ನೆಮ್ಮದಿ ಅತಿ ಮುಖ್ಯ.

ಭಾವನಾ, (ಇಮೇಲ್ ಮೂಲಕ)

- **ಸಂಪಾದಕರೇ, ನನ್ನ ಸಂಬಂಧಿಕರಲ್ಲಿ ಒಬ್ಬರು ನನ್ನನ್ನು ಮದುವೆಯಾಗಲು ಇಚ್ಛಿಸುತ್ತಿದ್ದಾರೆ. ನನ್ನ ಪೋಷಕರೂ ಅದಕ್ಕೆ ಬೆಂಬಲ ನೀಡುತ್ತಿದ್ದಾರೆ. ಆದರೆ ನನಗೆ ಸಂಬಂಧಿಕರನ್ನು ಮದುವೆ ಮಾಡಲು ಆಸಕ್ತಿ ಇಲ್ಲ, ಏಕೆಂದರೆ ಒಂದೇ ಕುಟುಂಬದ ಅಥವಾ ಹತ್ತಿರದ ರಕ್ತ ಸಂಬಂಧದಲ್ಲಿ ಮದುವೆಯಾಗುವುದು ಭವಿಷ್ಯದ ಮಕ್ಕಳ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ ಎಂದು ನಾನು ಭಾವಿಸುತ್ತಿದ್ದೇನೆ. ನಾನು ಇದನ್ನು ನನ್ನ ಪೋಷಕರಿಗೆ ತಿಳಿಸಲು ಬಹಳ ಪ್ರಯತ್ನಿಸುತ್ತಿದ್ದೇನೆ, ಆದರೆ ಅವರು ಒಪ್ಪುತ್ತಿಲ್ಲ. ಕೆಲವು ಸಮುದಾಯಗಳಲ್ಲಿ ಸಂಬಂಧಗಳಲ್ಲಿ ಮದುವೆಗಳು ನಡೆಯುತ್ತವೆ, ಆದ್ದರಿಂದ ಇದರಲ್ಲಿ ತಪ್ಪೇನಿಲ್ಲ ಎಂದು ಅವರು ಹೇಳುತ್ತಾರೆ. ನಾನು ನನ್ನ ಪೋಷಕರಿಗೆ ವೈಜ್ಞಾನಿಕವಾಗಿ ಮತ್ತು ಸಮಾಧಾನದಿಂದ ಈ ವಿಷಯವನ್ನು ಹೇಗೆ ವಿವರಿಸಬಹುದು? ಅವರಿಗೆ ವೈಜ್ಞಾನಿಕ ಕಾರಣಗಳನ್ನು ತಿಳಿಸಿ ಹೇಗೆ ಮನವರಿಕೆ ಮಾಡಿಸಬಹುದು?**

–ಭಾವನಾ ಅವರೇ, ಹತ್ತಿರದ ರಕ್ತ ಸಂಬಂಧಿಗಳಲ್ಲಿ ವಿವಾಹವಾಗುವುದು (Consanguineous marriage) ಕೇವಲ ಸಂಪ್ರದಾಯದ ವಿಷಯವಲ್ಲ, ಇದು ವೈಜ್ಞಾನಿಕವಾಗಿ ಮತ್ತು ತಳಿಶಾಸ್ತ್ರದ (Genetics) ದೃಷ್ಟಿಯಿಂದ ಗಂಭೀರವಾಗಿ ಪರಿಗಣಿಸಬೇಕಾದ ಅಂಶ. ನಿಮ್ಮ ಆತಂಕವು ಅತ್ಯಂತ ತಾರ್ಕಿಕ ಮತ್ತು ದೂರದೃಷ್ಟಿಯುಳ್ಳದ್ದಾಗಿದೆ. ಇದನ್ನು ನಿಮ್ಮ ಪೋಷಕರಿಗೆ ಮತ್ತು ಸಂಬಂಧಿಕರಿಗೆ ವೈಜ್ಞಾನಿಕವಾಗಿ ಮನವರಿಕೆ ಮಾಡಿಕೊಡುವುದು ಒಳ್ಳೆಯದು.

ಪ್ರತಿಯೊಬ್ಬ ಮನುಷ್ಯನಲ್ಲೂ ಕೆಲವು ಸುಪ್ತ ಅಥವಾ ಹಾನಿಕಾರಕ ಜೀನ್‌ಗಳು (Recessive Genes) ಇರುತ್ತವೆ. ದಂಪತಿಗಳು ಬೇರೆ ಬೇರೆ ಕುಟುಂಬದವರಾಗಿದ್ದಾಗ, ಮಕ್ಕಳಲ್ಲಿ ಇಂಥ ದೋಷಪೂರಿತ ಜೀನ್‌ಗಳು ಸಕ್ರಿಯವಾಗುವ ಸಾಧ್ಯತೆ ಕಡಿಮೆ ಇರುತ್ತದೆ. ಆದರೆ, ಹತ್ತಿರದ ಸಂಬಂಧಿಗಳಲ್ಲಿ ಒಂದೇ ರೀತಿಯ ವಂಶವಾಹಿಗಳು ಇರುವುದರಿಂದ, ದೋಷಪೂರಿತ ಜೀನ್‌ಗಳು ಒಂದಾಗಿ ಹುಟ್ಟುವ ಮಕ್ಕಳಲ್ಲಿ ಅನುವಂಶೀಯ ಕಾಯಿಲೆಗಳು ಕಾಣಿಸಿಕೊಳ್ಳುವ ಸಾಧ್ಯತೆ 2 ರಿಂದ 3 ಪಟ್ಟು ಹೆಚ್ಚು ಇರುತ್ತದೆ.

ರಕ್ತ ಸಂಬಂಧಿಗಳ ವಿವಾಹದಿಂದ ಜನಿಸುವ ಮಕ್ಕಳಲ್ಲಿ ಕೆಲವು ಸಮಸ್ಯೆಗಳು ಕಂಡುಬರುವ ಸಾಧ್ಯತೆಯಿದೆ. ಉದಾಹರಣೆಗೆ, ಹೃದಯದ ತೊಂದರೆಗಳು ಅಥವಾ ದೈಹಿಕ ಅಂಗವೈಕಲ್ಯ, ಕಲಿಕೆಯಲ್ಲಿ ಹಿನ್ನಡೆ ಅಥವಾ ಕಡಿಮೆ ಬುದ್ಧಿಶಕ್ತಿ, ದೃಷ್ಟಿ ದೋಷ, ಶ್ರವಣ ದೋಷ ಅಥವಾ ಚಯಾಪಚಯ ಕ್ರಿಯೆಗೆ ಸಂಬಂಧಿಸಿದ ಗಂಭೀರ ಕಾಯಿಲೆಗಳು.

ಮದುವೆ ಎಂಬುದು ಕೇವಲ ಇಬ್ಬರು ವ್ಯಕ್ತಿಗಳ ಅಥವಾ ಕುಟುಂಬಗಳ ಮಿಲನವಲ್ಲ; ಅದು ಮುಂದಿನ ಪೀಳಿಗೆಯ ಅಡಿಪಾಯ. ಮಕ್ಕಳ ಆರೋಗ್ಯದಲ್ಲಿ ಏರುಪೇರಾದರೆ, ಅದು ಇಡೀ ಕುಟುಂಬದ ನೆಮ್ಮದಿಯನ್ನು ಕಸಿದುಕೊಳ್ಳುತ್ತದೆ. ಭಾವನಾತ್ಮಕ ನಿರ್ಧಾರಗಳಿಗಿಂತ ವೈಜ್ಞಾನಿಕ ವಾಸ್ತವ ಮುಖ್ಯ ಎಂಬುದನ್ನು ಪೋಷಕರಿಗೆ ತಿಳಿಸಿ.

ನಮ್ಮ ಸಂಪ್ರದಾಯಗಳು ನಮಗೆ ಮುಖ್ಯವಾದರೂ, ಅವು ವೈಜ್ಞಾನಿಕ ಸತ್ಯಗಳಿಗಿಂತ ದೊಡ್ಡದಲ್ಲ. ಮಕ್ಕಳ ಆರೋಗ್ಯದ ವಿಷಯದಲ್ಲಿ ರಾಜಿ ಮಾಡಿಕೊಳ್ಳುವುದು ಸರಿಯಲ್ಲ ಎಂಬ ನಿಮ್ಮ ನಿರ್ಧಾರವು ವಿವೇಕಯುತವಾಗಿದೆ. ವೈಜ್ಞಾನಿಕ ಕಾರಣಗಳನ್ನು ಮುಂದಿಟ್ಟು ಪೋಷಕರನ್ನು ಒಪ್ಪಿಸಲು ಪ್ರಯತ್ನಿಸಿ.

ಆರೂಡುವ ಸೌರಯುಗಾದಿ

ನಮ್ಮ ರಾಜ್ಯದ ಕರಾವಳಿಯ ಕೃಷಿಕರು ಸೌರಮಾನ ಯುಗಾದಿಯನ್ನು ಕೃಷಿ ಚಟುವಟಿಕೆಗೆ ಪೂರಕವಾಗಿ ಆಚರಿಸುತ್ತಾರೆ. ಅಲ್ಲಿನ ಯುಗಾದಿಯ ದಿನ ಹೊಸ ವರ್ಷದ ಮೊದಲ ಉಳುಮೆ!

» ಕೆ. ಜನಾರ್ದನ ತುಂಗ

ಭಾರತದ ಬಹುಭಾಗದ ಜನರು ಇಂದು ಚಾಂದ್ರಮಾನ ಯುಗಾದಿ ಆಚರಿಸಿದರೆ ಕರಾವಳಿಯ ಜನರು ಯುಗಾದಿಯನ್ನು ಏಪ್ರಿಲ್ 14ರಂದು ಆಚರಿಸುತ್ತಾರೆ. ಅಂದು ಸೌರಪಂಚಾಂಗದ ಪ್ರಕಾರ ಯುಗಾದಿ.

ಋತುಗಳ ಬದಲಾವಣೆಗೆ ಸೂರ್ಯನೇ ಕಾರಣ. ಮಳೆ, ಚಳಿ, ಬಿಸಿಲು ಎಲ್ಲದಕ್ಕೂ ಸೂರ್ಯನೇ ಕಾರಣ. ಚಂದ್ರ ಮಾನಸಿಕ ಪ್ರಕೃತಿಯ ಮೇಲೆ ಪ್ರಭಾವ ಬೀರುತ್ತಾನೆ ಎಂಬುದರ ಹೊರತಾಗಿ ಚಂದ್ರನಿಂದ ಭೂಮಿಯ ಮೇಲೆ ಮಹತ್ತರ ಬದಲಾವಣೆ ಸಂಭವಿಸುವುದಿಲ್ಲ. ಚಾಂದ್ರಮಾನ ಯುಗಾದಿಯ ದಿನಾಂಕ ಪ್ರತಿವರ್ಷ ಬದಲಾಗುತ್ತದೆ. ಆದರೆ ಸೌರಮಾನ ಯುಗಾದಿ ಪ್ರತಿವರ್ಷ ಏಪ್ರಿಲ್ 14ರಂದೇ (ಒಮ್ಮೊಮ್ಮೆ 15ರಂದು) ಬರುತ್ತದೆ.

ನಮ್ಮದು ಕರಾವಳಿಯಲ್ಲಿರುವ, ಸಮುದ್ರಕ್ಕೆ ಹತ್ತಿರದಲ್ಲಿರುವ ಹಳ್ಳಿ. ನಮ್ಮಲ್ಲಿ ಸಂಕ್ರಾಂತಿ, ಯುಗಾದಿಗಳನ್ನು ಅಷ್ಟೇನೂ ವೈಭವದಿಂದ ಆಚರಿಸುವುದಿಲ್ಲ. ಯಾವುದೇ ಹಬ್ಬವಿದ್ದರೂ ಅವುಗಳನ್ನು ಕೃಷಿಚಟುವಟಿಕೆಗಳಿಗೆ ಹೊಂದಿಸಿಕೊಂಡೇ ಆಚರಿಸುತ್ತಾರೆ. ಕೆಲವು ಹಬ್ಬಗಳು ತಮ್ಮ ಸಾಂಕೇತಿಕತೆಯಿಂದ ನನ್ನ ಮನಸ್ಸಿನಲ್ಲಿ ಉಳಿದುಕೊಂಡು ಬಂದಿವೆ. ಅಂಥವುಗಳಲ್ಲಿ ಯುಗಾದಿಯೂ ಒಂದು.

ನಮ್ಮ ಹಳ್ಳಿಯಲ್ಲಿ ಚಾಂದ್ರಮಾನ ಯುಗಾದಿಯ ಆಚರಣೆ ತುಂಬಾ ಕಡಿಮೆ, ಸೌರಮಾನ ಯುಗಾದಿಯ ಆಚರಣೆ ಇದೆ. ಈ ಆಚರಣೆಯು ಕೃಷಿ ಚಟುವಟಿಕೆಗೆ ಪೂರಕವಾಗಿರುವುದು ವಿಶೇಷ! ಯುಗಾದಿಯ ಮುನ್ನಾದಿನ ಒಂದು ಹೆಡಿಗೆಯ ತುಂಬಾ ಭತ್ತದ ಹುಲ್ಲಿನ ಚೆಂಡೆ ತಯಾರಿಸುತ್ತಾರೆ. ಇದನ್ನು 'ಚಪ್ಪ' ಎನ್ನುತ್ತೇವೆ. ಇದು ಆಕಾರದಲ್ಲಿ ಫೇಣಿಯ ರೀತಿ ಇರುತ್ತದೆ! ನಮಗೆ ಎಷ್ಟು ಗದ್ದೆಗಳಿವೆಯೋ ಅಷ್ಟು ಚಪ್ಪಗಳು. ಜೊತೆಗೆ ಇನ್ನೊಂದು ಹೆಡಿಗೆಯ ತುಂಬಾ ಉಮಿ, ಅಂದರೆ ಭತ್ತದ ಸಿಪ್ಪೆ. ಜತೆಗೆ ಒಂದು ಸೂಡಿ ಅಂದರೆ ದೊಂದಿಯೂ ಸಿದ್ಧವಾಗಬೇಕು.

ನಾವು ಚಿಕ್ಕ ಮಕ್ಕಳು ಬೆಳಕು ಹರಿಯುವ ಮೊದಲೇ ಚಪ್ಪ, ಉಮಿಯ ಹೆಡಿಗೆಗಳನ್ನು ಹೊತ್ತುಕೊಂಡು ಗದ್ದೆಯ ಕಡೆಗೆ ಹೊರಡುತ್ತೇವೆ. ನಮ್ಮಲ್ಲಿ ದೊಡ್ಡವನೆಂದುಕೊಂಡವನೊಬ್ಬ ಸೂಡಿಗೆ ಬೆಂಕಿ ಹತ್ತಿಸಿಕೊಂಡು ಬೀಸುತ್ತಾ ಮುಂದೆ ಸಾಗುತ್ತಾನೆ. ಗದ್ದೆಯನ್ನು ತಲುಪಿದ ಕೂಡಲೇ ಅದರ ಮೂಲೆಯಲ್ಲಿ ಒಂದು ಚಪ್ಪ ಇರಿಸಿ ಅದಕ್ಕೆ ಬೆಂಕಿ ಹಚ್ಚಿ ಅದರ ಮೇಲೆ ಉಮಿ ಸುರಿಯುತ್ತಾರೆ. ಉಮಿಯಿಂದ ಆವೃತವಾದ ಚಪ್ಪದಿಂದ ಹೊಗೆಯು ಕೊಳವೆಯಾಕಾರದಲ್ಲಿ ಮೇಲೇರುತ್ತದೆ. ಹೀಗೆ ಎಲ್ಲರೂ ಎಲ್ಲ ಗದ್ದೆಗಳ ಮೂಲೆಗಳಲ್ಲಿ ಈ ಸಂಸ್ಕಾರ ಮಾಡುತ್ತಾರೆ. ಇನ್ನೇನು ಬೆಳಕು ಹರಿಯುತ್ತದೆ ಎಂಬ ಹೊತ್ತಿಗೆ ಮನೆಯ ಎದುರಿನ ಅಗೇಡಿಯ ಹತ್ತಿರ ದಿನದ ಪ್ರಮುಖ ಆಚರಣೆ ನಡೆಯುತ್ತದೆ.

ಇದಾದ ಕೂಡಲೇ, ನಮ್ಮ ಹೂಟಿಯಾಳು ಅಣ್ಣಯ್ಯನು, ಮನೆಯ ಹೋರಿಗಳನ್ನು ತಂದು, ಅವುಗಳಿಗೆ ನೊಗ ಕಟ್ಟಿ ಹೂಡಲು ಸಿದ್ಧನಾಗುತ್ತಾನೆ. ನೇಗಿಲಿನಲ್ಲಿ ಆರು ಅಥವಾ ಎಂಟರ ಆಕೃತಿಯ ಹೋಳಿಗಳನ್ನು ಮಾಡಿ ಹೂಡುತ್ತಾನೆ. ನಾವು ಆ ಹೋಳಿಗಳಲ್ಲಿ ಮತ್ತೆ ಹುಲ್ಲಿನ ಚಪ್ಪ, ಉಮಿ ತುಂಬಿ ಬೆಂಕಿ ಹಚ್ಚಿ ಹೊಗೆ ಎಬ್ಬಿಸುತ್ತೇವೆ.

ಅಷ್ಟೊತ್ತಿಗೆ ಬೆಳಗಾಗಿರುತ್ತದೆ. ಅರುಣೋದಯದ ಚುಮುಚುಮು ಬೆಳಕಿನಲ್ಲಿ ಇಡೀ ಬಯಲಿನಲ್ಲಿ ಕಾಣಿಸುವ ಹೊಗೆಕೊಳವೆಗಳ ಚೆಲುವನ್ನು ನೋಡಿಯೇ ತಿಳಿಯಬೇಕು. ನಂತರ ಹೋರಿಗಳಿಗೆ ಕೆರೆಯಲ್ಲಿ ಸ್ನಾನ, ಹಟ್ಟಿಯಲ್ಲಿ ಅಕ್ಕಚ್ಚು, ನಮಗೆ ಮನೆಯಲ್ಲಿ ಸ್ನಾನ, ಬೆಳಗಿನ ತಿಂಡಿಯ ರೂಪದಲ್ಲಿ ಗಂಜಿ, ಉಪ್ಪಿನಕಾಯಿ.

ಆರಂಬದ ಕೆಲಸ ಆರಂಭ

ಇದರಲ್ಲಿ ಸಾಂಕೇತಿಕತೆಯೇನು ಬಂತು ಎಂದು ಕೇಳುತ್ತೀರಾ? ಈ ರೀತಿಯ ಹೂಟಿಯನ್ನು ಆರೂಡುವುದು ಎನ್ನುತ್ತೇವೆ. ಆರು ಹೂಡುವುದು; ಆರರ ಆಕೃತಿಯಲ್ಲಿ ಹೂಡುವುದು ಎಂದು ನಾನು ಮೊದಲು ತಿಳಿದಿದ್ದೆ. ಆದರೆ ಇದು 'ಆರಂಬ'ದ, ಆರಂಭದ ಹೂಟಿ ಎಂದು ನಂತರ ನಾನೇ ಅರ್ಥ ಮಾಡಿಕೊಂಡೆ.

ನಮ್ಮೂರಿನಲ್ಲಿ ಗದ್ದೆಗಳಲ್ಲಿನ ಕೃಷಿಕಾರ್ಯ ಧಾನ್ಯ ಕೀಳುವುದರೊಂದಿಗೆ ಸುಮಾರು ಫೆಬ್ರವರಿ ತಿಂಗಳಲ್ಲಿ ಮುಗಿದು ಮನೆಯ ಅಂಗಳಕ್ಕೆ, ಕೊಟ್ಟಿಗೆಗೆ ಸ್ಥಳಾಂತರಗೊಳ್ಳುತ್ತದೆ. ಫೆಬ್ರವರಿ, ಮಾರ್ಚ್, ಏಪ್ರಿಲ್ ತಿಂಗಳುಗಳಲ್ಲಿ ಗದ್ದೆಗಳಲ್ಲಿ ಸಾಕಷ್ಟು ಕಳೆ ಬೆಳೆದಿರುತ್ತದೆ. ಗದ್ದೆಗಳನ್ನು ಮುಂದಿನ ಬೆಳೆಗೆ ಸಿದ್ಧಮಾಡಬೇಕಾಗುತ್ತದೆ. ಈ ಸಿದ್ಧ ಮಾಡುವ ಪ್ರಕ್ರಿಯೆ ಏಪ್ರಿಲ್ 14ರಂದು ಪ್ರಾರಂಭವಾಗುತ್ತದೆ.

ಏಪ್ರಿಲ್ ಹದಿನಾಲ್ಕೇ ಏಕೆ? ಅಂದು ಮೇಷ ಸಂಕ್ರಾಂತಿ. ಸೌರ ಪಂಚಾಂಗದ ಮೊದಲ ದಿನ. ಮಣ್ಣು ಅತ್ಯಂತ ಕಾದಿರುವ ಸಮಯ. ಅಲ್ಲಿಂದ ಸುಮಾರು ಒಂದೂವರೆ ತಿಂಗಳಿನಲ್ಲಿ ಮಣ್ಣು ಹದ ಮಾಡುವ, ಗೊಬ್ಬರ ಬಿಕ್ಕುವ, ಸೆಟ್ಟೆ ಗೆರಚುವ ಕೆಲಸ ಮುಗಿಯಬೇಕು. ಮಣ್ಣಿನ ಕಣಕಣವೂ ಬಿಸಿಲಿಗೆ ತೆರೆದುಕೊಳ್ಳುವಂತೆ ಪ್ರತಿಯೊಂದು ಗದ್ದೆಯನ್ನೂ ಕನಿಷ್ಠ ಆರು ಬಾರಿ ಹೂಡಿರಬೇಕು. ಇದೊಂದು ಸ್ವಾಭಾವಿಕ ಕ್ರಿಮಿನಾಶಕ ಕ್ರಿಯೆ! ಗದ್ದೆಯ ಅಂಚುಗಳಲ್ಲಿ ಇಳಿದು ಬಂದ ಹುಲ್ಲನ್ನೂ ಮಣ್ಣನ್ನೂ ಸವರಬೇಕಾಗುತ್ತದೆ. ಇದನ್ನು ಹೊದ್ದು ಮಾಡುವುದು ಎನ್ನುತ್ತೇವೆ.

ಮೇ ತಿಂಗಳಿನಲ್ಲಿ ಸಾಮಾನ್ಯವಾಗಿ ಎರಡು ಅಥವಾ ಮೂರು ಬಾರಿ ಮಳೆ ಬರುತ್ತದೆ. ಮಳೆಯನ್ನು ಅನುಸರಿಸಿ ಭತ್ತದ ಅಗೆ ತಯಾರಿಸಲು ಬಿತ್ತನೆ ಮಾಡಬೇಕಾಗುತ್ತದೆ. ಅಗೆ ಬೆಳೆದು ನೆಟ್ಟಿಗೆ ಸಿದ್ಧವಾಗಲು ಒಂದು ತಿಂಗಳು ಬೇಕಾಗುತ್ತದೆ. ನಮ್ಮ ಊರಿನಲ್ಲಿ ಜೂನ್ ಹತ್ತರ ಒಳಗೆ ಉಜಿರು ಏಳುವುದರಿಂದ ನೆಟ್ಟಿ ಪ್ರಾರಂಭಿಸಲೇ ಬೇಕು. ನಾನು ಇದನ್ನೆಲ್ಲಾ ವಿವರವಾಗಿ ಕಂಡದ್ದು, ಕೆಲವು ದಶಕಗಳ ಹಿಂದೆ. ಇಂದು ಮಳೆವಿನ್ಯಾಸದಲ್ಲಿ ಆಗಿರುವ ಬದಲಾವಣೆಗೆ ಅನುಗುಣವಾಗಿ ಕೃಷಿಕ್ಯಾಲೆಂಡರಿನಲ್ಲಿಯೂ ಕೆಲವು ಬದಲಾವಣೆಯಾಗಿದೆ.

ಮೂರು ತಿಂಗಳ ಜಡತೆಯಿಂದ ಭೂಮಿಯಲ್ಲಿ ಕಳೆಬೆಳೆದು ಸತ್ವ ಕಡಿಮೆಯಾಗಿರುತ್ತದೆ. ಜೊತೆಗೆ ಕ್ರಿಮಿಕೀಟಗಳು ಮಣ್ಣಿನ ಒಳಪದರವನ್ನು ಸೇರಿಕೊಂಡಿರುತ್ತವೆ. ಬಿಸಿಲಿನ ತಾಪಕ್ಕೆ ಮಣ್ಣಿನ ಮೇಲ್ಮೈ ಅಸಹನೀಯವಾಗಿರುತ್ತದೆ. ಮನಸ್ಸೂ ಅದೇ ರೀತಿ, ಜಡವಾದಾಗ ಸೃಜನಶೀಲತೆ ಕುಂದುತ್ತದೆ, ಬೇಡದ ಯೋಚನೆಗಳ ಕಳೆ ಮೊಳೆಯುತ್ತದೆ. ಅದಕ್ಕೆ ಮತ್ತೆ ಸೃಜನಶೀಲತೆಯನ್ನು ತಂದುಕೊಡಲು ಮನಸ್ಸೆಂಬ ಹೊಲವನ್ನು ಆರು ಬಾರಿ ಹೂಡಬೇಕು. ಮನಸ್ಸಿನ ಓಳಿಗಳಲ್ಲಿರುವ ಚಪಲಗಳನ್ನು ಬೆಂಕಿ ಹಾಕಿ ಸುಡಬೇಕು. ಮನಸ್ಸಿನ ಪದರಪದರಗಳನ್ನೂ ತಪದ ಬಿಸಿಗೆ ಒಡ್ಡಿಕೊಳ್ಳಬೇಕು. ಹೀಗೆ ಸಿದ್ಧವಾದ ನೆಲಕ್ಕೆ ಮಳೆಯ ತಂಪು ಸ್ಪರ್ಶವಾದಾಗ ಹೊಸ ಪಯಿರು ಹುಲುಸಾಗಿ ಬೆಳೆಯುತ್ತದೆ.

(ಕೆಲವು ಪದಗಳ ಅರ್ಥ: ಹೂಟಿಯಾಳು = ಉಳುವವನು; ಹೂಡುವುದು = ಉಳುವುದು; ಹೂಟಿ = ಉಳುಮೆ; ಹೋಳಿ = ಓಳಿ; ಹೊದ್ದು = ಹದ್ದು, ಅಂಚು; ಹೋರಿ = ಕೋಣ, ಅಕ್ಕಚ್ಚು = ಬೇಯಿಸಿದ ಪಶುಆಹಾರ; ಹಟ್ಟಿ = ದನಕರುಗಳ ಕೊಟ್ಟಿಗೆ; ಸೆಟ್ಟೆ = ಒಣಗಿದ ಕೆಸರಿನ ಹೆಂಟೆ; ಗೆರಚು = ಪುಡಿ ಮಾಡಿ ಚದುರಿಸು; ಬಿಕ್ಕುವ = ಹರಡುವ; ಉಜಿರು = ಒರತೆ; ನೆಟ್ಟಿ = ನಾಟಿ; ಹೆಡಿಗೆ = ಮಂಕರಿ, ಬಿಳಲಿನ ಬುಟ್ಟಿ; ಅಗೆ = ಸಸಿ)

ಬರಿಗಾಲ ನಡಿಗೆ

» ಕಾರ್ತಿಕ್ ಕೃಷ್ಣ

ಈಗೀಗ ಬರಿಗಾಲಲ್ಲಿ ಓಡುವ ಹುಚ್ಚು ಶುರುವಾಗಿದೆ. ಇದಕ್ಕೆ ಹಲವು ಕಾರಣಗಳಿದ್ದರೂ, ದುಬಾರಿ ಬೆಲೆಯ ಶೂಗಳಿಗೆ ಕಾಸು ಸುರಿಯುವ ಪ್ರಮೇಯವಿರುವುದಿಲ್ಲ ಎನ್ನುವುದು ಪ್ರಮುಖ ಕಾರಣ! ಆದರೆ, ನನ್ನೀ ಬರಿಗಾಲ ಓಟದ ಸಾಹಸವನ್ನು ಮಡದಿಯಂತೂ ಸುತಾರಾಂ ಒಪ್ಪುವುದಿಲ್ಲ. 'ರಸ್ತೆಯೆಲ್ಲಾ ಗಲೀಜಿರುತ್ತೆ, ಯಾರ್ಯಾರೋ ಕ್ಯಾಕರಿಸಿ ಉಗಿದಿರ್ತಾರೆ, ಅದರ ಮೇಲೆ ನೀವು ಓಡ್ತೀರಾ?' ಎಂಬ ಆಕೆಯ ನಿತ್ಯ ಸುಪ್ರಭಾತ ಓಡುವ ಮುನ್ನ ಇದ್ದೇ ಇರುತ್ತದೆ. ಆದರೂ ಅದೆಲ್ಲವನ್ನು ಮೀರಿ ನಾನು ಓಡುತ್ತೇನೆ, ಮನೆಗೆ ಬಂದು ಚೆನ್ನಾಗಿ ಸೋಪು ಹಾಕಿ ಪಾದವನ್ನು ತೊಳೆಯುತ್ತೇನೆ.. ನಾನೊಂಥರಾ ರೆಬಲ್ ಸ್ಟಾರ್ ನೋಡಿ!

ಆದರೂ ಅವಳ ಮಾತಿನಲ್ಲಿ ಸತ್ಯವಿದೆ ಅನ್ನಿಸಿ, ರಸ್ತೆ ಚೆನ್ನಾಗಿರುವ, ಮೈಸೂರಿನ ಕಾರಂಜಿ ಕೆರೆಗೆ ಅಂಟಿಕೊಂಡಂತಿರುವ ಹಾದಿಯಲ್ಲಿ ಓಡುವುದು ಉತ್ತಮವೆಂದು ನಿರ್ಧರಿಸಿದೆ. ಅಲ್ಲಿಯ ತನಕ ಸ್ಕೂಟರ್‌ನಲ್ಲಿ ಹೋಗಿ, ಆಮೇಲೆ ಐದು ಕಿಲೋಮೀಟರ್ ಓಟ. ಸ್ಕೂಟರ್ ನಿಲ್ಲಿಸಿದ ಜಾಗಕ್ಕೆ ಮರಳಲು ಕೊನೆಯ 600 ಮೀಟರ್ ನಡಿಗೆ. ಈ ಹಾದಿಯಲ್ಲಿ ಪಾದಚಾರಿ ಮಾರ್ಗವಿಲ್ಲ. ರಸ್ತೆಯಿಂದ ಕೊಂಚ ಕೆಳಗಿಳಿದರೆ ಜಮಾನದಲ್ಲಿ ಬಿದ್ದ ಜಲ್ಲಿಕಲ್ಲುಗಳು, ಅವುಗಳ ಮೊನಚು ತಲೆ ನೇರವಾಗಿ ಪಾದಕ್ಕೆ ಚುಚ್ಚುತ್ತವೆ. ಆದರೂ ಇಷ್ಟು ದಿನ ನಿಧಾನಕ್ಕೆ, ಜಾಗರೂಕತೆಯಿಂದ ಹೆಜ್ಜೆ ಹಾಕುತ್ತಾ ಬರುತ್ತಿದ್ದೆ.

ಇಂದೂ ಹಾಗೆಯೇ ಆಯಿತು. ಆದರೆ, ಕಲ್ಲಿನ ಮೇಲೆ ನಡೆಯುವ ಬದಲು, ರಸ್ತೆಯ ಮೇಲೆಯೇ ನಡೆಯಲು ಯೋಚಿಸಿದೆ. ಅದು ಬಸ್ಸು, ಕಾರುಗಳು ಸೆಕೆಂಡಿಗೊಮ್ಮೆ ಓಡಾಡುವ ರಸ್ತೆ. ನಾನು ರಸ್ತೆಯ ಅಂಚಿನಲ್ಲಿ ನಡೆದರೆ, ಪಾಪ

ವಾಹನ ಸವಾರರಿಗೆ ತೊಂದರೆಯಾಗಬಹುದು ಎಂದು ನಾನೇ ಅಂದುಕೊಂಡು, ನನ್ನಷ್ಟಕ್ಕೆ ನಾನೇ ಕಲ್ಲಿನ ಮೇಲೆ ನಡೆಯುವ ಶಿಕ್ಷೆ ಕೊಟ್ಟುಕೊಳ್ಳುತ್ತಿದ್ದೆ. ಆದರೆ ಇಂದು, ಅವರಿಗೆ ತೊಂದರೆಯಾದರೆ, ಹಾರ್ನ್ ಹಾಕಿದ ಕೂಡಲೇ ಕೆಳಗೆ ಇಳಿಯುತ್ತೇನೆ ಎಂದು ನಿರ್ಧರಿಸಿ, ರಸ್ತೆಯ ಇಷ್ಟೇ ಇಷ್ಟು ಅಂಚಿನಲ್ಲಿ ಹೆಜ್ಜೆ ಹಾಕಿದೆ (ಮಧ್ಯದಲ್ಲೇ ನಡೆಯುತ್ತಿದ್ದೆ ಎಂದು ಅಂದುಕೊಂಡು ಬಿಟ್ಟೀರ ಮತ್ತೆ!). ಅಚ್ಚರಿಯೆಂದರೆ, ವಾಹನಗಳಿಗೆ ನನ್ನಿಂದ ಯಾವ ತೊಂದರೆಯೂ ಆಗಲಿಲ್ಲ. ಒಮ್ಮೆ ಬಸ್ಸೊಂದು ಹಾರ್ನ್ ಹಾಕಿದ್ದು ಬಿಟ್ಟರೆ, ಮಿಕ್ಕಿದ್ದೆಲ್ಲಾ ಹೂವ ಹಾಸಿನ ಹಾದಿ.

ಇಷ್ಟು ದಿನ ಇನ್ನೊಬ್ಬರಿಗೆ ತೊಂದರೆಯಾಗಬಹುದು ಎಂದು ನಾನೇ ಕಲ್ಪಿಸಿಕೊಂಡು, ಕಲ್ಲು-ಮುಳ್ಳುಗಳ ಮೇಲೆ ಕಷ್ಟಪಟ್ಟು ನಡೆದೆ. ಇಂದು ಆ ಯೋಚನೆಯನ್ನು ಮೀರಿ ನಡೆದಾಗ ಸಿಕ್ಕಿದ್ದು ಹಗುರವಾದ ನೆಮ್ಮದಿ. ಈ ಸಣ್ಣ ಬದಲಾವಣೆ ನನ್ನೊಳಗೆ ಒಂದು ಆಳವಾದ ಯೋಚನೆಯನ್ನು ಹುಟ್ಟುಹಾಕಿತು.

ಬದುಕೂ ಕೂಡ ಹೀಗೆಯೇ ಅಲ್ಲವೇ? 'ಬೇರೆಯವರಿಗೆ ತೊಂದರೆಯಾಗಬಹುದೇನೋ', 'ಜನ ಏನಂದುಕೊಳ್ಳುತ್ತಾರೋ' ಎಂಬ ಕಾಲ್ಪನಿಕ ಭಯದಲ್ಲಿ, ನಮಗೆ ನಾವೇ ಮಾನಸಿಕ ಬೇಲಿಗಳನ್ನು ಹಾಕಿಕೊಳ್ಳುತ್ತೇವೆ. ಯಾರಿಗೋ ದಾರಿ ಮಾಡಿಕೊಡುವ ಭರದಲ್ಲಿ ಸುಗಮವಾದ ರಸ್ತೆಯನ್ನು ಬಿಟ್ಟು, ನಮ್ಮ ಪಾಲಿಗೆ ನಾವೇ ಕಲ್ಲು-ಮುಳ್ಳಿನ ಹಾದಿ ಆರಿಸಿಕೊಳ್ಳುತ್ತೇವೆ.

ವಾಸ್ತವದಲ್ಲಿ, ಈ ಜಗತ್ತಿನ ಬೃಹತ್ ರಸ್ತೆಯಲ್ಲಿ ಪ್ರತಿಯೊಬ್ಬರಿಗೂ ಅವರದ್ದೇ ಆದ ಪುಟ್ಟ ಜಾಗವಿದ್ದೇ ಇರುತ್ತದೆ. ನಾವು ಹೆದರದೆ, ಯಾರಿಗೂ ಅಡ್ಡಿಯಾಗದಂತೆ ನಮ್ಮ ಪಾಲಿನ ಆ ಪುಟ್ಟ ಅಂಚಿನಲ್ಲಿ ಹೆಜ್ಜೆ ಹಾಕುವ ಧೈರ್ಯ ಮಾಡಿದರೆ ಸಾಕು; ಬದುಕು ಕೂಡ ಈ ಬರಿಗಾಲ ಓಟದಷ್ಟೇ ನಿರಾಳ, ಹೂವಿನ ಹಾಸು.

ದೇವರೇ ಹೀಗೆ ಮಾಡು!

» ಟಿ.ಎ.ಎನ್. ಖಂಡಿಗೆ ಮೂಡುಬಿದರೆ

ವಾಚಾಳಿ ಭಯಂಕರನಿಗೆ ಒಮ್ಮೆ
ತಿಳಿಯಾದ ಮೌನಾಂಕುರದ ಸುಖ
ದೇವರೇ ಸಮಯವಿದ್ದರೆ ಹೀಗೆ ಮಾಡು!
ಪ್ರಾಪ್ತಿಯಾಗುವಂತೆ ಮಾಡು ದೇವರೇ!
ಆಶ್ಚರ್ಯ ಚಿಹ್ನೆ ಹಾಕುವಂತೆ ಮಾಡು
ದೇವರೇ!
ನಾನು ಯಾರು ಎಂಬ
ವಾಕ್ಯದ ಎದುರು ಪ್ರಶ್ನಾರ್ಥಕ ಚಿಹ್ನೆ
ಹಾಕುವುದರ ಬದಲು
ಮಾಹಿತಿಯ ಭಾರ ಹೊರುವ ಆದಿಶೇಷ
ಬಿಟ್ಟು ಹುಡುಕುತ್ತಾ ದೊರೆಯುವ
ಸಿಂಬಿಯ ನಡುವಿನ ಆಕಾಶ
ಜ್ಞಾನದ ಅವಕಾಶ ಅನುಭೂತಿ ನೀಡು ದೇವರೇ!
ಉತ್ತರ ಮೊದಲೇ ಗೊತ್ತಿದ್ದು ಹುಡುಕುವ ಆಧುನಿಕ ಶೋಕಿ
ಸೆರಗಿನ ಸೋಂಕಿಲ್ಲದ
ಉತ್ತರವೇ ಉತ್ತರೋತ್ತರವಾಗುವಂತೆ ಮಾಡು ದೇವರೇ!
ಮಾತುಗಳ ಸೆರಗಿನ ಹಿಂದೆ ಹೋಗದೆ



ಅರ್ಥದಿಂದ ಅರ್ಥ ಹುಡುಕುವ
ಅರ್ಥಲಂಪಟನ ಮಾಡು ದೇವರೇ!
ಮಾಡು ಮಾಡದೆ ಬಿಡು ದೇವರೇ
ಆದರೆ ನನ್ನ ಹಾಡು ಪಾಡು
ಋಣಕ್ಕೆ ಬಿದ್ದ
ಹಾಳೂರ ಹದ್ದು ಆಗದಂತೆ ಮಾಡು ದೇವರೇ!